ಬೆಂಗಳೂರು

ಬುಧವಾರ, 18 ಮಾರ್ಚ್ 2026

ಸಂಪುಟ 33, ಸಂಚಿಕೆ 137, ಪುಟಗಳು 12+4

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

RNI: 58231/94
REG No.KA/BG GPO/2532/2021-23

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಐಸಿಸ್ ನಂಟು: ಬಿಡಿಎಸ್ ವಿದ್ಯಾರ್ಥಿ ಸೆರೆ | 0೫
ಸಂಸತ್ತಲ್ಲಿ ಪೋಸ್ಟರ್ ಪ್ರದರ್ಶಿಸುವಂತಿಲ್ಲ | 0೫
ಮಕ್ಕಳಿಗೆ ಉತ್ತಮ ಶಿಕ್ಷಣ ಅತ್ಯವಶ್ಯ | 0೫

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಪೂರ್ವಭಾದ್ರ

ದಿನದ ಮಾತು

ಜ್ಞಾನವು ಮನಸ್ಸು ಮತ್ತು ಹೃದಯವನ್ನು ಪರಿಶುದ್ಧಗೊಳಿಸುವುದು.

▲ ರಾಮಕೃಷ್ಣ ಪರಮಹಂಸ

ಗೆದ್ದೋನು ಸೋತ, ಸೋತವನು ಸತ್ತು ಗೆದ್ದ

ಖಾರಾ ಬಾತ್

• ವಿನಾಯಕ ಭಟ್ಟ ಮೂರೂರು

• ಪುಟ ೬

ಕಿರುಸುದ್ದಿ

ಲೋಕಾ ಬಲೆಗೆ ಬಿದ್ದ ಪಿಡಿಒ ಮಂಜುಳಾ ಆತ್ಮಹತ್ಯೆ ಯತ್ನ

• **ಮೈಸೂರು:** ನೀರುಗಂಟಿಗೆ ಬಾಕಿ ಸಂಬಳ ನೀಡಲು 25 ಸಾವಿರ ರೂ. ಲಂಚ ಪಡೆಯುತ್ತಿದ್ದ ಹುಣಸೂರು ತಾಲೂಕಿನ ಮುಳ್ಳೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ಪಿಡಿಒ) ಮಂಜುಳಾ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ದಾಳಿ ವೇಳೆ ಹರಿತವಾದ ಆಯುಧದಿಂದ ಕೈ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆಯೂ ನಡೆದಿದೆ.

• ಪುಟ ೩

ಇಂದಿನಿಂದ ರಾಜ್ಯಾದ್ಯಂತ ಎಸ್ಎಸ್ಎಲ್ಸಿ ಪರೀಕ್ಷೆ

• **ಬೆಂಗಳೂರು:** ಇಂದಿನಿಂದ (ಮಾ.18) ರಾಜ್ಯಾದ್ಯಂತ ಎಸ್ಎಸ್ಎಲ್ಸಿ ಪರೀಕ್ಷೆಯು ಆರಂಭವಾಗಲಿದ್ದು, ಶಿಕ್ಷಣ ಇಲಾಖೆಯು ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿ ಕಟ್ಟುನಿಟ್ಟಿನ ಭದ್ರತೆಯೊಂದಿಗೆ ಪರೀಕ್ಷಾ ಕೇಂದ್ರಗಳು ಸಿದ್ಧಗೊಂಡಿವೆ. ಮೊದಲ ದಿನ ಪ್ರಥಮ ಭಾಷೆ ವಿಷಯದ ಪರೀಕ್ಷೆ ನಡೆಯಲಿದೆ. ಪರೀಕ್ಷೆಗೆ ಒಟ್ಟು 9,02,899 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ.

• ಪುಟ ೨

ಗುಜರಾತ್ ಸಿಎಂಗೆ ಏನಾಸಂ ವರದಿ ಸಲ್ಲಿಸಿದ ಸಮಿತಿ

• ಪುಟ ೫

ಎನ್ಎಚ್ಆರ್ಸಿ ನೋಟಿಸ್ ಕೆಡಿ ಅಶ್ಲೀಲ ಹಾಡು ಸ್ಥಗಿತ

• ಪುಟ ೫

ಅಕ್ರಮ ಮದ್ಯ ತಡೆಗೆ ಹೊಸ ಕಾಯ್ದೆ?

• ಪುಟ ೩

ರಾಜ್ಯಸಭೆಯಲ್ಲಿ ಬಹುಮತದತ್ತ ಎನ್ಡಿಎ

• ಪುಟ ೫

ಕನ್ನಡಿಗರಿಗೆ ಕೇಂದ್ರ ದ್ರೋಹ: ಸಿದ್ದರಾಮಯ್ಯ

• ಪುಟ ೨

ಸವಾಲು ಎದುರಿಸಿ ಬೆಳೆದ ಆರ್ಎಸ್ಎಸ್

• ಪುಟ ೨

ಅಫ್ಘಾನ್ ಸೇನಾ ನೆಲೆಗಳ ಮೇಲೆ ಪಾಕ್ ವೈಮಾನಿಕ ದಾಳಿ

ಅಮಾನುಷ ದಾಳಿ

• **ಇಸ್ಲಾಮಾಬಾದ್:** ಅಫ್ಘಾನಿಸ್ತಾನದ ಮಿಲಿಟರಿ ನೆಲೆಗಳು ಮತ್ತು ಭಯೋತ್ಪಾದಕ ಮೂಲಸೌಕರ್ಯಗಳ ಮೇಲೆ ಪಾಕಿಸ್ತಾನ ವೈಮಾನಿಕ ದಾಳಿ ನಡೆಸಿದೆ. ಈ ವೇಳೆ ಕಾಬೂಲ್ನಲ್ಲಿರುವ ಆಸ್ಪತ್ರೆ ಗುರಿಯಾಗಿಸಿ ಪಾಕ್ ನಡೆಸಿದ ದಾಳಿಯಲ್ಲಿ ಕನಿಷ್ಠ 400 ಮಂದಿ ಮೃತಪಟ್ಟಿದ್ದಾರೆ. 250ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಸುಮಾರು 2,000 ಹಾಸಿಗೆಗಳ ಸಾಮರ್ಥ್ಯವಿರುವ ದೊಡ್ಡ ಆಸ್ಪತ್ರೆಗೆ ಮಂಗಳವಾರ ರಾತ್ರಿ ಸುಮಾರು 9 ಗಂಟೆ ವೇಳೆಗೆ ದಾಳಿ ನಡೆದಿದ್ದು, ಅಫ್ಘಾನಿಸ್ತಾನದ ಇತಿಹಾಸದಲ್ಲೇ ಇದು ಅತ್ಯಂತ ಭೀಕರ ಘಟನೆಗಳಲ್ಲಿ ಒಂದಾಗಿ ದಾಖಲಾಗಿದೆ.

ಆಪರೇಷನ್ ಗಜಬ್ ಲಿಲ್ ಹಕ್: ಫೆ.26ರಂದು ಪ್ರಾರಂಭವಾದ ಆಪರೇಷನ್ ಗಜಬ್ ಲಿಲ್ ಹಕ್ನ ಭಾಗವಾಗಿ ಕಾಬೂಲ್ ಮತ್ತು ನಂಗರ್ಹಾರ್ನಲ್ಲಿ ಈ ದಾಳಿ ನಡೆಸಲಾಗಿದೆ ಎಂದಿರುವ ಪಾಕ್ ಮಾಹಿತಿ ಸಚಿವ ಅತ್ತಾವುಲ್ಲಾ ತರಾರ್ ತಾಂತ್ರಿಕ ಬೆಂಬಲ ಮೂಲಸೌಕರ್ಯ, ಮದ್ದುಗುಂಡು ಡಿಪೋಗಳು ಮತ್ತು 252 ತಾಲಿಬಾನ್ ಪೋಸ್ಟ್ಗಳನ್ನು ನಾಶಪಡಿಸಲಾಗಿದೆ ಎಂದಿದ್ದಾರೆ. ಈವರೆಗೆ 684 ಅಫ್ಘಾನ್ ತಾಲಿಬಾನ್ ಕಾರ್ಯಕರ್ತರು ಕೊಲ್ಲಲ್ಪಟ್ಟಿದ್ದಾರೆ ಮತ್ತು 912 ಮಂದಿ ಗಾಯಗೊಂಡಿದ್ದಾರೆ. 229 ಟ್ಯಾಂಕ್ಗಳು ಮತ್ತು ಶಸ್ತ್ರಸಜ್ಜಿತ ವಾಹನಗಳು ಸೇರಿದಂತೆ ದೊಡ್ಡ ಪ್ರಮಾಣದ ಮಿಲಿಟರಿ ಆಸ್ತಿಗಳನ್ನು ಹತ್ತಿಕ್ಕಲಾಗಿದೆ ಎಂದು ವರದಿಯಾಗಿದೆ.

ನಾಗರಿಕರ ಸಾವು ತಿರಸ್ಕರಿಸಿದ ಪಾಕ್: ನಾಗರಿಕ ಸಾವು-ನೋವುಗಳ ಬಗ್ಗೆ ಕೇಳಿಬಂದಿರುವ ಆರೋಪಗಳನ್ನು ಪಾಕಿಸ್ತಾನದ ಮಾಹಿತಿ ಸಚಿವಾಲಯ ತಿರಸ್ಕರಿಸಿದೆ. ➡ಪುಟ ೨



ಪ್ರತಿದಾಳಿ ಎಚ್ಚರಿಕೆ

ಪಾಕಿಸ್ತಾನದ ಬಾಂಬ್ ದಾಳಿಯು ಕಾಬೂಲ್ನಲ್ಲಿರುವ ಮಾದಕ ವ್ಯಸನ ಮುಕ್ತ ಕೇಂದ್ರವನ್ನು ಗುರಿಯಾಗಿಸಿ ಕೊಂಡಿದೆ ಎಂದು ಅಫ್ಘಾನ್ ಸರ್ಕಾರದ ವಕ್ತಾರ ಹಮ್ದುಲ್ಲಾ ಫಿತ್ರಾತ್ ಆರೋಪಿಸಿದ್ದಾರೆ. ಅಫ್ಘಾನ್ ಅಧಿಕಾರಿಗಳ ಪ್ರಕಾರ, ಕನಿಷ್ಠ 400 ಜನರು ಕೊಲ್ಲಲ್ಪಟ್ಟಿದ್ದಾರೆ ಮತ್ತು 250 ಜನರು ಗಾಯ ಗೊಂಡಿದ್ದಾರೆ. ಈ ದಾಳಿ 3,000 ರೋಗಿಗಳನ್ನು ಹೊಂದಿದ್ದ ಸಂಕೀರ್ಣದ ಐದು ಬ್ಲಾಕ್ ಗಳನ್ನು ನಾಶ ಪಡಿಸಿದೆ. ಈ ಆಕ್ರಮಣಕ್ಕೆ ಬಲವಾದ ಪ್ರತಿಕ್ರಿಯೆ ನೀಡಲಾಗುವುದು ಎಂದು ತಿಳಿಸಲಾಗಿದೆ.

ಅನಾಗರಿಕ, ಹೇಡಿತನದ ಕೃತ್ಯ: ಭಾರತ ಖಂಡನೆ

• **ಹೊಸದಿಲ್ಲಿ:** ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್ನಲ್ಲಿರುವ ಆಸ್ಪತ್ರೆ ಮೇಲೆ ಪಾಕಿಸ್ತಾನ ನಡೆಸಿದ ವೈಮಾನಿಕ ದಾಳಿಯನ್ನು ಭಾರತ ತೀವ್ರವಾಗಿ ಖಂಡಿಸಿದ್ದು, ಈ ದಾಳಿಯನ್ನು ಅನಾಗರಿಕ ಮತ್ತು ಹೇಡಿತನದ ಕೃತ್ಯ ಎಂದು ಆಕ್ರೋಶ ವ್ಯಕ್ತಪಡಿಸಿದೆ.ಆಸ್ಪತ್ರೆಯನ್ನು ಗುರಿಯಾಗಿಸಿಕೊಂಡು ನಡೆಸಿದ ಈ ದಾಳಿ ಪಾಕಿಸ್ತಾನದ ಆಕ್ರಮಣಕಾರಿ ನಡೆ ಆಗಿದ್ದು, ಅಫ್ಘಾನಿಸ್ತಾನದ ಸಾರ್ವಭೌಮತ್ವದ ಮೇಲೆ ದಾಳಿ ಎಂದು ಭಾರತದ ವಿದೇಶಾಂಗ ಸಚಿವಾಲಯ ಹೇಳಿದೆ. ಇದು ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಗಂಭೀರ ಬೆದರಿಕೆಯಾಗಿದೆ ಎಂದು ತಿಳಿಸಿದೆ. ಪವಿತ್ರ ರಂಜಾನ್ ತಿಂಗಳಲ್ಲಿ ಇಂತಹ ದಾಳಿ ನಡೆದಿರುವುದು ಅತ್ಯಂತ ಖಂಡನೀಯ. ಶಾಂತಿ, ಕರುಣೆ ಮತ್ತು ಆತ್ಮಪರಿಶೀಲನೆಯ ಕಾಲದಲ್ಲಿ ಆಸ್ಪತ್ರೆ ಹಾಗೂ ರೋಗಿಗಳನ್ನು ಗುರಿಯಾಗಿಸುವುದಕ್ಕೆ ಯಾವುದೇ ನೈತಿಕ ಸಮರ್ಥನೆ ಇಲ್ಲ ಎಂದು ಪಾಕಿಸ್ತಾನ ವಿರುದ್ಧ ಭಾರತ ಆಕ್ರೋಶ ವ್ಯಕ್ತಪಡಿಸಿದೆ.

ಪ್ರತೀಕಾರದ ಪ್ರತಿಜ್ಞೆ ಮಾಡಿದ ಇರಾನ್

• **ಟೆಹ್ರಾನ್:** ಇರಾನ್ನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಮಧ್ಯಸ್ಥಿಕೆ ರಾಷ್ಟ್ರಗಳ ಕದನ ವಿರಾಮ ಪ್ರಸ್ತಾಪಗಳನ್ನು ತಿರಸ್ಕರಿಸಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ನಿಂದ ಪರಿಹಾರ ಪಡೆಯುವುದು ಅಥವಾ ಅವುಗಳ ಆಸ್ತಿ ನಾಶಪಡಿಸುವ ಇರಾನ್ನ ಗುರಿಯನ್ನು ಅವರು ಪುನರುಚ್ಚರಿಸಿದ್ದಾರೆ. • ವಿವರ ಪುಟ ೫

ಇಸ್ರೇಲ್ ದಾಳಿ: ಇರಾನ್ ಭದ್ರತಾ ಮುಖ್ಯಸ್ಥ ಹತ!



• **ಜೆರುಸಲೇಂ:** ಇಸ್ರೇಲ್ ಮಿಲಿಟರಿ ನಡೆಸಿದ ರಾತ್ರಿವೇಳೆಯ ನಿಖರ ದಾಳಿಯಲ್ಲಿ ಇರಾನ್ನ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ ಹತರಾಗಿದ್ದಾರೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ. • ವಿವರ ಪುಟ ೫

ನಿಗದಿತ ಸಮಯಕ್ಕೆ ಮಾಹಿತಿ ಒದಗಿಸಲು ಸೂಚನೆ

ಸದನಕ್ಕೆ ಸಿಕ್ಕ ಉತ್ತರದ ವಿವರ ನೀಡಿದ ಸ್ಪೀಕರ್

• **ವಿಧಾನಸಭೆ:** ಸಚಿವರು ಹಾಗೂ ಅಧಿಕಾರಿಗಳು ಶಾಸಕರಿಗೆ ಸರಿಯಾಗಿ ಉತ್ತರ ನೀಡುತ್ತಿಲ್ಲ ಎಂದು ಬೇಸರದಿಂದ ಸೋಮವಾರ ಸಭಾತ್ಯಾಗ ಮಾಡಿದ್ದ ಸ್ಪೀಕರ್ ಯು.ಟಿ. ಖಾದರ್, ಮಂಗಳವಾರ ಯಾವ ಯಾವ ಇಲಾಖೆಯಿಂದ ಎಷ್ಟೆಷ್ಟು ಉತ್ತರಗಳು ಸಲ್ಲಿಸಲ್ಪಟ್ಟಿವೆ ಎಂದು ಸದನಕ್ಕೆ ವಿವರಿಸಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ 22 ಗಮನ ಸೆಳೆಯುವ ಸೂಚನೆಗೆ 6 ಉತ್ತರ, ಆರ್ಥಿಕ ಇಲಾಖೆ 33ಕ್ಕೆ 6 ಉತ್ತರ ನೀಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇಲಾಖೆ 9ಕ್ಕೆ ಒಂದೂ ಉತ್ತರ ನೀಡಿಲ್ಲ, ಯುವಸಬಲೀಕರಣ ಇಲಾಖೆ 10ಕ್ಕೆ ಒಂದೇ ಒಂದು ಉತ್ತರ ನೀಡಿಲ್ಲ. ಸಹಕಾರ ಇಲಾಖೆ 12ಕ್ಕೆ ಒಂದೂ ಉತ್ತರ ನೀಡಿಲ್ಲ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಒಂದಕ್ಕೆ ಒಂದು ಉತ್ತರ ನೀಡಿದೆ. ಜಲಸಂಪನ್ಮೂಲ ಇಲಾಖೆ 33ಕ್ಕೆ 4, ನಗರಾಭಿವೃದ್ಧಿ ಇಲಾಖೆ 23ಕ್ಕೆ 8 ಉತ್ತರಗಳನ್ನು, ಒಳಾಡಳಿತ 35ಕ್ಕೆ 26 ಉತ್ತರಗಳನ್ನು, ಕಾನೂನು ಇಲಾಖೆ 5ಕ್ಕೆ 3 ಉತ್ತರಗಳನ್ನು, ಪ್ರವಾಸೋದ್ಯಮ ಇಲಾಖೆ 25ಕ್ಕೆ ಒಂದು ಉತ್ತರವನ್ನು, ಸಣ್ಣ ನೀರಾವರಿ ಇಲಾಖೆ 19ಕ್ಕೆ 13 ಉತ್ತರಗಳನ್ನು ನೀಡಿದೆ. ಮಾಹಿತಿ ತಂತ್ರಜ್ಞಾನ ಇಲಾಖೆ 2 ಗಮನ ಸೆಳೆಯುವ ಪ್ರಶ್ನೆಗೆ ಉತ್ತರ ನೀಡಿದೆ ಎಂದು ಸಭಾಧ್ಯಕ್ಷರು ತಿಳಿಸಿದರು.

ಈ ಕುರಿತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ನಿಗದಿತ ಸಮಯಕ್ಕೆ ಉತ್ತರಗಳನ್ನು ನೀಡಲು ಗಮನಹರಿಸುವಂತೆ ಸೂಚಿಸಿದರು.



> **ಸಚಿವರು ಹಾಗೂ ಅಧಿಕಾರಿಗಳು ಶಾಸಕರ ಪ್ರಶ್ನೆಗಳಿಗೆ ಉತ್ತರಿಸದೆ ಇರುವುದಕ್ಕೆ ಸಭಾಧ್ಯಕ್ಷರು ತೀವ್ರ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ತಮ್ಮ ಇಲಾಖೆಯ ವತಿಯಿಂದ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಉತ್ತರವನ್ನು ಸಕಾಲದಲ್ಲಿ ವಿಧಾನಮಂಡಲಕ್ಕೆ ಕಳುಹಿಸದೇ ಇರುವ ಬಗ್ಗೆ ಇಲಾಖಾ ಕಾರ್ಯದರ್ಶಿಗಳ ವಿವರಣೆಯನ್ನು ತಕ್ಷಣ ನೀಡಲು ಸೂಚಿಸಿದ್ದೇನೆ.**
>
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಚಿವರಿಗೆ ಸಿಎಂ ಪತ್ರ

ಶಾಸಕರಿಗೆ ಸಚಿವರು ಉತ್ತರ ನೀಡದ ಹಿನ್ನೆಲೆಯಲ್ಲಿ ಸಭಾಧ್ಯಕ್ಷ ಖಾದರ್ ಅಸಮಾಧಾನ ವ್ಯಕ್ತಪಡಿಸಿದ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಎಲ್ಲ ಸಚಿವರಿಗೆ ಪತ್ರ ಬರೆದಿದ್ದಾರೆ. ಈ ಪತ್ರದಲ್ಲಿ 1ನೇ ಅಧಿವೇಶನದಿಂದ 9ನೇ ಅಧಿವೇಶನದವರೆಗೆ ಉತ್ತರ ಬಾರದಿರುವ ಇಲಾಖಾವಾರು ಪ್ರಶ್ನೆಗಳ ಪಟ್ಟಿಯನ್ನು ಮತ್ತು ದಿನಾಂಕ:16.03.2026ರಂದು ನಡೆದ ಸದನ ಸಭೆಯಲ್ಲಿ 245 ಪ್ರಶ್ನೆಗಳಲ್ಲಿ ಇದುವರೆಗೂ 90 ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ಒದಗಿಸಿರುವುದು ಕಂಡು ಬಂದಿರುತ್ತದೆ (ಪಟ್ಟಿ ಲಗತ್ತಿಸಿದೆ). ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಸದನದಲ್ಲಿ ಉತ್ತರಿಸಲು ಬಾಕಿ ಇರುವ ಪ್ರಶ್ನೆಗಳಿಗೆ ಉತ್ತರಗಳನ್ನು ಇದುವರೆಗೂ ಕಳುಹಿಸದೇ ಇರುವುದು ವಿಧಾನಸಭಾ ಸದಸ್ಯರುಗಳು ಸದನದಲ್ಲಿ ಚರ್ಚಿಸಲು ಅನಾನುಕೂಲತೆಯನ್ನುಂಟುಮಾಡಿರುತ್ತದೆ. ➡ಪುಟ ೨

8 ಐಎಎಸ್ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್

ದಿಢೀರ್ ಬದಲಾಯ್ತು ಹವಾಮಾನ | ಸಿಡಿಲಿಗೆ ರೈತ ಬಲಿ

ಬಿರುಗಾಳಿಸಹಿತ ಆಲಿಕಲ್ಲು ಮಳೆ

• **ಬೆಂಗಳೂರು:** ರಾಜ್ಯದ ಹಲವು ಜಿಲ್ಲೆಗಳಲ್ಲಿ ವಾತಾವರಣ ಏಕಾಏಕಿ ಬದಲಾವಣೆಯಾಗಿದ್ದು, ಹಲವು ಜಿಲ್ಲೆಗಳಲ್ಲಿ ಬಿರುಗಾಳಿ, ಆಲಿಕಲ್ಲು ಸಹಿತ ಭಾರೀ ಮಳೆಯಾಗಿದೆ. ಮಂಗಳವಾರ ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಗಳ ಹಲವು ಭಾಗಗಳಲ್ಲಿ ಗುಡುಗುಸಹಿತ ಮಳೆಯಾಗಿದೆ. ಧಾರವಾಡ, ವಿಜಯಪುರ, ವಿಜಯನಗರ, ಕಲಬುರಗಿ, ಕೊಡಗು, ಚಾಮರಾಜನಗರ, ಬೆಂಗಳೂರಿನ ಹಲವೆಡೆ ವ್ಯಾಪಕ ಮಳೆಯಾಗಿದೆ.

ಉತ್ತರ ಕರ್ನಾಟಕದ ಹೆಚ್ಚಿನ ಭಾಗಗಳಲ್ಲಿ ಗರಿಷ್ಠ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ತಲುಪಿತ್ತು. ಸಂಜೆ ಸುರಿದ ಮಳೆಯು ಈ ಪ್ರದೇಶಗಳಲ್ಲಿ ವಾತಾವಾರಣ ಸ್ವಲ್ಪ ತಂಪಾಯಿತು. ಹುಮ್ನಾಬಾದ್ ಮತ್ತು ಚಿಟಗುಪ್ಪ ತಾಲೂಕುಗಳ ಅನೇಕ ಭಾಗಗಳಲ್ಲಿ ಗುಡುಗು ಸಹಿತ ಮಧ್ಯಮ ಮಳೆಯಾಗಿದೆ. ➡ಪುಟ ೨



24 ಗಂಟೆಯಲ್ಲಿ ಮತ್ತಷ್ಟು ಮಳೆ

• ಪುಟ ೨

ಗುಜರಾತ್ ತಲುಪಿದ 2ನೇ ಎಲ್ಪಿಜಿ ವಾಹಕ ನೌಕೆ ನಂದಾದೇವಿ

ದೇಶದ ಅನಿಲ ಆತಂಕ ಇನ್ನಷ್ಟು ಇಳಿಕೆ

• **ಅಹ್ಮದಾಬಾದ್:** ಪಶ್ಚಿಮ ಏಷ್ಯಾದ ಸಂಘರ್ಷ ಮುಂದುವರಿದಿರುವ ನಡುವೆಯೇ, ಭಾರತದ 2ನೇ ಎಲ್ಪಿಜಿ ವಾಹಕ ನೌಕೆ 'ನಂದಾದೇವಿ' ಇರಾನ್ ಬಳಿಯ ಅಪಾಯಕಾರಿ ಹಾರ್ಮುಜ್ ಜಲಸಂಧಿಯನ್ನು ದಾಟಿ ಸುರಕ್ಷಿತವಾಗಿ ಗುಜರಾತಿನ ವಡ್ನೀರ್ ಬಂದರನ್ನು ಬಂದು ತಲುಪಿದೆ. ಈ ನೌಕೆ 46,500 ಮೆಟ್ರಿಕ್ ಟನ್ ದ್ರವೀಕೃತ ಪೆಟ್ರೋಲಿಯಂ ಗ್ಯಾಸ್ ಹೊತ್ತು ಬಂದಿದೆ. ಇದರೊಂದಿಗೆ ಭಾರತ ಹೊಂದಿದ್ದ ಅನಿಲ ಕುರಿತ ಆತಂಕ ಇನ್ನಷ್ಟು ತಗ್ಗಿದಂತಾಗಿದೆ.

ಇದಕ್ಕೂ ಮುನ್ನ ಭಾರತೀಯ ನೌಕೆ ಶಿವಾಲಿಕ್ ಸೋಮವಾರ ಮುಂದ್ರಾ ಬಂದರಿಗೆ ಆಗಮಿಸಿತ್ತು. ಇದರ ಬೆನ್ನಿಗೇ ಇದೀಗ 'ನಂದಾದೇವಿ' ಕೂಡ ದೇವಭೂಮಿ ದ್ವಾರಕಾ ಜಿಲ್ಲೆಯಲ್ಲಿನ ವಡ್ನೀರ್ ಬಂದರಿನಲ್ಲಿ ಲಂಗರು ಹಾಕಿದೆ. ಇದೀಗ ಈ ನೌಕೆಯಿಂದ ಎಲ್ಪಿಜಿ ಸರಕನ್ನು ಇನ್ನೊಂದು ನೌಕೆ ಬಿಡಬ್ಲ್ಯು ಬಿರ್ಚ್ಗೆ ವರ್ಗಾಯಿಸುವ ಪ್ರಕ್ರಿಯೆ ನಡೆದಿದೆ ಎಂದು ದೀನದಯಾಳ್ ಬಂದರು ಪ್ರಾಧಿಕಾರದ ಅಧ್ಯಕ್ಷ ಸುಶೀಲ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಈ ನೌಕೆ ಭಾಗಶಃ ಅನಿಲವನ್ನು ತಮಿಳುನಾಡಿನ ಎಣ್ಣೂರ್ ಬಂದರು ಮತ್ತು ಪಶ್ಚಿಮ ಬಂಗಾಳದ ಹಲ್ದಿಯಾ ಬಂದರು ಹಾಗೂ ಪೂರ್ವದ ಕರಾವಳಿಗೆ ವಿತರಿಸಲಿದೆ. ➡ಪುಟ ೨



ಹುದ್ದೆ ಭರ್ತಿ ಆಗ್ರಹಿಸಿ ಪ್ರತಿಭಟನೆ

» ಸರ್ಕಾರದ ವಿರುದ್ಧ ಘೋಷಣೆ

» ವಿದ್ಯಾರ್ಥಿಗಳ ಬಂಧನ, ಬಿಡುಗಡೆ


• **ಬೆಳಗಾವಿ:** ಖಾಲಿ ಹುದ್ದೆ ಭರ್ತಿ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸಿದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸಂಘಟನೆಯ ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆಗೊಳಿಸಿದರು. ಎಬಿವಿಪಿ ಕಾರ್ಯಕರ್ತರು ನಗರದ ಸರ್ದಾರ್ ಮೈದಾನದಿಂದ ಮಂಗಳವಾರ ಪಾದಯಾತ್ರೆ ಮೂಲಕ ಚನ್ನಮ್ಮ ವೃತ್ತಕ್ಕೆ ಆಗಮಿಸಿದ ಪ್ರತಿಭಟನಾಕಾರರು ಚನ್ನಮ್ಮ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ಸ್ಥಳಕ್ಕೆ ಬೆಳಗಾವಿ ಜಿಲ್ಲಾಧಿಕಾರಿ ಮಹಮ್ಮದ್ ರೋಷನ್ ಬರಬೇಕೆಂದು ಎಬಿವಿಪಿ ಕಾರ್ಯಕರ್ತರು ಪಟ್ಟುಹಿಡಿದರು. ಯಾವುದೇ ಅನುಮತಿ ಇಲ್ಲದೆ ಪ್ರತಿಭಟನೆಗೆ ಅವಕಾಶ ಕೊಡುವುದಿಲ್ಲ ಎಂದು ಪೊಲೀಸರು ಮನವರಿಕೆ ಮಾಡುವ ಕೆಲಸ ಮಾಡಿದರು. ➡ಪುಟ ೨

ಕ್ಷೇತ್ರೀಯ ಕಾರ್ಯವಾಹ ನಾ. ತಿಪ್ಪೇಸ್ವಾಮಿ ಮಾಹಿತಿ

ಆರೆಸ್ಸೆಸ್‌ನಿಂದ ಹಿಂದು ಧರ್ಮದ ಪುನರುತ್ಥಾನ, ಸಮಾಜ ಸಂಘಟನೆ

• **ಬೆಂಗಳೂರು:** ಹಿಂದು ಧರ್ಮ ಎಂದಿಗೂ ನಶಿಸುವುದಿಲ್ಲ. ಇದು ಒಳಗೊಳ್ಳುವಿಕೆಯ ತತ್ವವನ್ನು ಹೊಂದಿದೆ. ಸಾವಿರಾರು ವರ್ಷಗಳಿಂದ ಅನೇಕ ಸವಾಲುಗಳನ್ನು ಎದುರಿಸಿಯೂ ಹಿಂದು ಧರ್ಮ ಉಳಿದುಕೊಂಡಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್ಎಸ್ಎಸ್) ಕೇವಲ ಧರ್ಮದ ಪುನರುತ್ಥಾನ ಮತ್ತು ಸಮಾಜ ಸಂಘಟಿಸುವ ಕೆಲಸ ಮಾಡುತ್ತಿದೆ ಎಂದು ಆರ್ಎಸ್ಎಸ್ನ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ವಾರ್ಷಿಕ ನೀತಿ ನಿರೂಪಕ ಮಹಾಸಭೆ ಅಖಿಲ ಭಾರತೀಯ ಪ್ರತಿನಿಧಿ ಸಭೆಯ ಕುರಿತು ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವಿಜಯದಶಮಿ ಉತ್ಸವ ನಡೆದಿದ್ದು, ಆರ್ಎಸ್ಎಸ್‌ಗೆ ನೂರು ವರ್ಷದ ಹಿನ್ನೆಲೆಯಲ್ಲಿ ನಡೆದ ಹಿಂದು ಸಮಾಜೋತ್ಸವ ಮತ್ತು ಗೃಹಸಂಪರ್ಕ ಅಭಿಯಾನಕ್ಕೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಆರ್ಎಸ್ಎಸ್ ಕಾರ್ಯ ಚಟುವಟಿಕೆಗಳ ಬಗ್ಗೆ ಕೋಟ್ಯಂತರ ಮಂದಿ ಮೆಚ್ಚಿಕೊಂಡಿದ್ದಾರೆ. ➡ಪುಟ ೨



ಕರ್ನಾಟಕದಲ್ಲಿ ನಡೆದ ವಿಶೇಷ ಕಾರ್ಯಕ್ರಮ

ಕರ್ನಾಟಕ ದಕ್ಷಿಣ ಪ್ರಾಂತದಲ್ಲಿ 18ರಿಂದ 25 ವರ್ಷದೊಳಗಿನ ಯುವಕರಿಗಾಗಿ ನವೋನ್ಮೇಷ ಕಾರ್ಯಕ್ರಮ 48 ಸ್ಥಾನಗಳಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಯುವಕರಿಗೆ ಸಂಘದ ಕುರಿತು ಮಾಹಿತಿ ನೀಡಲಾಯಿತು. ➡ಪುಟ ೨

ವಿದ್ಯುತ್ ತಗುಲಿ ಹುಲಿ ಸಾವು

ಗುಂಡ್ಲುಪೇಟೆಯ ಪಡಗೂರಲ್ಲಿ ದುರಂತ

• **ಗುಂಡ್ಲುಪೇಟೆ:** ತಾಲೂಕಿನ ಪಡಗೂರು ಗ್ರಾಮದಲ್ಲಿನ ಅಡವಿ ಮಠಕ್ಕೆ ಹೊಂದಿಕೊಂಡಂತೆ ಇರುವ ಜಮೀನೊಂದರಲ್ಲಿ ವಿದ್ಯುತ್ ಪ್ರವಹಿಸಿ ಒಂದೂವರೆ ಅಥವಾ ಎರಡು ವರ್ಷದ ಹೆಣ್ಣು ಹುಲಿ ಮೃತಪಟ್ಟಿರುವ ಘಟನೆ ನಡೆದಿದೆ.

ಆಂಧ್ರ ಮೂಲದ ರವೀಶ್ ಎಂಬುವರಿಗೆ ಪಡಗೂರು ಗ್ರಾಮದಲ್ಲಿ ಜಮೀನು ಹೊಂದಿದ್ದು ಈ ಜಮೀನನ್ನು ಗ್ರಾಮದ ಪರಮೇಶ್ವರಪ್ಪ ಎಂಬುವರು ಗುತ್ತಿಗೆ ಪಡೆದು ವ್ಯವಸಾಯ ಮಾಡುತ್ತಿದ್ದರು. ಫಸಲು ರಕ್ಷಣೆಗಾಗಿ ಅಕ್ರಮವಾಗಿ ಜಮೀನಿನ ಸುತ್ತ ಹಾಕಲಾಗಿದ್ದ ವಿದ್ಯುತ್ ಬೇಲಿ ಸ್ಪರ್ಶಿಸಿ ಸಾವಿಗೀಡಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ➡ಪುಟ ೨

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,75,000**(2,70,000) ಅಪರಂಜಿ ಚಿನ್ನ: **1,58,080**(1,57,420) ಆಭರಣ ಚಿನ್ನ: **1,44,900**(1,44,300) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ.(ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್ಇ **76,070**(567↑) ಎನ್ಎಸ್ಇ **23,581** (172↑)

$1 = ₹92.36

ಸವಾಲು ಎದುರಿಸಿ ಬೆಳೆದ ಆರ್‌ಎಸ್‌ಎಸ್

• **ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಸಮಾಜದ ಹಿತಕ್ಕಾಗಿ ಕೆಲಸ ಮಾಡುತ್ತಿದೆ. ಟೀಕೆ ಮಾಡುವವರು ಸಂಘದ ಹತ್ತಿರ ಬಂದು ಕಾರ್ಯವೈಖರಿಯನ್ನು ನೋಡಿದಾಗ ಮಾತ್ರ ಸತ್ಯದ ಅರಿವಾಗುತ್ತದೆ. ಈ ಹಿಂದೆಯೂ ಸಂಘದ ಮೇಲೆ ನಿಷೇಧ ಹೇರಲಾಗಿತ್ತು, ಆದರೆ ಸಂಘವು ಎಲ್ಲಾ ಸವಾಲುಗಳನ್ನು ಎದುರಿಸಿ ಬೆಳೆದಿದೆ ಎಂದು ಆರ್‌ಎಸ್‌ಎಸ್‌ನ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಹೇಳಿದರು.

ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶಾದ್ಯಂತ ಆರ್‌ಎಸ್‌ಎಸ್‌ನ ಶತಾಬ್ದಿ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದ್ದು, ಪಂಚಪರಿವರ್ತನೆಯ 5 ವಿಷಯಗಳಾದ ಸಾಮಾಜಿಕ ಸಾಮರಸ್ಯ, ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸ್ವದೇಶಿ ಜೀವನಶೈಲಿ, ನಾಗರಿಕ ಶಿಷ್ಟಾಚಾರ ವಿಷಯಗಳಿಗೆ ಒತ್ತುಕೊಡಲಾಗಿದೆ. ಸಮಾಜದಿಂದ ಅತ್ಯುತ್ತಮ ಪ್ರತಿಕ್ರಿಯೆ ಲಭಿಸಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ರಾಣಿ ಅಬ್ಬಕ್ಕ 500 - ಕಾರ್ಯಕ್ರಮ: ರಾಣಿ ಅಬ್ಬಕ್ಕ ಅವರ 500ನೇ ಜನ್ಮ ವರ್ಷಾಚರಣೆಯ ಅಂಗವಾಗಿ ಅವರ ಇತಿಹಾಸವನ್ನು ರಾಜ್ಯಾದ್ಯಂತ ತಿಳಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ವತಿಯಿಂದ ಮಂಗಳೂರು ವಿಭಾಗದ ಮೂರು ಜಿಲ್ಲೆಗಳಲ್ಲಿ ರಾಣಿ ಅಬ್ಬಕ್ಕ ಅವರ ಕುರಿತು 100 ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಸುಮಾರು 125 ವಿದ್ಯಾಸಂಸ್ಥೆಗಳ ಸಹಯೋಗದೊಂದಿಗೆ 75 ಜನ ಸಂಪನ್ಮೂಲ



> ಸಮಾಜವೇ ಜಾಗೃತಗೊಂಡು ಧರ್ಮ ರಕ್ಷಣೆ ಮಾಡಬೇಕು ಎಂಬುದು ಸಂಘದ ಆಶಯವಾಗಿದೆ.
> ■ ನಾ.ತಿಪ್ಪೇಸ್ವಾಮಿ, ಆರ್‌ಎಸ್‌ಎಸ್ ಕ್ಷೇತ್ರೀಯ ಕಾರ್ಯವಾಹ

ವ್ಯಕ್ತಿಗಳು, 300 ಗಣ್ಯರು ಭಾಗವಹಿಸಿದ್ದು, ಸುಮಾರು 23000 ವಿದ್ಯಾರ್ಥಿಗಳನ್ನು ತಲುಪಿದ್ದು, 2500 ಶಿಕ್ಷಕರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು ಎಂದು ತಿಳಿಸಿದರು.

ಶತಾಬ್ದಿ ವರ್ಷದ ನಂತರ ಆರ್‌ಎಸ್‌ಎಸ್‌ನ ಭೌಗೋಳಿಕ ರಚನೆಯಲ್ಲಿ ಬದಲಾವಣೆಯಾಗಲಿದ್ದು, ಸುಮಾರು ಪ್ರತಿ ಎರಡು ಕೋಟಿ ಜನಸಂಖ್ಯೆಗೆ ಒಂದು ಸಂಭಾಗವನ್ನು ರಚಿಸಲಾಗುವುದು. ಅದರಂತೆ ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಮಂಗಳೂರು ಎಂಬ 4 ಸಂಭಾಗಗಳ ರಚನೆಯಾಗಲಿದೆ ಎಂದು ತಿಳಿಸಿದರು.

ಡ್ರಗ್ಸ್ ಮುಕ್ತ ಕರ್ನಾಟಕ ಅಭಿಯಾನ

ಪರಿವರ್ತನಾ ಟ್ರಸ್ಟ್ ಬೆಂಗಳೂರು ವತಿಯಿಂದ ಕರ್ನಾಟಕ ದಕ್ಷಿಣದ 23 ಜಿಲ್ಲೆಯ 86 ತಾಲ್ಲೂಕುಗಳಲ್ಲಿ ಡ್ರಗ್ಸ್ ಜಾಗೃತಿ ಅಭಿಯಾನವನ್ನು ಆಯೋಜಿಸಲಾಗಿತ್ತು. 55 ದಿನಗಳ ಅವಧಿಯಲ್ಲಿ 181 ಜಾಗೃತಿ ಸಭೆ ಯೋಜನೆ ಮಾಡಲಾಗಿತ್ತು. ಇದರಲ್ಲಿ 52 ವಿವಿಧ ಸಂಘಟನೆಗಳು, 187 ವಿದ್ಯಾಸಂಸ್ಥೆಗಳ ಸಹಯೋಗದಲ್ಲಿ 60500 ವಿದ್ಯಾರ್ಥಿಗಳು, 6,865 ಸಾರ್ವಜನಿಕರು ಭಾಗವಹಿಸಿದ್ದರು. 3,675 ಕಿ.ಮೀ ಜಾಥಾ ನಡೆಸಲಾಗಿದೆ. ಮುಂದಿನ ಐದು ವರ್ಷದವರೆಗೆ ದೀರ್ಘಾವಧಿ ಜಾಗೃತಿ ಅಭಿಯಾನ ನಡೆಸುವ ಬಗ್ಗೆ ಯೋಚಿಸಲಾಗಿದೆ. ವಿದ್ಯಾಸಂಸ್ಥೆಗಳು ಮತ್ತು ಇಲಾಖೆಗಳ ಸಹಕಾರದೊಂದಿಗೆ ಶಾಲಾ ಕಾಲೇಜುಗಳ ದಾಖಲಾತಿ ಸಂದರ್ಭದಲ್ಲಿ ಟೆಸ್ಟಿಂಗ್ ಹಾಗೂ ವ್ಯಸನಿಗಳಿಗೆ ಚಿಕಿತ್ಸೆ ಇತ್ಯಾದಿ ಯೋಜನೆ ಹಮ್ಮಿಕೊಳ್ಳಲಾಗಿದೆ ಎಂದು ತಿಪ್ಪೇಸ್ವಾಮಿ ಮಾಹಿತಿ ನೀಡಿದರು.

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

• **ಬೆಂಗಳೂರು:** ಇಂದಿನಿಂದ (ಮಾ.18) ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಆರಂಭವಾಗಲಿದ್ದು, ಶಿಕ್ಷಣ ಇಲಾಖೆಯು ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿ ಕಟ್ಟುನಿಟ್ಟಿನ ಭದ್ರತೆಯೊಂದಿಗೆ ಪರೀಕ್ಷಾ ಕೇಂದ್ರಗಳು ಸಿದ್ಧಗೊಂಡಿವೆ. ಮೊದಲ ದಿನ ಪ್ರಥಮ ಭಾಷೆ ವಿಷಯದ ಪರೀಕ್ಷೆ ನಡೆಯಲಿದೆ. ಪರೀಕ್ಷೆಗೆ ಒಟ್ಟು 9,02,899 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ.

ಏ.2ರವರೆಗೂ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 8,12,855 ಹೊಸಬರು, 62,845 ಪುನರಾವರ್ತಿತ ಮತ್ತು 27,189 ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಪರೀಕ್ಷೆಗೆ ಒಟ್ಟು 15,941 ಶಾಲೆಗಳು ನೋಂದಾಯಿಸಿಕೊಂಡಿದ್ದು, 2,871 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಫಲಿತಾಂಶವನ್ನು ಏ. 24 ರಂದು ಪ್ರಕಟಿಸಲಾಗುತ್ತದೆ.

ಯಾವುದೇ ಅಕ್ರಮ ಮತ್ತು ಗೊಂದಲಗಳಿಗೆ ಅವಕಾಶವಾಗದೆ ಸುಸೂತ್ರವಾಗಿ ಪರೀಕ್ಷೆ ನಡೆಸಲು ಸಕಲ ಸಿದ್ಧತೆ ಹಾಗೂ ಭದ್ರತಾ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ತಿಳಿಸಿದೆ.

ಜತೆಗೆ ಎಲ್ಲಾ ಪರೀಕ್ಷಾ ಕೊಠಡಿಗಳಲ್ಲೂ ಸಿಸಿ ಕ್ಯಾಮರಾ ಕಣ್ಣಾವಲು ಮತ್ತು ಜಿಲ್ಲಾ ಕೇಂದ್ರದಲ್ಲಿ ವೆಬ್‌ಕ್ಯಾಸ್ಟಿಂಗ್ ವ್ಯವಸ್ಥೆ ಈ ಬಾರಿಯೂ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಕಲಿ ಪ್ರಶ್ನೆಪತ್ರಿಕೆಗಳನ್ನು ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹಬ್ಬಿಸುವವರ ಮೇಲೆ ನಿಗಾ ಇರಿಸಲಾಗುತ್ತದೆ. ಜತೆಗೆ ಇಂತಹ ಅಕ್ರಮ ಎಸಗಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಚಿತ ಬಸ್ ವ್ಯವಸ್ಥೆ

ವಿದ್ಯಾರ್ಥಿಗಳ ಅನುಕೂಲಕ್ಕೆ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯವನ್ನು ಘೋಷಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರ (ಹಾಲ್ ಟಿಕೆಟ್) ತೋರಿಸಿ, ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡಬಹುದಾಗಿದೆ.

ನಗರ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಕೇಂದ್ರದ 200 ಮೀಟರ್ ವ್ಯಾಪ್ತಿಯಲ್ಲಿರುವ ಝೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಆದೇಶ ಹೊರಡಿಸಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಭಾರತದಲ್ಲಿ ಹಿಂದೂ ಮುಸ್ಲಿಂ ಸಮಸ್ಯೆಗೆ ಕಾಂಗ್ರೆಸ್ಸೇ ಕಾರಣ -ನಿತಿನ್ ಗಡ್ಕರಿ

-ವಿಚಿತ್ರವೇನೆಂದರೆ ಇದೀಗ ಪ್ರತಿ ಚುನಾವಣೆಯಲ್ಲೂ ಅವರ ಸೋಲಿಗೆ ಅದೇ ಕಾರಣ. ಅದು ಹೇಗೆಂದರೆ ಅವರನ್ನು ಈ ಕಡೆ ಹಿಂದುಗಳು ನಂಬೋದಿಲ್ಲ, ಆ ಕಡೆ ಮುಸ್ಲಿಮರೂ ನಂಬೋದಿಲ್ಲ!

ದಿನ ಭವಿಷ್ಯ

ಮೇಷ
ಕೆಲಸ, ಮನೆಯ ಕಡೆಗೇ ಗಮನ ಕೊಟ್ಟು ಇತರ ವಿಷಯ ಕಡೆಗಣಿಸಿದ್ದೀರಿ. ಖಾಸಗಿ ವಿಷಯಕ್ಕೂ ಆದ್ಯತೆ ಕೊಡಿ. ಹೂಡಿಕೆಯಿಂದ ಧನಲಾಭ

ವೃಷಭ
ಉದಾಸೀನತೆ. ಅದರಿಂದ ಕೆಲಸ ನಿಧಾನ. ತುರ್ತು ಕಾರ್ಯ ಕಡೆಗಣಿಸಬೇಡಿ. ಶೇರು ಹೂಡಿಕೆಯಲ್ಲಿ ಎಚ್ಚರ ವಹಿಸುವುದೊಳಿತು.

ಮಿಥುನ
ಉದ್ವಿಗ್ನ ಪರಿಸ್ಥಿತಿ ಎದುರಿಸುವಿರಿ. ಮನಸು ಶಾಂತಗೊಳಿಸಲು ಹೆಚ್ಚು ಗಮನ ಕೊಡಿ. ಆದಾಯ ಮತ್ತು ಖರ್ಚಿನ ಮಧ್ಯೆ ಸಮತೋಲನ ಸಾಧಿಸಿ.

ಕಟಕ
ಈ ದಿನ ಹೆಚ್ಚು ಎಚ್ಚರ ಅವಶ್ಯ. ಸಣ್ಣ ತಪ್ಪು ದೊಡ್ಡ ಪರಿಣಾಮ ಉಂಟು ಮಾಡೀತು. ಖರೀದಿ ಹುಮ್ಮಸ್ಸಿನಲ್ಲಿ ಖರ್ಚು ಅಧಿಕ. ಬಂಧು ಭೇಟಿ.

ಸಿಂಹ
ಎಲ್ಲವೂ ನಿಮಗೆ ಪೂರಕವಾಗಿದ್ದರೂ ಏನೋ ಕೊರಗು, ಬೇಸರ. ಪ್ರೀತಿಯಲ್ಲಿ ಹಿನ್ನಡೆ. ನಿಮ್ಮ ಧೋರಣೆ ಬದಲಿಸುವ ಪ್ರಸಂಗ ಬಂದೀತು.

ಕನ್ಯಾ
ಭವಿಷ್ಯದ ಯೋಜನೆ ರೂಪಿಸಲು ಸಕಾಲ. ಉದ್ಯೋಗ ಪಡೆಯುವಲ್ಲಿ ಸಫಲ. ಧೂಳು ಸಂಬಂಧಿ ಅಲರ್ಜಿ ಉಂಟಾದೀತು. ಕೌಟುಂಬಿಕ ಸೌಹಾರ್ದ.

ತುಲಾ
ಕಲ್ಪನೆಗೆ ರೆಕ್ಕೆ ಮೂಡಲಿದೆ. ಅದನ್ನು ಸಾಕಾರಗೊಳಿಸಲು ಸಫಲ. ಆತ್ಮೀಯರ ಸಾಧನೆಯ ತೃಪ್ತಿ. ಚಾಲನೆಯಲ್ಲಿ ತುಸು ಎಚ್ಚರವಿರಲಿ.

ವೃಶ್ಚಿಕ
ಏಕತಾನತೆಯಿಂದ ಹೊರಬಂದು ಹೊಸತನಕ್ಕೆ ಕ್ರಿಯಾಶೀಲರಾಗಿ. ಅನವಶ್ಯ ಜಗಳಕ್ಕೆ ಹೋಗದಿರಿ. ತಾಳ್ಮೆ ಪ್ರದರ್ಶಿಸಿ. ಪ್ರೀತಿಯಲ್ಲಿ ಮಹತ್ವದ ಬೆಳವಣಿಗೆ.

ಧನು
ಕಡೆಗಣಿಸಿದ್ದ ವಿಷಯವೊಂದು ಮುನ್ನೆಲೆಗೆ ಬರಲಿದೆ. ಆ ಬಗ್ಗೆ ಗಮನ ಹರಿಸಿ. ವೃತ್ತಿಗೆ ಸಂಬಂಧಿಸಿ ಶುಭ ಸುದ್ದಿ ಕೇಳಲಿದೆ. ಧನಪ್ರಾಪ್ತಿ.

ಮಕರ
ಉದ್ಯೋಗಕ್ಕೆ ಸಂಬಂಧಿಸಿ ಶುಭ ಸುದ್ದಿ. ಆಪ್ತರ ಜತೆಗಿನ ಭಿನ್ನಮತ ಶಮನ. ಹಣದ ವ್ಯವಹಾರದಲ್ಲಿ ಅನಿರೀಕ್ಷಿತ ತೊಡಕು ಉಂಟಾಗಲಿದೆ.

ಕುಂಭ
ನೀವು ನಿರರ್ಥಕ ಅಂದುಕೊಂಡ ಕೆಲಸ ಉತ್ತಮ ಫಲಿತಾಂಶ ನೀಡಲಿದೆ. ತೃಪ್ತಿಕರ ಆರ್ಥಿಕ ಬೆಳವಣಿಗೆ. ಕೌಟುಂಬಿಕ ಸಾಮರಸ್ಯ.

ಮೀನ
ವಿವಾಹ ಸಂಬಂಧ ಕೂಡಿಬಂದೀತು. ಉದ್ವಿಗ್ನತೆ ಸೃಷ್ಟಿಸುವ ವಿಷಯಗಳಿಂದ ದೂರವಿರಿ. ವೃತ್ತಿ ಕಾರ್ಯದಲ್ಲಿ ಸಫಲತೆ. ಬಂಧುಗಳ ಸಹಕಾರ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00
ಅದೃಷ್ಟ ಸಂಖ್ಯೆ : 5,3,7,1

ರೈಲ್ವೇ ಇಲಾಖೆಯ ಪರೀಕ್ಷೆ ದಿಢೀರ್ ರದ್ದು: ಸಿಎಂ ಅಸಮಾಧಾನ
ಕನ್ನಡಿಗರಿಗೆ ಕೇಂದ್ರ ದ್ರೋಹ

• **ಬೆಂಗಳೂರು:** ನೈರುತ್ಯ ರೈಲ್ವೇ ಇಲಾಖೆಯ 194 ಗೂಡ್ಸ್ ರೈಲು ಮ್ಯಾನೇಜರ್ ಹುದ್ದೆಗಳು ಹಾಗೂ ಹುಬ್ಬಳ್ಳಿ ವಿಭಾಗದಲ್ಲಿ ಎಲ್‌ಡಿಸಿಇ 101 ಹುದ್ದೆಗಳಿಗೆ ಮುಂಬಡ್ತಿ ನೀಡುವ ಸಂಬಂಧ ಮಂಗಳವಾರ ನಡೆಯಬೇಕಿದ್ದ ಪರೀಕ್ಷೆಗಳನ್ನು ಕನ್ನಡಿಗರು ಹಾಗೂ ಕನ್ನಡ ಸಂಘಟನೆಗಳ ಭಾರೀ ವಿರೋಧದ ತರುವಾಯ ರೈಲ್ವೇ ಇಲಾಖೆಯು ದಿಢೀರ್ ರದ್ದುಪಡಿಸಿ ಕನ್ನಡಿಗ ಉದ್ಯೋಗಿಗಳನ್ನು ಅತಂತ್ರ ಪರಿಸ್ಥಿತಿಗೆ ತಳ್ಳಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದುಕೊಂಡಿರುವ ಅವರು, ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡದಿರುವ ಬಗ್ಗೆ ಈ ಮೊದಲೇ ಸಾವಿರಾರು ಕನ್ನಡಿಗ ಉದ್ಯೋಗಿಗಳು ಧ್ವನಿಯೆತ್ತಿದ್ದರು. ಶಾಂತ ರೀತಿಯ ಪ್ರತಿಭಟನೆಯನ್ನು, ಪ್ರತಿರೋಧವನ್ನು ನಿರ್ಲಕ್ಷಿಸುತ್ತಾ ಬಂದ ರೈಲ್ವೆ ಇಲಾಖೆ ಪರೀಕ್ಷೆ ಆರಂಭವಾಗುವ ಕೊನೆ ಕ್ಷಣದಲ್ಲಿ ರದ್ದುಮಾಡಿರುವುದು ಈಗಿನ ಗೊಂದಲಕ್ಕೆ ಕಾರಣ ಎಂದಿದ್ದಾರೆ.

> ಮುಂಬರುವ ದಿನಗಳಲ್ಲಿ ಕನ್ನಡ ಭಾಷಿಗರಿಗೆ ಭಾಷೆಯ ಹೆಸರಲ್ಲಿ ಅನ್ಯಾಯವಾಗದಂತೆ ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು. ಪ್ರಧಾನಿ ನರೇಂದ್ರ ಮೋದಿ ಅವರೇ ಮಧ್ಯೆಪ್ರವೇಶಿಸಿ ಸಂಬಂಧಿತ ಇಲಾಖೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು.ರದ್ದುಪಡಿಸಲಾದ ರೈಲ್ವೆ ಇಲಾಖೆಯ ಪರೀಕ್ಷೆಯನ್ನು ಕನ್ನಡದಲ್ಲಿಯೇ ಬರೆಯಲು ಅವಕಾಶ ಕಲ್ಪಿಸಿ ಶೀಘ್ರದಲ್ಲಿಯೇ ನಡೆಸಲು ಕ್ರಮಕೈಗೊಳ್ಳಬೇಕು.
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಕನ್ನಡಿಗರೆಂದರೆ ಕೇಂದ್ರಕ್ಕೆ ತಾತ್ಸಾರ: ಮುಖ್ಯಮಂತ್ರಿ

ಪ್ರಾರಂಭದಲ್ಲಿಯೇ ರೈಲ್ವೆ ಇಲಾಖೆ ಎಚ್ಚೆತ್ತುಕೊಂಡು ತನ್ನ ತಪ್ಪನ್ನು ತಿದ್ದಿಕೊಂಡು ಕನ್ನಡದಲ್ಲಿ ಪರೀಕ್ಷೆಗೆ ಅವಕಾಶ ಮಾಡಿಕೊಟ್ಟಿದ್ದರೆ ಈಗಿನ ಅತಂತ್ರ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಆ ಪ್ರಯತ್ನವನ್ನೇ ಮಾಡದೆ, ಕನ್ನಡಿರನ್ನು ತಾತ್ಸಾರ ಭಾವನೆಯಿಂದ ಕಂಡು, ಪ್ರತಿಭಟನೆಯ ಕಾವು ಹೆಚ್ಚಾದ ಕೂಡಲೆ ತರಾತುರಿಯಲ್ಲಿ ಪರೀಕ್ಷೆ ರದ್ದುಪಡಿಸುವ ನಿರ್ಧಾರಕ್ಕೆ ಬಂದಿರುವುದು ಖಂಡನೀಯ. ಕನ್ನಡಿಗರಿಗೆ ಕೇಂದ್ರ ಸರ್ಕಾರದ ಪರೀಕ್ಷೆಗಳಲ್ಲಿ ಅನ್ಯಾಯವಾಗುತ್ತಿರುವುದು ಇದು ಮೊದಲ ಬಾರಿ ಅಲ್ಲ ಬಹುಷಃ ಕೊನೆಯದ್ದೂ ಅಲ್ಲ. ಕೇಂದ್ರದ ಕುಟಿಲತನದಿಂದಾಗಿ ಕನ್ನಡಿಗ ಉದ್ಯೋಗಾಕಾಂಕ್ಷಿಗಳು ಮೊದಲಿಂದಲೂ ಅನ್ಯಾಯಕ್ಕೆ ತುತ್ತಾಗುತ್ತಾ ಬಂದಿದ್ದಾರೆ ಎಂದು ಸಿಎಂ ಸಿಟ್ಟು ಹೊರಹಾಕಿದ್ದಾರೆ. ಸೋಮಣ್ಣನವರು ಕನ್ನಡಿಗರ ಪರವಾಗಿ ನಿಂತು ಅನ್ಯಾಯವನ್ನು ಸರಿಪಡಿಸುತ್ತಾರೆ ಎಂಬ ಭರವಸೆಯನ್ನು ನಾನೂ ಇಟ್ಟುಕೊಂಡಿದ್ದೆ, ಆ ನಂಬಿಕೆ ಹುಸಿಯಾಗಿದೆ. ಸೋಮಣ್ಣನವರು ಮಾತನಾಡಲು ಶುರು ಮಾಡಿದರೆ ರೈಲ್ವೆ ಇಲಾಖೆ ಇರುವುದೇ ಕರ್ನಾಟಕಕ್ಕಾಗಿ ಎನ್ನುವಂತೆ ಮಾತಿನ ಅರಮನೆ ಕಟ್ಟುತ್ತಾರೆ. ಅವರು ಮಾತು ಸ್ವಲ್ಪ ಕಡಿಮೆಮಾಡಿ ಕರ್ನಾಟಕಕ್ಕಾಗಿ ಮಾಡಬೇಕಾದ ಕೆಲಸವನ್ನು ನಿಷ್ಠೆಯಿಂದ ಮಾಡಲು ಮುಂದಾಗಬೇಕು ಎಂದು ಸಿದ್ದರಾಮಯ್ಯ ಮನವಿ ಮಾಡಿದ್ದಾರೆ. ಭಾರತ ರಾಜ್ಯಗಳ ಒಕ್ಕೂಟ, ಈ ರಾಜ್ಯಗಳು ಭಾಷೆಗಳ ಆಧಾರದಲ್ಲಿಯೇ ರಚನೆಯಾಗಿರುವುದನ್ನು ಮರೆಯಬಾರದು. ನಾವು ಹಿಂದಿಯನ್ನು ಭಾಷೆಯಾಗಿ ವಿರೋಧಿಸುವುದಿಲ್ಲ, ಹಿಂದಿಯನ್ನು ಕನ್ನಡದ ಮೇಲೆ ಹೇರುವುದನ್ನು ಮಾತ್ರ ಖಂಡಿತ ಸಹಿಸುವುದಿಲ್ಲ. ಆಳುವ ಪಕ್ಷದ ಸಂಸದರು ಪಕ್ಷದ ಮುಲಾಜಿಗೆ ಬಿದ್ದು ಕನ್ನಡಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತದೆ ಬಾಯಿ ಮುಚ್ಚಿಕೊಂಡಿರಬಹುದು, ಆದರೆ ಕನ್ನಡಿಗರು ಜಾಗೃತರಾಗಿದ್ದಾರೆ. ಕನ್ನಡಿಗರು ಉದ್ಯೋಗಕ್ಕಾಗಿ, ಭಡ್ತಿಗಾಗಿ ಕೇಂದ್ರದ ಮುಂದೆ ಭಿಕ್ಷೆಗೆ ನಿಂತಿಲ್ಲ, ತಾವು ಶಿಕ್ಷಣ ಪಡೆದ ಭಾಷೆಯಲ್ಲೇ ತಮ್ಮ ಹಕ್ಕಿನ ಉದ್ಯೋಗ ಭಡ್ತಿಯನ್ನು ಕೇಳುತ್ತಿದ್ದಾರೆ ಎಂದು ಬರೆದುಕೊಂಡಿದ್ದಾರೆ.



ಬಿರುಗಾಳಿಸಹಿತ ಆಲಿಕಲ್ಲು ಮಳೆ

ಪುಟ 1➡ ಕಲಬುರಗಿ ನಗರದಲ್ಲಿ ಲಘು ಮಳೆಯಾಗಿದ್ದರೆ, ಚಿಂಚೋಳಿಯಲ್ಲಿ ಆಲಿಕಲ್ಲು ಮಳೆಯಾಗಿದೆ. ಹೊಸಪೇಟೆ, ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿ ಪಟ್ಟಣಗಳು ಸೇರಿದಂತೆ ವಿಜಯನಗರ ಜಿಲ್ಲೆಯ ಹಲವಾರು ಭಾಗಗಳಲ್ಲಿ ಸೋಮವಾರ ಸಂಜೆ ಗುಡುಗುಸಹಿತ ಮಳೆಯಾಗಿದೆ. ಕೂಡ್ಲಿಗಿ ತಾಲ್ಲೂಕಿನ ಯೆಂಬ್ಲಿ ಗ್ರಾಮದಲ್ಲಿ ಸಿಡಿಲು ಬಡಿದ ನಂತರ ಗಾಳಿ ಯಂತ್ರವೊಂದು ಸುಟ್ಟುಹೋಗಿದೆ.

ಆಲಿಕಲ್ಲು ಸಹಿತ ಮಳೆ: ಧಾರವಾಡ ನಗರದಲ್ಲಿ ಆಲಿಕಲ್ಲು ಸಹಿತ ಭಾರಿ ಮಳೆ ಆಗಿದ್ದು, ಬಿಸಿಲಿನ ಝಳಕ್ಕೆ ಬಸವಳಿದಿದ್ದ ಉತ್ತರ ಕರ್ನಾಟಕದ ಜನತೆಗೆ ವರುಣ ತಂಪೆರೆದಿದೆ. ಧಾರವಾಡದ ಕೆಲವೆಡೆ ಸಾಧಾರಣ ಮಳೆ ಆದರೆ, ನಗರದಲ್ಲಿ ಭಾರೀ ಮಳೆ ಆಗಿದೆ. ಆದರೆ ಗಾಳಿ ಜೋರಾಗಿ ಬೀಸಿದ್ದರಿಂದ ರೈತರಿಗೆ ಮಾವಿನ ಬೆಳೆಗೆ ಈ ಮಳೆ ಕಂಟಕವಾಗಲಿದೆಯೇ ಎಂಬ ಆತಂಕ ಉಂಟು ಮಾಡಿದೆ.

ಬಳ್ಳಾರಿ ನಗರ, ಸಂಡೂರು ಮತ್ತು ಕಂಪ್ಲಿಯಲ್ಲಿಯೂ ಸಹ ಲಘು ಮಳೆಯಾಗಿದೆ. ದಾವಣಗೆರೆ ನಗರ ಮತ್ತು ಜಿಲ್ಲೆಯ ಕೆಲವು ಭಾಗಗಳಲ್ಲಿ ಆಲಿಕಲ್ಲು ಮಳೆಯಾಗಿದೆ. ಕಲಘಟಗಿ ತಾಲೂಕಿನ ಬಹುತೇಕ ಭಾಗಗಳಲ್ಲಿ ಮಂಗಳವಾರ ಮಧ್ಯಾಹ್ನ ಭಾರೀ ಗಾಳಿ ಮಳೆ ಸುರಿದಿದೆ. ಕಲಘಟಗಿ ಪಟ್ಟಣ, ಮಾಚಾಪುರ, ಬೆಲವಂತರ ಸೋಮನಕೊಪ್ಪ ಹೀಗೆ ಹಲವು ಊರುಗಳ ರಸ್ತೆಗಳಲ್ಲಿ ಆಲಿಕಲ್ಲು ರಾಶಿ ರಾಶಿ ಸುರಿದು ಬಿದ್ದಿದ್ದು, ಮನೆಗಳ ಮೇಲೆ ಕೂಡ ಆಲಿಕಲ್ಲು ರಾಶಿ ಬಿದ್ದಿದ್ದವು. ನಿರಂತರ ಮಳೆ ಜತೆಗೆ ಆಲಿಕಲ್ಲು ಸುರಿದು ಜನ ಆಶ್ಚರ್ಯಚಕಿತರಾದರು.

ಕೊಡಗಿನ ಅನೇಕ ಭಾಗಗಳಲ್ಲಿ ಸೋಮವಾರ ಋತುವಿನ ಮೊದಲ ಮಳೆಯಾಗಿದೆ. ಮಂಗಳವಾರ ಸಂಜೆ ಸುರಿದ ಮಳೆಯು ಗುಡ್ಡಗಾಡು ಜಿಲ್ಲೆಯ ಕಾಫಿ ಬೆಳೆಗಾರರಿಗೆ ಹರ್ಷ ತಂದಿತು.

ರೈತ ಸಾವು

• **ರೋಣ:** ತಾಲೂಕಿನ ಮೆಣಸಗಿ ಗ್ರಾಮದಲ್ಲಿ ಮಂಗಳವಾರ ಸುರಿದ ಧಾರಾಕಾರ ಮಳೆಯಿಂದ ಸಿಡಿಲು ಬಡಿದು ರೈತ ನಿಂಗಪ್ಪ ರಾಮಪ್ಪ ಅಮಾತಿ (58) ಎಂಬ ರೈತ ಮೃತಪಟ್ಟಿದ್ದಾನೆ. ರೋಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

24 ಗಂಟೆಯಲ್ಲಿ ಮತ್ತಷ್ಟು ಮಳೆ

ರಾಜ್ಯದ ಜನತೆಗೆ ಹವಾಮಾನ ಇಲಾಖೆ ಮಳೆಯ ಮುನ್ಸೂಚನೆ ನೀಡಿದೆ. ಮುಂದಿನ 24ಗಂಟೆಗಳ ಕಾಲ ಬೆಂಗಳೂರು ಸೇರಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆಯಿದ್ದು, ಜನರು ಎಚ್ಚರಿಕೆಯಿಂದಿರಲು ಸೂಚಿಸಲಾಗಿದೆ. ರಾಜ್ಯದ ಅಲ್ಲಲ್ಲಿ ಮೋಡಕವಿದ ವಾತಾವರಣವಿರಲಿದ್ದು, ಹಗುರವಾದ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಸಚಿವರಿಗೆ ಸಿಎಂ ಪತ್ರ

ಪುಟ 1➡ ಇದು ಸರ್ಕಾರಕ್ಕೆ ತೀವ್ರ ಮುಜುಗರ ಉಂಟುಮಾಡುವುದರೊಂದಿಗೆ ಶಾಸಕರುಗಳ ಹಕ್ಕಿಗೆ ಮತ್ತು ಸದನದ ಘನತೆಗೆ ಚ್ಯುತಿಯನ್ನುಂಟು ಮಾಡಿರುತ್ತದೆ. ಈ ಸಂಬಂಧ ನಡೆದ ಸಭೆಯಲ್ಲಿ ಸಭಾಧ್ಯಕ್ಷರು ತೀವ್ರ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ತಮ್ಮ ಇಲಾಖೆಯ ವತಿಯಿಂದ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಉತ್ತರವನ್ನು ಸಕಾಲದಲ್ಲಿ ವಿಧಾನಮಂಡಲಕ್ಕೆ ಕಳುಹಿಸದೇ ಇರುವ ಬಗ್ಗೆ ಇಲಾಖಾ ಕಾರ್ಯದರ್ಶಿಗಳ ವಿವರಣೆಯನ್ನು ತಕ್ಷಣ ನೀಡಲು ಸೂಚಿಸಲಾಗಿದೆ. ಅಲ್ಲದೆ, ಉತ್ತರ ಕಳುಹಿಸದ ಸಂದರ್ಭದಲ್ಲಿ ಸಂಬಂಧಪಟ್ಟ ಶಾಸಕರಿಗೆ ಪ್ರತ್ಯೇಕ ಪತ್ರವನ್ನು ಕಳುಹಿಸಿ ಹಾಗೂ ಮಾಹಿತಿ ಒದಗಿಸುವ ನಿರ್ದಿಷ್ಟ ಸಮಯವನ್ನು ತಿಳಿಸಲು ಸಹ ಸೂಚಿಸಿದೆ. ಎಂದು ಪತ್ರದಲ್ಲಿ ಸಿದ್ದರಾಮಯ್ಯ ತಿಳಿಸಿದ್ದಾರೆ.

8 ಐಎಎಸ್ ಅಧಿಕಾರಿಗಳಿಗೆ ನೋಟಿಸ್

ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ಕಾರಣ ಕೇಳಿ ಬರೋಬ್ಬರಿ ಎಂಟು ಇಲಾಖೆಯ ಹಿರಿಯ ಐಎಎಸ್ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ಜಾರಿ ಮಾಡಲಾಗಿದೆ. ಅಧಿವೇಶನದಲ್ಲಿ ಶಾಸಕರುಗಳ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡದ ಇಲಾಖೆ ಕಾರ್ಯದರ್ಶಿಗಳಿಗೆ ನೋಟಿಸ್ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ ಬೆನ್ನಲ್ಲೇ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರು 8 ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದಾರೆ. ಸದನದಲ್ಲಿ ಶಾಸಕರ ಪ್ರಶ್ನೆಗೆ ಉತ್ತರ ನೀಡದ ಹಿನ್ನೆಲೆಯಲ್ಲಿ 8 ಇಲಾಖೆಯ ಕಾರ್ಯದರ್ಶಿಗಳಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ.

- ಆರ್. ವಿನೋತ್ ಪ್ರಿಯಾ -ಪಶುಸಂಗೋಪನಾ ಇಲಾಖೆ
- ಮೋಹನ್ ರಾಜ್ ಕೆ.ಪಿ. -ವಸತಿ ಇಲಾಖೆ
- ಎನ್.ವಿ ಪ್ರಸಾದ್ - ಸಾರಿಗೆ ಇಲಾಖೆ
- ಆರ್.ಗಿರೀಶ್ - ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ
- ಆದಿತ್ಯ ಆಮ್ಲನ್ ಬಿಸ್ವಾಸ್ - ಲೋಕೋಪಯೋಗಿ ಇಲಾಖೆ
- ರಾಜೇಂದ್ರ ಕುಮಾರ್ ಕಟಾರಿಯಾ - ಕಂದಾಯ ಇಲಾಖೆ

ಅಮಾನುಷ ದಾಳಿ

ಪುಟ 1➡ ಸ್ಫೋಟದ ನಂತರ ಸಂಭವಿಸಿದ ದ್ವಿತೀಯ ಹಂತದ ಸ್ಫೋಟಗಳು ಅಲ್ಲಿ ಮದ್ದುಗುಂಡುಗಳ ಸಂಗ್ರಹವಿರುವುದನ್ನು ಖಚಿತಪಡಿಸಿವೆ ಎಂದು ಸಚಿವಾಲಯ ಪ್ರತಿಪಾದಿಸಿದೆ.

ನಂಗರ್‌ಹಾರ್‌ನಲ್ಲಿ ಡ್ರೋನ್ ಜೋಡಣೆ ಕೇಂದ್ರಗಳಿದ್ದವು ಎಂದು ಭದ್ರತಾ ಮೂಲಗಳು ತಿಳಿಸಿವೆ. ಪಾಕಿಸ್ತಾನದ ಭೂಪ್ರದೇಶದ ಮೇಲೆ ಪದೇ ಪದೇ ನಡೆದ ಗಡಿ ದಾಳಿಗಳ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆ ಪ್ರಾರಂಭಿಸಲಾಗಿದೆ ಎಂದು ಪಾಕ್ ಸಮರ್ಥಿಸಿಕೊಂಡಿದೆ.

ಹುದ್ದೆ ಭರ್ತಿ ಆಗ್ರಹಿಸಿ ಪ್ರತಿಭಟನೆ

ಪುಟ 1➡ ಪೊಲೀಸರ ಮನವೊಲಿಕೆಗೂ ಬಗ್ಗದ ಹಿನ್ನೆಲೆಯಲ್ಲಿ ಎಬಿವಿಪಿ ಕಾರ್ಯಕರ್ತರನ್ನು ವಶಕ್ಕೆ ಪಡೆಯಲು ಪೊಲೀಸರು ಮುಂದಾದಾಗ ಪೊಲೀಸರು ಹಾಗೂ ವಿದ್ಯಾರ್ಥಿಗಳು, ಕಾರ್ಯಕರ್ತರ ನಡುವೆ ವಾಗ್ವಾದ ಹಾಗೂ ಮಾತಿನ ಚಕಮಕಿ ನಡೆಯಿತು. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.50 ಲಕ್ಷಕ್ಕೂ ಹೆಚ್ಚಿನ ಹುದ್ದೆಗಳು ಖಾಲಿ ಇದ್ದು, ಆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಲ್ಲಿ ರಾಜ್ಯ ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿದ ಕಾರ್ಯಕರ್ತರು, ಕಳೆದ ಐದು ವರ್ಷಗಳಿಂದ ಯಾವುದೇ ನೇಮಕಾತಿ ನಡೆದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಬಿವಿಪಿ ವಿಭಾಗ ಸಂಘಟನಾ ಕಾರ್ಯದರ್ಶಿ ಸಚಿನ್ ಹಿರೇಮಠ, ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಪನಿರಾಘವೇಂದ್ರ ದೇಸಾಯಿ, ರಾಜ್ಯ ಸಹಕಾರ್ಯದರ್ಶಿ ಕುಶಾಲ ಗೋಧಗೇರಿ, ರಾಜ್ಯ ಕಾರ್ಯಸಮಿತಿ ಸದಸ್ಯ ಯಲ್ಲಪ್ಪ ಬಮ್ಮನಲ್ಲಿ, ದರ್ಶನ್ ಮಾಷಣ್ಣವರ, ಶಿವಯ್ಯ ಮಠಪತಿ, ಸಾಯಿ ಬೋಸ್ಲೆ, ನಾಗರಾಜ ಹಂಜಿ, ಪ್ರಥಮಗೌಡ ಪಾಟೀಲ, ಮಹಾಂತೇಶ, ಬಾಲಾಜಿ ಜವಳಕರ, ಸೌರಭ ಮೊದಲಾದವರಿದ್ದರು.

ದೇಶದ ಅನಿಲ ಆತಂಕ ಇನ್ನಷ್ಟು ಇಳಿಕೆ

ಪುಟ 1➡ ಈ ವರ್ಗಾವಣೆ ಪ್ರಕ್ರಿಯೆ ಪ್ರತಿ ಗಂಟೆಗೆ 1000 ಟನ್‌ಗಳಂತೆ ನಡೆಯುತ್ತಿದ್ದು, 2 ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಕೇಂದ್ರ ಬಂದರು ಸಚಿವಾಲಯದ ನಿರ್ದೇಶನದಂತೆ ವಡ್ನೀರ್ ಬಂದರು ಈ ಕಾರ್ಯಾಚರಣೆಯನ್ನು ಸುಗಮವಾಗಿ ನಿರ್ವಹಿಸುತ್ತಿದೆ. ಇದರಲ್ಲಿ ಬಹು ಏಜೆನ್ಸಿಗಳ ಪಾಲ್ಗೊಳ್ಳುವಿಕೆ ಇದ್ದು, ಎಲ್ಲ ಪ್ರಕ್ರಿಯೆಗಳನ್ನೂ ನಿಕಟವಾಗಿ ಮೇಲ್ವಿಚಾರಣೆ ನಡೆಸಲಾಗುತ್ತಿದೆ. ಹಾಗೆಯೇ ಸಚಿವಾಲಯವು ಎಲ್‌ಪಿಜಿ ನೌಕೆಗಳನ್ನು ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ನಿರ್ವಹಿಸುವಂತೆ ಮತ್ತು ಯಾವುದೇ ನಿಯಮಾವಳಿಗಳನ್ನು ಮೀರದಂತೆ ನಿರ್ದೇಶನ ನೀಡಿದೆ.

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ ಹೊಂದಿರುವ ಬಲವಾದ ರಾಜತಾಂತ್ರಿಕ ಬಾಂಧವ್ಯಗಳಿಂದಾಗಿ ಭಾರತೀಯ ನೌಕೆಗಳು ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿ ಬರುತ್ತಿದ್ದು, ದೇಶದ ತೈಲ ಮತ್ತು ಅನಿಲ ಪೂರೈಕೆಯನ್ನು ಖಾತ್ರಿಪಡಿಸಿಕೊಳ್ಳಲಾಗುತ್ತಿದೆ ಎಂದು ಗುಜರಾತಿನ ಸಚಿವ ಜಿತು ವಾಘಾನಿ ತಿಳಿಸಿದ್ದಾರೆ. ಭಾರತ ತನ್ನ ಬೇಡಿಕೆಯ ಕಚ್ಚಾತೈಲದ ಶೇ.88ಕ್ಕೆ ಆಮದನ್ನೇ ನೆಚ್ಚಿಕೊಳ್ಳಬೇಕಾಗಿದ್ದು, ಆದಾಗ್ಯೂ ಮೋದಿ ಸರಕಾರ ರಷ್ಯಾ ಸೇರಿದಂತೆ ಬಹುಮೂಲಗಳಿಂದ ತೈಲ ಆಮದು ಮಾಡಿಕೊಳ್ಳುವ ಮೂಲಕ ದೇಶದ ಜನತೆಯ ಹಿತವನ್ನು ರಕ್ಷಿಸುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು. ಅಮೆರಿಕ, ಚೀನಾ, ಕೊಲ್ಲಿ ದೇಶಗಳಲ್ಲಿ ಕೂಡ ತೈಲ ಬೆಲೆ ಏರಿಕೆಯಾಗಿದ್ದರೂ ಭಾರತದಲ್ಲಿ ತೈಲ ಬೆಲೆ ಏರಿಕೆಯಾಗಿಲ್ಲ ಎಂಬುದಿಲ್ಲಿ ಉಲ್ಲೇಖನೀಯ.

ಸಿಲುಕಿರುವ ಹಡಗುಗಳ ಸ್ಥಿತಿ

ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ ಸಿಲುಕಿರುವ ಉಳಿದ 22 ಹಡಗುಗಳ ಸುರಕ್ಷಿತ ಪ್ರಯಾಣಕ್ಕಾಗಿ ಬಂದರು ಮತ್ತು ಹಡಗು ಸಚಿವಾಲಯ ಹಾಗೂ ಹಡಗು ನಿರ್ದೇಶನಾಲಯ ನಿರಂತರ ಪ್ರಯತ್ನ ನಡೆಸುತ್ತಿದೆ. ಈ ಹಡಗುಗಳಲ್ಲಿ 611 ನಾವಿಕರಿದ್ದು, ಇವುಗಳಲ್ಲಿ ಆರು ಎಲ್‌ಪಿಜಿ ವಾಹಕಗಳು, ನಾಲ್ಕು ಕಚ್ಚಾ ತೈಲ ಟ್ಯಾಂಕರ್‌ಗಳು ಮತ್ತು ಮೂರು ಕಂಟೈನರ್ ಹಡಗುಗಳು ಸೇರಿವೆ. ಎಲ್ಲಾ ಭಾರತೀಯ ನಾವಿಕರು ಸುರಕ್ಷಿತವಾಗಿದ್ದಾರೆ ಮತ್ತು ಕಳೆದ 24 ಗಂಟೆಗಳಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸಿಲ್ಲ, ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೂರೈಕೆ ಮೇಲೆ ಒತ್ತಡ

ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಪ್ರತೀಕಾರ ದಾಳಿಗಳಿಂದಾಗಿ ಹಾರ್ಮುಜ್ ಜಲಸಂಧಿ ಪ್ರಸ್ತುತ ಮುಚ್ಚಲ್ಪಟ್ಟಿದೆ. ಪರ್ಯಾಯ ಮೂಲಗಳಿಂದ ತೈಲ ಆಮದಿನ ವ್ಯತ್ಯಯವನ್ನು ಭಾಗಶಃ ಸರಿದೂಗಿಸಲಾಗಿದ್ದರೂ, ಅನಿಲ ಮತ್ತು ಎಲ್‌ಪಿಜಿ ಪೂರೈಕೆ ಮೇಲೆ ಒತ್ತಡ ಮುಂದುವರಿದಿದೆ. ಈ ಬಿಕ್ಕಟ್ಟಿನ ಸಮಯದಲ್ಲಿ ಹಡಗು ಕಾರ್ಯಾಚರಣೆ ಸುಗಮಗೊಳಿಸಲು ಪ್ರಮುಖ ಭಾರತೀಯ ಬಂದರುಗಳು ಶೇಖರಣೆ ಮತ್ತು ಲಂಗರು ಹಾಕುವ ಶುಲ್ಕದಲ್ಲಿ ರಿಯಾಯಿತಿಗಳನ್ನು ನೀಡುತ್ತಿವೆ.

ಲಂಚ ಪಡೆಯುತ್ತಿದ್ದ ಪಿಡಿಒ ಲೋಕಾಯುಕ್ತ ಬಲೆಗೆ

• **ಮೈಸೂರು:** ನೀರುಗಂಟಿಗೆ ಬಾಕಿ ಸಂಬಳ ನೀಡಲು 25 ಸಾವಿರ ರೂ. ಲಂಚ ಪಡೆಯುತ್ತಿದ್ದ ಪಿಡಿಒರೊಬ್ಬರು ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿ ಬಿದ್ದ ಘಟನೆ ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ ನಡೆದಿದೆ. ಹುಣಸೂರು ತಾಲೂಕಿನ ಮುಳ್ಳೂರು ಗ್ರಾಮ ಪಂಚಾಯ್ತಿ ಪಿಡಿಒ ಮಂಜುಳಾ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದವರು. ನೀರುಗಂಟಿಯಾಗಿ ಕೆಲಸ ಮಾಡುತ್ತಿದ್ದ ಸ್ವಾಮಿ ಎಂಬುವರು ಕರ್ತವ್ಯದಲ್ಲಿದ್ದ ವೇಳೆ ಮೃತಪಟ್ಟಿದ್ದಾರೆ. ಅನುಕಂಪದ ಆಧಾರದ ಮೇಲೆ ಸ್ವಾಮಿರವರ ಮಗ ಮಹದೇವ್ ಎಂಬುವರಿಗೆ ಕೆಲಸ ಸಿಕ್ಕಿದೆ. ತಂದೆ ಕರ್ತವ್ಯ ನಿರ್ವಹಿಸಿದ್ದ ಎರಡು ವರ್ಷದ ಸಂಬಳ ಬಾಕಿ ಪಡೆಯಲು ಮಹದೇವ್ ಮುಂದಾಗಿದ್ದಾರೆ. ಸುಮಾರು ನಾಲ್ಕು ಲಕ್ಷ ಸಂಬಳ ನೀಡಲು ಮಂಜುಳಾ 50 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. ಇವರ ಕಿರುಕುಳದಿಂದ ಬೇಸತ್ತ ಮಹದೇವ್ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದಾರೆ. ಮಹದೇವ್‌ರಿಂದ ತಮ್ಮ ಕಚೇರಿಯಲ್ಲಿ ಮಂಜುಳಾ 25 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ರೆಡ್ ಹ್ಯಾಂಡಾಗಿ ಹಿಡಿದಿದ್ದಾರೆ.

ಈ ವೇಳೆ ಮಂಜುಳಾ ತನ್ನ ಕೈಯನ್ನ ಹರಿತವಾದ ಆಯುಧದಿಂದ ಕೊಯ್ದುಕೊಂಡಿದ್ದಾರೆ. ಗಾಯಗೊಂಡ ಮಂಜುಳಾರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿದ್ಯುತ್ ತಗುಲಿ ಹುಲಿ ಸಾವು



ಪುಟ 1➡ ತಾಲೂಕಿನ ಹೆಗ್ಗಡಹಳ್ಳಿ, ಹಕ್ಕಲಪುರ, ಸೋಮಹಳ್ಳಿ, ಸಂಪಿಗೆಪುರ, ಕಲ್ಲಹಳ್ಳಿ ಪಡಗೂರು ಭಾಗದಲ್ಲಿ ಕಾಣಿಸಿಕೊಂಡಿದ್ದು ಕೆಲ ದಿನಗಳ ಹಿಂದೆ ಸಂಪಿಗೆಪುರ ಹಾಗೂ ದೇಪಾಪುರದ ಬಳಿ ಹುಲಿ ಸೆರೆಹಿಡಿಯಲಾಗಿತ್ತು. ಪಡಗೂರು ಗ್ರಾಮದ ಸುತ್ತಮುತ್ತ ಹುಲಿ ಓಡಾಟ ಹೆಚ್ಚಳವಾಗಿದ್ದು ಕಳೆದ ವಾರ ಪಡಗೂರಿನಲ್ಲಿ ಜಾನುವಾರುವಿನ ಮೇಲೆ ದಾಳಿ ಮಾಡಿ ಕೊಂದು ಹಾಕಿತ್ತು. ಇದರಿಂದಾಗಿ ಹುಲಿ ಸೆರೆಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಬೋನು ಇಟ್ಟು ನಿಗಾ ವಹಿಸಿದ್ದರು.

ಆರೆಸ್ಸೆಸ್‌ನಿಂದ ಹಿಂದು ಧರ್ಮದ ಪುನರುತ್ಥಾನ, ಸಮಾಜ ಸಂಘಟನೆ

ಪುಟ 1➡ ಮನೆ ಮನೆಗೆ ಸಂಪರ್ಕ ಮಾಡಿದ ಸಂದರ್ಭದಲ್ಲಿ ಮತಾಂತರ, ಡ್ರಗ್ಸ್, ಜನಸಂಖ್ಯೆಯಲ್ಲಿನ ಅಸಮತೋಲನ ಸೇರಿದಂತೆ ಸಮಾಜದ ಸಮಸ್ಯೆಗಳ ಬಗ್ಗೆ ಜನರು ಬೆಳಕು ಚೆಲ್ಲಿದ್ದರು. ಹಿಂದು ಸಮಾಜೋತ್ಸವದಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಭಾಗಿಯಾಗಿದ್ದು ವಿಶೇಷವಾಗಿತ್ತು ಎಂದು ಹೇಳಿದರು.

ಶಾಖೆಯಲ್ಲಿ ಹೆಚ್ಚಳ

ದೇಶಾದ್ಯಂತ ಒಟ್ಟು 55,683 ಸ್ಥಾನಗಳಲ್ಲಿ 88,949 ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆಗಳು ನಡೆಯುತ್ತಿದ್ದು, ಕಳೆದ ವರ್ಷಕ್ಕಿಂತ 5820 ಶಾಖೆಗಳು ಹೆಚ್ಚಾಗಿವೆ. ವಾರಕ್ಕೊಮ್ಮೆ ನಡೆಯುವ ಮಿಲನ್ ಸಂಖ್ಯೆ ಕಳೆದ ಬಾರಿಗಿಂತ 459 ಹೆಚ್ಚಾಗಿದ್ದು, ಪ್ರಸ್ತುತ ದೇಶವ್ಯಾಪಿ 32,606 ಮಿಲನ್‌ಗಳು ಜರುಗುತ್ತಿವೆ. ತಿಂಗಳಿಗೊಮ್ಮೆ ನಡೆಯುವ ಮಂಡಲಿಗಳು ಒಟ್ಟು 13,211 ಇವೆ. ಒಟ್ಟಾರೆ ಶಾಖೆ, ಮಿಲನ್ ಮತ್ತು ಮಂಡಲಿಗಳು ಸೇರಿ ಒಟ್ಟು 1,34,766 ಶಾಖೆ ನಡೆಯುತ್ತಿವೆ ಎಂದು ಮಾಹಿತಿ ನೀಡಿದರು.

ಕಾರ್ಯಕರ್ತ ಪ್ರಶಿಕ್ಷಣ ವರ್ಗ

ದೇಶಾದ್ಯಂತ ಕಾರ್ಯಕರ್ತರ ಪ್ರಶಿಕ್ಷಣ ವರ್ಗಗಳು ನಡೆದಿದ್ದು, ಒಟ್ಟು 63 ಸಂಘ ಶಿಕ್ಷಾ ವರ್ಗಗಳಲ್ಲಿ 14,024 ಶಿಕ್ಷಾರ್ಥಿಗಳು ಭಾಗವಹಿಸಿದ್ದರು. ಈ ವರ್ಷ ಕರ್ನಾಟಕದಲ್ಲೂ ನಾಲ್ಕು ಸಂಘ ಶಿಕ್ಷಾ ವರ್ಗಗಳು ನಡೆಯಲಿದ್ದು, ಘೋಷ್ ವರ್ಗ ಸೇರಿಸಲಾಗುವುದು ಎಂದು ತಿಳಿಸಿದರು.

ಗಣ್ಯರಿಗೆ ಶ್ರದ್ಧಾಂಜಲಿ ಸಂತಾಪ

ಪ್ರತಿವರ್ಷ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ರಾಷ್ಟ್ರಕ್ಕೆ ಮತ್ತು ಸಮಾಜಕ್ಕೆ ಕೊಡುಗೆ ನೀಡಿ ನಮ್ಮನ್ನಗಲಿದ ನಾಡಿನ ಪ್ರಮುಖರಿಗೆ, ಆರ್‌ಎಸ್‌ಎಸ್ ಹಿರಿಯ ಕಾರ್ಯಕರ್ತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗುತ್ತದೆ. ದೇಶದ ಅನೇಕ ಗಣ್ಯರ ಜತೆಗೆ ಕರ್ನಾಟಕದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ, ವಿಜ್ಞಾನಿ ಡಾ. ಮಾಧವ ಗಾಡ್ಗೀಲ್, ಸ್ವಾತಂತ್ರ್ಯ ಹೋರಾಟಗಾರ ಮತ್ತು ರಾಜಕಾರಣಿ ಭೀಮಣ್ಣ ಖಂಡ್ರೆ, ಶಾಮನೂರು ಶಿವಶಂಕರಪ್ಪ, ಹಿಂದುಸ್ಥಾನಿ ಗಾಯಕ ಅಶೋಕ ಹುಗ್ಗಣ್ಣವರ್, ಹುಬ್ಬಳ್ಳಿಯ ಉದ್ಯಮಿ ಭರತ್ ಖಿಮ್ಜಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗಿದೆ ಎಂದು ಹೇಳಿದರು.

ಕರ್ನಾಟಕದಲ್ಲಿ ನಡೆದ ವಿಶೇಷ ಕಾರ್ಯಕ್ರಮ

ಪುಟ 1➡ ದೀಪೋತ್ಸವ, ಕಬಡ್ಡಿ ಸ್ಪರ್ಧೆ ಸೇರಿದಂತೆ 17 ವಿವಿಧ ಉಪಕ್ರಮಗಳೊಂದಿಗೆ ಯುವಕರ ಸಂಪರ್ಕ ಮಾಡಲಾಯಿತು. 13 ಸ್ಥಾನಗಳಲ್ಲಿ ಜಾಯ್ನ್ ಆರ್‌ಎಸ್‌ಎಸ್ ಅಭಿಯಾನ ಮತ್ತು 2815 ಸಣ್ಣಸಭೆಗಳು ನಡೆದವು. ಒಟ್ಟಾರೆ 8799 ವಿದ್ಯಾರ್ಥಿಗಳು ಮತ್ತು 3973 ತರುಣ ಉದ್ಯೋಗಿಗಳು ಕಾರ್ಯಕ್ರಮದಲ್ಲಿ ಸಹಭಾಗಿಗಳಾಗಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ಉಪಸ್ಥಿತಿಯಲ್ಲಿ ಶಿಕ್ಷಣ ಸಂಸ್ಥೆಗಳ ಪ್ರಮುಖರನ್ನು ಆಹ್ವಾನಿಸಲಾಗಿದ್ದ ಬೃಹತ್ ಸಂವಾದ ಕಾರ್ಯಕ್ರಮ ಧಾರವಾಡದ ಗರಗದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಆಯೋಜಿಸಲಾಗಿತ್ತು. 191 ಸ್ಥಾನಗಳಿಂದ 540 ಸಂಸ್ಥೆಗಳಿಂದ 920 ಪ್ರಮುಖರು ಭಾಗವಹಿಸಿದ್ದರು. ವಿಜಯಪುರದಲ್ಲಿ ಸಹಸರಕಾರ್ಯವಾಹ ಮುಕುಂದ ಸಿ.ಆರ್., ಭೇಟಿಯ ಸಂದರ್ಭದಲ್ಲಿ ಯುವ ಸಾಧು ಸಂತ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಿವಿಧ ಪಂಥಗಳ 230 ಸಂತರು ಭಾಗವಹಿಸಿದ್ದರು. ಶತಾಬ್ದಿಯ ನಿಮಿತ್ತ ದೇಶದ 4 ಮಹಾನಗರಗಳಲ್ಲಿ ಸರಸಂಘಚಾಲಕರ ವ್ಯಾಖ್ಯಾನಮಾಲೆ ಮತ್ತು ಸಂವಾದ ಕಾರ್ಯಕ್ರಮ ನಡೆಯಿತು. ಬೆಂಗಳೂರಿನ ಕಾರ್ಯಕ್ರಮದಲ್ಲಿ 13 ವಿವಿಧ ಕ್ಷೇತ್ರಗಳಿಂದ ಗಣ್ಯರನ್ನು ಆಹ್ವಾನಿಸಲಾಗಿತ್ತು. ಒಟ್ಟು 1228 ಜನರು ಭಾಗಿಯಾಗಿದ್ದರು ಎಂದು ತಿಪ್ಪೇಸ್ವಾಮಿ ತಿಳಿಸಿದರು.

ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ ಮುಖ್ಯಮಂತ್ರಿ

ವಿಧಾನಸಭೆ: ರಾಜ್ಯದಲ್ಲಿ 2026 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆ ಬುಧವಾರದಿಂದ ಪ್ರಾರಂಭವಾಗುತ್ತಿದ್ದು, ಪರೀಕ್ಷೆಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳಿಗೆ ಕರ್ನಾಟಕ ವಿಧಾನಸಭೆ ಶುಭಾಶಯ ಕೋರಿದೆ.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು, ಎಸ್ಎಸ್ಎಲ್ಸಿ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಶುಭ ಹಾರೈಸಲು ಅವಕಾಶ ನೀಡಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಪ್ರಸ್ತುತ ಸಾಲಿನಲ್ಲಿ 8,65,968 ಮಕ್ಕಳು ಪರೀಕ್ಷೆಗೆ ಹಾಜರಾಗುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗಿದ್ದು, ಮೂರು ಹಂತದಲ್ಲಿ ಪರೀಕ್ಷೆಗಳು ನಡೆಯುತ್ತವೆ. ಒಂದು ವೇಳೆ ಮೊದಲ ಹಂತದ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಾಗ್ಯೂ, ಎರಡನೇ ಹಂತ, ಮೂರನೇ ಹಂತದಲ್ಲಿ ಪರೀಕ್ಷೆಗೆ ಅವಕಾಶ ಇರುವುದರಿಂದ ಯಾವುದೇ ವಿದ್ಯಾರ್ಥಿಗಳು ಆತಂಕಗೊಳ್ಳದೆ ಪರೀಕ್ಷೆಯನ್ನು ಎದುರಿಸುವಂತೆ ತಿಳಿಸಿ ಎಸ್ಎಸ್ಎಲ್ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಧೈರ್ಯವಾಗಿ ಪರೀಕ್ಷೆ ಬರೆಯಲು ತಿಳಿಸಿದರು. ಅದಕ್ಕೂ ಮೊದಲು ಮಾತನಾಡಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಎಸ್ಎಸ್ಎಲ್ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಈ ಹಿಂದೆ ಒತ್ತಡದಿಂದ ಪರೀಕ್ಷೆಗೆ ಹಾಜರಾಗುತ್ತಿದ್ದರು.

ಸುಳ್ಳು ಸುದ್ದಿ ಹರಡುವವರಿಗೆ ಎಚ್ಚರಿಕೆ ಕೊಡಿ

ಪ್ರತಿಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ಎಸ್ಎಸ್ಎಲ್ಸಿ ಪರೀಕ್ಷೆ ಬರೆಯುವ ಮಕ್ಕಳಿಗೆ ಪೋಷಕರು ಮಾನಸಿಕ ಹಿಂಸೆ ನೀಡಬಾರದು. ವರ್ಷಪೂರ್ತಿ ಸುಮ್ಮನಿದ್ದು, ಈಗ ಒತ್ತಡದಿಂದ ಪರೀಕ್ಷೆ ಬರೆಯುವಂತೆ ಮಾಡಬೇಡಿ ಎಂದು ಕಿವಿಮಾತು ಹೇಳಿದರು. ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಗುತ್ತಿದೆ ಎಂದು ಸುಳ್ಳು ಸುದ್ದಿಗಳು ಬರುತ್ತಿವೆ. ಅಂತಹ ಸುದ್ದಿ ಹರಡುವವರನ್ನು ಜೈಲಿಗೆ ಹಾಕುವ ಎಚ್ಚರಿಕೆಯನ್ನು ನೀಡಬೇಕು ಎಂದು ತಿಳಿಸಿದರು.

ಸಭೆ



ದೆಹಲಿಯ ಕರ್ನಾಟಕ ಭವನದಲ್ಲಿ ಮಂಗಳವಾರ ನಡೆದ ರಾಜ್ಯದ ಸಂಸದರ ಜೊತೆ ಸಭೆಯಲ್ಲಿ ಯುಕೆಪಿ, ಮೇಕೆದಾಟು, ಮಹದಾಯಿ ಸೇರಿದಂತೆ ರಾಜ್ಯದ ಪ್ರಮುಖ ನೀರಾವರಿ ಅಡೆತಡೆ ನಿವಾರಣೆ ಸಂಬಂಧ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಸಂಬಂಧ ಚರ್ಚೆ ನಡೆಸಲಾಯಿತು. ಡಿಸಿಎಂ ಡಿ.ಕೆ. ಶಿವಕುಮಾರ್,ಸಚಿವರಾದ ಎಚ್.ಕೆ.ಪಾಟೀಲ್, ಭೋಸರಾಜು, ಎಂ.ಬಿ.ಪಾಟೀಲ್ ಹಾಗೂ ಸಂಸದರಾದ ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ ಇದ್ದರು.

ಉದ್ದಿಮೆದಾರರಿಗೆ ಜಮೀನು

ವಿಧಾನ ಪರಿಷತ್: ಕಳೆದ 2 ವರ್ಷಗಳಲ್ಲಿ ಕೆಐಎಡಿಬಿಯಿಂದ ಅಭಿವೃದ್ಧಿಪಡಿಸಲಾಗುತ್ತಿರುವ ಕೈಗಾರಿಕಾ ಪ್ರದೇಶಗಳಲ್ಲಿ 2,954.52 ಎಕರೆ ಜಮೀನನ್ನು 1,445 ಉದ್ದಿಮೆದಾರರಿಗೆ ಹಂಚಿಕೆ ಮಾಡಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ರವಿಕುಮಾರ್ ಅವರ ಪ್ರಶ್ನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ ಉತ್ತರಿಸಿದ ಸಚಿವರು, ಕೆಐಎಡಿಬಿಯಿಂದ ಅಭಿವೃದ್ಧಿಪಡಿಸುವ ಕೈಗಾರಿಕಾ ಪ್ರದೇಶಗಳಲ್ಲಿ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳಾದ ರಸ್ತೆ, ಸಂಪರ್ಕ ವ್ಯವಸ್ಥೆ, ನೀರು, ಚರಂಡಿ, ವಿದ್ಯುತ್ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ತಿಳಿಸಿದರು. 2022-23 ರಿಂದ ಫೆಬ್ರವರಿ 2026ರ ಅಂತ್ಯದವರೆಗೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ 2,028 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

ರೈತರ ಸಮಸ್ಯೆಗಳಿಗೆ ಪರಿಹಾರ ನೀಡಲಿ

ವಿಧಾನ ಪರಿಷತ್: ಅಡಕೆ ಬೆಳೆಗಾರರಿಗೆ ಒಂದೆಡೆ ಎಲೆಚುಕ್ಕಿ ರೋಗ, ಹಳದಿ ರೋಗದ ಬಾಧೆಯಾದರೆ, ಮತ್ತೊಂದೆಡೆ ಈಶಾನ್ಯ ರಾಜ್ಯಗಳಿಂದ ಅಡಿಕೆ ರಾಜ್ಯದ ಮಾರುಕಟ್ಟೆಗೆ ಬರುತ್ತಿರುವುದರಿಂದ ಅಡಕೆ ಬೆಲೆ ಪಾತಾಳಕ್ಕೆ ಕುಸಿಯುತ್ತಿದೆ. ಅಡಕೆ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ತಕ್ಷಣ ರಾಜ್ಯ ಸರ್ಕಾರ ಮಧ್ಯ ಪ್ರವೇಶಿಸಬೇಕು ಎಂದು ಜೆಡಿಎಸ್ ಸದಸ್ಯ ಭೋಜೆಗೌಡ ಒತ್ತಾಯಿಸಿದರು.

ಬಜೆಟ್ ಚರ್ಚೆ ಕಲಾಪದ ವೇಳೆ ಈ ವಿಷಯ ಪ್ರತಿಪಾದಿಸಿದ ಅವರು, ರಾಜ್ಯದಲ್ಲಿ ಮಲೆನಾಡು/ಅರೆ ಮಲೆನಾಡು ಸೇರಿದಂತೆ ರಾಣೆಬೆನ್ನೂರುವರೆಗೆ ಅಡಿಕೆ ಬೆಳೆ ವಿಸ್ತರಿಸಿದೆ. ಸುಮಾರು 6.75 ಲಕ್ಷ ಹೆಕ್ಟೇರು ಅಡಿಕೆ ಬೆಳೆಯಿದೆ. ವಾರ್ಷಿಕ ಬೆಳೆ 10 ಲಕ್ಷ ಟನ್ ಉತ್ಪಾದನೆಯಾಗುತ್ತದೆ. 50 ಹೆಕ್ಟರ್ ಪ್ರದೇಶದಲ್ಲಿ ಹಳದಿ ಎಲೆ ಚುಕ್ಕಿ ರೋಗ, 15 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಕೊಳೆ ರೋಗ ವ್ಯಾಪಿಸಿದೆ ಎಂದರು.

ಕಿರುಸುದ್ದಿ

ಕುಡಿಯುವ ನೀರಿಗೆ 490 ಕೋಟಿ ರೂ. ಮೀಸಲು

ವಿಧಾನಸಭೆ: ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಹಾಗೂ ಕುಡಿಯುವ ನೀರಿನ ಯೋಜನೆಗೆ ಸಣ್ಣ ನೀರಾವರಿ ಇಲಾಖೆಯಿಂದ 490 ಕೋಟಿ ರೂ.ಗಳನ್ನು ಪ್ರಸ್ತುತ ವರ್ಷದ ಆಯವ್ಯಯದಲ್ಲಿ ಮೀಸಲಿಟ್ಟಿದೆ ಎಂದು ಸಚಿವ ಡಾ. ಎಂ.ಸಿ.ಸುಧಾಕರ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಮಂಜುನಾಥ್ ಎಂ.ಆರ್. ಅವರ ಪ್ರಶ್ನೆಗೆ ಸಣ್ಣ ನೀರಾವರಿ ಸಚಿವರ ಪರವಾಗಿ ಉತ್ತರಿಸಿದ ಅವರು, ಅಂತರ್ಜಲ ಮಟ್ಟವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನೀರಾವರಿ ಕೆರೆಗಳು, ಪಿಕಪ್ ಚೆಕ್ ಡ್ಯಾಂ ನಿರ್ಮಾಣ, ಕೆರೆಗಳಿಗೆ ಕುಡಿಯುವ ನೀರು ತುಂಬಿಸುವ ಯೋಜನೆ ಹಾಗೂ ಇತ್ಯಾದಿ ಯೋಜನೆಗಳನ್ನು ಕೈಗೊಳ್ಳಲಾಗಿದೆ ಎಂದರು. ಕಳೆದ ನಾಲ್ಕು ವರ್ಷಗಳಲ್ಲಿ 9 ಕೋಟಿ ರೂ.ಗಿಂತ ಹೆಚ್ಚು ಅನುದಾನವನ್ನು ಹನೂರು ವಿಧಾನಸಭಾ ಕ್ಷೇತ್ರಕ್ಕೆ ನೀಡಲಾಗಿದೆ. ಅಲ್ಲದೇ ಪ್ರಸ್ತುತ ಆಯವ್ಯಯದಲ್ಲಿ 490 ಕೋಟಿ ರೂ. ಅನುದಾನವನ್ನು ಮೀಸಲಿರಿಸಿದೆ ಎಂದು ಮಾಹಿತಿ ನೀಡಿದರು.

ಹೊಸ ಕೆಎಸ್ಆರ್‌ಪಿ ಪಡೆ ಸ್ಥಾಪನೆ ಪರಿಶೀಲನೆ

ವಿಧಾನಸಭೆ: ರಾಯಚೂರು ಜಿಲ್ಲೆಯಲ್ಲಿ ಹೊಸದಾಗಿ ಕೆಎಸ್ಆರ್‌ಪಿ ಪಡೆಯನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಅಗತ್ಯತೆ ಆಧಾರದ ಮೇಲೆ ರಾಯಚೂರು ಜಿಲ್ಲೆಯಲ್ಲಿ ಕೆಎಸ್ಆರ್‌ಪಿ ಪಡೆ ಸ್ಥಾಪಿಸಲಾಗುವುದು ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಬಸನಗೌಡ ತುರುವಿಹಾಳ್ ಅವರು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೆಎಸ್ಆರ್‌ಪಿ ಪಡೆ ಅಗತ್ಯವಿದ್ದು, 175 ಎಕರೆ ಜಾಗವನ್ನು ಹಾಗೂ ಕೆ.ಕೆ. ಆರ್.ಡಿ.ಬಿ.ಯ ಅನುದಾನವನ್ನು ಸಹ ನೀಡಲಾಗುವುದು ಎಂದು ತಿಳಿಸಿ ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಶಾಸಕರು ಗೃಹ ಸಚಿವರಿಗೆ ಈಗಾಗಲೇ ಮನವಿ ಸಲ್ಲಿಸಿದ್ದಾರೆ ಎಂದರು. ಇದಕ್ಕೆ ಉತ್ತರಿಸಿದ ಸಚಿವರು, ರಾಯಚೂರು ಭಾಗದ 30 ಶಾಸಕರು ಸಹಿ ಮಾಡಿ ರಾಯಚೂರು ಭಾಗಕ್ಕೆ ಕೆಎಸ್ ಆರ್‌ಪಿ ಪಡೆ ಸ್ಥಾಪಿಸುವಂತೆ ಮನವಿ ಸಲ್ಲಿಸಿರುತ್ತಾರೆ. ಈಗಾಗಲೇ ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ 12 ಕೆಎಸ್ ಆರ್‌ಪಿ ಪಡೆಗಳು ಕಾರ್ಯನಿರ್ವಹಿಸುತ್ತಿವೆ. ರಾಯಚೂರು ಭಾಗದಲ್ಲಿ ವಿಶ್ವಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳು, ಅಣೆಕಟ್ಟೆಗಳು, ಗಡಿಭಾಗಗಳು ಇರುವುದರಿಂದ ಈ ಕುರಿತು ಪರಿಶೀಲಿಸಿ, ಶಾಸಕರ ಮನವಿಯನ್ನಾಧರಿಸಿ ಆರ್ಥಿಕ ಇಲಾಖೆಗೆ ಈಗಾಗಲೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಗತ್ಯತೆ ಅನುಸಾರ ಆರ್ಥಿಕ ಇಲಾಖೆ ಅನುಮೋದನೆ ಪಡೆದು ಕೆಎಸ್ಆರ್‌ಪಿ ಪಡೆ ಸ್ಥಾಪನೆ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಜಾಲತಾಣಗಳ ದುರ್ಬಳಕೆಗೆ ಭಾರತಿ ಶೆಟ್ಟಿ ಆಗ್ರಹ

ವಿಧಾನ ಪರಿಷತ್: ಸಾಮಾಜಿಕ ಜಾಲತಾಣಗಳ ದುರ್ಬಳಕೆಯ ಫಲವಾಗಿ ಅನೇಕರು ಆತಂಕ, ಬ್ಲಾಕ್ ಮೇಲ್, ನಿದ್ರಾಹೀನತೆಯಂತಹ ಗಂಭೀರ ಸಮಸ್ಯೆಗೆ ಎದುರಿಸುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಗಂಭೀರ ಹೆಜ್ಜೆ ಇರಿಸಬೇಕು ಎಂದು ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ ಸದನದಲ್ಲಿ ಗಮನ ಸೆಳೆದರು. ಶೂನ್ಯವೇಳೆಯಲ್ಲಿ ವಿಷಯವನ್ನು ಮಂಡಿಸಿದ ಅವರು, ಸಾಮಾಜಿಕ ಜಾಲತಾಣಗಳ ದುರಪಯೋಗದಿಂದ ಆಗುತ್ತಿರುವ ಪರಿಣಾಮಗಳ ಕುರಿತು ಸ್ವಯಂ ಸೇವಾ ಸಂಸ್ಥೆಯೊಂದು 11 ಸಾವಿರಕ್ಕೂ ಹೆಚ್ಚು ಜನರನ್ನು ಸಂದರ್ಶಿಸಿ ಸಮೀಕ್ಷಾ ವರದಿ ಒದಗಿಸಿದೆ.

ನವೀನ್ ಹೋಟೆಲ್ಸ್ ವಿರುದ್ಧದ ಭೂ ಹಗರಣ ಆರೋಪ

ವಂಚನೆ ನಡೆದಿಲ್ಲ

ವಿಧಾನ ಪರಿಷತ್: ಹುಬ್ಬಳ್ಳಿ-ಧಾರವಾಡದಲ್ಲಿ ನವೀನ್ ಹೋಟೆಲ್ಸ್ ಲಿಮಿಟೆಡ್‌ಗೆ 114.17 ಎಕರೆ ಜಮೀನು ಸಂಬಂಧ ಯಾವ ರೀತಿಯ ಹಗರಣ ನಡೆದಿಲ್ಲ, ಶುದ್ಧ ಕ್ರಯ ಪತ್ರ ನೆರವೇರಿಸುವ ಸಮಯದಲ್ಲಿ ಮಾರುಕಟ್ಟೆ ಬೆಲೆ ಅಥವಾ ಉಪನೊಂದಣಾಧಿಕಾರಿಗಳ ಮಾರ್ಗಸೂಚಿ ದರವನ್ನು ಮಂಡಳಿ ಪಡೆಯುವುದಿಲ್ಲ. ಹೀಗಾಗಿ ಇಲ್ಲಿ ಮುದ್ರಾಂಕ ಶುಲ್ಕದ ವಂಚನೆ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಜಕ್ಕಪ್ಪನವರ್ ಕೇಳಿದ ಪ್ರಶ್ನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ ಉತ್ತರಿಸಿದ ಸಚಿವರು, ಗಾಲ್ಫ್ ಕ್ಲಬ್ ಎಂದರೆ ಗ್ರೀನ್ ಬೆಲ್ಟ್. ಅಲ್ಲಿ ಯಾವ ವಿಶೇಷವಾಗಿ ಗಾಲ್ಫ್ ಕೋರ್ಸ್, ಗಾಲ್ಫ್ ಕ್ಲಬ್ ಚಟುವಟಿಕೆ ಹೊರತುಪಡಿಸಿ ಉಳಿದ ಯಾವ ಚಟುವಟಿಕೆಗಳನ್ನು ನಡೆಸುವುದಿಲ್ಲ. ಆದರೆ, ಒಂದು ವೇಳೆ ಅಲ್ಲಿ ಅನ್ಯ ವಾಣಿಜ್ಯಿಕ ಚಟುವಟಿಕೆಗಳು ನಡೆಯುತ್ತಿರುವ ದೂರು ಬಂದಿದ್ದರೆ ಅದನ್ನು ಇಲಾಖಾ ಕಾರ್ಯದರ್ಶಿಯ ಮಟ್ಟದಲ್ಲಿ ತನಿಖೆ ನಡೆಸಲು ಆದೇಶಿಸಲಾಗುವುದು, ಒಂದು ವೇಳೆ ಹೋಟೆಲ್ ಗಾಲ್ಫ್ ಚಟುವಟಿಕೆ ಹೊರತುಪಡಿಸಿ ಅನ್ಯ ವಾಣಿಜ್ಯಿಕ ಉದ್ದೇಶಗಳಿಗೆ ಜಮೀನು ಬಳಕೆ ಮಾಡಿಕೊಳ್ಳುತ್ತಿದ್ದರೆ ಅದನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರ ಬದ್ಧವಾಗಿದೆ ಎಂದು ಸ್ಪಷ್ಟವಾಗಿ ಹೇಳಿದರು.



ಅತ್ಯಂತ ಕಡಿಮೆ ಬೆಲೆಗೆ ಹಂಚಿಕೆ

ಇದಕ್ಕೂ ಮೊದಲು ಕಾಂಗ್ರೆಸ್ ಸದಸ್ಯ ಎಫ್.ಎಚ್. ಜಕ್ಕಪ್ಪನವರ್ ಮಾತನಾಡಿ, ಹುಬ್ಬಳ್ಳಿ-ಧಾರವಾಡದಲ್ಲಿ ನವೀನ್ ಹೋಟೆಲ್ ಲಿಮಿಟೆಡ್‌ಗೆ 114.17 ಎಕರೆ ಜಮೀನನ್ನು ಅಂದಿನ ಮಾರುಕಟ್ಟೆ ಮೌಲ್ಯಕ್ಕೆ ನೊಂದಾಯಿಸದೇ ಕೇವಲ 97.61,433 ರೂ.ಗಳಿಗೆ ನೊಂದಾಯಿಸಿ 150 ಕೋಟಿ ರೂ. ಮುದ್ರಾಂಕ ಹಾಗೂ ನೊಂದಣಿ ಶುಲ್ಕ ವಂಚನೆಯಾಗಿದೆ. ಯಾವುದೇ ದೇಶದಲ್ಲೂ 114 ಎಕರೆ ಜಮೀನು ಗಾಲ್ಫ್ ಕ್ಲಬ್‌ಗೆ ನೀಡಿರುವ ಉದಾರಹಣೆ ಇಲ್ಲ. ಕೋಟ್ಯಂತರ ರೂ. ಬೆಲೆ ಬಾಳುವ ಜಮೀನನ್ನು ಅತ್ಯಂತ ಕಡಿಮೆ ಬೆಲೆಗೆ ಹಂಚಿಕೆ ಮಾಡಲಾಗಿದೆ. ಅಲ್ಲಿ ಯಾವ ಗಾಲ್ಫ್ ಕ್ಲಬ್ ಸಹ ನಿರ್ಮಾಣಗೊಂಡಿಲ್ಲ. ಒಂದು ರೀತಿಯಲ್ಲಿ ಅಲ್ಲಿ ಖಾಸಗಿ ಲೇಔಟ್ ಮಾಡುವ ದೊಡ್ಡಮಟ್ಟದ ಪ್ರಯತ್ನ ನಡೆದಿದೆ, ಇದೊಂದು ದೊಡ್ಡ ಭೂ-ಹಗರಣ, ಹೀಗಾಗಿ ಈ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಸಹ ದನಿಗೂಡಿಸಿ ತನಿಖೆಗೆ ಒತ್ತಾಯಿಸಿದರು.

ಜಿಲ್ಲೆಗಳಲ್ಲಿ ವಿಶೇಷ ಪಡೆ: ಸಚಿವ ಆರ್.ಬಿ. ತಿಮ್ಮಾಪುರ

ಅಕ್ರಮ ಮದ್ಯ ತಡೆಗೆ ಕಾಯ್ದೆ?

ವಿಧಾನಸಭೆ: ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟ ತಡೆಗಟ್ಟಲು ಕರ್ನಾಟಕ ಅಬಕಾರಿ ಕಾಯ್ದೆಯನ್ನು ಪರಿಷ್ಕರಿಸಿ ಹೊಸ ಕಾಯ್ದೆ ತರುವುದಕ್ಕೆ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರು ವಿಷಯ ಪ್ರಸ್ತಾಪಿಸಿ, ರಾಯಚೂರು ಜಿಲ್ಲೆಯಲ್ಲಿ ಸ್ವಲಾಭಕ್ಕಾಗಿ ಅನಧಿಕೃತ ಸ್ಥಳಗಳು ಹಾಗೂ ಕಿರಾಣಿ ಅಂಗಡಿಗಳಲ್ಲೂ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ. ಕರ್ನಾಟಕ ಅಬಕಾರಿ ಕಾಯ್ದೆ 1965ರ ರೀತ್ಯಾ ಯಾವುದೇ ಕ್ರಮ ಆಗುತ್ತಿಲ್ಲ. ಈ ಬಗ್ಗೆ ಸರ್ಕಾರ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ವಿಶೇಷ ಪಡೆಗಳನ್ನು ರಚಿಸಬೇಕು ಎಂದು ಮನವಿ ಮಾಡಿದರು. ಇದಕ್ಕೆ ಉತ್ತರಿಸಿದ ಸಚಿವರು, ಕರ್ನಾಟಕ ಅಬಕಾರಿ ಕಾಯ್ದೆ 1965ರ ರೀತ್ಯಾ ಯಾವುದೇ ಕ್ರಮವು ಹಳೆಯದಾಗಿದ್ದು, ಅಕ್ರಮ ಮದ್ಯ ಮಾರಾಟವನ್ನು ಮಾದಕ ವಸ್ತು ನಿಯಂತ್ರಣ ಕಾಯ್ದೆಯಡಿ ಸೇರಿಸಲು ಸರ್ಕಾರ ಪರಿಶೀಲನೆ ನಡೆಸುತ್ತಿದೆ. ಮದ್ಯ ಅಕ್ರಮ ಮಾರಾಟ ತಡೆಗಟ್ಟಲು ಕರ್ನಾಟಕ ಅಬಕಾರಿ ಕಾಯ್ದೆಯನ್ನು ಪರಿಷ್ಕರಿಸಿ ಹೊಸ ಕಾಯ್ದೆ ತರುವುದಕ್ಕೆ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ತಿಳಿಸಿದರು.



ಸೇಂದಿ ಮಾರಾಟ

ರಾಯಚೂರು ಜಿಲ್ಲೆಯಲ್ಲಿ ಅಕ್ರಮವಾಗಿ ಕ್ಲೋರಲ್ ಹೈಡ್ರೇಟ್ ಪೌಡರ್‌ನಿಂದ ಕೃತಕವಾಗಿ ಸೇಂದಿಯನ್ನು ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಜಿಲ್ಲೆಯ ಗಡಿ ಭಾಗಗಳಿಗೆ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಿಂದ ಸೇಂದಿ ಅಥವಾ ಕೃತಕ ಸೇಂದಿಯು ರಸ್ತೆ ಹಾಗೂ ರೈಲು ಮಾರ್ಗವಾಗಿ ಕಳ್ಳಸಾಗಾಣಿಕೆಯಾಗುತ್ತಿದೆ. ಈ ರೀತಿ ಅಕ್ರಮವಾಗಿ ಸೇಂದಿ ಅಥವಾ ಕೃತಕ ಸೇಂದಿಯನ್ನು ತಯಾರಿಸುತ್ತಿರುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ಸರ್ಕಾರದಿಂದ ದುಂದುವೆಚ್ಚ: ವಿಶ್ವನಾಥ್

ವಿಧಾನ ಪರಿಷತ್: ಇನ್ಫೋಸಿಸ್ ದಿಗ್ಗಜರಾದ ನಾರಾಯಣಮೂರ್ತಿ, ಸುಧಾ ನಾರಾಯಣಮೂರ್ತಿ ಅಂತಹ ಆಗರ್ಭ ಶ್ರೀಮಂತರೇ ಇಂಡಿಗೋ ವಿಮಾನದಲ್ಲಿ ಹೊಸದಿಲ್ಲಿಗೆ ಹೋಗುತ್ತಾರೆ. ಆದರೆ, ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಿಂದ ಮೈಸೂರು, ಹುಬ್ಬಳ್ಳಿ ಹಾಗೂ ಹೊಸದಿಲ್ಲಿಗೆ ವಿಶೇಷ ವಿಮಾನದಲ್ಲಿ ಹಾರುತ್ತಾರೆ. ಅವರ ಸಂಪುಟ ಸಹೋದ್ಯೋಗಿಗಳೂ ಇದೇ ಹಾದಿಯನ್ನು ಅನುರಿಸುತ್ತಿದ್ದಾರೆ. ಪರಿಣಾಮ ರಾಜ್ಯ ಸರ್ಕಾರದ ದುಂದುವೆಚ್ಚ ಹೆಚ್ಚುತ್ತಿದೆ ಎಂದು ಹಿರಿಯ ಸದಸ್ಯ ಎಚ್. ವಿಶ್ವನಾಥ್ ತರಾಟೆಗೆ ತೆಗೆದುಕೊಂಡರು.

ಮೇಲ್ಮನೆಯಲ್ಲಿ ಬಜೆಟ್ ಮೇಲಿನ ಚರ್ಚೆ ವೇಳೆಯಲ್ಲಿ ಮಾತನಾಡಿದ ಅವರು, ಬೆಂಗಳೂರಿನಿಂದ – ಮೈಸೂರಿಗೆ ಕೇವಲ ಒಂದೂವರೆ ಗಂಟೆಯಲ್ಲಿ ತಲುಪಬಹುದು. ಬೆಂಗಳೂರಿನಿಂದ ಹೊಸದಿಲ್ಲಿಗೆ ಸಾಮಾನ್ಯ ವಿಮಾನದಲ್ಲಿ ಹೋಗಬಹುದು. ಆದರೆ, ಮೈಸೂರು, ದಿಲ್ಲಿಗೂ ಸಿಎಂ ವಿಶೇಷ ವಿಮಾನದಲ್ಲೇ ಪ್ರಯಾಣಿಸುತ್ತಾರೆ. ಇದಕ್ಕಾಗಿ ಸರ್ಕಾರ 38 ಕೋಟಿ ರೂ. ಖರ್ಚು ಮಾಡಿದೆ. ಇದು ಯಾರ ಹಣ, ಜನತೆ ಬೆವರು ಸುರಿಸಿ ಸರ್ಕಾರಕ್ಕೆ ಕಟ್ಟಿದ ತೆರಿಗೆ ಹಣ ಪೋಲಲ್ಲವೇ? ಈ ಸರ್ಕಾರದಲ್ಲಿ ದುಂದು ವೆಚ್ಚಗಳು ನಾಗಾಲೋಟದಲ್ಲಿದೆ.

ಒಳಚರಂಡಿ ಕಾಮಗಾರಿ ನಗರಸಭೆಗೆ ಹಸ್ತಾಂತರ

ವಿಧಾನ ಪರಿಷತ್: ಭದ್ರಾವತಿ ನಗರದಲ್ಲಿ 16 ಕೋಟಿ ರೂ. ಮತ್ತು ಅಮೃತ್ 1 ರಲ್ಲಿ 40 ಕೋಟಿ ರೂ. ವೆಚ್ಚದಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೊಂಡು ನಗರಸಭೆಗೆ ಹಸ್ತಾಂತರ ಮಾಡಲಾಗಿದೆ. ಅದರಂತೆ ನಗರಸಭೆ ಈ ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಣೆ ಮಾಡಲಿದೆ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ತಿಳಿಸಿದರು.

» ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿಕೆ

ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯೆ ಬಲ್ಕಿಸ್ ಬಾನು ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಭದ್ರಾವತಿ ನಗರಸಭೆ ವ್ಯಾಪ್ತಿಯಲ್ಲಿ ಕೈಗೊಂಡಿದ್ದ ಒಳಚರಂಡಿ ಯೋಜನೆ ಕಾಮ ಗಾರಿಯಲ್ಲಿ ಲೋಪದೋಷಗಳ ಬಗ್ಗೆ ಮೂರನೇ ಸಂಸ್ಥೆಯಿಂದ ತನಿಖೆ ನಡೆಸಿ ತಪ್ಪಿತಸ್ಥರ ಗುತ್ತಿಗೆದಾರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ. ವಿಶ್ವಬ್ಯಾಂಕ್ ನೆರವಿನ ಅಡಿಯಲ್ಲಿ ಕೆಎಂಆರ್‌ಪಿ ಯೋಜನೆಯಲ್ಲಿ ಭದ್ರಾವತಿ ಸೇರಿದಂತೆ 32 ನಗರ/ ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಕುಡಿಯುವ ನೀರು ಪೂರೈಕೆಗೆ ತಾತ್ಕಾಲಿಕ ವ್ಯವಸ್ಥೆ

ವಿಧಾನ ಪರಿಷತ್ : ರಾಯಚೂರು ಜಿಲ್ಲೆಯ ಮುದಗಲ್ ಪಟ್ಟಣದಲ್ಲಿ ಕುಡಿಯುವ ನೀರಿನ ಪೂರೈಕೆ ಯೋಜನೆಯ ಬಾಕಿ ಇರುವ ಕಾಮಗಾರಿಗಳಿಗೆ ಇನ್ನೂ 35.45 ಕೋಟಿ ರೂ. ಅಗತ್ಯವಿದೆ ಎಂದು ಸಚಿವ ಬೈರತಿ ಸುರೇಶ್ ಮಾಹಿತಿ ನೀಡಿದರು. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಶರಣಗೌಡ ಬಯ್ಯಾಪುರ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬೇಸಿಗೆ ಆರಂಭವಾಗಿರುವ ಹಿನ್ನೆಲೆಯಲ್ಲಿ ರಾಜ್ಯದ ನಗರ /ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಗೆ ತಾತ್ಕಾಲಿಕ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ರಾಯಚೂರು ಜಿಲ್ಲೆಯ ಮುದಗಲ್ ಪಟ್ಟಣದಲ್ಲಿ ಕುಡಿಯುವ ನೀರು ಪೂರೈಕೆಗೆ ಹಣದ ಅಗತ್ಯವಿದ್ದು, ಈ ಹಣವನ್ನು ಕ್ರೋಢೀಕರಿಸಿ ಪುರಸಭೆ ವತಿಯಿಂದಲೇ ಕಾಮಗಾರಿ ಆರಂಭಿಸಿ ಪೂರ್ಣಗೊಳಿಸುವ ಚಿಂತನೆ ಇದೆ ಎಂದು ತಿಳಿಸಿದರು.

ಅಡಕೆ ಹಾಳೆ ತಟ್ಟೆ ಸುರಕ್ಷಿತ

ವಿಧಾನ ಪರಿಷತ್: ಅಡಕೆ ಹಾಳೆ ತಟ್ಟೆಗಳ ಕುರಿತು ಆತಂಕಕ್ಕೆ ವೈಜ್ಞಾನಿಕ ಸಂಶೋಧನಾ ವರದಿಯು ತೆರೆ ಎಳೆದಿದೆ. ಅಡಿಕೆ ತಟ್ಟೆಗಳಲಗಲಿ ಆಲ್ಕಲಾಯ್ಡ್ ಮಟ್ಟವು ಅತ್ಯಂತ ಅಲ್ಪ ಪ್ರಮಾಣದಲ್ಲಿದ್ದು, ಇದು ಬಲಿತ ಅಡಿಕೆ ಕಾಯಿಗಿಂತಲೂ ಸಾವಿರಾರು ಪಟ್ಟು ಕಡಿಮೆಯಿದೆ. ಇದು ಸಂಪೂರ್ಣ ಸುರಕ್ಷಿತ ಎಂಬುದು ಅಧ್ಯಯನದಿಂದ ಸಾಬೀತಾಗಿದೆ.

ಸದಸ್ಯ ಪ್ರತಾಪ್ ಸಿಂಹ ನಾಯಕ್ ಅವರು ಕೇಳಿದ ಪ್ರಶ್ನೆಗೆ ಮೇಲ್ಮನೆಯಲ್ಲಿ ಅಡಿಕೆ ಕುರಿತು ಎದ್ದಿದ್ದ ಸಂಶಯಗಳಿಗೆ ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಉತ್ತರಿಸಿದ್ದಾರೆ.

ಅಡಕೆಗೆ ಅಂಟಿರುವ ಕಳಂಕವನ್ನು ವೈಜ್ಞಾನಿಕವಾಗಿ ತೊಡೆದುಹಾಕುವ ನಿಟ್ಟಿನಲ್ಲಿ ರಾಜ್ಯ ತೋಟಗಾರಿಕೆ ಇಲಾಖೆಯು ಬೆಂಗಳೂರಿನ ಎಂ.ಎಸ್. ರಾಮಯ್ಯ ವಿಶ್ವವಿದ್ಯಾಲಯಕ್ಕೆ ವಿಶೇಷ ಅಧ್ಯಯನದ ಜವಾಬ್ದಾರಿ ವಹಿಸಿತ್ತು. ಈ ಸಂಬಂಧ ಈ ಸಂಸ್ಥೆಯು ಅಡಿಕೆಗಾಗಿ ಫೈಟೊಕೆಮಿಕಲ್ ಮತ್ತು ಕೀಟನಾಶಕ ಘಟಕಗಳ ಮೌಲ್ಯಮಾಪನ - ಆರೋಗ್ಯ, ಸುರಕ್ಷತೆ ಮತ್ತು ಪರಿಣಾಮಕಾರಿತ್ವದ ಮಾಪನ ಎಂಬ ಯೋಜನೆಯನ್ನು ಕೈಗೆತ್ತಿಕೊಂಡು, ಸುಮಾರು 31.80 ಲಕ್ಷ ರೂ. ವೆಚ್ಚದಲ್ಲಿ ಸಂಶೋಧನೆ ಕೈಗೊಂಡಿದ್ದು, ಪಾನ್ ಅಥವಾ ಪಾನ್ ಮಸಾಲದಂತಹ ಪದಾರ್ಥಗಳಲ್ಲಿ ಅಡಿಕೆಯನ್ನು ಕೇವಲ ಒಂದೇ ಅಂಶವಾಗಿ ಬಳಸಿ, ಅದಕ್ಕೆ ತಂಬಾಕು ಸೇರಿಸದೇ ಅಲ್ಪ ಪ್ರಮಾಣದಲ್ಲಿ ಸೇವಿಸಿದರೆ ಅದು ಖಂಡಿತವಾಗಿಯೂ ಹಾನಿಕಾರಕವಲ್ಲ ಎಂದು ಈ ಸಂಸ್ಥೆಯು ತನ್ನ ಸಂಶೋಧನಾ ವರದಿಯಲ್ಲಿ ಸ್ಪಷ್ಟಪಡಿಸಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯು ಅಡಿಕೆ ಕುರಿತ ಸಾಕ್ಷ್ಯಾಧಾರಿತ ಸಂಶೋಧನೆಗೆ ದಿಲ್ಲಿಯ ಏಮ್ಸ್, ಹೈದರಾಬಾದ್‌ನ ಸಿಎಸ್ಐಆರ್, ಕಾಸರಗೋಡಿನ ಸಿಪಿಸಿಆರ್‌ಐ ಸೇರಿದಂತೆ ಹತ್ತು ಪ್ರತಿಷ್ಠಿತ ರಾಷ್ಟ್ರೀಯ ಸಂಸ್ಥೆಗಳನ್ನು ಒಳಗೊಂಡ ಬೃಹತ್ ಯೋಜನೆಯನ್ನು ರೂಪಿಸಿದೆ. ತೋಟಗಾರಿಕೆ ಆಯುಕ್ತರ ನೇತೃತ್ವದ ಸಮಿತಿಯು ಸಂಶೋಧನೆಯ ಮೇಲ್ವಿಚಾರಣೆ ನಡೆಸುತ್ತಿದೆ ಎಂದರು. ಈ ಎಲ್ಲ ಪ್ರತಿಷ್ಠಿತ ಸಂಸ್ಥೆಗಳಿಂದ ಅಂತಿಮ ವರದಿ ಕೈಸೇರಿದ ತಕ್ಷಣ, ಅಡಿಕೆ ಹಾನಿಕಾರಕವಲ್ಲ ಮತ್ತು ಕ್ಯಾನ್ಸರ್ ಕಾರಕವಲ್ಲ ಎಂಬ ಸತ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಅಗತ್ಯ ಎಂದು ಸಚಿವರು ಭರವಸೆ ನೀಡಿದರು.

ಸರ್ಕಾರಕ್ಕೆ ಸಣ್ಣ ಕೈಗಾರಿಕೆಗಳ ಬಗ್ಗೆ ಕಾಳಜಿ ಇಲ್ಲ: ಶರವಣ

ವಿಧಾನ ಪರಿಷತ್: ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಸಂಕಷ್ಟದಲ್ಲಿದ್ದರೂ ಅವುಗಳ ಬಗ್ಗೆ ದತ್ತಾಂಶವಿಲ್ಲ ಎಂಬುದಾಗಿ ಹೇಳುವ ಈ ಸರ್ಕಾರಕ್ಕೆ ನಾಚಿಕೆಯಾಗಬೇಕು. ಇದೊಂದು ದಪ್ಪ ಚರ್ಮದ ಸರ್ಕಾರ ವಿಧಾನ ಪರಿಷತ್ ಶಾಸಕ ಟಿ.ಎ. ಶರವಣ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗೆ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಇಲಾಖೆ ಸಮರ್ಪಕ ಮಾಹಿತಿ ನೀಡದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಅವರು, ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಸಂಕಷ್ಟದಲ್ಲಿದ್ದರೂ ಅವುಗಳ ಬಗ್ಗೆ ದತ್ತಾಂಶವಿಲ್ಲದ ಸರ್ಕಾರದ ನಡೆಗೆ ಆಕ್ರೋಶ ವ್ಯಕ್ತಪಡಿಸಿದರು. ಎಷ್ಟು ಕೈಗಾರಿಕೆಗಳು ಮುಚ್ಚಿವೆ ಎಂಬ ಪ್ರಶ್ನೆಗೆ ಸಚಿವರು ಮಾಹಿತಿ ಇಲ್ಲ ಎಂದು ನೀಡಿದ ಉತ್ತರಕ್ಕೆ ಆಕ್ರೋಶಗೊಂಡ ಶರವಣ ಅವರು, ಕೆಲಸ ಮಾಡದ ಇಲಾಖೆಗಳು ಮತ್ತು ಸಚಿವಸ್ಥಾನಗಳು ಯಾಕೆ ಇರಬೇಕು ಎಂದು ವಾಗ್ದಾಳಿ ನಡೆಸಿದರು. ಇದಕ್ಕೆ ಸಚಿವ ಶರಣ ಬಸಪ್ಪ ದರ್ಶನಾಪೂರ್ ಪ್ರತಿಕ್ರಿಯಿಸಿ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನೋಂದಣಿ ಕೇಂದ್ರ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ನಡೆಯುವುದರಿಂದ, ಮುಚ್ಚಲ್ಪಟ್ಟ ಘಟಕಗಳ ನಿಖರ ಮಾಹಿತಿ ಪಡೆಯುವ ವ್ಯವಸ್ಥೆ ಇಲಾಖೆಯಲ್ಲಿ ಸದ್ಯಕ್ಕೆ ಲಭ್ಯವಿಲ್ಲ ಎಂದರು.

ಇಲಾಖೆ ವಜಾಕ್ಕೆ ಆಗ್ರಹ

ಎಷ್ಟು ಕೈಗಾರಿಕೆಗಳು ಮುಚ್ಚಿವೆ ಮತ್ತು ಅದಕ್ಕೆ ಕಾರಣಗಳೇನು ಎಂಬ ಕನಿಷ್ಠ ಜ್ಞಾನವೂ ಇಲ್ಲದ ಮೇಲೆ ಸಣ್ಣ ಕೈಗಾರಿಕೆ ಇಲಾಖೆ ಮತ್ತು ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮಗಳು ಯಾಕೆ ಬೇಕು? ಕೂಡಲೇ ಇಲಾಖೆಯನ್ನು ಮುಚ್ಚಿಬಿಡಿ. ಸಣ್ಣ ಕೈಗಾರಿಕೆಗಳು ಕೇವಲ ವ್ಯಾಪಾರವಲ್ಲ. ಅವು ಲಕ್ಷಾಂತರ ಗ್ರಾಮೀಣ ಯುವಕರ ವೃತ್ತಿಜೀವನ ಮತ್ತು ಘನತೆಯ ಪ್ರಶ್ನೆ. ಸರ್ಕಾರವು ಕೈಗಾರಿಕೆಗಳಿಗೆ ಅಗತ್ಯವಾದ ವಿದ್ಯುತ್ ರಿಯಾಯಿತಿ, ಬಡ್ಡಿ ರಹಿತ ಸಾಲ ಮತ್ತು ಮಾರುಕಟ್ಟೆ ಸೌಲಭ್ಯ ನೀಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಇಂತಹ ಬೇಜವಾಬ್ದಾರಿ ನೀತಿಯಿಂದಾಗಿ ಉದ್ಯಮಿಗಳು ಆತ್ಮಹತ್ಯೆಯ ಹಾದಿ ಹಿಡಿಯುವಂತಾಗಿದೆ ಎಂದು ಶರವಣ ಎಚ್ಚರಿಸಿದರು.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಖರ್ಗೆ ಆಶ್ವಾಸನೆ

ಉದ್ಯೋಗ ಕಲ್ಪಿಸಲು ರಾಜ್ಯ ಸರ್ಕಾರ ಬದ್ಧ

ವಿಧಾನಸಭೆ: ರಾಜ್ಯದ ಎರಡನೇ ರಾಜಧಾನಿಯೆಂದೇ ಘೋಷಣೆಯಾಗಿರುವ ಹಾಗೂ ರಾಜ್ಯದ ಗಡಿ ಜಿಲ್ಲೆಯಾದ ಬೆಳಗಾವಿಯಲ್ಲಿ ಐಟಿ ಪಾರ್ಕ್ ಅಥವಾ ಸೆಮಿ ಕಂಡಕ್ಟರ್ ಪಾರ್ಕ್‌ಗಳನ್ನು ನಿರ್ಮಿಸಿ ಅಭಿವೃದ್ಧಿ ಪರ ರಾಜ್ಯವನ್ನಾಗಿ ಮಾಡುವ ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಉದ್ದೇಶ ಸರ್ಕಾರಕ್ಕಿದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ಅಭಯ ಪಾಟೀಲ್ ಅವರು ವಿಷಯ ಪ್ರಸ್ತಾಪಿಸಿ, ಬೆಳಗಾವಿಯಲ್ಲಿ ಐಟಿ ಪಾರ್ಕ್ ಮತ್ತು ಸೆಮಿಕಂಡಕ್ಟರ್ ಪಾರ್ಕ್‌ಗಳನ್ನು ನಿರ್ಮಿಸಿ ಅಭಿವೃದ್ಧಿಪರ ರಾಜ್ಯವನ್ನಾಗಿ ಮಾಡಬೇಕು. ದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಬೇಕೆಂದು ಮನವಿ ಮಾಡಿದರು.

ಇದಕ್ಕುತ್ತರಿಸಿದ ಸಚಿವರು, ಬೆಳಗಾವಿಯಲ್ಲಿ ಐಟಿ ಪಾರ್ಕ್ ಅಥವಾ ಸೆಮಿ ಕಂಡಕ್ಟರ್ ಪಾರ್ಕ್‌ಗಳನ್ನು ನಿರ್ಮಿಸಿ ಅಭಿವೃದ್ಧಿ ಪರ ರಾಜ್ಯವನ್ನಾಗಿ ಮಾಡುವ ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಸರ್ಕಾರವು ಈಗಾಗಲೇ ಕ್ರಮ ಕೈಗೊಂಡಿದೆ. ಐಟಿ ಪ್ಲಗ್ ಆ್ಯಂಡ್ ಪ್ಲೇ ಮೂಲ ಸೌಕರ್ಯ ಸ್ಥಾಪನೆ, ಸ್ಟಾರ್ಟ್‌ಅಪ್ ಮತ್ತು ನಾವೀನ್ಯತೆ ಪರಿಸರ ವ್ಯವಸ್ಥೆಯನ್ನು ಬಲಪಡಿಸುವುದು. ವೇಗವರ್ಧಕ ಜಾಲಗಳು ಮತ್ತು ಸೀಡ್ ಫಂಡ್ ಬೆಂಬಲ, ಟೆಕ್ಸಿಲರೇಷನ್, ಸಮಗ್ರ ಅಭಿವೃದ್ಧಿ ಹಾಗೂ ಭವಿಷ್ಯದ ತಂತ್ರಜ್ಞಾನ, ನಿಪುಣ ಕರ್ನಾಟಕ, ಐಡಿಯಾ2ಪಿಒಸಿ ಎಲಿವೇಟ್ (ಗ್ರಾಂಟ್ ಇನ್ ಏಡ್), ರಾಜೀವ್ ಗಾಂಧಿ ಉದ್ಯಮ ಶೀಲತೆ ಕಾರ್ಯಕ್ರಮ, ಎಲಿವೇಟ್ ಮಹಿಳಾ ಉದ್ಯಮಶೀಲತೆ, ಗ್ರಾಸ್ ರೂಟ್ ಇನೋವೇಶನ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಬೆಳಗಾವಿಯ ತಿಲಕವಾಡಿಯಲ್ಲಿರುವ ಕಲಾಮಂದಿರ ಕಟ್ಟಡದಲ್ಲಿ ಜಾಗತಿಕ ತಂತ್ರಜ್ಞಾನ ಕೇಂದ್ರ ಸ್ಥಾಪಿಸಲು ಆ ಕಟ್ಟಡವನ್ನು ಇಲಾಖೆಗೆ ಹಸ್ತಾಂತರಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು.



ಸೆಮಿಕಂಡಕ್ಟರ್ ಪಾರ್ಕ್ ಸ್ಥಾಪನೆ

ಬೆಳಗಾವಿಯಲ್ಲಿ ಐಟಿ. ಪಾರ್ಕ್ ಅಥವಾ ಸೆಮಿಕಂಡಕ್ಟರ್ ಪಾರ್ಕ್‌ಗಳನ್ನು ಸ್ಥಾಪಿಸುವ ಸಂಬಂಧ ಉದ್ದೇಶಿತ ಜಮೀನನ್ನು ಸರ್ಕಾರಕ್ಕೆ ಪಡೆದು ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸುವ ಸಲುವಾಗಿ ಭಾರತ ಸರ್ಕಾರದ ರಕ್ಷಣಾ ಸಚಿವರಿಗೆ 2021ರ ಜ.8ರಂದು ಪತ್ರ ಬರೆಯಲಾಗಿದೆ. ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಲು ರಕ್ಷಣಾ ಇಲಾಖೆಯಿಂದ ಇನ್ನೂ ಕ್ರಮ ಕೈಗೊಂಡಿಲ್ಲವಾದ್ದರಿಂದ ಅದೇ ವರ್ಷ ಸೆ.9ರಂದು ಮತ್ತೆ ಪತ್ರ ಬರೆಯಲಾಗಿದೆ. 2021ರ ಸೆ.21ರಂದು ಮುಖ್ಯಮಂತ್ರಿಗಳು ರಕ್ಷಣಾ ಸಚಿವರಿಗೆ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ರಕ್ಷಣಾ ಕಾರ್ಯದರ್ಶಿಯವರಿಗೆ ಪತ್ರ ಬರೆದು ಜಮೀನನ್ನು ಕರ್ನಾಟಕ ಸರ್ಕಾರದ ವಶಕ್ಕೆ ನೀಡುವಂತೆ ಕೋರಲಾಗಿದೆ ಎಂದು ವಿವರಿಸಿದರು.

ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಭರವಸೆ

ಔಷಧ ಕೊರತೆ ಉಂಟಾಗದಂತೆ ಕ್ರಮ

ವಿಧಾನ ಪರಿಷತ್: ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದ್ದು, ಎಲ್ಲ ಉನ್ನತ ಅಧಿಕಾರಿಗಳು ಪರೀಕ್ಷೆ ನಡೆಸಲು ಅವಕಾಶವಿರುತ್ತದೆ. ಈ ಎಲ್ಲ ಬದಲಾವಣೆಯಿಂದ ಮುಂದಿನ ದಿನದಲ್ಲಿ ಶೇ.80ರಷ್ಟು ಕರ್ನಾಟಕ ರಾಜ್ಯ ಔಷಧ ಸರಬರಾಜು ನಿಗಮ (ಕೆಎಸ್ಎಂಎಸ್‌ಸಿಎಲ್)ದಿಂದ ನೇರವಾಗಿ ಔಷಧಿಗಳ ಟೆಂಡರ್ ಕರೆದು ಪೂರೈಸಲಾಗುತ್ತದೆ ಎ ಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಮೇಲ್ಮನೆಯಲ್ಲಿ ಅರ್ಧ ಗಂಟೆ ಚರ್ಚೆ ಕಲಾಪದ ವೇಳೆ ಸದಸ್ಯರಾದ ಡಾ.ಧನಂಜಯ ಸರ್ಜಿ ಹಾಗೂ ಪ್ರತಾಪ್ ಸಿಂಹ ನಾಯಕ್ ಅವರು ಈ ಬಗ್ಗೆ ಪ್ರಸ್ತಾಪಿಸಿದಾಗ ಉತ್ತರಿಸಿದ ಸಚಿವರು, ಕೆಎಸ್ಎಂಎಸ್‌ಸಿಎಲ್ ಮುಖಾಂತರ ಖರೀದಿ ಮಾಡಬೇಕು ಎನ್ನುವುದು ಮುಖ್ಯ ಉದ್ದೇಶ. ಅವಶ್ಯಕತೆಯಿರುವ ಔಷಧ ಖರೀದಿ ಕಾರ್ಯವೈಖರಿಯಲ್ಲಿ ಲೋಪದೋಶವಿತ್ತು.



ಟೆಂಡರ್ ಪ್ರಕ್ರಿಯೆ, ಗುಣಮಟ್ಟ ಹೀಗೆ ಹಲವು ನ್ಯೂನ್ಯತೆಗಳ ಲಾಭವನ್ನು ಕೆಲವು ಸಂಸ್ಥೆಗಳು ಪಡೆದುಕೊಂಡಿರಬಹುದು. ಇದನ್ನು ಸರಿಪಡಿಸಲು ಹಲವು ಕ್ರಮ ಕೈಗೊಂಡಿದ್ದೇವೆ. ಕೆಎಸ್ಎಂಎಸ್ ಸಿಎಲ್ ಸರಿಯಾಗಿ ದಿಕ್ಕಿನಲ್ಲಿ ಸಾಗಬೇಕು ಎನ್ನುವ ಕಾರಣಕ್ಕೆ ಐಎಎಸ್ ಅಧಿಕಾರಿಯನ್ನು ಮುಖ್ಯಸ್ಥರಾಗಿ ನೇಮಕ ಮಾಡಿದ್ದೇವೆ. ನಮ್ಮ ಉದ್ದೇಶ ಎಲ್ಲ ಇಲಾಖೆಗಳ ಔಷಧಿ ಖರೀದಿ ಪ್ರಕ್ರಿಯೆ ಸರಿಯಾಗಿ ಆಗಬೇಕು ಎಂದರು.

ಕಳೆದ ವರ್ಷ 893 ಔಷಧಗಳ ಪೈಕಿ 534 ಔಷಧಗಳಿಗೆ ಟೆಂಡರ್ ಕರೆಯಲಾಗಿದೆ. ಈ ಪೈಕಿ 232 ಔಷಧ ಖರೀದಿಸಲು ಕಾರ್ಯಾದೇಶ ನೀಡಲಾಗಿದೆ. ಇನ್ನುಳಿದ ಔಷಧಗಳನ್ನು ಸ್ಥಳೀಯವಾಗಿ ಖರೀದಿಸಲಾಗುವುದು. ಶೇ.20ರಷ್ಟು ಔಷಧಗಳನ್ನು ಸ್ಥಳೀಯ ಆಸ್ಪತ್ರೆಗಳೇ ಖರೀದಿಸುವಂತೆ ಸೂಚಿಸಲಾಗಿದೆ. ವಾರ್ಷಿಕವಾಗಿ ಔಷಧಿ ಖರೀದಿ ಬದಲು ಎರಡ್ಮೂರು ತಿಂಗಳಿಗೊಮ್ಮೆ ಖರೀದಿಗೆ ಕ್ರಮ ಕೈಗೊಳ್ಳಲಾಗಿದೆ. ಔಷಧಿ ಸರಬರಾಜಿಗೂ ಮುನ್ನ ಅದರ ಗುಣಮಟ್ಟ ಪರೀಕ್ಷಿಸಿದ ಬಳಿಕವಷ್ಟೇ ಆಸ್ಪತ್ರೆಗಳಿಗೆ ವಿತರಿಸಲಾಗುತ್ತಿದೆ. ಸದ್ಯ 270 ಕೋಟಿ ರೂ. ಮೌಲ್ಯದ ಔಷಧ ಖರೀದಿಸಲಾಗಿದೆ. ಉಗ್ರಾಣಗಳಲ್ಲಿ ದಾಸ್ತಾನು ಇರುವ ಔಷಧಗಳ ಪ್ರಮಾಣ, ಔಷಧಗಳ ಸರಬರಾಜು, ವಿತರಣೆ ಮೇಲೆ ನಿಗಾವಹಿಸಲು ರಿಯಲ್ ಟೈಮ್ ಟ್ರ್ಯಾಕಿಂಗ್‌ಸಿಸ್ಟಂ ಜಾರಿಗೊಳಿಸಲಾಗಿದೆ ಎಂದರು.

PUBLIC NOTICE

THE SAID BHASKAR.M HAS GIVEN RESIGNATION TO THE POST OF SECRETARY OF "BSNL AND BANK OFFICERS HOUSING CO OPERATIVE SOCIETY LTD." ON 26/12/2025 AND FROM THE DATE OF RESIGNATION HE IS NOT RESPONSIBLE TO ANY OF TRANSACTIONS BEFORE ANY AUTHORITY OR ANY COURT. ALL THE MEMBERS OF THIS SOCIETY ARE REQUESTED TO CONTACT THE PRESIDENT FOR FURTHER TRANSACTIONS.

CHANDAN .S, Advocate
#172, opp Bus stop, Nagashettyhalli, Sanjaynagar, Bangalore-560094.
Mob: 9060338878

CHANGE OF NAME

I, **ROSAMMA VARGHESE**, W/o Baby K Varghese, No. 6645396, Ex - HAV, and D/o Thomas, Residing at No. 9/10, D Cross, Brindavan Layout, L B Shastri Nagar, Bengaluru, Vimanapura, Bengaluru, Karnataka - 560017, do hereby declare that I have changed my name from **ROSAMMA THOMAS**, and **ROSAMMA BABY** to **ROSAMMA VARGHESE**, vide affidavit dated: 16.03.2026, sworn to before XXIX Addl. Chief Judicial Magistrate, Bengaluru City.

IN THE COURT OF SCCH 25 AT BANGALORE
MVC No: 7531/2025

PETITIONER: Sajan K.S. -V/S-
RESPONDENT: Kataria Automobiles Pvt. Ltd. & another.

NOTICE TO RESPONDENT No. 3

Pawan Somaiah K. S/o late Somaiah K.P., R/at No. 808, 6th Cross, Church Street, Munikondappa layout, Bagalakunte, Bengaluru-73, (owner of the Maruthi Swift vehicle bearing Reg. No.: KA-50-N-0518)

Whereas the above named petitioners have filed the petition against you and other respondents for seeking the relief for road traffic accident.

Take notice that the petitioner has filed the above case against you and other respondents for claiming compensation of Rs 60,00,000/- for the injured/Death in the Road Traffic Accident, In RTA occurred. On 09-09-2025 at about 10-15 A.M., when your Insured Maruthi Swift vehicle bearing Reg. No.: KA-50-N-0518 hit the deceased K. Saraswathy kalimada. Due to that K. Saraswathy kalimada sustained injuries near Devarahosahalli Village, B.M. Road Express way, NH 275, Channa pattana Taluk, Bengaluru south Dist.

You are by Summoned to appear before this Hon'ble Court in person or pleader on 18-05-2026 Day of 11-00 A.M., if you fail to appear the above case will be decided exparte.

Issued as per the order and seal of this Hon'ble court on this Day of 12-03-2026 with the seal of this Hon'ble Court.

By Order of the Court,
Assistant Registrar,
Court of Small Causes, Bengaluru.
Advocate for petitioner: Hemanth, Advocate, Opp. British liquors, Ramanagara Town, Ramanagara.
Bengaluru. Date: 12-03-2026

IN THE COURT OF THE XXXV ADDL. CITY CIVIL AND SESSIONS JUDGE AT BENGALURU CCH-36
O.S. No. 1304/2024

BETWEEN : STATE BANK OF INDIA, Retail Assets Central Processing Centre (RACPC-11) Branch Code 15627, at No. 12, 80 ft Road, 7th Main, 3rd Block, Koramangala, Bengaluru 560034. Represented by its Chief Manager Rajesh Chander ...PLAINTIFF

AND : Sri. Srinivasa G.A. ...DEFENDANT

SUMMONS TO DEFENDANT

To, **SRI. SRINIVAS G.A.**, S/o. Adireddy .G, No. 18, BTR Garden, Kudlu Main Road, Kudlu Gate, Hosur Road, Bengaluru-560 058.

WHEREAS, the plaintiff has instituted a suit against you under Order 7 Rule 1 r/w Section 26 of the Code of Civil Procedure, 1908 for the relief of recovery of money for a sum of Rs. 3,83,324/- (Rupees Three Lakhs Eighty Three Thousand Three hundred Twenty Four only) with full costs and current and future interests and interest compounded monthly from the date of filing of the suit. You are hereby summoned to appear before the court i.e., Additional City Civil Judge, CCH-36, Bangalore in person or by a pleader duly instructed to answer the claim on **17.04.2026 at 11.00 A.M.** Failing which you will be placed Ex- Parte.

Given under my hand and seal of the court this the 16th day March 2026 BENGALURU.

By the order of the, Senior Sheristedar, City Civil Court, Bengaluru.
Advocates for Plaintiff : **P & K Associates**
PARAMASHIVAIAH, KANTHARAJU .T.R.
Advocates
No.221, 1st Floor, LIC Building, Opp. Halasurgate Police Station, Cubbonpet Main Road, Bangalore-560002.

IN THE COURT OF THE I ADDL. CIVIL JUDGE AND JMFC AT NELAMANGALA
Ex.No. 12/2024

BETWEEN : Nagarajaiah and another ...Decree Holder

AND : Devamma and others ...Judgement Debtors

NOTICE TO THE JUDGEMENT DEBTORS No. 1 TO 3

1. Smt. Devamma W/o Late. Kurlaiah @ Nagaraj, Aged about 73 years. **2. Sri. Ravi** S/o Late. Kurlaiah @ Nagaraj, Aged about 45 years. **3. Smt. Manjula** D/o Late. Kurlaiah @ Nagaraj Aged about 47 years. All are residing at No. 18, Muneshwara Layout, Harinagar Cross, Anjanapura Post, Bangalore-560 062.

WHEREAS the Decree Holder has instituted the above case against you in Hon'ble I Addl. Civil Judge and JMFC at Nelamangala in Ex.No. 12/2024. Take notice that you are hereby called upon to appear before the Hon'ble court on **18.04.2026 at 11.00 am** either in person or through a duly constituted advocate, failing which the matter will be heard and decided ex-parte.

Given under my hand and seal of the court on 17th day of March 2026 at Nelamangala.

By order of the Court, Chief Ministerial Officer, Court of the Civil Judge Junior Division and JMFC, Nelamangala.
Advocate for Decree Holder :
OMKARA MURTHY .G
"LEGAL COMBAT"
No.21, 3rd Cross, Sampige Road, Malleswaram, Bangalore-560 003.

ಬಾಂಗ್ಲಾ ಮತ್ತು ನೇಪಾಳ ಎರಡೂ ದೇಶಗಳಲ್ಲಿ ಹಿಂದಿನ ಆಡಳಿತದ ವಿರುದ್ಧ ಜನರು ದಂಗೆ ಎದ್ದಿದ್ದರು. ಬಾಂಗ್ಲಾದಲ್ಲಿ 2024ರ ಆಗಸ್ಟ್‌ನಲ್ಲಿ ಶೇಖ್ ಹಸೀನಾ ಸರಕಾರವನ್ನು ಉರುಳಿಸಲಾಗಿದ್ದರೆ, 2025ರ ಸೆಪ್ಟೆಂಬರ್‌ನಲ್ಲಿ ನೇಪಾಳದಲ್ಲಿ ಕೆ.ಪಿ. ಶರ್ಮಾ ಒಲಿ ಸರಕಾರವನ್ನು ಉರುಳಿಸಲಾಗಿತ್ತು. ಇವೆರಡು ದಂಗೆಗಳು ಶಾಂತಿಯುತವಾಗಿರಲಿಲ್ಲ. ಹಿಂಸಾತ್ಮಕ ಪ್ರತಿಭಟನೆಗಳು ನಡೆದಿದ್ದವು. ಬಾಂಗ್ಲಾದಲ್ಲಿ ನಡೆದ ಹಿಂಸೆಯಲ್ಲಂತೂ 850 ಜನರು ಸತ್ತಿರುವುದಾಗಿ ಅಲ್ಲಿನ ಆಡಳಿತ ತಿಳಿಸಿದೆ. ಆದರೆ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ತನಿಖಾ ವರದಿ ಹೇಳುವ ಪ್ರಕಾರ ಸತ್ತವರ ಸಂಖ್ಯೆ 1400ಕ್ಕಿಂತ ಅಧಿಕ. ನೇಪಾಳದಲ್ಲಿ 76 ಮಂದಿ ಸತ್ತಿರುವುದಾಗಿ ಅಧಿಕೃತವಾಗಿ ಹೇಳಲಾಗಿತ್ತು. ಆದರೆ ಅಲ್ಲಿನ ಹಿಂಸಾಚಾರದಲ್ಲಿ ಅದಕ್ಕಿಂತ ಹೆಚ್ಚು ಮಂದಿ ಸತ್ತಿರುವ ಸಾಧ್ಯತೆಗಳಿವೆ.

ನೇಪಾಳ ಮತ್ತು ಬಾಂಗ್ಲಾ ಎರಡೂ ದೇಶಗಳಲ್ಲಿ ಹಠಾತ್ತನೆ ಹಿಂಸಾಚಾರ ಸ್ಫೋಟಗೊಂಡುದ್ದನ್ನು ಕಾಣುವಾಗ ಇದರ ಹಿಂದೆ ವಿದೇಶೀ ಕೈವಾಡದ ಸಂಚಿದೆ ಎಂಬ ಅನುಮಾನ ಮೂಡಿತ್ತು. ಆಡಳಿತ ಬದಲಾವಣೆಯ ಉದ್ದೇಶದಿಂದ ವಿದೇಶಿ ಶಕ್ತಿಗಳು ಈ ಹಿಂಸಾತ್ಮಕ ಪ್ರತಿಭಟನೆಗೆ ಕುಮ್ಮಕ್ಕು ನೀಡಿರಬೇಕೆಂದು ಆರೋಪ ಕೇಳಿಬಂದಿತ್ತು. ಇದೇವೇಳೆ ಇವೆರಡೂ ದೇಶಗಳಲ್ಲಿ ಜನರು ದಂಗೆ ಏಳಲು ಬೇಕಾದ ಪರಿಸ್ಥಿತಿಯೂ ಉಂಟಾಗಿತ್ತೆಂಬುದು ಸುಳ್ಳಲ್ಲ. ಎರಡೂ ದೇಶಗಳಲ್ಲಿ ಜನರ ಬವಣೆ ಹೆಚ್ಚಿತ್ತು. ಆಡಳಿತದಲ್ಲಿ ಭ್ರಷ್ಟಾಚಾರ ಮಿತಿಮೀರಿತ್ತು. ಇವನ್ನೆಲ್ಲಾ ಸಹಿಸಲಾಗದೆ ಜನರು ದಂಗೆ ಎದ್ದಿರುವುದೂ ಸಹಜವಾಗಿದೆ.

ದಂಗೆಯ ಬಳಿಕ ಬಾಂಗ್ಲಾ ದೇಶವು ಬಳಿಕ ಚುನಾಯಿತವಲ್ಲದ ಮಹಮ್ಮದ್ ಯೂನುಸ್ ಆಡಳಿತದ ಕೈವಶದಲ್ಲಿತ್ತು. ಆದರೆ ಈ ಮಧ್ಯಂತರ ಸರಕಾರದ ಆಡಳಿತ ಕೂಡಾ ಸಮಾಧಾನಕರವಾಗಿರಲಿಲ್ಲ. ಅಲ್ಲಿನ ಜನರಿಗೂ ಈ ಆಡಳಿತದ ಧೋರಣೆ ರೋಸಿಹೋಗಿತ್ತು. ಜತೆಗೇ ಭಾರತಕ್ಕೆ ಕೂಡಾ ಯೂನುಸ್ ಆಡಳಿತವು ಅಸಹನೀಯ ಪರಿಸ್ಥಿತಿಗಳನ್ನು ಸೃಷ್ಟಿಸಿತ್ತು. ಯೂನುಸ್ ಸರಕಾರವು ಭಾರತ ವಿರೋಧಿ ನಿಲುವನ್ನು ನಿರ್ಲಜ್ಜವಾಗಿ ಪ್ರದರ್ಶಿಸಿದ್ದರಿಂದ ಉಭಯ ದೇಶಗಳ ನಡುವಿನ ಸಂಬಂಧವು ಹಿಂದೆಂದೂ ಕಾಣದಷ್ಟು ಪ್ರಪಾತಕ್ಕೆ ಕುಸಿದಿತ್ತು.

ಬಾಂಗ್ಲಾ ಚುನಾವಣೆಗೆ ಸಿದ್ಧತೆ ನಡೆದಂತೆಯೇ ಹಿಂದಿನ ಸರಕಾರದ ಪದಚ್ಯುತಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವಿದ್ಯಾರ್ಥಿಗಳ ಸಂಘಟನೆಗಳನ್ನು ಒಳಗೊಂಡ ನ್ಯಾಷನಲ್ ಸಿಟಿಜನ್ಸ್ ಪಾರ್ಟಿ ಮೂಲಭೂತವಾದಿ ಜಮಾತ್-ಇ-ಇಸ್ಲಾಮೀ ಪಕ್ಷದೊಂದಿಗೆ ಕೈಜೋಡಿಸಿತ್ತು. ಈ ಮೈತ್ರಿಕೂಟಕ್ಕೆ ಮಧ್ಯಂತರ ಸರಕಾರದ ಪರೋಕ್ಷ ಬೆಂಬಲವೂ ಇತ್ತು. ಹಾಗಾಗಿ ಜಮಾತ್-ಇ-ಇಸ್ಲಾಮೀ ಮತ್ತು ಎನ್‌ಸಿಪಿ ಮೈತ್ರಿಕೂಟವು ಚುನಾವಣೆಯಲ್ಲಿ ಗೆಲುವು ಸಾಧಿಸಬಹುದು ಎಂಬುದಾಗಿ ಎಲ್ಲರೂ ಭಾವಿಸಿದ್ದರು. ಚುನಾವಣೆ ಸಂದರ್ಭದಲ್ಲಿ ಕೂಡಾ ಭಾರೀ ಹಿಂಸಾಚಾರ ನಡೆಯಬಹುದೆಂದು ಭೀತಿ ಪಡಲಾಗಿತ್ತು.



ಆದರೆ ಬಾಂಗ್ಲಾದ ಮತದಾರರು ಬುದ್ಧಿವಂತಿಕೆ ಮತ್ತು ಪ್ರಬುದ್ಧತೆಯನ್ನು ಪ್ರದರ್ಶಿಸಿದರು. ಚುನಾವಣೆ ವೇಳೆ ಹಿಂಸಾಚಾರಕ್ಕೆ ಹೆಚ್ಚಿನ ಆಸ್ಪದ ನೀಡಲಿಲ್ಲ. ಮೂಲಭೂತವಾದಿ ಪಕ್ಷವನ್ನು ತ್ಯಜಿಸಿ ಬಾಂಗ್ಲಾದೇಶ್ ನ್ಯಾಷನಲ್ ಪಾರ್ಟಿ (ಬಿಎನ್‌ಪಿ)ಗೆ ಭಾರೀ ಬಹುಮತ ನೀಡಿದರು. ಅಧಿಕ ಜನಸಂಖ್ಯೆ ಹೊಂದಿರುವ ಬಾಂಗ್ಲಾದೇಶಕ್ಕೆ ಈ ಸಂಕೀರ್ಣ ಸಮಯದಲ್ಲಿ ಒಂದು ವಿಶ್ವಾಸಾರ್ಹ ಹಾಗೂ ಅನುಭವೀ ಸರಕಾರದ ಅಗತ್ಯವಿತ್ತು. ಜನರು ಈ ಕಾರಣದಿಂದಲೇ ತಾರೀಖ್ ರೆಹಮಾನ್ ನೇತೃತ್ವದ ಬಿಎನ್‌ಪಿಯನ್ನು ಅಧಿಕಾರಕ್ಕೆ ಏರಿಸಿದರು.

ಬಾಂಗ್ಲಾದಲ್ಲಿ ಹಲವು ರಾಜಕೀಯ ಸುಧಾರಣೆ ಮತ್ತು ಸಾಂವಿಧಾನಿಕ ಬದಲಾವಣೆಗೆ ಚುನಾವಣೆ ಸಂದರ್ಭದಲ್ಲಿಯೇ ಜನಮತ ಗಣನೆ ನಡೆದಿತ್ತು. ಈ ಸುಧಾರಣೆಗಳಿಗೆ ಬಾಂಗ್ಲಾ ಜನರು ಸಮ್ಮತಿ ಸೂಚಿಸಿದ್ದರು. ಅದನ್ನು ಅನುಷ್ಠಾನಕ್ಕೆ ತರುವುದು ಈಗ ಬಿಎನ್‌ಪಿ ಸರಕಾರದ ಆದ್ಯತೆಯಾಗಿದೆ. ಜನಮನತಗಣನೆಯಲ್ಲಿ ಪಾಲ್ಗೊಂಡ 87 ಮಿಲಿಯ ಮತದಾರರಲ್ಲಿ ಶೇ. 83ರಷ್ಟು ಮಂದಿ ಸಾಂವಿಧಾನಿಕ ಸುಧಾರಣೆಗಳಿಗೆ ಸಮ್ಮತಿ ಸೂಚಿಸಿದ್ದಾರೆ. ಪ್ರಧಾನಿಯ ಅಧಿಕಾರಾವಧಿಯನ್ನು ಎರಡು ಅವಧಿಗಳಿಗೆ ಸೀಮಿತಗೊಳಿಸುವುದು, ಸಂಸತ್ತಿನಲ್ಲಿ ಮತ್ತು ಸರಕಾರಿ ಹುದ್ದೆಗಳಲ್ಲಿ ಯುವಕರಿಗೆ ಶೇ. 5ರಷ್ಟು ಪ್ರಾತಿನಿಧ್ಯ ಕಲ್ಪಿಸುವುದು, ಸ್ವತಂತ್ರ ಭ್ರಷ್ಟಾಚಾರ ವಿರೋಧಿ ಮಂಡಳಿ ಸ್ಥಾಪಿಸುವುದು, ಅಲ್ಪಸಂಖ್ಯಾತರಿಗೆ ಸಮಾನ ಶಿಕ್ಷಣ ಮತ್ತು ಆರೋಗ್ಯದ ಹಕ್ಕು ಕಲ್ಪಿಸುವುದು ಮುಂತಾದವು ಈ ಸುಧಾರಣೆಗಳಲ್ಲಿ ಸೇರಿದೆ. ಯೂನುಸ್ ಆಡಳಿತವು ಸಂಪೂರ್ಣವಾಗಿ ಭಾರತ ವಿರೋಧಿ ನೀತಿಯನ್ನು ಅನುಸರಿಸಿದ್ದರೆ ನೂತನ ಪ್ರಧಾನಿ ರೆಹಮಾನ್ ಅವರು ಭಾರತದೊಂದಿಗಿನ ಸಂಬಂಧವನ್ನು ಸುಧಾರಿಸುವ ಇಂಗಿತ ವ್ಯಕ್ತಪಡಿಸಿರುವುದು ಸ್ವಾಗತಾರ್ಹ.

ನೇಪಾಳದಲ್ಲಿ ಹೊಸ ಸರಕಾರ

ನೇಪಾಳದಲ್ಲಿ ಜನರು ಹೊಸದಾದ ಪಕ್ಷವೊಂದನ್ನು ಅಧಿಕಾರಕ್ಕೆ ಏರಿಸಿದ್ದಾರೆ. ಕೆಲವೇ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದ ರಾಷ್ಟ್ರೀಯ ಸ್ವತಂತ್ರ ಪಾರ್ಟಿ (ಎನ್‌ಸಿಪಿ) ಭಾರೀ ಬಹುಮತ ಪಡೆದು ಅಧಿಕಾರಕ್ಕೆ ಏರಿದೆ. ಪತ್ರಕರ್ತನಾಗಿದ್ದುಕೊಂಡು ರಾಜಕಾರಣಿಯಾದ 50ರ ಹರೆಯದ ರವಿ ಲಮಿಚನೆ ಮತ್ತು 35ರ ಹರೆಯದ ರ್‍ಯಾಪ್ ಸಂಗೀತಗಾರ ಬಾಲೇಂದ್ರ ಷಾ ಈ ಪಕ್ಷವನ್ನು ಕಟ್ಟಿದವರು. ನೇಪಾಳದಲ್ಲಿ ಯುವ ಮತದಾರರು ಶೇ. 40ರಷ್ಟಿದ್ದು, ಅವರು ಹೊಸಬರನ್ನೇ ಆಡಳಿತಕ್ಕೆ ಏರಿಸುವ ಉತ್ಸಾಹ ತೋರಿದ್ದಾರೆ. ಬಾಲೇಂದ್ರ ಷಾ ನೇಪಾಳದ ಹೊಸ ಪ್ರಧಾನಿಯಾಗಿದ್ದಾರೆ. ಬಹುಕಾಲದಿಂದ ಅಸ್ತಿತ್ವದಲ್ಲಿದ್ದ ನೇಪಾಳಿ ಕಾಂಗ್ರೆಸ್ ಮತ್ತು ನೇಪಾಳಿ ಕಮ್ಯುನಿಸ್ಟ್ ಪಕ್ಷ ಮೊದಲಾದವು ಮೂಲೆಗುಂಪಾಗಿವೆ. ಈ ಎರಡು ಪಕ್ಷಗಳ ಪ್ರಮುಖ ಮುಖಂಡರನ್ನು ಕೂಡಾ ಜನರು ಮೂಲೆಗೆ ತಳ್ಳಿದ್ದಾರೆ.

1991ರಲ್ಲಿ ರಾಜಸತ್ತೆಯ ಬದಲಿಗೆ ನೇಪಾಳವು ಪ್ರಜಾಸತ್ತೆಯನ್ನು ಅಪ್ಪಿಕೊಂಡಿತ್ತು. ಆದರೆ ಅಲ್ಲಿಂದ ಬಳಿಕ ನೇಪಾಳದಲ್ಲಿ ಸ್ಥಿರ ಸರಕಾರವೊಂದು ರೂಪುಗೊಂಡಿರಲೇ ಇಲ್ಲ. 1990ರಿಂದ 2008ರ ಅವಧಿಯಲ್ಲಿ 16 ಪ್ರಧಾನಿಗಳು ಆಳಿದ್ದರು. 2008ರಲ್ಲಿ ರಾಜಸತ್ತೆಯನ್ನು ಸಂಪೂರ್ಣ ಅಳಿಸಿಹಾಕಲಾಯಿತು. ಅಲ್ಲಿಂದ ಬಳಿಕ ಕೂಡಾ 15 ಪ್ರಧಾನಿಗಳು ನೇಪಾಳವನ್ನು ಆಳಿದ್ದಾರೆ. 2008ರಿಂದಾರಂಭಿಸಿ ಕಳೆದ 4 ಚುನಾವಣೆಗಳಲ್ಲಿ ನೇಪಾಳದ ಜನರು ಯಾವ ಪಕ್ಷಕ್ಕೂ ಬಹುಮತ ನೀಡಿರಲಿಲ್ಲ. ಹಾಗಾಗಿ ಸರಕಾರಗಳು ಪದೇ ಪದೇ ಬದಲಾಗುತ್ತಿದ್ದವು. ಈ ಹಿನ್ನೆಲೆಯಲ್ಲಿ ಮೊನ್ನೆ ನಡೆದ ಚುನಾವಣೆ ನೇಪಾಳದ ಪ್ರಜಾತಾಂತ್ರಿಕ ಇತಿಹಾಸದಲ್ಲಿ ಮಹತ್ವದ ಬೆಳವಣಿಗೆಯಾಗಿದೆ. ಏಕಪಕ್ಷವು ಬಹುಮತ ಪಡೆಯಲು ಸಫಲವಾಗಿದೆ. ಇದರಿಂದಾಗಿ ಅಲ್ಲಿ ಸ್ಥಿರ ಸರಕಾರವೊಂದು ರೂಪುಗೊಳ್ಳುವ ಆಶಾವಾದ ಮೂಡಿದೆ.

''ಪ್ರಜಾಪ್ರಭುತ್ವ ಒಳ್ಳೆಯದು. ಬೇರೆ ವ್ಯವಸ್ಥೆಗಳು ಕೆಟ್ಟದಾಗಿರುವುದರಿಂದ ನಾನಿದನ್ನು ಹೇಳುತ್ತಿದ್ದೇನೆ'' ಎಂದು ನೆಹರೂ ಹಿಂದೊಮ್ಮೆ ಹೇಳಿದ್ದರು. ಯಾವುದೇ ಪ್ರಜಾಪ್ರಭುತ್ವವು ಪರಿಪೂರ್ಣವಲ್ಲ, ಯಾವುದೇ ಚುನಾವಣೆಯೂ ಸಂಪೂರ್ಣ ದೋಷಪೂರಿತವಲ್ಲ. ಆದರೆ ಭಾರತವು ಪ್ರಜಾತಂತ್ರವನ್ನು ಅನುಸರಿಸುವಲ್ಲಿ ಇತರ ದೇಶಗಳಿಗೆ ಯಾವಾಗಲೂ ಮಾದರಿಯಾಗಿದೆ. ಪಾಕಿಸ್ತಾನ ಹೊರತುಪಡಿಸಿದರೆ ಭಾರತದ ಉಳಿದೆಲ್ಲಾ ನೆರೆದೇಶಗಳು ಪ್ರಜಾಪ್ರಭುತ್ವವನ್ನು ಅನುಸರಿಸುತ್ತಿವೆ. ಪಾಕಿಸ್ತಾನದಲ್ಲಿ ಮಾತ್ರ ಹೆಸರಿಗೆ ಪ್ರಜಾಪ್ರಭುತ್ವ ಸರಕಾರವಿದ್ದರೂ ಆಡಳಿತದ ಹಿಡಿತ ಇರುವುದು ಸೇನೆಯಲ್ಲಿ. ಮೂರು ವರ್ಷಗಳ ಹಿಂದೆ ಮಾಲ್ದೀವ್ಸ್ ಮತ್ತು ಶ್ರೀಲಂಕಾಗಳಲ್ಲೂ ಶಾಂತಿಯುತ ಮತದಾನ ನಡೆದು ಆಡಳಿತ ಬದಲಾವಣೆ ಉಂಟಾಗಿತ್ತು. ಕಳೆದ ವರ್ಷ ಡಿಸೆಂಬರ್‌ನಲ್ಲಿ ಮ್ಯಾನ್ಮಾರ್‌ನಲ್ಲಿ ಕೂಡಾ ಸಂಸದೀಯ ಚುನಾವಣೆ ನಡೆದಿತ್ತು. ಹೊಸ ಸರಕಾರದಡಿಯಲ್ಲಿ ಇವೆಲ್ಲ ದೇಶಗಳು ಭಾರತದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿವೆ.

ನೆರೆ ದೇಶಗಳ ಜನರೊಂದಿಗೆ ನಮ್ಮ ದೇಶದ ಜನರೂ ಕೂಡಾ ಉತ್ತಮ ಬಾಂಧವ್ಯವನ್ನು ಹೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತ ಸರಕಾರವು ನೇಪಾಳ ಮತ್ತು ಬಾಂಗ್ಲಾದೇಶಗಳ ನೂತನ ಸರಕಾರಗಳೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡು ದ್ವಿಪಕ್ಷೀಯ ಸಂಬಂಧವನ್ನು ಬೆಳೆಸಿಕೊಳ್ಳಬಹುದಾಗಿದೆ. ಕಳೆದೊಂದು ವರ್ಷದಿಂದ ಈ ದೇಶಗಳೊಂದಿಗೆ ಹದಗೆಟ್ಟ ಸಂಬಂಧವನ್ನು ಮತ್ತೆ ಸರಿದಾರಿಗೆ ತರಬಹುದಾಗಿದೆ. ಅಟಲ್‌ಬಿಹಾರಿ ವಾಜಪೇಯಿ ಹಿಂದೊಮ್ಮೆ ಹೇಳಿದ್ದರಲ್ಲವೆ ''ನಾವು ನಮ್ಮ ಸ್ನೇಹಿತರನ್ನು ಬದಲಾಯಿಸಬಹುದು, ಆದರೆ ನೆರೆಕರೆಯನ್ನು ಬದಲಾಯಿಸಲಾಗುವುದಿಲ್ಲ''.

'ಆರ್ಡರ್ಲಿ ' ಪದ್ಧತಿ ಇನ್ನೂ ರದ್ದುಗೊಂಡಿಲ್ಲವೆ?

ಆರ್ಡರ್ಲಿ ವ್ಯವಸ್ಥೆ ರದ್ದುಗೊಂಡಿದೆ ಎಂದೇ ಭಾವಿಸಲಾಗಿತ್ತು. ಆದರೆ ಇನ್ನೂ ಇದೆ ಎಂಬುದು ಪೊಲೀಸ್ ವರಿಷ್ಠಾಧಿಕಾರಿಯ ಮಾತಿನಿಂದ ಸಾಬೀತಾಗಿದೆ.

▸ ಹೊಸೂರು ರತ್ನಾಕರ ಶೆಟ್ಟಿ

ಜನಸಾಮಾನ್ಯರ ನೆನಪು ಮಾಸುವುದು ಬಹು ಬೇಗ. ಕಹಿ ನೆನಪುಗಳಾಗಲಿ, ಸಮಾಜವೇ ತಲೆ ತಗ್ಗಿಸುವ ಘಟನೆಗಳಾಗಲಿ ಮುನ್ನೆಲೆಗೆ ಬಂದಾಗ ಆಂದೋಲನೆಯೇ ನಡೆದು, ತದನಂತರ ಸರ್ಕಾರದ ಕ್ರಮ/ಭರವಸೆಯ ನಂತರ ಎಲ್ಲವೂ ಸರಿಹೋಯಿತೆಂದು ಮುನ್ನೆಡೆಯುವ ಜನರು ಕ್ರಮೇಣ ಅಂತಹ ಘಟನಾವಳಿಗಳನ್ನೆ ಮರೆತು ಬಿಡುತ್ತಾರೆ. ಆದರೆ ವಾಸ್ತವವಾಗಿ ಅಂತಹ ಅನಿಷ್ಟ ಪದ್ಧತಿಗಳು ತೆರೆಯ ಮರೆಯಲ್ಲಿ ಅವ್ಯಾಹತವಾಗಿ ನಡೆಯುತ್ತಿರುವುದು ಮತ್ತೆ ಮುಖ್ಯವಾಹಿನಿಯಲ್ಲಿ ಸದ್ದು ಮಾಡಿದಾಗ ಬೆಚ್ಚಿಬೀಳುವ ಸರದಿ ಅದೇ ಜನಸಾಮಾನ್ಯರದ್ದು. ನಮ್ಮ ಪೊಲೀಸ್ ವ್ಯವಸ್ಥೆಯಲ್ಲಿ ಅನಾದಿಕಾಲದಿಂದಲೂ ಅನುಸರಿಸಿಕೊಂಡು ಬಂದ 'ಆರ್ಡರ್ಲಿ' (ಮನೆಗೆಲಸದ ಸಿಪಾಯಿಗಳು) ವ್ಯವಸ್ಥೆ ಇನ್ನೂ ಮುಂದುವರಿಯುತ್ತಿದೆ.

ಪೊಲೀಸ್ ವ್ಯವಸ್ಥೆಯ ಕೆಳಹಂತದಲ್ಲಿ ಕೆಲಸಮಾಡುವ ನೌಕರರನ್ನು ಉನ್ನತ ಪೊಲೀಸ್ ಅಧಿಕಾರಿಗಳ ಮನೆಯಲ್ಲಿ ಕೆಲಸ ಮಾಡಲು ಬಳಸಿಕೊಳ್ಳುತ್ತಿರುವುದು ಎಲ್ಲರೂ ಸಮಾನರು ಎನ್ನುವ ಪ್ರಜಾಪ್ರಭುತ್ವ ವ್ಯವಸ್ಥೆಯ ಅಣಕವೇ ಸರಿ. ಶತಮಾನಗಳ ಕಾಲ ನಮ್ಮನ್ನಾಳಿದ ಆಂಗ್ಲರಿಂದ ಬಳುವಳಿ ಪಡೆದ ಹಲವು ಅನಿಷ್ಟ ಪದ್ಧತಿಗಳಲ್ಲಿ ಇದೂ ಒಂದು. ಆದರೆ ಸ್ವಾತಂತ್ರ್ಯದ ಅಮೃತೋತ್ಸವ ದಾಟಿರುವ ಈ ಹಂತದಲ್ಲೂ ಈ ಪದ್ಧತಿ ಇನ್ನೂ ಇರುವುದು ದುರದೃಷ್ಟಕರ. ಕೆಚ್ಚೆದೆಯ, ಸ್ವಾಭಿಮಾನಿಗಳಾದ ಚಂದ್ರಶೇಖರ ಆಜಾದ್, ಭಗತ್ ಸಿಂಗ್, ಸುಭಾಷ್ ಚಂದ್ರ ಬೋಸ್‌ರಂತವರ ಪರಂಪರೆ ಹೊಂದಿರುವ ನಮ್ಮ ಯುವಜನತೆ ಒಂದಿಷ್ಟೂ ಪ್ರತಿಭಟನೆ ತೋರದೆ, ಹೀನಾಯ ವ್ಯವಸ್ಥೆಗೆ ಒಗ್ಗಿಕೊಳ್ಳುತ್ತಿರುವುದು ಮಾತ್ರ ವಿಪರ್ಯಾಸವೇ ಸರಿ.

ದೇಶದ ಕಾನೂನು ಪರಿಸ್ಥಿತಿ ಸುಸ್ಥಿತಿಯಲ್ಲಿರಲು ಸದಾ ಜಾಗರೂಕರಾಗಿರುವ ಕ್ರಿಯಾಶೀಲ ಪೊಲೀಸ್ ವ್ಯವಸ್ಥೆ ಅತ್ಯವಶ್ಯಕ. ಈ ನಿಟ್ಟಿನಲ್ಲಿ ಎಲ್ಲಾ ಚುನಾಯಿತ ಸರ್ಕಾರದ ಪ್ರಥಮ ಆದ್ಯತೆ ಸಮರ್ಪಕ ಕಾನೂನು ಪರಿಪಾಲನೆಯೇ ಆಗಿರುತ್ತದೆ. ಇದಕ್ಕಾಗಿ ಸರ್ಕಾರವು ಪೊಲೀಸ್ ವ್ಯವಸ್ಥೆಯನ್ನು ಕಾಲಕಾಲಕ್ಕೆ ಆಧುನಿಕಗೊಳಿಸುವುದರ ಜೊತೆಗೆ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡು ಪಾರದರ್ಶಕವಾಗಿ ಕಾರ್ಯನಿರ್ವಹಿಸುವತ್ತ ಶ್ರಮಪಡುತ್ತಿದೆ. ಕೆಲವೊಮ್ಮೆ ಪೊಲೀಸ್ ಸಿಬ್ಬಂದಿಗಳ ಕೊರತೆಯಿಂದ ಕಾನೂನು ಸುವ್ಯವಸ್ಥೆ ಕಾಪಾಡಲು ಹರಸಾಹಸ ಪಡುತ್ತಿರುವುದನ್ನು ಕೂಡಾ ನಾವು ಆಗಾಗ ನೋಡುತ್ತಲೇ ಇದ್ದೇವೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಕಾನೂನುಬದ್ಧವಾಗಿ ಪೊಲೀಸ್ ಇಲಾಖೆಗೆ ನೇಮಕಗೊಂಡು, ತಿಂಗಳುಗಳ ಕಾಲ ಕಠಿಣ ತರಬೇತಿ ಪಡೆದ ಸಿಬ್ಬಂದಿಗಳ ಸೇವೆಯನ್ನು ಅಧಿಕಾರಿಗಳು ತಮ್ಮ ಮನೆಕೆಲಸಗಳಿಗೆ ಬಳಸಿಕೊಳ್ಳುತ್ತಿರುವುದು ಎಷ್ಟು ಸರಿ? ತರಬೇತಿ ಪಡೆದ ಸಿಬ್ಬಂದಿಗಳ ಸೇವೆಯು ಸದಾ ದೇಶಕ್ಕಾಗಿ ಮುಡುಪಿರಲಿ ಎನ್ನುವ ಉದಾತ್ತ ಮನೋಭಾವವುಳ್ಳ ಪೊಲೀಸ್ ಉನ್ನತಾಧಿಕಾರಿಗಳ ಕೊರತೆ ಇದೆಯೆ ?

ಈ 'ಆರ್ಡರ್ಲಿ' ವ್ಯವಸ್ಥೆಯ ಬಗ್ಗೆ ದಶಕಗಳ ಹಿಂದೆಯೇ ಪ್ರತಿಭಟನೆ ನಡೆದಿತ್ತು. ಪ್ರತಿಭಟನೆಯ ಕಾವು ತೀವ್ರಗೊಂಡ ಬಳಿಕ ಇಂತಹ ಅನಿಷ್ಟ ಪದ್ಧತಿಗೆ ಅಂತ್ಯ ಹಾಡುವುದಾಗಿ ಸರ್ಕಾರ ಆಶ್ವಾಸನೆ ನೀಡಿತ್ತು. ಅದರ ನಂತರ ಎಲ್ಲವೂ ಸರಿಹೋಯಿತೆಂದು ಎಲ್ಲರು ತಿಳಿದಿದ್ದರು. ಆದರೆ ಇತ್ತೀಚೆಗೆ ಪೊಲೀಸ್ ಇಲಾಖೆಯ ಮಹಾನಿರ್ದೇಶಕ (ಡಿ.ಜಿ.ಪಿ) ಎಮ್.ಎ.ಸಲೀಮ್‌ರವರು ಹೊರಡಿಸಿದ ಆದೇಶದಲ್ಲಿ ರಾಜ್ಯದಲ್ಲಿರುವ ಸುಮಾರು ಮೂರು ಸಾವಿರ 'ಆರ್ಡರ್ಲಿ'ಗಳ ಸೇವೆಗಳನ್ನು ರದ್ದು ಪಡಿಸಿರುವುದಾಗಿ ಘೋಷಿಸಿರುವುದನ್ನು ಜನರು ಆಶ್ಚರ್ಯಚಕಿತರಾಗಿದ್ದಾರೆ. ದಶಕಗಳ ಹಿಂದೆಯೇ ಈ ಅನಿಷ್ಟ ಪದ್ಧತಿಗೆ ಅಂತ್ಯ ಹಾಡುವುದಾಗಿ ಸರ್ಕಾರ ಘೋಷಿಸಿದ್ದರೂ, ಮದ್ರಾಸ್ ಹೈಕೋರ್ಟ್ ಇದನ್ನು ಅನಾದಿಕಾಲದ ಜೀತ ಪದ್ಧತಿ ಎಂದು ಜರೆದಿದ್ದರೂ ಈ ಪದ್ಧತಿ ಇನ್ನೂ ಚಾಲನೆಯಲ್ಲಿರುವುದು ದಿಟವೆಂದು ಸಾಬೀತಾಗಿದೆ. ಇದು ಹಲವು ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತಿದೆ.

ಪ್ರತಿ ತಿಂಗಳು ಸರ್ಕಾರದಿಂದ ಸಂಬಳ ಪಡೆದು, ತನ್ನ ಉಪಯುಕ್ತ ಸೇವೆಯನ್ನು ಮರೆತು, ಮೇಲಧಿಕಾರಿಗಳ ಮನೆಯಲ್ಲಿ ಬಿಟ್ಟಿ ಕೆಲಸ ಮಾಡುತ್ತಿರುವ ಪೊಲೀಸ್ ಸಿಬ್ಬಂದಿಗಳನ್ನು ಗುರುತಿಸುವುದೇಕೆ ಸರಕಾರಕ್ಕೆ ಸಾಧ್ಯವಾಗಿಲ್ಲ? ಇದರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿಲ್ಲವೇಕೆ? ನಿಯಮಾವಳಿಗಳನ್ನು ರೂಪಿಸುವ ಉನ್ನತಾಧಿಕಾರಿಗಳೇ ಈ ಅನಿಷ್ಟ ಪದ್ಧತಿಗೆ ಸಮರ್ಥನೆ ನೀಡುತ್ತಿದ್ದಾರೆ ಎನ್ನುವ ಅನುಮಾನ ಎಲ್ಲರನ್ನು ಕಾಡುತ್ತಿದೆ. ಉನ್ನತಾಧಿಕಾರಿಗಳೇ ಸ್ವಯಂಪ್ರೇರಿತರಾಗಿ ತಮ್ಮ ಅಡಿಯಾಳಾಗಿ ದುಡಿಯುತ್ತಿರುವ ಸಿಬ್ಬಂದಿಗಳನ್ನು ಬಿಡುಗಡೆಗೊಳಿಸಬಹುದು. ಆ ಮೂಲಕ ಸಿಬ್ಬಂದಿಗಳು ಇಲಾಖೆಯ ಮುಖ್ಯವಾಹಿನಿಗೆ ಬಂದು ಸಿಬ್ಬಂದಿಗಳ ಕೊರತೆಯಿಂದ ಹೆಣಗಾಡುವ ವ್ಯವಸ್ಥೆಯನ್ನು ತುಸು ತಿಳಿಗೊಳಿಸುವಂತೆ ಮಾಡಬಹುದು.

ಪ್ರಸ್ತುತ ಕರ್ನಾಟಕದಲ್ಲಿರುವ ಹಲವಾರು ಸಮಸ್ಯೆಗಳು ವೈರುಧ್ಯಗಳಿಂದ ಕೂಡಿದ್ದು ಹರಿತವಾದ ಕತ್ತಿಯ ಉಭಯ ತುದಿಗಳಂತೆ ಯಾವ ಕಡೆ ವಾಲಿದರೂ ಹಾನಿಯು ನಿಶ್ಚಿತವೆನ್ನುವಂತಿದೆ. ಉದಾಹರಣೆಗೆ ಜಾತಿ ಒಳ ಮೀಸಲಾತಿ ಜಾರಿ ಮಾಡಿದರೆ ಒಂದು ವರ್ಗಕ್ಕೆ ಅನ್ಯಾಯವಾದರೆ, ಜಾರಿ ಮಾಡದಿದ್ದರೆ ಮತ್ತೊಂದು ವರ್ಗಕ್ಕೆ ಅನ್ಯಾಯವಾಗಲಿದೆ. ಆದರೆ ಆರ್ಡರ್ಲಿ ಪದ್ಧತಿಯನ್ನು ನಿರ್ಮೂಲನೆ ಮಾಡುವುದರಿಂದ ಕೇವಲ ಕೆಲವೇ ಮೇಲಾಧಿಕಾರಿಗಳಿಗೆ ಅಸಮಾಧಾನವಾಗಬಹುದೇ ಹೊರತು ಪೊಲೀಸ್ ಇಲಾಖೆ ಹಾಗೂ ಸಮಾಜದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ.

ಪೊಲೀಸ್ ಇಲಾಖೆಯ ಹೊಣೆ ಹೊತ್ತಿರುವ ಗೃಹಮಂತ್ರಿಗಳು ಮನಸ್ಸು ಮಾಡಿದರೆ ಕೆಲವೇ ಗಂಟೆಗಳಲ್ಲಿ ಈ ಅನಿಷ್ಟ ಪದ್ಧತಿಗೆ ಅಂತಿಮ ಹಾಡಬಹುದು. ಅಂತಹ ಎದೆಗಾರಿಕೆಯ ನಿರ್ಧಾರ ಹೊರಬೀಳಲಿ ಎನ್ನುವುದೇ ಬಹುಜನರ ಆಶಯ ಕೂಡಾ. 'ಆರ್ಡರ್ಲಿ' ವ್ಯವಸ್ಥೆಯಲ್ಲಿ ಸುಮಾರು ಮೂರು ಸಾವಿರ ಸಿಬ್ಬಂದಿಗಳಿದ್ದು, ಇವರ ವಾರ್ಷಿಕ ವೆಚ್ಚ 78 ಕೋಟಿ ರೂಪಾಯಿಯನ್ನು ಆರ್ಥಿಕ ಹೊರೆಯಿಂದ ಬಸವಳಿದ ಕರ್ನಾಟಕ ಸರ್ಕಾರವೇ ಭರಿಸಬೇಕಾಗಿರುವುದು ಅನಿವಾರ್ಯವಾಗಿದೆ. ಹಾಗಾಗಿ ಕರ್ನಾಟಕ ಸರ್ಕಾರ ಈ ನಿಟ್ಟಿನಲ್ಲಿ ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

ಕಿರುಸುದ್ದಿ

ಬನ್ನೇರುಘಟ್ಟಕ್ಕೆ ಎರಡು ಜೀಬ್ರಾ ಮರಿ ಜನನ



ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಹೊಸ ಅತಿಥಿಗಳ ಆಗಮನದಿಂದ ಸಂಭ್ರಮ ಮನೆ ಮಾಡಿದೆ.

ಉದ್ಯಾನವನದಲ್ಲಿರುವ ಎರಡು ಜೀಬ್ರಾಗಳು ಮರಿಗಳಿಗೆ ಜನ್ಮ ನೀಡಿದ್ದು, ಪ್ರಾಣಿ ಪ್ರಿಯರಲ್ಲಿ ಹರ್ಷ ತಂದಿದೆ. ಝೂನಲ್ಲಿರುವ ಕೋಕಿಲ ಜೀಬ್ರಾ ಒಂದು ಹೆಣ್ಣು ಮರಿಗೆ ಜನ್ಮ ನೀಡಿದರೆ, ಕಾವೇರಿ ಜೀಬ್ರಾ ಕೂಡ ಮತ್ತೊಂದು ಹೆಣ್ಣು ಮರಿಗೆ ಜನ್ಮ ನೀಡಿದೆ. ಈ ಹೊಸ ಮರಿಗಳ ಜನನದೊಂದಿಗೆ ಉದ್ಯಾನವನದಲ್ಲಿನ ಜೀಬ್ರಾಗಳ ಸಂಖ್ಯೆ 9ಕ್ಕೆ ಏರಿಕೆಯಾಗಿದೆ. ಪ್ರಸ್ತುತ ಇರುವ ಜೀಬ್ರಾಗಳಲ್ಲಿ ಹೆಣ್ಣು ಜೀಬ್ರಾಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇರುವುದಾಗಿ ಅಽಕಾರಿಗಳು ತಿಳಿಸಿದ್ದಾರೆ.

ಪ್ರಾಣಿ ಸಂರಕ್ಷಣೆ ಮತ್ತು ವೈವಿಧ್ಯತೆ ಹೆಚ್ಚಿಸುವ ಉದ್ದೇಶದಿಂದ ಪ್ರಾಣಿ ವಿನಿಮಯ ಯೋಜನೆಯನ್ನು ಬಳಸಿಕೊಳ್ಳುವ ಯೋಚನೆಯೂ ಉದ್ಯಾನವನದ ಆಡಳಿತದಲ್ಲಿದೆ. ಜೀಬ್ರಾಗಳನ್ನು ನೀಡಿ, ಬೇರೆಯ ಅಪರೂಪದ ಪ್ರಾಣಿಗಳನ್ನು ಕರೆತರುವ ಚಿಂತನೆ ನಡೆಯುತ್ತಿದೆ.

ಹೊಸ ಅತಿಥಿಗಳ ಆಗಮನದಿಂದ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಸಂತಸದ ವಾತಾವರಣ ಒಂದೆಡೆಯಾದರೆ ಬಿಸಿಲಿನ ಝಳ ಹೆಚ್ಚಾಗುತ್ತಿರುವುದರಿಂದ ಸ್ಪಿಂಕ್ಲರ್ ಮೂಲಕ ನೀರನ್ನು ಸಿಂಪಡಿಸಲಾಗುತ್ತಿದೆ. ಇದರ ಜತೆಗೆ ಮರಿಗಳ ರಕ್ಷಣೆ ಅವುಗಳ ಹಾರೈಕೆಯ ಬಗ್ಗೆ ಉದ್ಯಾನದ ಆಡಳಿತ ಮಂಡಳಿ ಹೆಚ್ಚಿನ ಗಮನ ಹರಿಸುತ್ತಿದೆ. ಈ ಕುರಿತು ಉದ್ಯಾನವನದ ಕಾರ್ಯನಿರ್ವಾಹಕ ಅಽಕಾರಿ ಸೂರ್ಯಸೇನ್ ಮಾತನಾಡಿ, ಹೊಸ ಮರಿಗಳ ಆಗಮನದಿಂದ ಉದ್ಯಾನವನಕ್ಕೆ ಮತ್ತಷ್ಟು ಆಕರ್ಷಣೆ ಹೆಚ್ಚಿದೆ. ಮುಂದಿನ ದಿನಗಳಲ್ಲಿ ಪ್ರಾಣಿ ವಿನಿಮಯ ಯೋಜನೆ ಮೂಲಕ ಇನ್ನಷ್ಟು ವೈವಿಧ್ಯಮಯ ಪ್ರಾಣಿಗಳನ್ನು ತರಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಸಾಧನೆಗೆ ಪ್ರಶಸ್ತಿ ಪ್ರದಾನ



ಹೊಸಕೋಟೆ: ನಗರದಲ್ಲಿರುವ ಹೊಸಕೋಟೆ ಟೌನ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ರಾಷ್ಟ್ರೀಯ ಸಹಕಾರ ಸಂಘ 2025ನೇ ಸಾಲಿನ ಅತ್ಯುತ್ತಮ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವಾಗಿ ಕರ್ನಾಟಕ ರಾಜ್ಯದ ಪ್ರಥಮ ಸ್ಥಾನದ ಪ್ರಶಸ್ತಿ ನೀಡಿ ಹಾಗೂ 35 ಸಾವಿರ ರೂಪಾಯಿ ನಗದು ಬಹುಮಾನ ವಿತರಣೆ ಮಾಡಲಾಗಿದೆ ಎಂದು ಹೊಸಕೋಟೆ ಟೌನ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ ಸತೀಶ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಷ್ಟ್ರೀಯ ಸಹಕಾರ ಸಂಘವು ಬೆಂಗಳೂರಿನ ಆರ್‌ಐಸಿಎಂನಲ್ಲಿ ನೆಡೆದ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ನೀಡಿ, ಉತ್ತಮ ಕೆಲಸ ಮಾಡುತ್ತಿರುವ ಸಂಘ, ಸಂಘದ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗೆ ಅಭಿನಂದನೆ ಸಲ್ಲಿಸಿದರು. ಡಿಸಿಸಿ ಬ್ಯಾಂಕ್ ಮಾಜಿ ಉಪಾದ್ಯಕ್ಷ ಕೆ.ಕೃಷ್ಣಮೂರ್ತಿ, ಸಂಘದ ಮುಖ್ಯ ಕಾರ್ಯ ನಿರ್ವಹಣಾಽಕಾರಿ ನಾರಾಯಣ ಶರ್ಮ, ವ್ಯವಸ್ಥಾಪಕ ನಂಜುಂಡೇ ಗೌಡ ಹಾಗೂ ಸಿಬ್ಬಂದಿ ಹಾಜರಿದ್ದರು.

ಚಿತ್ರಮಂದಿರದಲ್ಲಿ ಅಗ್ನಿ ದುರಂತ: ವಾಚ್‌ಮನ್ ಸಜೀವ ದಹನ

ಮೈಸೂರು: ಇಲ್ಲಿನ ಕೆ.ಆರ್.ಎಸ್ ರಸ್ತೆಯಲ್ಲಿರುವ ಸ್ಥಗಿತಗೊಂಡ ಗೋಕುಲ್ ಚಿತ್ರಮಂದಿರದ ಆವರಣದಲ್ಲಿ ಮಂಗಳವಾರ ಬೆಳಗ್ಗೆ ಸಂಭವಿಸಿದ ಆಕಸ್ಮಿಕ ಅಗ್ನಿ ದುರಂತದಲ್ಲಿ ವಾಚ್‌ಮನ್ ಒಬ್ಬರು ಸಜೀವ ದಹನಗೊಂಡ ದಾರುಣ ಘಟನೆ ನಡೆದಿದೆ. ವಾಚ್‌ಮನ್ ಮರಿಶೆಟ್ಟಿ (75) ಸಾವಿಗೀಡಾದವರು.

ಇವರು ಸುಮಾರು 45 ವರ್ಷದಿಂದ ಗೋಕುಲ್ ಚಿತ್ರಮಂದಿರದಲ್ಲಿ ವಾಚ್‌ಮನ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಮಂಗಳವಾರ ಬೆಳಗ್ಗೆ ಆವರಣವನ್ನು ಸ್ವಚ್ಛಗೊಳಿಸುವ ವೇಳೆ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದೆ. ಬೆಂಕಿ ವೇಗವಾಗಿ ಹಬ್ಬಿದ ಪರಿಣಾಮ ಮರಿಶೆಟ್ಟಿ ಹೊರಬರಲು ಸಾಧ್ಯವಾಗದೇ ಬೆಂಕಿಯಲ್ಲೇ ಸಿಲುಕಿ ಸಜೀವ ದಹನಗೊಂಡಿದ್ದಾರೆ. ಕೆಲಸ ಮುಗಿಸಿ ಮನೆಗೆ ಮರಳದ ಹಿನ್ನೆಲೆಯಲ್ಲಿ ಕುಟುಂಬದವರು ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಮರಿಶೆಟ್ಟಿಯವರ ಮೃತದೇಹ ಪತ್ತೆಯಾಗಿದೆ. ವಿಷಯ ತಿಳಿದು ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ, ವಿವಿ ಪುರಂ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆ ಕುರಿತು ವಿವಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ.

ಬ್ಲಿಂಕಿಟ್‌ಗೆ ಬೀಗ, ನೋಟಿಸ್ ಜಾರಿ | ಪರವಾನಗಿ ಇಲ್ಲದೆ ಆಹಾರ ವಿತರಣೆ, ಕೊಳೆತ ಪದಾರ್ಥಗಳು ಪತ್ತೆ

ಆನ್‌ಲೈನ್ ಆಹಾರ ಸಾವಿಗೆ ಆಹ್ವಾನ

ಹೊಸಕೋಟೆ: ಅವಧಿ ಮೀರಿದ, ಕೊಳೆತ ಆಹಾರ ಪದಾರ್ಥ ಸರಬರಾಜು ಮಾಡುತ್ತಿದ್ದ ಬ್ಲಿಂಕಿಟ್ ಸಂಸ್ಥೆಗೆ ನೋಟಿಸ್ ಜಾರಿ ಮಾಡುವ ಮೂಲಕ ಬೀಗ ಹಾಕಲಾಗಿದೆ ಎಂದು ನಗರಸಭೆ ಸದಸ್ಯ ನಿತಿನ ಶ್ರೀನಿವಾಸ್ ತಿಳಿಸಿದರು.

ಇಂದು ನಗರಸಭೆ ಹಾಗೂ ಪೊಲೀಸ ಅಽಕಾರಿಗಳು ದಾಳಿ ನಡೆಸಿ ಆಹಾರ ಪದಾರ್ಥವನ್ನು ಪರಿಶೀಲನೆ ನೆಡೆಸಿದ ಬಳಿಕ ಮಾತನಾಡಿ, ನಗರದ ಬ್ಲಿಂಕಿಟ್ ಆನ್ ಲೈನ್ ಮೂಲಕ ಆಹಾರ, ಹಣ್ಣು ತರಕಾರಿ ಪೂರೈಕಾ ಸಂಸ್ಥೆಯಲ್ಲಿ ಹಳಸಿದ, ಕೊಳೆತ ಹಾಗೂ ಅವಽ ಮೀರಿರುವ ಪದಾರ್ಥವನ್ನು ಮಾರಾಟ ಮಾಡಿ ಗ್ರಾಹಕರ ಕೆಂಗಣ್ಣಿಗೆ ಗುರಿಯಾಗಿದೆ. ಇದರಿಂದ ಆಹಾರ ತಿಂದವರ ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ ಎಂದರು.

ಆನ್ ಲೈನ್ ಮೂಲಕ ಸಿದ್ಧಡಿಸಿದ ಆಹಾರ, ತರಕಾರಿ, ಹಣ್ಣು ಹಾಗೂ ಇತರೇ ಪದಾರ್ಥವನ್ನು ಕೆಲವೇ ನಿಮಿಷದಲ್ಲಿ ಮನೆಗೆ ಸರಬರಾಜು ಮಾಡುವ ಬ್ಲಿಂಕಿಟ್ ಸಂಸ್ಥೆಯಲ್ಲಿ ಹಳಸಿದ, ಕೊಳೆತ ಹಾಗೂ ಅವಧಿ ಮೀರಿರುವ ಪದಾರ್ಥವನ್ನು ಗ್ರಾಹಕರಿಗೆ ಪೂರೈಕೆ ಮಾಡಿ ಗ್ರಾಹಕರ ಪ್ರಾಣ, ಹಣಕ್ಕೆ ಸವಾಲೆಸೆದಿದೆ ಎಂದು ಕಿಡಿಕಾರಿದರು.

ನಗರಸಭೆಯ ಸದಸ್ಯ ನಿತಿನ್ ಶ್ರೀನಿವಾಸ್ ಬ್ಲಿಂಕಿಟ್ ಸಂಸ್ಥೆಯಿಂದ ಆನ್‌ಲೈನ್ ಮೂಲಕ ಹಣ್ಣು ಖರೀದಿ ಮಾಡಿದ್ದರು. ಕೆಲವೇ ನಿಮಿಷದಲ್ಲಿ ಆಹಾರದ ಪೊಟ್ಟಣವನ್ನು ಪೂರೈಕೆ ಮಾಡಿದ ಬ್ಲಿಂಕಿಟ್ ಸಂಸ್ಥೆಯ ಡಿಲವರಿ ಬಾಯ್‌ಗೆ ಹಣ ನೀಡುವ ಮುನ್ನ ಪ್ಯಾಕೆಟ್ ಚೆಕ್ ಮಾಡಿದಲ್ಲಿ ಹಣ್ಣುಗಳು ಕೊಳೆತ ಸ್ಥಿತಿಯಲ್ಲಿತ್ತು. ಕೂಡಲೇ ಡಿಲವರಿ ಬಾಯ್‌ಗೆ ತೋರಿಸಿದಕ್ಕೆ ಸಾರ್ ಈ ಪಾಸರ್ಲ್ ವಾಪಸ್ ಪಡೆಯುತ್ತೇನೆ ಎಂದಿದೆ. ಈ ಬಗ್ಗೆ ಬ್ಲಿಂಕಿಟ್ ಅಧಿಕಾರಿಗಳಿಗೆ ಕರೆ ಮಾಡಿದರೂ ಯಾರೂ ಸ್ಪಂದಿಸದ ಕಾರಣ ನಗರಸಭೆ ಹಾಗೂ ಪೊಲೀಸರಿಗೆ ದೂರು ನೀಡಿ ದಾಳಿ ನೆಡೆಸಲಾಯಿತು. ಮೊದಲಿಗೆ ಬ್ಲಿಂಕಿಟ್ ಸಂಸ್ಥೆ ತನ್ನ ವಾಣಿಜ್ಯ ವ್ಯವಹಾರಕ್ಕೆ ಯಾವುದೇ ಪರವಾನಿಗೆಯನ್ನು ನಗರಸಭೆಯಿಂದ ಪಡೆದಿಲ್ಲ, ಆಹಾರ ಪದಾರ್ಥ ಮಾರಾಟ ಸಂಬಂಧ ಆಹಾರ ಇಲಾಖೆಯಿಂದ ಹಾಗೂ ಆರೋಗ್ಯ ಇಲಾಖೆಯಿಂದ ಪರವಾನಿಗೆ ಪಡೆದಿಲ್ಲ. ಈ ಬಗ್ಗೆ ಪರಿಶೀಲಿಸಿದ ನಗರಸಭೆ ಆಯುಕ್ತ ನೀಲಾ ಲೋಚನಾ ಪ್ರಭು ಹಣ್ಣು, ತರಕಾರಿ, ಬ್ರೆಡ್, ಬಿಸ್ಕತ್ ಗಳನ್ನು ಪರಿಶೀಲಿಸಿದಾಗ ಶೇಕಡಾ 50ರಷ್ಟು ಹಣ್ಣು ಹಾಗೂ ತರಕಾರಿಗಳು ಕೊಳೆತ ಸ್ಥಿತಿಯಲಿದೆ ಎಂದರು. ಅದರಲ್ಲಿ ಚನ್ನಾಗಿ ಕಾಣುವ ತರಕಾರಿ ಹಾಗೂ ಹಣ್ಣನ್ನು ಆನ್ ಲೈನ್ ಆರ್ಡರ್ ಗಳಿಗೆ ಕಳುಹಿಸಲಾಗುತಿತ್ತು. ಅದರಲ್ಲಿ ಶೇಕಡಾ 50 ಕ್ಕೂ ಹೆಚ್ಚು ಮಾರಾಟಕ್ಕೆ ಯೋಗ್ಯವಲ್ಲದ ಹಾಗೂ ಮಾರಾಟ ಅವಧಿ ಮೀರಿದ ವಸ್ತುಗಳೇ ಆಗಿವೆ. ನಗರಸಭೆಯ ಆರೋಗ್ಯ ಇಲಾಖೆ ಅಽಕಾರಿ ಆಂಜಿನಪ್ಪ ನೇತೃತ್ವದಲ್ಲಿ ಬ್ಲಿಂಕಿಟ್ ಮಳಿಗೆಗೆ ಬೀಗ ಜಡಿಯಲಾಗಿದೆ. ಅಲ್ಲದೆ, ಮಳಿಗೆ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಈ ಸಂಬಂಧ ಆರೋಗ್ಯ ಇಲಾಖೆ ಹಾಗೂ ಆಹಾರ ಪೂರೈಕೆ ಇಲಾಖೆಗೆ ಸೂಕ್ತ ಕ್ರಮ ಕೈಗೊಳ್ಳಲು ಪತ್ರ ಬರೆಯಲಾಗಿದೆ ಎಂದು ನಗರಸಭೆ ಆರೋಗ್ಯ ಇಲಾಖೆಯ ಅಽಕಾರಿ ಆಂಜಿನಪ್ಪ ತಿಳಿಸಿದರು.



ಉಡಾಫೆ ಉತ್ತರ

ನನ್ನ ಗಮನಕ್ಕೆ ಈಗ ಬಂದಿದೆ, ನಾನು ನಾಳೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ನಂತರ ಕ್ರಮ ಕೈಗೊಳ್ಳುತ್ತೇನೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ವೀಣಾ ಅವರು ಉಡಾಫೆ ಉತ್ತರ ನೀಡಿದರು.

ಶೇ. 50 ಕೊಳೆತ ಹಣ್ಣು, ತರಕಾರಿ

ಮೊದಲಿಗೆ ಬ್ಲಿಂಕಿಟ್ ಸಂಸ್ಥೆ ತನ್ನ ವಾಣಿಜ್ಯ ವ್ಯವಹಾರಕ್ಕೆ ಯಾವುದೇ ಪರವಾನಿಗೆಯನ್ನು ನಗರಸಭೆಯಿಂದ ಪಡೆದಿಲ್ಲ, ಆಹಾರ ಪದಾರ್ಥ ಮಾರಾಟ ಸಂಬಂಧ ಆಹಾರ ಇಲಾಖೆಯಿಂದ ಹಾಗೂ ಆರೋಗ್ಯ ಇಲಾಖೆಯಿಂದ ಪರವಾನಿಗೆ ಪಡೆದಿಲ್ಲ. ಈ ಬಗ್ಗೆ ಪರಿಶೀಲಿಸಿದ ನಗರಸಭೆ ಆಯುಕ್ತ ನೀಲಾ ಲೋಚನಾ ಪ್ರಭು ಹಣ್ಣು, ತರಕಾರಿ, ಬ್ರೆಡ್, ಬಿಸ್ಕತ್ ಪರಿಶೀಲಿಸಿದಾಗ ಶೇಕಡಾ 50ರಷ್ಟು ಹಣ್ಣು ಹಾಗೂ ತರಕಾರಿಗಳು ಕೊಳೆತ ಸ್ಥಿತಿಯಲಿದೆ ಎಂದರು.

ನಮ್ಮ ಜೀವಕ್ಕೆ ಯಾರು ಹೊಣೆ

ಅವಽ ಮೀರಿದ ಆಹಾರ ಹಾಗೂ ಕೊಳೆತ ಆಹಾರವನ್ನು ತಿಳಿಯದೇ ಯಾರಾದರೂ ಗ್ರಾಹಕರು ತಿಂದು ಆರೋಗ್ಯ ಕೆಡಿಸಿಕೊಂಡರೆ ಅಥವಾ ಜೀವ ಕಳೆದುಕೊಂಡರೆ ಯಾರು ಹೊಣೆ, ಅನಽಕೃತವಾಗಿ ನಗರದಲ್ಲಿ ಬ್ಲಿಂಕಿಟ್ ಸಂಸ್ಥೆ ತನ್ನ ವ್ಯಾಪಾರ ವಹಿವಾಟು ನೆಡೆಸುತ್ತಿದೆ ಎಂದರೆ ಅಽಕಾರಿಗಳು ಹೇಗೆ ಸುಮ್ಮನಿದ್ದಾರೆ. ಈ ಬಗ್ಗೆ ಬ್ಲಿಂಕಿಟ್ ಅಽಕಾರಿಗಳನ್ನು ಪ್ರಶ್ನಿಸಿದರೆ, ಸಾರ್ ಹೊರಗೆ ಬನ್ನಿ ಈ ಬಗ್ಗೆ ಮಾತನಾಡೋಣ ಎನ್ನುತ್ತಾರೆ ಎಂದು ಸ್ವತಃ ನಗರಸಭಾ ಸದಸ್ಯ ನಿತಿನ್ ತಿಳಿಸಿದರು.

ಡೇರಿ ನೂತನ ಅಧ್ಯಕ್ಷರಿಗೆ ಅಭಿನಂದನೆ



ವಿಜಯಪುರ: ಸಮೀಪದ ಎ.ರಂಗನಾಥಪುರ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡಿರುವ ನವೀನ್ ಕುಮಾರ್ ಅವರಿಗೆ ಬ್ಲಾಕ್ ಕಾಂಗ್ರೆಸ್‌ನಿಂದ ಸನ್ಮಾನಿಸಲಾಯಿತು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದಿನ್ನೂರು ವೆಂಕಟೇಶ್ ಮಾತನಾಡಿ, ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳು ಪಕ್ಷಕ್ಕೆ ಶ್ರೀರಕ್ಷೆಯಾಗಿದೆ ಜನಸಾಮಾನ್ಯರಿಗೆ ಸರ್ಕಾರದ ಸಾಧನೆಯ ಬಗ್ಗೆ ಕಾರ್ಯಕರ್ತರು ತಿಳಿಸಿಕೊಡಬೇಕು ಎಂದು ತಿಳಿಸಿದರು. ಈಗಾಗಲೇ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಅವರು ತಾಲೂಕಿನ ಸಮಗ್ರ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿದ್ದಾರೆ. ವಿಜಯಪುರ ಪಟ್ಟಣದಲ್ಲಿ 25 ಕೋಟಿ ರೂ. ವೆಚ್ಚದಲ್ಲಿ ಭೂಗತ ಕೇಬಲ್ ಅಳವಡಿಸುವ ಕಾಮಗಾರಿಗೆ ಚಾಲನೆ ನೀಡಿದ್ದಾರೆ ಎಂದರು. ಹಾಲಿನ ಡೇರಿಯ ನೂತನ ಅಧ್ಯಕ್ಷರು ಹಾಲು ಉತ್ಪಾದಕರಿಗೆ ಡೇರಿಯಿಂದ ಹಾಗೂ ಸರ್ಕಾರದಿಂದ ಸಿಗುವ ಸೌಲಭ್ಯವನ್ನು ಪ್ರಾಮಾಣಿಕವಾಗಿ ಒದಗಿಸಬೇಕು. ಸಂಘವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕು ಎಂದರು. ಮುಖಂಡರಾದ ಜಿ.ರಾಜಗೋಪಾಲ್, ಎನ್.ಕುಮಾರಗೌಡ, ವಕೀಲ ರವಿಪ್ರಕಾಶ್, ಚಿಕ್ಕಚಿನ್ನರಾಯಪ್ಪ, ಗ್ರಾಪಂ ಸದಸ್ಯ ಕೃಷ್ಣಮೂರ್ತಿ, ಮುನಿಕೃಷ್ಣಪ್ಪ, ಎಂ.ರಮೇಶ್, ಎಂ.ಲೋಕೇಶ್, ಸಿ.ರಾಮಚಂದ್ರ, ವಿ.ಕುಮಾರ್, ಆರ್.ಎ.ರಾಮಚಂದ್ರಪ್ಪ, ಎಂ.ಸುರೇಶ್, ಎಂ.ರವಿಕುಮಾರ್, ಸಿ.ಮಂಜುನಾಥ್, ಎಸ್. ದಿನೇಶ್ ಇದ್ದರು.

ನೆಲವಾಗಿಲು ಸಹಕಾರ ಸಂಘಕ್ಕೆ ಆಯ್ಕೆ

ತಾವರೆಕೆರೆ: ಹೊಸಕೋಟೆ ತಾಲೂಕು ನಂದಗುಡಿ ಹೋಬಳಿಯ ನೆಲವಾಗಿಲು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ನೂತನ ಅಧ್ಯಕ್ಷ ಚಿಕ್ಕೊಂಡಹಳ್ಳಿಯ ನಾರಾಯಣಸ್ವಾಮಿ ಸಿ.ಎಂ, ಉಪಾಧ್ಯಕ್ಷ ಹಳೇಊರು ಗ್ರಾಮದ ಚಂದ್ರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದೆ ಅಧ್ಯಕ್ಷರಾಗಿದ್ದ ನಾರಾಯಣಗೌಡ ಎಚ್.ಎಂ, ಉಪಾಧ್ಯಕ್ಷರಾಗಿದ್ದ ವನಿತ ಬಿ.ಎಂ. ಸಂತೋಷ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರಿಂದ ತೆರವಾಗಿದ್ದ ಸ್ಥಾನಗಳಿಗೆ ಸೋಮವಾರ ಚುನಾವಣೆ ನಿಗದಿಯಾಗಿತ್ತು. ಎಲ್ಲ ನಿರ್ದೇಶಕರು ಒಪ್ಪಿ ಸರ್ವಾನುಮತದಿಂದ ಅಧ್ಯಕ್ಷ ಸ್ಥಾನಕ್ಕೆ ನಾರಾಯಣಸ್ವಾಮಿ ಸಿ.ಎಂ, ಉಪಾಧ್ಯಕ್ಷ ಸ್ಥಾನಕ್ಕೆ ಚಂದ್ರಪ್ಪ ತಲಾ ಒಬ್ಬರು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ವಾಗಿ ಆಯ್ಕೆ ಮಾಡಲಾಯಿತು ಎಂದು ಚುನಾವ ಣಾಽಕಾರಿ ಕೆ.ವಿ. ಮಾಧವರೆಡ್ಡಿ ತಿಳಿಸಿದರು. ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಬಿ.ವಿ. ರಾಜಶೇಖರಗೌಡ ಮಾತನಾಡಿ, ರೈತರು ಸಹಕಾರ ನೀಡಿದರೆ, ಸಂಘಗಳು ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತದೆ. ಆರ್ಥಿಕ ವಾಗಿ ಬಲಿಷ್ಟಗೊಳ್ಳುತ್ತದೆ. ರೈತರಿಗೆ ಸಹಕಾರಿ ಸಂಘದಿಂದ ಸಿಗುವ ಸವಲತ್ತುಗಳನ್ನು ಒದಗಿಸುವ ಮೂಲಕ ಮಾದರಿಯಾಗಬೇಕು. ಸಹಕಾರ ಸಂಘಗಳು ಪ್ರಗತಿ ಹೊಂದಬೇಕಾದರೆ ಪ್ರಾಮಾಣಿಕ ಆಡಳಿತ ಮಂಡಳಿಯ ಅಗತ್ಯವಿದೆ. ನೌಕರರು ನಿಷ್ಠೆಯಿಂದ ಕೆಲಸ ಮಾಡಿ ಎಂದು ಹೇಳಿದರು. ಕಾಂಗ್ರೆಸ್ ಬೆಂಬಲಿತ ನೂತನ ಅಧ್ಯಕ್ಷ, ಉಪಾಧ್ಯಕ್ಷರಾಗಿ ಆಯ್ಕೆಯಾದ ಸುದ್ದಿ ತಿಳಿದ ಬೆಂಬಲಿಗರು, ಪಟಾಕಿ ಸಿಡಿಸಿ, ಸಿಹಿ ಹಂಚಿ, ಹೂ ಹಾರ ಹಾಕಿ ಜಯಕಾರ ಹಾಕುತ್ತಾ, ಸಂತಸ ವ್ಯಕ್ತಪಡಿಸಿದರು. ಜಿಪಂ ಮಾಜಿ ಅಧ್ಯಕ್ಷೆ ಸವಿತಾ ಗೋಪಾಲ್, ತಾಪಂನ ಮಾಜಿ ಸದಸ್ಯ ಬೀರಪ್ಪ, ತಾಲೂಕು ಕೃಷಿಕ ಸಮಾಜದ ಪ್ರಧಾನ ಕಾರ್ಯದರ್ಶಿ ನಾರಾಯಣಗೌಡ ಹೆಚ್.ಕೆ, ಎಂಪಿಆರ್‌ಸಿಎಎಸ್ ಸಂಘದ ಸಿಇಓ ನಾಗೇಶ್, ನಿರ್ದೇಶಕರಾದ ಬೈರೇಗೌಡ ಎಚ್. ಎನ್, ಮುನೇಗೌಡ ರಮೇಶ್ ಎನ್.ಡಿ, ನಾಗೇಶ್, ಧರ್ಮೇಶ್ ಎಚ್.ಎನ್, ದಿನೇಶ್ ಸಿ.ಎನ್, ಪದ್ಮ ನಾಗೇಶ್, ವನಿತಾ ಸಂತೋಷ್, ಮಾಜಿ ಅಧ್ಯಕ್ಷರಾದ ಕೆ. ಮಂಜುನಾಥ್, ಎಸ್. ಮಂಜುನಾಥ್, ಎಸ್‌ಬಿಟಿ ಬೈರೇಗೌಡ, ಹೆಡಕನಹಳ್ಳಿ ನಾರಾಯಣಸ್ವಾಮಿ ಮುಖಂಡರಾದ ಜಿ.ಮೂರ್ತಿ, ಕೆ.ಮಂಜುನಾಥ್, ಎ.ಆರ್. ಕೃಷ್ಣಪ್ಪ, ಸರೋಜಮ್ಮ ಜಯರಾಮ್, ಸೊಣ್ಣೇಗೌಡ, ಕೆ.ಮುನಿರಾಜು, ಮಧುಸೂದನ್, ಲೆಕ್ಕಪಾಲಕ ಎನ್.ಅಶೋಕ್, ಗುಮಾಸ್ತ ರಂಜಿತ್ ಹಾಗೂ ರೈತರು ಭಾಗವಹಿಸಿದ್ದರು.



ಬೆಂ. ಗ್ರಾ.ಜಿಲ್ಲೆಯಲ್ಲಿ 14,314 ಪರೀಕ್ಷಾರ್ಥಿಗಳು
ಕಟ್ಟುನಿಟ್ಟಿನ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಕ್ರಮ

ದೇವನಹಳ್ಳಿ: 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಮಾರ್ಚ್ 18 ಬುಧವಾರದಿಂದ ಏಪ್ರಿಲ್ 2 ಗುರುವಾರದ ವರೆಗೆ ಬೆಳಗ್ಗೆ 10:15 ಗಂಟೆಯಿಂದ ಮಧ್ಯಾಹ್ನ 01:45 ಗಂಟೆಯ ವರೆಗೆ ನಡೆಯಲಿದೆ. ಜಿಲ್ಲೆಯಲ್ಲಿ 14,314 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ-01ಕ್ಕೆ ನಿಗದಿಪಡಿಸಿರುವ ಪರೀಕ್ಷಾ ಕೇಂದ್ರಗಳು ದೇವನಹಳ್ಳಿ ತಾಲೂಕಿನಲ್ಲಿ 13, ದೊಡ್ಡಬಳ್ಳಾಪುರ ತಾಲೂಕಿನಲ್ಲಿ 14, ಹೊಸಕೋಟೆ ತಾಲೂಕಿನಲ್ಲಿ 12, ನೆಲಮಂಗಲ ತಾಲೂಕಿನಲ್ಲಿ 13 ಸೇರಿ ಒಟ್ಟು 52 ಪರೀಕ್ಷಾ ಕೇಂದ್ರದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲಾಗುತ್ತಿದೆ. ಎಸ್ಸೆಸ್ಸೆಲ್ಸಿ ಪರೀಕ್ಷೆ-01ಕ್ಕೆ ನೋಂದಣಿ ವಿವರ ನೋಡುವುದಾದರೆ ಗಂಡು ಮಕ್ಕಳ ಸಂಖ್ಯೆ 7070, ಹೆಣ್ಣು ಮಕ್ಕಳ ಸಂಖ್ಯೆ 7244 ಸೇರಿ ಒಟ್ಟು 14,314 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲಿದ್ದಾರೆ. ಅದರಲ್ಲಿ ಮೊದಲ(ಪ್ರಥಮ) ಬಾರಿ ಪರೀಕ್ಷೆ ಬರೆಯುವವರ ಸಂಖ್ಯೆ 13,418, ಪುನರಾವರ್ತಿತ ಅಭ್ಯರ್ಥಿಗಳು 896 ಮಂದಿ ಪರೀಕ್ಷೆಗೆ ಹಾಜರಾಗಲಿದ್ದಾರೆ. ಪರೀಕ್ಷೆಗಳು ಪಾರದರ್ಶಕತೆ ಹಾಗೂ ಸುವ್ಯವಸ್ಥಿತವಾಗಿ ನಡೆಸುವ ನಿಟ್ಟಿನಲ್ಲಿ ಕರ್ನಾಟಕ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯಿಂದ ಮತ್ತು ಜಿಲ್ಲಾಡಳಿತದಿಂದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಜಿಲ್ಲೆಯ ನಾಲ್ಕು ತಾಲ್ಲೂಕಿನ 52 ಪರೀಕ್ಷಾ ಕೇಂದ್ರಗಳ ಕೊಠಡಿಗಳಲ್ಲಿ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಿ, ವೆಬ್ ಕಾಸ್ಟಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ. ಪರೀಕ್ಷಾ ಕೇಂದ್ರ ಸುತ್ತ 200 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

> ಪರೀಕ್ಷೆ ಸುಗಮವಾಗಿ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಒತ್ತಡ ರಹಿತವಾಗಿ ಪರೀಕ್ಷೆಯನ್ನು ಬರೆಯಲು ಪೂರಕವಾದ ವಾತಾವರಣವನ್ನು ಪೋಷಕರು ಕೂಡ ನಿರ್ಮಿಸಬೇಕು.
> ■ ಡಾ. ಅನುರಾಧಾ, ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ



ಪೌಷ್ಟಿಕ ಆಹಾರದಿಂದ ರಾಸುಗಳ ಫಲವತ್ತತೆ

ದಾಬಸ್‌ಪೇಟೆ: ಪೌಷ್ಟಿಕ ಆಹಾರ ನೀಡಿಕೆ ಹಾಗೂ ಕಾಲಕಾಲಕ್ಕೆ ವೈದ್ಯರ ನೆರವು ಮತ್ತು ಚಿಕಿತ್ಸೆ ಪಡೆಯುವುದರಿಂದ ಬರಡು ರಾಸುಗಳು ಗರ್ಭ ಧರಿಸುತ್ತವೆ ಎಂದು ನೆಲಮಂಗಲ ಪಶು ಆಸ್ಪತ್ರೆ ಸಹಾಯಕ ನಿರ್ದೇಶಕ ಡಾ. ಶಿವರಾಂ ತಿಳಿಸಿದರು.

ನೆಲಮಂಗಲ ತಾಲೂಕು, ನರಸೀಪುರದ ಪಶುವೈದ್ಯ ಆಸ್ಪತ್ರೆಯ ಆವರಣದಲ್ಲಿ ಮಂಗಳವಾರ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಸೋಂಪುರ ರೋಟರಿ ಕ್ಲಬ್ ಹಾಗೂ ಬಮುಲ್ ಸಹಯೋಗದಲ್ಲಿ ಏರ್ಪಡಿಸಿದ್ದ ಬರಡು ರಾಸುಗಳ ಉಚಿತ ಪಶು ಚಿಕಿತ್ಸಾ ಶಿಬಿರ ಮತ್ತು ಮಿಶ್ರ ತಳಿ ಕರುಗಳ ಪ್ರದರ್ಶನ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಬಮುಲ್ ಮತ್ತು ಪಶುವೈದ್ಯ ಇಲಾಖೆಯಿಂದ ಶೇ.95ರಷ್ಟು ಹೆಣ್ಣು ಕರು ಹುಟ್ಟುವ ಸಮೆನ್ ನೀಡಲಾಗುತ್ತಿದೆ. ಒಂದು ಸಮೆನ್ ಗೆ 100 ರೂಪಾಯಿ ಇದ್ದು, ರೈತರು ಇದರ ಸದುಪ ಯೋಗ ಪಡಿಸಿಕೊಳ್ಳಬೇಕೆಂದರು. ಪ್ರತಿ ತಿಂಗಳು ಆರು ತಿಂಗಳವರೆಗೆ ನಂತರ ಮೂರು ತಿಂಗಳಿಗೆ ಒಂದು ಬಾರಿ ಜಂತುಹುಳು ಔಷಧ ಹಾಕುವುದರಿಂದ ಕರುಗಳು ಆರೋಗ್ಯವಾಗಿರುತ್ತದೆ. ಜಂತುಹುಳು ಔಷಧ ನಮ್ಮ ಪಶು ಆಸ್ಪತ್ರೆಯಲ್ಲಿ ಉಚಿತವಾಗಿ ದೊರೆಯುತ್ತದೆ ಎಂದು ಹೇಳಿದರು. ಈಗಾಗಲೇ ಪಶುವೈದ್ಯ ಇಲಾಖೆಯಿಂದ ಕಾಲುಬಾಯಿ ರೋಗದ ಲಸಿಕೆ, ಚರ್ಮಗಂಟು ರೋಗದ ಲಸಿಕೆಯನ್ನು ಮನೆ ಬಾಗಿಲಿಗೆ ಬಂದು ಹಾಕುವ ಮೂಲಕ ಜಾನುವಾರುಗಳ ರಕ್ಷಣೆ ಮಾಡಲಾಗುತ್ತಿದೆ. ಆಸ್ಪತ್ರೆ, ಡೈರಿ, ಪಂಚಾಯಿತಿ ಹತ್ತಿರ ಈ ನಂಬರ್ ಹಾಕಲಾಗಿದೆ ಎಂದರು. ಹಲವು ತಿಂಗಳಿಂದ ನರಸೀಪುರದ ಪಶು ಚಿಕಿತ್ಸಾಲಯದಲ್ಲಿ ವೈದರು ಇಲ್ಲದೆ ತೊಂದರೆ ಆಗಿರುವ ಬಗ್ಗೆ ರೈತರು ಸಹಾಯಕ ನಿರ್ದೇಶಕ ಶಿವರಾಂ ಅವರ ಗಮನ ಸೆಳೆದಾಗ, ನಮ್ಮ ಗಮನಕ್ಕೂ ಇದೆ. ನಾವು ಹಲವು ವೈದ್ಯರನ್ನು ಸಂಪರ್ಕ ಮಾಡಲು ಮುಂದಾಗಿದ್ದೇವೆಂದರು. ನಮ್ಮ ರೋಟರಿ ಸಂಸ್ಥೆಯಿಂದ ಸಾಧ್ಯವಾದಷ್ಟು ಈ ರೀತಿಯ ಕಾರ್ಯಕ್ರಮ ಆಯೋಜನೆ ಮಾಡುತ್ತಾ ಬಂದಿದ್ದೇವೆ. ಉಚಿತವಾಗಿ ಔಷಽ ಹಾಗೂ ಚಿಕಿತ್ಸೆ ಕೊಡಿಸಲು ರೋಟರಿ ಕ್ಲಬ್ ಸದಾ ಮುಂದಿರುತ್ತೆ ಎಂದರು ಸೋಂಪುರ ರೋಟರಿ ಕ್ಲಬ್ ಅಧ್ಯಕ್ಷ ದೇವರಾಜ್ ಪಿ.ಜಿ. ಪಶುವೈದ್ಯ ಇಲಾಖೆಯಿಂದ ಸಿಗುವಂತಹ ಸೌಲಭ್ಯ ರೈತರು ಬಳಸಿಕೊಳ್ಳಬೇಕು ಎಂದರು ಸಮಾಜ ಸೇವಕರಾದ ಜಿ. ಬೈರಣ್ಣ. ಮಿಶ್ರತಳಿ ಕರು ಪ್ರದರ್ಶನ ಏರ್ಪಡಿಸಲಾಗಿತ್ತು. ಪಶು ಪ್ರಸೂತಿ ತಜ್ಞರಿಂದ ಬರಡು ರಾಸು ತಪಾಸಣೆ ನಡೆದು ಸೂಕ್ತ ಚಿಕಿತ್ಸೆ ನೀಡಿದರು. ವೈದ್ಯರಾದ ಡಾ. ಮಸೂದ್ ಖಾನ್ ದುರಾನಿ, ಡಾ. ಅರುಣ್ ಕುಮಾರ್, ಡಾ. ಬಾಲ ಸುಬ್ರಹ್ಮಣ್ಯ, ಡಾ. ನಯನ ಕುಮಾರ್, ಬಮುಲ್ ವೈದ್ಯರಾದ ಡಾ.ಸಾಗರ್, ಸಿಬ್ಬಂದಿ ಬಸವರಾಜು, ಮಲ್ಲೇಶ್, ಹರೀಶ್, ಅಶೋಕ್, ಬಸವರಾಜು, ರಮೇಶ್, ವೀಣಾ, ರೇಖಾ, ಗ್ರಾಪಂ ಮಾಜಿ ಅಧ್ಯಕ್ಷ ಜಿ.ನಾಗರಾಜು, ನರಸೀಪುರ ಡೇರಿ ಅಧ್ಯಕ್ಷ ಚಂದ್ರಹಾಸಗೌಡ, ಸೋಂಪುರ ರೋಟರಿ ಕಾರ್ಯದರ್ಶಿ, ಯುವರಾಜ್ ಇತರರಿದ್ದರು.



ಗ್ರಾಮೀಣ ಕೆರೆಗಳಿಗೆ ಮೀನುಮರಿ ಬಿಡುವ ಕಾರ್ಯಕ್ರಮ
ಮತ್ಸ್ಯ ಸಂಜೀವಿನಿ ಅಭಿವೃದ್ಧಿಗೆ ಸಹಕಾರಿ

ಹೊಳೆನರಸೀಪುರ: ಸರ್ಕಾರ ಗ್ರಾಮೀಣ ಜನರ ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದು, ಮತ್ಸ್ಯ ಸಂಜೀವಿನಿ ಯೋಜನೆಯು ಅದರಲ್ಲಿ ಪ್ರಮುಖವಾಗಿದೆ ಎಂದು ತಾಪಂ ಯೋಜನೆ ಅಧಿಕಾರಿ ಗೋಪಾಲ್ ಪಿ.ಆರ್ ಹೇಳಿದರು.

ತಾಲೂಕಿನ ಸಂಕನಹಳ್ಳಿ, ಬಂಡಿ ಶೆಟ್ಟಿಹಳ್ಳಿ, ಬಿದರಕ್ಕ ಮತ್ತು ಬೇಡಿಗನಹಳ್ಳಿ ಗ್ರಾಮಗಳ ಕೆರೆಗಳಲ್ಲಿ ಸ್ವಸಹಾಯ ಗುಂಪುಗಳಿಗೆ ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲಿಕರಣ ಮತ್ತು ಸ್ವ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಉದ್ದೇಶದಿಂದ ಸರ್ಕಾರ ಜಾರಿಗೆ ತಂದಿರುವ ಮತ್ಸ್ಯ ಸಂಜೀವಿನಿ ಯೋಜನೆಯಲ್ಲಿ ಮೀನು ಮರಿ ಬಿಡುವ ಕಾರ್ಯಕ್ರಮ ನಡೆಯಿತು. ಈ ವೇಳೆ ಮಾತನಾಡಿದ ತಾಪಂ ಯೋಜನೆ ಅಧಿಕಾರಿ ಗೋಪಾಲ್ ಪಿ.ಆರ್, ಕೆರೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಮೀನುಗಾರಿಕೆ ನಡೆಸಿದರೆ ಗ್ರಾಮೀಣ ಮಹಿಳೆಯರಿಗೆ ಉತ್ತಮ ಆದಾಯ ದೊರೆಯಲಿದೆ ಸರ್ಕಾರ ಗ್ರಾಮೀಣ ಜನರ ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದು, ಮತ್ಸ್ಯ ಸಂಜೀವಿನಿ ಯೋಜನೆ ಅದರಲ್ಲಿ ಪ್ರಮುಖವಾಗಿದೆಂದರು. ನರೇಗಾ ವಿಭಾಗದ ಸಹಾಯಕ ನಿರ್ದೇಶಕ ಶಿವಕುಮಾರ್ ಬಿ.ಸಿ ಅವರು ಮಾತನಾಡಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆರೆಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಕೆರೆಗಳ ಅಭಿವೃದ್ಧಿಯ ಜೊತೆಗೆ ಮೀನುಗಾರಿಕೆ ಚಟುವಟಿಕೆಯನ್ನು ಉತ್ತೇಜಿಸುವುದರಿಂದ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಲಿವೆ ಎಂದು ಹೇಳಿದರು. ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕಿ ಸುಮಾ ಅವರು ಮಾತನಾಡಿ, ಇಲಾಖೆಯಿಂದ ಸ್ವಸಹಾಯ ಗುಂಪುಗಳಿಗೆ ಅಗತ್ಯವಾದ ತರಬೇತಿ ಹಾಗೂ ಮಾರ್ಗದರ್ಶನ ನೀಡಲಾಗುತ್ತದೆ ಎಂದು ತಿಳಿಸಿದರು. ರಾಷ್ಟ್ರೀಯ ಗ್ರಾಮೀಣ ಜೀವನೋ ಪಾಯ ಮಿಷನ್ (ಎನ್‌ಆರ್‌ಎಲ್‌ಎಂ) ವಿಭಾಗದ ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕರಾದ ನವೀನ್ ಮಾತನಾಡಿದರು. ನಿಸರ್ಗ ತಾಲೂಕು ವ್ಯವಸ್ಥಾಪಕರು, ಒಕ್ಕೂಟ, ಗ್ರಾಮ ಪಂಚಾಯಿತಿ ಸಿಬ್ಬಂದಿ, ಸ್ವಸಹಾಯ ಗುಂಪಿನ ಸದಸ್ಯರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.



ರಾಜ್ಯ ಖಾಸಗಿ ಹಿಂದು ದೇಗುಲ ಅರ್ಚಕರ ಒಕ್ಕೂಟದಿಂದ ಪಂಚಾಂಗ ವಿತರಣೆ
ಯುಗಾದಿ ಹಿಂದುಗಳ ಹೊಸ ವರ್ಷ

ಚನ್ನರಾಯಪಟ್ಟಣ: ಯುಗಾದಿ ಹಬ್ಬದಿಂದ ಹಿಂದುಗಳ ಹೊಸ ವರ್ಷ ಪ್ರಾರಂಭವಾಗಲಿದೆ ಇದನ್ನು ಆಚರಣೆ ಮಾಡುವ ಬದಲಾಗಿ ಯುವ ಸಮುದಾಯ ಮೋಜು ಮಸ್ತಿಗಾಗಿ ಡಿಸೆಂಬರ್ ಅಂತ್ಯದ ದಿವಸ ತಡರಾತ್ರಿ ವರೆಗೆ ಸಂಭ್ರಮ ಆಚರಣೆ ಮಾಡುತ್ತಿರುವುದು ವಿಷಾದನೀಯ ಎಂದು ಧಾರ್ಮಿಕ ದತ್ತಿ ಇಲಾಖೆ ಅಧೀನದ ಹಿಂದೂ ದೇವಾಲಯ ಅರ್ಚಕ ಸಂಘ ತಾಲೂಕು ಅಧ್ಯಕ್ಷ ವಿ.ಎನ್.ಶ್ರೀಧರಮೂರ್ತಿ ಎಂದು ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಶ್ರೀರಾವುತರ ಕೊಳದ ಅಂಜನೇಯ ಸ್ವಾಮಿ ದೇವಾಲಯದ ಸಮೀಪದಲ್ಲಿ ಈಶವಾಸ್ಯಂನಲ್ಲಿ ರಾಜ್ಯ ಖಾಸಗಿ ಹಿಂದೂ ದೇವಾಲಯ ಅರ್ಚಕರ ಒಕ್ಕೂಟದಿಂದ ಹಮ್ಮಿಕೊಂಡಿದ್ದ ಉಚಿತ ಪಂಚಾಗ ವಿತರಣೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿ, ಸನಾತನ ಧರ್ಮ ಆಚರಣೆಗಳು ಪ್ರಕೃತಿಗೆ ಪೂರಕವಾಗಿವೆ, ನವವಸಂತಕ್ಕೆ ಮನುಷ್ಯ ಮಾತ್ರ ಸಿದ್ದನಾಗುವುದಿಲ್ಲ ಇಡೀ ಪ್ರಕೃತಿಯೇ ಸಿದ್ದವಾಗಿರುತ್ತದೆ ಇದನ್ನು ಮನಗಾಣ ಬೇಕು ಎಂದು ಹೇಳಿದರು. ಖಾಸಗಿ ಹಿಂದೂ ದೇವಾಲಯಗಳ ಅರ್ಚಕರ ಒಕ್ಕೂಟದ ರಾಜ್ಯಾಧ್ಯಕ್ಷ ವಿಶ್ವನಾಥ್ ದೀಕ್ಷಿತ್ ಮಾತನಾಡಿ, ಹಿಂದುಗಳ ಆಚರಣೆಗಳನ್ನು ತಿಳಿಯಲು ಪಂಚಾಗ ಸಾಕಷ್ಟು ಉಪಯೋಗಾಗುತ್ತಿರುವುದರಿಂದ ಒಕ್ಕೂಟದ ವತಿಯಿಂದ ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ, ಯುಗಾದಿ ಹಬ್ಬದ ದಿವಸ ಪಂಚಾಗಕ್ಕೆ ಪೂಜೆ ಮಾಡುವುದು ನಮ್ಮಗಳ ಸಂಪ್ರದಾಯವಾಗಿದೆ ಎಂದರು.

ಗ್ರಾಯತ್ರಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸಿ.ಎನ್.ನಾಗರಾಜು, ಒಕ್ಕೂಟದ ಪದಾಧಿಕಾರಿಗಳಾದ ಶ್ರೀನಿವಾಸ್, ಯಶ್ವಂತ್ ಕುಮಾರ್, ಡಾ.ದಿನೇಶ್, ಲೋಕೇಶ್ ಭಟ್, ಎಂ.ಎನ್.ವೆಂಕಟೇಶ್ ಮೂರ್ತಿ, ಸುದೀಂದ್ರ, ನಾಗರಾಜು, ವಿಜಯಕುಮಾರ್, ಮಂಜುನಾಥ್, ದತ್ತಾತ್ರೇಯ, ಮಹೇಶ್ ದತ್ತ, ಕೆ.ಶಾಮಸುಂದರ್, ಮೊದಲಾದವರು ಉಪಸ್ಥಿತರಿದ್ದರು.



ಕಿರುಸುದ್ದಿ

ಮೆಡಿಕಲ್ ಲಾಜಿಸ್ಟಿಕ್ಸ್ ಪೈಲಟ್ ಯಶಸ್ವಿ



• **ಬೆಂಗಳೂರು:** ನಾರಾಯಣ ಹೆಲ್ತ್ ಮತ್ತು ಬೆಂಗಳೂರು ಮೂಲದ ವೈಮಾನಿಕ ಲಾಜಿಸ್ಟಿಕ್ಸ್ ಕಂಪನಿ ಏರ್ ಬೌಂಡ್ ಸಂಸ್ಥೆಗಳು, ಡ್ರೋನ್ ಮೂಲಕ ರೋಗನಿರ್ಣಯ ಮಾದರಿಯನ್ನು ಯಶಸ್ವಿಯಾಗಿ ಪ್ರಯೋಗಾಲಯಕ್ಕೆ ಕೊಂಡೊಯ್ಯುವ ತಮ್ಮ ಮಹತ್ವದ ಮೆಡಿಕಲ್ ಲಾಜಿಸ್ಟಿಕ್ಸ್ ಪೈಲಟ್ ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿವೆ. ಚಂದಾಪುರದಲ್ಲಿರುವ ನಾರಾಯಣ ಹೆಲ್ತ್ ಕ್ಲಿನಿಕ್ ನಿಂದ ಎಲೆಕ್ಟ್ರಾನಿಕ್ ಸಿಟಿಯ ನಾರಾಯಣ ಹೆಲ್ತ್ ಸಿಟಿಯಲ್ಲಿರುವ ಕೇಂದ್ರ ಪ್ರಯೋಗಾಲಯಕ್ಕೆ ವೈಮಾನಿಕ ಸಂಪರ್ಕ ಕಲ್ಪಿಸುವ ಮೂಲಕ, ನಗರ ಪ್ರದೇಶದ ಆರೋಗ್ಯ ಸೇವಾ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ಉಂಟುಮಾಡುವ ಉದ್ದೇಶವನ್ನು ಈ ಯೋಜನೆಯು ಹೊಂದಿದೆ. ಜನವರಿಯಲ್ಲಿ ಯೋಜನೆ ಕೈಗೊಳ್ಳಲಾಗಿದ್ದು, ಈ 4 ಕಿ.ಮೀ ದೂರದ ವೈಮಾನಿಕ ಮಾರ್ಗವನ್ನು ಕೇವಲ 10 ನಿಮಿಷಗಳಲ್ಲಿ ಕ್ರಮಿಸಬಹುದಾಗಿದೆ. ಬೆಂಗಳೂರಿನ ಸಂಚಾರ ದಟ್ಟಣೆಯ ರಸ್ತೆ ಸಾರಿಗೆಗೆ ಹೋಲಿಸಿದರೆ ಅತ್ಯಂತ ವೇಗವಾಗಿ ತಲುಪಬಹುದು. ಪೈಲಟ್ ಯೋಜನೆಯ ಅವಧಿಯಲ್ಲಿ, ಸತತ 54 ಕಾರ್ಯಾಚರಣೆಯ ದಿನಗಳಲ್ಲಿ 700ಕ್ಕೂ ಹೆಚ್ಚು ಡ್ರೋನ್ ಹಾರಾಟವನ್ನು ಮಾಡಲಾಗಿದೆ. ಪ್ರತಿ ಹಾರಾಟದಲ್ಲಿ 40 ರೋಗನಿರ್ಣಯ ಮಾದರಿಯನ್ನು ಸುರಕ್ಷಿತವಾಗಿ ಕೊಂಡೊಯ್ಯಲಾಗಿದೆ. ಈ ಕುರಿತು ನಾರಾಯಣ ಹೆಲ್ತ್‌ನ ಸಂಸ್ಥಾಪಕರು ಮತ್ತು ಅಧ್ಯಕ್ಷ ಡಾ. ದೇವಿ ಪ್ರಸಾದ್ ಶೆಟ್ಟಿ ಮಾತನಾಡಿ, ತಾಂತ್ರಿಕ ವ್ಯವಸ್ಥೆಯ ಬಳಕೆಯ ಪರವಾಗಿರುವ ನಾವು, ಕಳೆದ 25 ವರ್ಷದಲ್ಲಿ ಎಲ್ಲರಿಗೂ ಸುರಕ್ಷಿತ, ಕೈಗೆಟುಕುವ ಬೆಲೆಯ ಮತ್ತು ಸುಲಭವಾಗಿ ಲಭ್ಯವಿರುವ ವೈದ್ಯಕೀಯ ಸೇವೆ ಒದಗಿಸಲು, ಪ್ರಬಲವಾದ ಡಿಜಿಟಲ್ ವ್ಯವಸ್ಥೆ ನಿರ್ಮಿಸಲು ಹೂಡಿಕೆ ಮಾಡಿದ್ದೇವೆಂದರು.

ನಾರಾಯಣ ಹೆಲ್ತ್ ಸಿಟಿ ಪ್ರಾಯೋಗಿಕ ಕಾರ್ಯಾಚರಣೆ

ತರಬೇತಿ ಶಿಬಿರ

• **ತುಮಕೂರು:** ಎಬಿವಿಪಿ ತುಮಕೂರಿಂದ 2026ನೇ ಸಾಲಿನ ಉಚಿತ ಸಿಇಟಿ, ನೀಟ್ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ. 2' ಮಾ. 21 ರಿಂದ ಪ್ರಾರಂಭವಾಗಿ ಏಪ್ರಿಲ್ 21 ರವರೆಗೆ ಜರುಗಲಿದೆ. ಈ ಶಿಬಿರದ ತರಗತಿಗಳು ಅನನ್ಯ ಪಿಯು ಕಾಲೇಜಿನ ಕ್ಯಾಂಪಸ್ ನಲ್ಲಿ ನಡೆಯಲಿವೆ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ. ನೋಂದಣಿಗಾಗಿ ಗೋವಿಂದರಾಜು ಮೊ. 7019605011, ಪ್ರವೀಣ್ ಕುಮಾರ್‌ಮೊ. 81974 61680 ಸಂಪರ್ಕಿಸಬಹುದಾಗಿದೆ.

ಬಿಸಿಲಿನ ಬೇಗೆಗೆ ತಂಪಾದ ಭೂಮಿ | ಗಾಳಿ, ಗುಡುಗುಸಹಿತ ಮಳೆಗೆ ಆತಂಕಗೊಂಡ ಜನ

ಗ್ರಾಮಾಂತರ ಜಿಲ್ಲೆಯಲ್ಲಿ ಮೊದಲ ಮಳೆ

• **ದೊಡ್ಡಬಳ್ಳಾಪುರ:** ಬಿಸಿಲಿನ ತಾಪ ಹೆಚ್ಚಾಗುತ್ತಿದ್ದ ಸಂದರ್ಭದಲ್ಲಿ ದೊಡ್ಡಬಳ್ಳಾಪುರ ನಗರದ ಕೆಲವು ಪ್ರದೇಶದಲ್ಲಿ ಮಂಗಳವಾರ ಸಂಜೆ ವರ್ಷದ ಮೊದಲ ಮಳೆ ಸುರಿಯಿತು.

ಬಂಗಾಳ ಕೊಲ್ಲಿಯಲ್ಲಿ ಚಂಡಮಾರುತ ಹಿನ್ನೆಲೆಯಿಂದು ರಾಜ್ಯದ ಹಲವು ಭಾಗದಲ್ಲಿ ಆಲಿಕಲ್ಲು, ಗುಡುಗು, ಮಿಂಚು ಸಹಿತ ಮಳೆ ಆಗಿದೆ. ಕಳೆದ ಕೆಲವು ದಿನದಿಂದ ವಾತಾವರಣದಲ್ಲಿ ಏರಿಕೆಯಾಗಿದ್ದ ಉಷ್ಣಾಂಶವು ಹದವಾದ ಮಳೆಗೆ ತಂಪಾಯಿತು.

ಮಂಗಳವಾರ ಸಂಜೆ ದಿಢೀರ್ ಸುರಿದ ಮಳೆಯಿಂದ ಜನ ಹರ್ಷಗೊಂಡರು. ಕೆಲವರು ಮಳೆಯಲ್ಲಿ ನೆನೆದರೆ, ಹಲವರು ಮಳೆಯಿಂದ ಮಳೆ ಹನಿಯಿದ ತಪ್ಪಿಸಿಕೊಳ್ಳಲು ಸೂರು ಹುಡುಕಾಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ಬಿದ್ದಿರುವ ಮಳೆಯು ರೈತರಲ್ಲಿ ಹರ್ಷ ತರಿಸಿದೆ. ಮುಂಗಾರು ಪೂರ್ವದ ಮಳೆಯ ಆರ್ಭಟ ತುಸು ಜೋರಾಗಿಯೇ ಇತ್ತು. ಗುಡುಗು, ಮಿಂಚುಗಳ ಜತೆಗೆ ಆರ್ಭಟಿಸಿದ ಸಿಡಿಲುಗಳಿಂದ ಮಕ್ಕಳು ಬೆದರಿದರು.

ಮಳೆಯಲ್ಲಿ ಸಾಲುಗಟ್ಟಿ ನಿಂತ ರಾಗಿ ಮಾರಾಟ ಮಾಡಲು ಬಂದ ಟ್ರ್ಯಾಕ್ಟರ್‌ಗಳು: ಸಂಜೆ ಸುಮಾರು 4:30ರಲ್ಲಿ ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಪ್ರಾರಂಭವಾದ ಮಳೆಯು ಸತತವಾಗಿ 7ಗಂಟೆಯವರೆಗೆ ಬಿದ್ದಿದೆ. ಜನ ಜೀವನ ಅಸ್ತವ್ಯಸ್ತಗೊಂಡಿತು.

ಅದೇರೀತಿ ಬೆಂಬಲ ಬೆಲೆ ಯೋಜನೆಯಲ್ಲಿ ರಾಗಿ ಮಾರಾಟ ಮಾಡಲು ದೊಡ್ಡಬಳ್ಳಾಪುರದ ಎಪಿಎಂಸಿ ಮಾರುಕಟ್ಟೆಯ ರೈತ ಭವನಕ್ಕೆ ಬಂದಿದ್ದ ರೈತರು ಮಳೆಯಲ್ಲಿ ನೆನೆಯುವ ಪರಿಸ್ಥಿತಿ ನಿರ್ಮಾಣ ವಾಗಿತ್ತು.

ಮಳೆಯಲ್ಲಿ ಸಾಲುಗಟ್ಟಿ ನಿಂತ ರಾಗಿ ಮಾರಾಟ ಮಾಡಲು ಬಂದ ಟ್ರ್ಯಾಕ್ಟರ್ ಗಳು. ಅಕಾಲಿಕ ಮಳೆ ಹಿನ್ನೆಲೆ ರಾಗಿ ಚೀಲಗಳ ಮೇಲೆ ಟಾರ್ಪಲ್ ಗಳ ಹೊದಿಕೆ ಮಾಡಿರುವ ರೈತರು. ಮಳೆ ಹಿನ್ನೆಲೆ ರಾಗಿ ಅನ್ ಲೋಡಿಂಗ್ ಕಾರ್ಯ ಸ್ಥಗಿತವಾಗಿತ್ತು. ಸುಮಾರು ಹದಿನೈದಕ್ಕೂ ಹೆಚ್ಚು ಟ್ರ್ಯಾಕ್ಟರ್ ಗಳಲ್ಲಿ ಉಳಿದ ರಾಗಿ ಚೀಲಗಳಿದ್ದವು.





- ರಾಗಿ ಖರೀದಿ ಕೇಂದ್ರದಲ್ಲಿ ಸಾಲು ನಿಂತ ಟ್ರ್ಯಾಕ್ಟರ್‌ಗಳು
- ಅಕಾಲಿಕ ಮಳೆ ಹಿನ್ನೆಲೆ ರಾಗಿ ಚೀಲಗಳ ಮೇಲೆ ಟಾರ್ಪಲ್ ಗಳ ಹೊದಿಕೆ
- ಮಳೆ ಹಿನ್ನೆಲೆ ರಾಗಿ ಅನ್ ಲೋಡಿಂಗ್ ಕಾರ್ಯ ಸ್ಥಗಿತ
- ಸುಮಾರು ಹದಿನೈದಕ್ಕೂ ಹೆಚ್ಚು ಟ್ರ್ಯಾಕ್ಟರ್ ಗಳಲ್ಲೇ ಉಳಿದ ರಾಗಿ ಚೀಲ



ಮುಂಗಾರು ಪೂರ್ವ ಮಳೆ

ವರ್ಷದ ಮೊದಲ ಮಳೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗುಡುಗು ಸಹಿತ ಮಳೆ ಬಿದ್ದಿದೆ. ಇದರಿಂದಾಗಿ ಮೊದಲ ಮುಂಗಾರು ಪೂರ್ವ ಮಳೆಯಿಂದಾಗಿ ರೈತರಲ್ಲಿ ಹರ್ಷ ಮೂಡಿದೆ. ಅಲ್ಲದೆ, ಈಗ ಬಿತ್ತಿರುವ ಬೆಳೆಗೂ ಕೂಡ ಸಕಾಲಿಕವಾಗಿ ಸುರಿದ ಮಳೆಯಿಂದಾಗಿ ಜೀವ ಬಂದಂತಾಗಿದೆ.

ವಾಹನ ಸವಾರ ಪರದಾಟ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗುಡುಗು ಸಹಿತ ಮಳೆ ಬಿದ್ದಿದೆ. ಬಹುತೇಕ ರಸ್ತೆಯಲ್ಲಿ ನೀರು ಹರಿದಿದ್ದರಿಂದಾಗಿ ವಾಹನ ಸವಾರರು ಮನೆ ಸೇರಲು ಪರದಾಡಬೇಕಾಯಿತು. ಅಲ್ಲದೆ, ಕೆಲವು ಕಡೆ ನೀರು ನಿಂತ ಪರಿಣಾಮ ಜನಜೀವನ ಕೆಲಕಾಲ ಅಸ್ತವ್ಯಸ್ತಗೊಂಡಿತ್ತು.

ಎಸ್ಸೆಸ್ಸೆಲ್ಸಿ ಪರೀಕ್ಷಾ ಸಾಮಗ್ರಿ ವಿತರಣೆ

• **ರಾಮನಗರ :** 2025-26ನೇ ಸಾಲಿಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳಿಗೆ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಜಿ.ಎನ್.ನಟರಾಜ್ ಗಾಣಕಲ್‌ರವರು ಪರೀಕ್ಷಾ ಸಾಮಗ್ರಿಗಳನ್ನು ವಿತರಿಸಿದರು.

ಬಿಡದಿ ಪಟ್ಟಣದ ಶ್ರೀ ಬಸವೇಶ್ವರಸ್ವಾಮಿ ಗ್ರಾಮಾಂತರ ಪ್ರೌಢಶಾಲೆ ಆವರಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ 1500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪರೀಕ್ಷಾ ಸಾಮಗ್ರಿಗಳನ್ನು ನೀಡಿದ ನಟರಾಜ್‌ರವರು ಎಸ್ಸೆಸ್ಸೆಲ್ಸಿ ಪರೀಕ್ಷೆ ನಮಗೆ ಭಯವಿಲ್ಲ, ಅದು ಯುಗಾದಿ ಹಬ್ಬ, ಮೊಬೈಲ್ ಬಿಡಿ, ಪುಸ್ತಕ ಹಿಡಿ ಎಂಬ ಘೋಷಣೆಗಳನ್ನು ವಿದ್ಯಾರ್ಥಿಗಳೊಂದಿಗೆ ಕೂಗಿ ಅವರಲ್ಲಿ ಆತ್ಮಸ್ಥೈರ್ಯ ತುಂಬಿದರು. ಗಾಣಕಲ್ ನಟರಾಜ್ ಮಾತನಾಡಿ, ಪರೀಕ್ಷೆಯನ್ನು ಯುಗಾದಿ ಹಬ್ಬದಂತೆ ಪರಿಗಣಿಸಬೇಕೆಂದು ಮಕ್ಕಳಲ್ಲಿ ನೈತಿಕ ಸ್ಥೈರ್ಯ ತುಂಬುವ ಕೆಲಸ ಮಾಡಿದ್ದೇವೆ ಎಂದ ಅವರು ಬಿಡದಿ ಹೋಬಳಿಯಾದ್ಯಂತ ಎಲ್ಲಾ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಾಮಾಗ್ರಿ ವಿತರಿಸಲಾಗುತ್ತಿದೆ ಎಂದು ತಿಳಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಪಿ. ಸೋಮಲಿಂಗಯ್ಯ ಮಾತನಾಡಿ, ಬಿಡದಿ ಹೋಬಳಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುತ್ತಿದ್ದಾರೆ. ರಾಮನಗರ ತಾಲೂಕಿಗೆ ಉತ್ತಮ ಫಲಿತಾಂಶ ಬರುವ ವಿಶ್ವಾಸವಿದೆ. ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬಿ ಶುಭಾಶಯ ಕೋರುವ ನಿಟ್ಟಿನಲ್ಲಿ ಗಾಣಕಲ್ ನಟರಾಜ್‌ರವರ ಪರೀಕ್ಷಾ ಸಾಮಗ್ರಿ ವಿತರಿಸಿದ್ದಾರೆ. ಅವರಿಗೆ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು. ಶ್ರೀಬಸವೇಶ್ವರಸ್ವಾಮಿ ಗ್ರಾಮಾಂತರ ಪ್ರೌಢಶಾಲೆ ಮುಖ್ಯಶಿಕ್ಷಕ ಗಿರೀಶ್, ಪ್ರಾಂಶುಪಾಲ ಜಾನ್ಸನ್, ಸಿಆರ್‌ಪಿ ಚಿಕ್ಕವೀರಯ್ಯ, ಮುಖಂಡ ನವೀನ್ ಸೇರಿಹಲವರಿದ್ದರು.



ಕುವೆಂಪು ಸಾಂಸ್ಕೃತಿಕ ವೇದಿಕೆಯಿಂದ ರಾಜ್ಯಮಟ್ಟದ ಕವಿ ಸಮ್ಮೇಳನ

ಕನ್ನಡ ಕಟ್ಟುವ ಚಟುವಟಿಕೆ ಬೇಕು

• **ಬೆಂಗಳೂರು:** ಕನ್ನಡ ಕಟ್ಟುವ ಕ್ರಿಯೆಯಲ್ಲಿ ಸಾಹಿತ್ಯ ಚಟುವಟಿಕೆಗಳು ನಿರಂತರವಾಗಿ ನಡೆಯಬೇಕು. ಈ ನಿಟ್ಟಿನಲ್ಲಿ ಕುವೆಂಪು ಸಾಂಸ್ಕೃತಿಕ ವೇದಿಕೆ ರಾಜ್ಯ ಮಟ್ಟದ ಕವಿ ಸಮ್ಮೇಳನ ಆಯೋಜಿಸಿರುವುದು ಸ್ತುತ್ಯಾರ್ಹ ಎಂದು ಸಾಹಿತಿ ಡಾ. ಆರ್. ಕೆ .ನಲ್ಲೂರ್ ಪ್ರಸಾದ್ ಹೇಳಿದರು.

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಒಂದು ದಿನದ ರಾಜ್ಯ ಮಟ್ಟದ ಕವಿ ಸಮ್ಮೇಳನ ಉದ್ಘಾಟಿಸಿ ಡಾ .ಕೆ ಆರ್. ನಲ್ಲೂರು ಪ್ರಸಾದ್ ಮಾತನಾಡಿದರು. ನಿರಂತರ ಸಾಹಿತ್ಯ ಚಟು ವಟಿಕೆಗಳು ಕನ್ನಡದ ಅಭಿವೃದ್ಧಿಗೆ ಪೂರಕವಾಗಿರುತ್ತವೆ. ಕನ್ನಡ ನೆಲ, ಜಲದ ಬಗೆಗೆ ಪ್ರತಿಯೊಬ್ಬರಿಗೂ ಅಭಿಮಾನ ಇರಬೇಕು. ಜಾಗೃತ ಭಾವ ಕನ್ನಡ ಸಂಸ್ಕೃತಿಯ ನ್ನು ಉಳಿಸುತ್ತದೆ ಎಂದರು. ಕುವೆಂಪು ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷ ಜೀವನ್ಮುಖಿ ಸುರೇಶ್ ಮಾತನಾಡಿ, ಕವಿ ಸಮ್ಮೇಳನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಉದ ಯೋನ್ಮುಖ ಕವಿಗಳನ್ನು ಪ್ರೋತ್ಸಾಹಿಸಲಾಗುತ್ತಿದೆ. ಇದು ಆಯಾ ಭಾಗದ ಕವಿಗಳ ಪರಿಸರ, ತಲ್ಲಣಗಳು, ಆತಂಕವನ್ನು, ಹೊಸ ಹೊಳಹು ವನ್ನು ವೈವಿಧ್ಯಮಯ ಭಾಷಾ ಸೊಗಡಿನಲ್ಲಿ ಅಭಿವ್ಯಕ್ತಿಸಲು ಅವಕಾಶ ಮಾಡುತ್ತಿದೆಂದು ತಿಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಸಮ್ಮೇಳನಕ್ಕೆ ಕಾರ್ಯಕ್ರಮಗಳಿಗೆ ಬೆನ್ನೆಲುಬಾಗಿದೆ. ರಾಜ್ಯದಾದ್ಯಂತ ಕನ್ನಡ ಸಾಹಿತ್ಯ ಚಟುವಟಿಕೆ ಗಳು ನಡೆಯಬೇಕು ಎಂದರು.

ಸಮ್ಮೇಳನಾಧ್ಯಕ್ಷತೆಯನ್ನು ಡಾ ನಾಗವೀಣಾ ಮಂಜುನಾಥ್ ವಹಿಸಿದ್ದರು. ವೇದಿಕೆಯಲ್ಲಿ ಡಾ ಮಣಿಶ್ರೀ, ಚಿತ್ರ ಕಲಾವಿದೆ ನಾಗರತ್ನ ಕಲಾಧಾರೆ ಹಾಗೂ ಕವಿ ಸತೀಶ್ ಜವರೇಗೌಡ ಉಪಸ್ಥಿತರಿದ್ದರು.



ಷರತ್ತು ಉಲ್ಲಂಘಿಸಿದ ಮಾರಾಟ ಪ್ರಕ್ರಿಯೆ ರದ್ದು

• **ಬೆಂಗಳೂರು:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ಪಿಟಿಸಿಎಲ್) ಕಾಯ್ದೆಯಲ್ಲಿ ಎಸ್ಸಿ-ಎಸ್ಟಿ ಸಮುದಾಯದವರಿಗೆ ಮಂಜೂರಾದ ಭೂಮಿಯ ಮೂಲ ಮಂಜೂರಾತಿ ಷರತ್ತು ಉಲ್ಲಂಘಿಸಿ ಮಾಡಿದ ಮೊದಲ ಮಾರಾಟವೇ ಅಸಿಂಧುಗೊಂಡ ಬಳಿಕ ನಡೆಯುವ ಎಲ್ಲ ಮಾರಾಟ ಪ್ರಕ್ರಿಯೆಗಳೂ ರದ್ದುಗೊಳ್ಳುತ್ತವೆ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ. ಎಸ್ಸಿ-ಎಸ್ಟಿ ಸಮುದಾಯದವರಿಗೆ ಮಂಜೂರಾಗಿದ್ದ ಜಮೀನನ್ನು ಹಲವು ಸುತ್ತಿನ ಮಾರಾಟಗಳ ಬಳಿಕ ಖರೀದಿಸಿದ್ದ ಎಸ್.ಕೆ. ಜಯರಾಮ್ ಎಂಬವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಆರ್.ದೇವದಾಸ್ ಅವರ ಏಕಸದಸ್ಯ ಪೀಠ ವಜಾಗೊಳಿಸಿದೆ. ಯಾರೂ ಸಹ ತಮಗಿಲ್ಲದ ಹಕ್ಕು ಅಥವಾ ಮಾಲೀಕತ್ವವನ್ನು ಮತ್ತೊಬ್ಬರಿಗೆ ವರ್ಗಾಯಿಸಲು ಸಾಧ್ಯವಿಲ್ಲ ಎಂಬ ಕಾನೂನು ತತ್ವವನ್ನು ಉಲ್ಲೇಖಿಸಿರುವ ಪೀಠವು ವಿವಾದಿತ ಜಮೀನಿನ 1956ರ ಮಾರಾಟ ಪ್ರಕ್ರಿಯೆಯ ಅನಧಿಕೃತ ಎಂದು ಘೋಷಿಸಲಾಗಿದೆ. ಇದರ ಆಧಾರದಲ್ಲಿ, ನಂತರ ನಡೆದ ಎಲ್ಲ ಮಾರಾಟ ಪ್ರಕ್ರಿಯೆಗಳೂ ಶೂನ್ಯವಾಗಲಿದೆ.

ನಾಲ್ವರು ಆರೋಪಿಗಳು ಕೋರ್ಟಿಗೆ ಹಾಜರು

• **ರಾಮನಗರ:** ಬಿಡದಿ ಬಳಿಯ ವಂಡರ್ ಲಾ ರೆಸಾರ್ಟ್‌ನಲ್ಲಿ ಬೀಡು ಬಿಟ್ಟಿದ್ದ ಒಡಿಶಾ ಕಾಂಗ್ರೆಸ್ ಶಾಸಕರಿಗೆ ಲಂಚದ ಆಮಿಷವೊಡ್ಡಿದ ಆರೋಪದ ಮೇಲೆ ಬಂಧಿಸಲಾದ ನಾಲ್ವರು ಅರೋಪಿಗಳನ್ನು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದ ಎದುರು ಹಾಜರುಪಡಿಸಲಾಯಿತು.



ಒಡಿಶಾ ಕಾಂಗ್ರೆಸ್ ಶಾಸಕರಿಗೆ ಲಂಚದ ಆಮಿಷ ಆರೋಪ

ನ್ಯಾಯಾಲಯ ನಾಲ್ವರೂ ಆರೋಪಿಗಳನ್ನು ಎರಡು ದಿನ ಪೊಲೀಸರ ವಶಕ್ಕೆ ನೀಡಿದೆ. ಆರೋಪಿಗಳಾದ ಒಡಿಶಾದ ಬೀರೇಂದ್ರ ಪ್ರಸಾದ್, ಅಜಿತ್ ಕುಮಾರ್ ಸಾಹು, ಸಿಮಾಚಲ್ ಮೊಕುದ್ ಹಾಗೂ ಬೆಂಗಳೂರಿನ ಸುರೇಶ್ ಅವರನ್ನು ನ್ಯಾಯಾಧೀಶ ಎಂ.ಎಚ್. ಅಣ್ಣಯ್ಯನವರ ವಿಚಾರಣೆಗಾಗಿ ಎರಡು ದಿನ ಪೊಲೀಸರ ವಶಕ್ಕೆ ಒಪ್ಪಿಸಿ ಆದೇಶಿಸಿದರು. ಪ್ರಾಸಿಕ್ಯೂಷನ್ ಪರವಾದ ಮಂಡಿಸಿದ ವಾಸವಿ ಅಂಗಡಿ, ಬಂಧಿತರ ಹಿನ್ನೆಲೆ, ರಾಜ್ಯಕ್ಕೆ ಬಂದಿದ್ದ ಉದ್ದೇಶ, ಮೊಬೈಲ್ ಕರೆಗಳ ವಿವರ ಪರಿಶೀಲನೆ ಸೇರಿ ಹಲವು ಆಯಾಮದಲ್ಲಿ ತನಿಖೆ ನಡೆಸಲು ಐದು ದಿನ ಪೊಲೀಸರ ವಶಕ್ಕೆ ನೀಡಬೇಕು ಎಂದು ಮನವಿ ಮಾಡಿದರು.

ಇದು ರಾಜಕೀಯ ಪ್ರೇರಿತ ಪ್ರಕರಣ, ಕಂಪನಿ ಕೆಲಸಕ್ಕಾಗಿ ಹೋಟೆಲ್‌ನಲ್ಲಿ ತಂಗಿದ್ದವರ ಮೇಲೆ ಲಂಚದ ಆಮಿಷ ಆರೋಪ ಹೊರಿಸಿ ಬಂಧಿಸಲಾಗಿದೆ. ಬಂಧಿತಸುರೇಶ್ ಒಡಿಶಾದಉತ್ತುಕಂಪನಿಯಲ್ಲಿಸಿಇಒ ಆಗಿದ್ದಾರೆ. ಕಂಪನಿಗಾಗಿ ಜಾಗ ಖರೀದಿಸಲು ಅವರು ಮೂವರು ಸ್ನೇಹಿತರ ಜೊತೆ ಬಂದಿದ್ದರು ಎಂದು ವಕೀಲರಾದ ರಮೇಶಪ್ಪ ಎನ್.ಜಿ ಮತ್ತು ಕಾಶಿನಾಥ್ ಜಿ.ಡಿ.. ಆರೋಪಿಗಳ ಪರ ವಾದಮಂಡಿಸಿದರು. ರೆಸಾರ್ಟ್‌ನಲ್ಲಿ ಉಪಾಹಾರ ವೇಳೆ ಎದುರಾದ ಶಾಸಕರನ್ನು ಮಾತನಾಡಿಸಿದ್ದನ್ನು ನೆಪವಾಗಿಸಿ, ಲಂಚದ ಆಮಿಷವೊಡ್ಡಿದ್ದಾರೆಂದು ಕತೆ ಕಟ್ಟಿ ಬಂಧಿಸಿದ್ದಾರೆ. ಅವರ ವಿರುದ್ಧ ಮಾಡಿರುವ ಆರೋಪದಲ್ಲಿ ಹುರುಳಿಲ್ಲ, ಹಾಗಾಗಿ, ನಾಲ್ವರಿಗೂ ಜಾಮೀನು ನೀಡಬೇಕು ಎಂದು ಕೋರಿದರು.

ಎರಡೂ ಕಡೆಯವರ ವಾದ ಆಲಿಸಿದ ನ್ಯಾಯಾಧೀಶರು ಪ್ರಾಸಿಕ್ಯೂಷನ್ ಪರ ವಕೀಲರ ವಾದವನ್ನು ಮನ್ನಿಸಿ ವಿಚಾರಣೆಗಾಗಿ ಆರೋಪಿಗಳನ್ನು ಪೊಲೀಸರ ವಶಕ್ಕೆ ಒಪ್ಪಿಸಿದರು. ತನಿಖಾಧಿಕಾರಿಗಳಾದ ಡಿವೈಎಸ್ಪಿ ಬಿ.ಎನ್. ಶ್ರೀನಿವಾಸ್ ಹಾಗೂ ಬಿಡದಿ ಇನ್‌ಸ್ಪೆಕ್ಟರ್ ವಿಜಯಕುಮಾರ್ ನೇತೃತ್ವದ ತಂಡವು ಆರೋಪಿಗಳನ್ನು ಕೋರ್ಟ್‌ಗೆ ಹಾಜರುಪಡಿಸಿತ್ತು. ಅಜಿತ್ ಕುಮಾರ್ ಸಾಹು ಒಡಿಶಾದ ಮಾಜಿ ಸಚಿವರೊಬ್ಬರ ಪುತ್ರ ಎಂದು ತಿಳಿದುಬಂದಿದೆ. ಸುರೇಶ್ ಮೂಲತಃ ಶಿವಮೊಗ್ಗ ಜಿಲ್ಲೆಯ ಭದ್ರಾ ವತಿ ಮೂಲದವರು, ಒಡಿಶಾದ ಪ್ರಮುಖ ಉಕ್ಕು ಕಂಪನಿ ಯಲ್ಲಿ ಸಿಇಒ ಆಗಿರುವ ಅವರಿಗೆ ಸಾಹು ಪರಿಚಿತರು. ಉಳಿದಿಬ್ಬರು ಸಾಹು ಅವರ ಸಹಚರರಾಗಿದ್ದಾರೆ.

IN THE COURT OF THE SENIOR CIVIL JUDGE AT HOSAKOTE
O.S.No.532/2022

BETWEEN:
K.C. Mallikarjunaiah and another ....PLAINTIFF
AND:
Vanajakshamma and others ....DEFENDANTS

ISSUE NOTICE TO DEFENDANT NO.5 TO 8 THROUGH PAPER PUBLICATION

5. **Smt.Gowramma,** D/o Late K.C. Muddaveeraiah, Aged about 39 years,
6. **Yogish,** S/o Late K. Nanjaiah, Aged about 46 years,
7. **Smt. Latha,** D/o Late K. Nanjaiah, Aged about 46 years,
8. **Smt. Savitha,** D/o Late K. Nanjaiah, Aged about 44 years,

Defendant No.5 to 8 are Resident of Kembalinganahalli Village, Nandagudi Hobli, Hosakote Taluk, Bengaluru Rural District, Bengaluru.

Whereas the above named plaintiffs have instituted a suit against you for relief of partition and other consequential reliefs in O.S. No.532/2022.

You all are hereby summoned to appear **on 27.04.2026 at 11.00 a.m.,** before the Senior Civil Judge at Hosakote in persons or by duly instructed advocate, failing which, the matter will be decided ex-parte.

SCHEDULE PROPERTIES

Item No.1:
All that piece and parcel of agricultural property bearing Sy. No.69/4, measuring to an extent of 10 guntas, situated at Kalappanahalli Village, Nandagudi Hobli, Hosakote Taluk, Bengaluru Rural District, and bounded on the –
EAST BY:Land of Rachutaiah; WEST BY:Land of T.M. Sundaresh Sharma & Another; NORTH BY: Land of Channamma; SOUTH BY:Land of M. Nagarajappa & another.

Item No.2:
a) All that piece and parcel of sites bearing Sl. No.211, assessment No.155, measuring 66 x 46 ft., situated at Kalappanahalli Village, Nandagudi Hobli, Hosakote Taluk, Bengaluru Rural District, and bounded on the –
EAST BY:D.K. Shivaiah property; WEST BY : Site No. 214; NORTH BY : Road; SOUTH BY : Site No. 212.
b) All that piece and parcel of sites bearing Sl. No.212, assessment No.156, measuring 66 x 42 ft., situated at Kalappanahalli Village, Nandagudi Hobli, Hosakote Taluk, Bengaluru Rural District, and bounded on the –
EAST BY:Property of Rudraiah; WEST BY : Remaining property; NORTH BY : Remaining property; SOUTH BY:Remaining property.
c) All that piece and parcel of sites bearing Sl. No.213, assessment No.157, measuring 66 x 91 ft., situated at Kalappanahalli Village, Nandagudi Hobli, Hosakote Taluk, Bengaluru Rural District, and bounded on the –
EAST BY : Property of Rajashekaraiah; WEST BY : Remaining property; NORTH BY : Remaining property; SOUTH BY : Others property.
d) All that piece and parcel of sites bearing Sl. No.214, assessment No.158, measuring 24+45/2 x 52+38/2 ft., situated at Kalappanahalli Village, Nandagudi Hobli, Hosakote Taluk, Bengaluru Rural District, and bounded on the –
EAST BY : Remaining property; WEST BY : Road; NORTH BY : Road; SOUTH BY : Remaining property.
e) All that piece and parcel of sites bearing Sl. No.215, assessment No.159, measuring 45 x 33 ft., situated at Kalappanahalli Village, Nandagudi Hobli, Hosakote Taluk, Bengaluru Rural District, and bounded on the –
EAST BY : Remaining property; WEST BY : Road; NORTH BY : Remaining property; SOUTH BY : Property Shivarudraradhya.

Given under my hand and seal of this court on this the **13th day of March 2026**

BY ORDER OF THE COURT
Sheristedar
Senior Civil Judge & JMFC
Hoskote
Advocate or Petitioners
L. Siddesha Ummathur
ADVOCATE
Office: #781, 1st Floor, 60th Cross, 17th 'B' Main 5th Block, (Near Dr. Lakshmana Rao Clinic) Rajajinagar, Bengaluru - 560010
M : 9845300364

ಸಾರ್ವಜನಿಕ ಪ್ರಕಟಣೆ

ನನ್ನ ಅರ್ಜಿದಾರರಾದ ಶ್ರೀಮತಿ ಗಂಗಮ್ಮ ಮತ್ತು ಇತರರ ಹೇಳಿಕೆಯ ಮೇರೆಗೆ ನರಸಿಂಹಪ್ಪ ಬಿನ್ ಲೇಟ್ ಗಂಗಪ್ಪ ನವರು ದಿನಾಂಕ: 19/11/2017 ರಂದು ಮಂಚಪ್ಪನಹೊಸಹಳ್ಳಿ (ಎಂ.ಹೊಸಹಳ್ಳಿ) ಗ್ರಾಮ, ಯಲಹಂಕ ತಾಲ್ಲೂಕು, ಬೆಂಗಳೂರು ಉತ್ತರ ಜಿಲ್ಲೆಯಲ್ಲಿ, ನಿಧನರಾಗಿರುತ್ತಾರೆ. ಸದರಿಯವರ ಮರಣ ಪತ್ರವನ್ನು ಪಡೆಯಲು ದೇವನಹಳ್ಳಿ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸಿ.ಮಿಸ್.ನಂ.94/2026 ರಂತೆ ಅರ್ಜಿ ಸಲ್ಲಿಸಿದ್ದು, ಸದರ ಅರ್ಜಿಯು ದಿನಾಂಕ:17/04/2026 ರಂದು ಬೆಳಗ್ಗೆ 11-00 ಘಂಟೆಗೆ ವಿಚಾರಣೆಗೆ ಇರುತ್ತದೆ. ಸದರಿ ಅರ್ಜಿಯ ಬಗ್ಗೆ ಯಾವುದೇ ತಕರಾರು ಇದ್ದಲ್ಲಿ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಸದರಿ ದಿನದಂದು ಹಾಜರಾಗಲು ಸೂಚಿಸಿದೆ.

ನ್ಯಾಯಾಲಯದ ಆದೇಶದ ಮೇರೆಗೆ ಸಹಿ/- ಚೀಫ್ ಮಿನಿಸ್ಟೀರಿಯಲ್ ಆಫೀಸರ್, ಸಿವಿಲ್ ನ್ಯಾಯಾಧೀಶರ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ದೇವನಹಳ್ಳಿ
ಶ್ರೀ ಅಶೋಕ್ ಎಂ ಜಿ & ಗಂಗಾಧರ್ .ಸಿ., ವಕೀಲರು

IN THE COURT OF THE 3rd ADDITIONAL CIVIL JUDGE AND J.M.FC. AT ANEKAL
CMIS No. 511/2026

BETWEEN: 1.SRI.JAYAMMA@AMMAYYAMMA D/o Late DASAPPA W/o Late PAPANNA, Aged about 65 years, R/at: Shyanubhoganahalli Village, Bannerghatta Post, Jigani Hobli, Anekal Taluk, Bangalore Urban District. ....PETITIONER
The Tahasildhar, Anekal Taluk Bangaluru Urban District ....RESPONDENT

WHEREAS, the petitioners filed the above petition for directing the respondent to make necessary entries in respect the date of death of Grand Mother of the petitioner namely, **Sri.Dasappa S/o late Gurrappa, who was died on 05/03/1980, at his residence, Arehalli Village Attibele Hobli, Anekal Taluk, Bangalore Urban District. In C.Mis. No. 511/2026.** On the file 3rd ADDL Civil Judge and JMFC at Anekal, and anybody have any objection pleased to appear in this Hon'ble court in person or by an advocate duly instructed **on 27/04/2026, at 11.00 A.M.** to answer the claim. Take notice that in default of your appearance on the day above mentioned the matter will be heard and decided in your absence as per law.
Given under my hand and seal of the court this is the 17/03/2026

By Order of the Court, Sheristedar
Prl. Civil Judge Dn. Division & JMFC Court, Anekal
R. SHIVA KUMAR, L.UDAYA KUMAR
ADVOCATE FOR PETITIONER
NO.1, RSK LAW ASSOCIATES, STB Complex, Opp. Court Complex, Anekal Town, Anekal-562106.

BEFORE THE MOTOR ACCIDENTS CLAIMS TRIBUNAL AT BANGALORE (SCCH-12)
M.V.C. No.8799 / 2025

BETWEEN:
Smt. N SREEDEVI & ANOTHER. ....PETITIONERS
AND:
THE NEW INDIA ASSURANCE CO.LTD & ANOTHER. .....RESPONDENTS

NOTICE TO RESPONDENT No.2

To,
1. **Mrs. JEYABRATHA.S,** W/o Arun Kumar R, No. 46, Mattabarlu Village, Channarayapatna Hobli, Devanahalli Taluk, Bangalore Rural District, Bangalore-562110
(Owner of the offending vehicle No. KA-01-AF-6714)

WHEREAS, the Petitioners have filed the above claim petition against you & another claiming compensation of **Rs.90,00,000/- for the death of Ashok in the road accident that occurred on 29-09-2025 at about 10:00 P.M. You being the 2nd respondent, the owner of vehicle EICHER PRO bearing No. KA-53-AB-8178 and the driver of the said vehicle drove the said vehicle in a rash and negligent manner with high speed and hit the deceased at NH-544E, (Madakasira-Sira Highway) Rolla Gudibanda Junction, Rolla Village & Mandal, Sri Sathya Sai District, Andhra Pradesh.**

Therefore, take notice that the above case is posted to **21/4/2026** for your appearance personally or through an advocate **at 11:00A.M,** failing which the Hon'ble Court will proceed with the case and decide the same in your absence.
Given under my hand and the Seal of this Court on this. **13th DAY OF MARCH 2026.**

BY ORDER OF THE COURT
Assistant Registrar
Court of Small Causes
Bangalore
BHARATH KUMAR. V. B.A., LL.B.
ADVOCATE
No. 4/2, 2nd Floor, Shamsuddin Block,. HHS&HMS Complex, Cubbonpet Main Road, Bengaluru-560 002,
Mob: 98456 29337
E-mail: bharath.advocates@gmail.com

ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯ ಕೋಲಾರ,
ಆರ್.ಎ. ಎಸ್.ಸಿ/ಎಸ್.ಟಿ ನಂ. 03/2025

ಮೇಲ್ಮನವಿದಾರರು : ಶ್ರೀ. ರಾಮಕೃಷ್ಣಗೌಡ ಆರ್,
ವಿರುದ್ಧ
ಎದುರುದಾರರು: ಸಹಾಯಕ ಕಮೀಷನರ್ ಮತ್ತು ಮತ್ತೊಬ್ಬರು.

ಮಾನ್ಯ 38ನೇ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ
ಕ್ರಿಮಿನಲ್ ಮಿಸ್. ನಂ. 3585/2026

ಇವರ ನಡುವೆ : 1) ಶಾಂತ ಮೂರ್ತಿ. ಹೆಚ್.ಎಂ. ಬಿನ್. ಮಹದೇವಪ್ಪ @ ಮಾದವಪ್ಪ, ವಯಸ್ಸು ಸುಮಾರು 66 ವರ್ಷ, ವಾಸ ನಂ.62, 6ನೇ ಎ ಕ್ರಾಸ್, ರಾಜಿನ್ ಥೀಯೇಟರ್, ಕೆಂಗೇರಿ ಉಪನಗರ, ಬೆಂಗಳೂರು ದಕ್ಷಿಣ -560060 2) ಶಿವಣ್ಣ ಬಿನ್. ಮಹದೇವಪ್ಪ @ ...

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತುರುವೇಕೆರೆ.
ಎಕ್ಸ್ ಕೇಸ್ ನಂ.21/2026.

ಡಿ.ಹೆಚ್.ಆರ್. : ಶಂಕರಮೂರ್ತಿ ಬಿನ್ ಚನ್ನಬಸವಯ್ಯ, ವಯಸ್ಸು 63 ವರ್ಷ, ವಾಸ: ಮುಗಳೂರು ಗ್ರಾಮ, ಮಾಯಸಂದ್ರ ಹೋಬಳಿ, ತುರುವೇಕೆರೆ ತಾಲ್ಲೂಕು, ...

... ಮುಖಾಂತರವಾಗಲೀ ಮೇಲ್ಕಂಡ ನ್ಯಾಯಾಲಯಕ್ಕೆ ಹಾಜರಾಗಿ ನಿಮ್ಮ ತಕರಾರನ್ನು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಸದರಿ ಜಾರಿ ಅರ್ಜಿಯನ್ನು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದೆಂದು ತಿಳಿಯತಕ್ಕದ್ದು.
ನ್ಯಾಯಾಲಯದ ಆದೇಶ ಮತ್ತು ಮೊಹರಿನೊಂದಿಗೆ,
ಶಿರಸ್ತೇದಾರ್
ಸಿವಿಲ್ ಜಡ್ಜ್ ಜೆ.ಎಂ.ಎಫ್.ಸಿ. ನ್ಯಾಯಾಲಯ, ತುರುವೇಕೆರೆ.
ವಾದಿ ಪರ ವಕೀಲರು : ಟಿ.ಎಸ್. ಚನ್ನಕೇಶವಸ್ವಾಮಿ, ವಕೀಲರು, ತುರುವೇಕೆರೆ, ಮೊಬೈಲ್ 8050782103.
ಸ್ಥಳ: ತುರುವೇಕೆರೆ ದಿನಾಂಕ:

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶಿಲ್ಪ ಇ ಕೋಂ.ನರಸಿಂಹಮೂರ್ತಿ ವಿ, ವಯಸ್ಸು ಸುಮಾರು 34 ವರ್ಷ, ವಾಸ: ದೊಡ್ಡಬಾಣಗೆರೆ, ಹುಲಿಕುಂಟೆ ಹೋಬಳಿ, ಶಿರಾ ತಾಲ್ಲೂಕು, ತುಮಕೂರು, ಕರ್ನಾಟಕ-572113. ಇವರು ಕೆಳಗೆ ತಿಳಿಸಲಾದ ಆಸ್ತಿಯ ಪ್ರಸ್ತುತ ಮಾಲೀಕರಾಗಿದ್ದು, ಅವರು ಮೂಲ ಕ್ರಯ ಪತ್ರ ದಿನಾಂಕ:13.05.2019 ಮತ್ತು ದಾಖಲೆ ...

... ಮೂಲ ಪತ್ರ ಒಂದು ವರ್ಷದ ಹಿಂದೆ ದೊಡ್ಡಬಾಣಗೆರೆಯಲ್ಲಿ ಮನೆಯನ್ನು ಬದಲಾವಣೆ ಮಾಡುವ ಸಮಯದಲ್ಲಿ ಕಳೆದುಹೋಗಿರುತ್ತದೆ ಮತ್ತು ಅದನ್ನು ಪತ್ತೆ ಹಚ್ಚಲು ಅವರು ತಮ್ಮ ಅತ್ಯುತ್ತಮ ಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ಪ್ರಯತ್ನಗಳು ವಿಫಲವಾಗಿವೆ. ಆ ನಂತರ ದಿನಾಂಕ:13.03.2026 ರಂದು ಈ ಬಗ್ಗೆ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಯಾರಿಗಾದರೂ ಮೇಲೆ ತಿಳಿಸಲಾದ ಮೂಲ ದಾಖಲೆ ಕಂಡು ಬಂದರೆ, ದಯವಿಟ್ಟು ಈ ಪ್ರಕಟಣೆಯ ದಿನಾಂಕದಿಂದ 7 ದಿನಗಳ ಒಳಗೆ ಕೆಳಗೆ ನೀಡಲಾದ ಕಛೇರಿ ವಿಳಾಸದಲ್ಲಿ ಸಂಪರ್ಕಿಸಲು ಕೋರಲಾಗಿದೆ.
ರಾಘವೇಂದ್ರ ಬಾಬು ಎಸ್.ಆರ್, ಎಲ್.ಎಲ್.ಬಿ. ವಕೀಲರು,
ವಿಳಾಸ: ಶಿರಾ. ಮೊಬೈಲ್ ಸಂಖ್ಯೆ : 9880301602.

IN THE COURT OF THE 3rd ADDL. CIVIL JUDGE AND JMFC AT ANEKAL
C.MISC NO. 517/2026

BETWEEN : 1. Sri. Venkatesh P S/o Late Puttanna Aged about 65 years **2. Pillamma** D/o Late Muni R/at. NO. Hinnakki Village, Jigani Hobli, Anekal Taluk, Bangalore District -560105 ...PETITIONER.
AND : The Thasildar, Anekal Taluk, Anekal ...RESPONDENT.

PUBLIC NOTICE

Whether the Petitioner have filed above Petition seeking the death certificate of My Mother Sister and Elder sister Namely Narayanamma D/o Late Muniswamappa, who is mother of Petitioner who died on 26/10/1989 (Twenty six October One Thousend Eight Nine) R/at. Hinnakki Village, Jigani Hobli, Anekal Taluk, Bangalore District. if any Person Having Any objections hereby informed to appear before this Hon'ble Court in person or any legal heirs or by a pleader duly instructed on **Dated:13-05-2026 at 11.A.M** in forenoon to show cause against the claim failing which the matter will be heard and determine ex-parte.
Given under my hand and seal of the court on this date. 17/3/2026.

By Order of the Court
Sd/- Sheristedar
Prl. Civil Judge (Jr.Dn) & JMFC., Anekal
Ambika Pateel Advocate
Yallappa Building, Attibele Main Road, Anekal Town, Bengaluru Urban District

---

PUBLIC NOTICE

This is to inform the general notice that my client **Mr. Manjunatha K.** S/o. M Kantharaju, aged about 41 years, residing at # 34, 8th Main Road Chowdeshwari Nagar, Laggere, Bengaluru-560 058, who is the present owner of below mentioned property and he was having 2 original sale deed and one agreement of sale, sale deed dated 19-05-2006 Document No DBP-01-1337/2006-07 and sale deed dated 04-04-2024 Document No DBP-01-00178-2024-25 both registered in the office of Sub – registrar Dodda ballapura in respect of Sy no 49/4 measuring 0.08 Guntas situated at Kukkanahalli Village, Madurai Hobali Doddaballapura Taluk, Bengaluru Rural District and agreement of sale dated 8/06/2018 Documents No MGD 01-1718-2018-19 registered in the office of the Sub – registrar Magadi in respect of Sy no 16/6 measuring 2 acre situated at Veerapura Village, Kudur Hobali, Magadi Taluk, Ramanagar District and aforesaid Original Documents have been lost / misplaced while traveling from Home to Bank by auto on dated 10/06/2025 and 19/06/2025 and he has made best efforts were in vain, Further he lodged 3 police complaint in this regarding on 27-02-2026 and 28-02-2026, if anyone found the aforesaid Original documents, kindly Contact within 7 days from the date of this publication at the office address given below.

M/s Shiva & Co,
Advocate & Solicitors,
Office at Chamber No 72, 6th Floor, ASVNV BHAVAN, K.G. Road, Bengaluru -560 009,
Mob : 90356 29769

IN THE COURT OF THE HON'BLE SENIOR CIVIL JUDGE AND JMFC AT BANGARPETE
G & WC. NO. 16 of 2025

Between : Sri. Suresh V, ...**Petitioner**
And : Smt. Bhavya ...**Respondent**
To. Respondent Smt. Bhavya W/o. Suresh, D/o. Late. Basavaraju, Aged about 34 Years, R/at, Bodenahalli Village, Kamasamudram Hobali,Bangarpet Taluk, Kolar District.

COURT SUMMONS TO THE RESPONDENT

1. Please take summons that the Petitioner has filed the above suit against you for the relief for Grant of Guardianship Certificate and other consequential relief.
2. You are hereby summoned to appear before the Hon'ble Court on **1/4/2026 at 11.00 A.M.** either in person or through pleader dely instructed to submit written objection and objections if any to the claim of the Petitioner. If you failed to appear on the date and time mentioned above you will be placed ex-parte and the case will be disposed of in your absence in accordance with law.

Give under my hand and seal of this court on the 5th day of March 2026 at Bengarpete.

By Order of the Court
Sd/- Senior Sheristedar
Prl. Senior Civil Judge and JMFC., K.G.F.
ADVOCATE FOR PLAINTIFF
Sri. A.C. Subramanya Advocate
1st Floor, Srinidhi Complex, Kurabarapete Main Road, Hoskote -562 114.

PUBLIC NOTICE

Notice is hereby given to the public that my client S. Nagarathna, owner of the property bearing no.7, e-khata no. 1292712243, at B. Narayanapura Village, K.R. Puram Hobli, Bengaluru have misplaced/lost their original sale deed dated: 12-12-2003 bearing doc. no. BNGU) KRP/18444/2003-04 pertaining to the said property, in that regard a lost article report bearing no. 2108329/2026 has been registered with Karnataka State Police. All persons are hereby informed not to deal or carry out any transaction with anyone on the basis of the said missing document. If anyone has already carried out or being carried out or anybody having any sort of claim either over the said document or over the aforesaid property, kindly inform the undersigned in writing on the below mentioned address within 15 days from this present.

Ashwini S. Advocate
No.7, 5th Cross, 1st Main, B. Narayanapura, Bengaluru-16. Ph: 9986933936
E-mail: ashusrinivas93@gmail.com

IN THE COURT OF THE PRINCIPAL CIVIL JUDGE & J.M.F.C AT CHICKBALLAPUR
Crl. Misc. No. 146/2026

PETITIONER : Sri. D.C. Venkatarayappa S/o Late Chengaiah, Aged about 89 years, R/at No.20, 2nd Cross, 4th Main, Maruthi Extension, Bengaluru North, Srirampuram, Bengaluru-560021.
-Vs-
Respondent : The Registrar, Births and Deaths, The City Municipal Corporation, Chickballapur.

Draft paper publication

The petitioners have filed this petition for grant of death certificate of his father by name Chengaiah S/o Venkatarayappa, who died on 26/04/1962 in his residence at Ward no.1 (Old 1st Division), 2nd Cross, Vapasandra, Chickballapur Town. The respondent has given non availability certificates in respect of the death of Chengaiah S/o Venkatarayappa.

If any persons have any objections regarding the issue of death certificate, they can appear before the Hon'ble Court in person or duly instructed by his advocate on 23.03.2026 at 11 O'clock. If they failed to appear, the Hon'ble Court has proceed and decide the matter according to law. Given under my hand and seal of the court, this 17th Day of March 2026

By Order of the Court
Chief Ministerial Officer, Civil Judge & JMFC at 5126 Chickballapur

Advocate for petitioners : **Sri. S.D. Narasimha Murthy** Advocate, Chickballapur.

IN THE COURT OF THE HON'BLE 1st ADDL. CIVIL JUDGE AND JMFC AT MALUR
C.M.C. No. 417/2025

BETWEEN: 1. Sri. Kenchappa S/o Late Gopalappa, aged 47 years, R/o Gopasandra, Village, Tekal Hobli, Malur Taluk. .... **PETITIONER**
AND: The Tahasildar, Malur .... **RESPONDENT**

PUBLIC NOTICE

The petitioner has filed a petition against the respondent for the relief of death certificate of the petitioner my father by namely Gopalappa S/o Hanumappa died on 10/03/1984 at his residing at Gopasandra Village Tekal Hobli, Malur Taluk, Kolar Dist. Before this Hon'ble court and person who are interested or having objection as to appear before this Hon'ble court in though counsel on **30/04/2026 at 11:00 A.M**

Given under my hand and seal of the court on this 06/03/2026

By order of the Court, Sheristedar, Prl Civil Judge & J.M.F.C Court, Malur

SHRI. B. NARAYANASWAMY, Advocate
Office: M.M Complex, Malur Town. Malur.

IN THE COURT OF THE DEPUTY DIRECTOR LAND RECORDS BENGALURU DISTRICT AT BENGALURU
APPEAL NO. 16/2026

BETWEEN: M/s. KRV INFRA PROPERTIES, Rep. By. Mr. Raghavendra and Ors. .... **Appellants.**
AND: The ADLR, Bengaluru East Taluk, Bengaluru and Ors. ... **Respondents.**

Summons U/o 5 Rule 20 of CPC By way of Paper publication

Address of the Respondent No.3: Chikkathayamma, W/o. late R Munithayappa, Kitaganuru Village, Bidarahalli Hobli, Bengaluru East Taluk, Bengaluru 560 036.
Address of the Respondent No.4: Nagaraju, S/o. Karagappa, Kitaganuru Village, Bidarahalli Hobli, Bengaluru East Taluk, Bengaluru 560 036.
Address of the Respondent No.5: Chikamuniyappa, S/o. R Munithayappa, Kitaganuru Village, Bidarahalli Hobli, Bengaluru East Taluk, Bengaluru 560 036.
ಮುಂಬೈ: ಭಾರತದ ಮಹಿಳಾ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆಯ ಏಕದಿನ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಏಳನೇ ಸ್ಥಾನಕ್ಕೆ ಜಿಗಿದಿದ್ದಾರೆ. ಮಂಗಳವಾರ ಬಿಡುಗಡೆಯಾದ ಪಟ್ಟಿಯಲ್ಲಿ ಮಂಧಾನ ಅವರೇ ಮೊದಲ ಸ್ಥಾನದಲ್ಲಿ ಮುಂದುವರಿದಿರುವುದು ವಿಶೇಷ. ಭಾರತ ತಂಡದ ಪ್ರಮುಖ ಆಟಗಾರರಲ್ಲಿ ಜಮಿಮಾ ರಾಡ್ರಿಗ್ಸ್ 12ನೇ ಸ್ಥಾನದಲ್ಲೇ ಮುಂದುವರಿದಿದ್ದಾರೆ. ನ್ಯೂಜಿಲೆಂಡ್‌ನ ಸೋಫಿ ಡಿವೈನ್ 11ನೇ ಸ್ಥಾನಕ್ಕೆ ಇಳಿದಿದ್ದಾರೆ. ವಿಶ್ವಕಪ್ ಸೆಮಿಫೈನಲ್ ಸೇರಿದಂತೆ ಪ್ರಮುಖ ಪಂದ್ಯಗಳಲ್ಲಿ ಆಶಾಕಿರಣವಾಗಿ ಗೆಲುವಿನಲ್ಲಿ ಮಿಂಚಿರುವ ಕೌರ್ ಇತ್ತೀಚಿಗೆ ನಡೆದ ಆಸ್ಟ್ರೇಲಿಯಾ ಸರಣಿಯಲ್ಲೂ ಉತ್ತಮ ಬ್ಯಾಟಿಂಗ್ ಮಾಡಿದ್ದರು. ಪರಿಣಾಮ ಅವರ ಸ್ಥಾನ ಏರಿಕೆಯಾಗಿದೆ.

ಸಂಸ್ಥೆಯ ಕ್ರಿಕೆಟಿಗರಿಗೆ ಕ್ರಿಕೆಟ್ ಆಸ್ಟ್ರೇಲಿಯಾ ಖಡಕ್ ಸೂಚನೆ

ಪೇಶಾವರಕ್ಕೆ ಕಾಲಿಡಬೇಡಿ: ಆಟಗಾರರಿಗೆ ಸಿಎ ಎಚ್ಚರಿಕೆ

ಪರ್ತ್: ಅಫ್ಘಾನಿಸ್ತಾನ ಮೇಲೆ ದಾಳಿ ನಡೆಸಿದ ನಂತರ ಪಾಕಿಸ್ತಾನದಲ್ಲಿ ಉದ್ವೇಗ ಸೃಷ್ಟಿಯಾಗಿರುವ ಬೆನ್ನಲ್ಲೇ ಆಸ್ಟ್ರೇಲಿಯಾ ಕ್ರಿಕೆಟ್ ಸಂಸ್ಥೆ ಪಾಕಿಸ್ತಾನ ಸೂಪರ್ ಲೀಗ್‌ನಲ್ಲಿ ಭಾಗವಹಿಸಲಿರುವ ಆಸೀಸ್ ಆಟಗಾರರಿಗೆ ಪೇಶಾವರ ಅಂತಹ ಸೂಕ್ಷ್ಮ ಸ್ಥಳಗಳಿಗೆ ಪ್ರಯಾಣಿಸ ಬಾರದೆಂದು ಎಚ್ಚರಿಕೆ ನೀಡಿದೆ.



ಅಫ್ಘಾನಿಸ್ತಾನದ ಕಾಬುಲಿನಲ್ಲಿ ನಡೆದ ಪಾಕಿಸ್ತಾನ ದಾಳಿಯ ನಂತರ ಪಾಕ್ ಹಾಗೂ ಅಫ್ಘಾನ್ ನಡುವಿನ ಪರಿಸ್ಥಿತಿ ಉದ್ವೇಗಕ್ಕೇರಿದ ನಂತರ ಇಂಡಿಯನ್ ಪ್ರೀಮಿಯರ್ ಲೀಗ್‌ಗೂ ಮುನ್ನವೇ ಶುರುವಾಗಬೇಕಿದ್ದ ಪಾಕಿಸ್ತಾನ ಸೂಪರ್ ಲೀಗ್ ಮುಂದೂಡುವ ಅನಿವಾರ್ಯತೆಗೆ ಸಿಲುಕಿಕೊಂಡಂತಿದೆ. ಈ ನಡುವೆ ಆಸ್ಟ್ರೇಲಿಯಾ ಆಟಗಾರರನ್ನು ಯಾವುದೇ ಕಾರಣಕ್ಕೂ ಪಾಕ್‌ನ ಪೇಶಾವರ ಹಾಗೂ ಆಯ್ದ ಸೂಕ್ಷ್ಮ ಪ್ರದೇಶಗಳಿಗೆ ತೆರಳಬೇಡಿ ಎಂಬ ಎಚ್ಚರಿಕೆ ನೀಡಿದೆ. ಇರಾನ್ ಹಾಗೂ ಇಸ್ರೇಲಿನ ನಡುವೆ ನಡೆಯುತ್ತಿರುವ ಯುದ್ಧದ ಬೆನ್ನಲ್ಲೇ ಮೊದಲೇ ಆಟಗಾರರ ಆಗಮನದ ಹಿನ್ನಡೆ ಅನುಭವಿಸಿದ್ದ ಪಿಎಸ್‌ಎಲ್‌ಗೆ ಇದೀಗ ಮತ್ತೊಂದು ಹಿನ್ನಡೆಯಾಗಿದೆ. ಟೂರ್ನಿಗಳಲ್ಲಿ ಸೋತು ಶರಣಾಗಿ ಭಾರೀ ಆರ್ಥಿಕ ನಷ್ಟಗಳನ್ನು ಎದುರಿಸಿರುವ ಪಾಕಿಸ್ತಾನ ಕ್ರಿಕೆಟ್ ಸಂಸ್ಥೆಗೆ ಮತ್ತೊಂದು ಬಲವಾದ ಪೆಟ್ಟು ಬಿದ್ದಿದೆ.

ಆತಂಕ ಮೊದಲ ಬಾರಿಯಲ್ಲ: ಕಳೆದ ಬಾರಿ ಪಾಕಿಸ್ತಾನ ಭಾರತದೊಂದಿಗೆ ಉದ್ವೇಗ ಹೆಚ್ಚಿಸಿಕೊಂಡಿತ್ತು. ಈ ವೇಳೆ ಪಿಎಸ್‌ಎಲ್‌ಗೆ ತೆರಳಿದ್ದ ಆಟಗಾರರು ಅಲ್ಲಿನ ಪರಿಸ್ಥಿತಿ ನೋಡಿ ಗಾಬರಿಗೊಂಡಿದ್ದರು. ಟಾಮ್ ಕರ್ರನ್, ರಿಶಾದ್ ಪಾಕ್‌ನಲ್ಲಿ ಅಸುರಕ್ಷತೆಯ ಭಾವ ವ್ಯಕ್ತ ಪಡಿಸಿ ಕಣ್ಣೀರಿಟ್ಟಿದ್ದರು. ಮತ್ತೊಮ್ಮೆ ಪಾಕಿಸ್ತಾನಕ್ಕೆ ಬರಲಾರೆ ಎಂಬ ನಿರ್ಧಾರವನ್ನೂ ಮಾಡಿದ್ದರು. ಇದಲ್ಲದೆ, 2009ರಲ್ಲಿ ಸರಣಿ ಆಡುವುದಕ್ಕೆ ಪಾಕಿಸ್ತಾನ ತಲುಪಿದ್ದ ಶ್ರೀಲಂಕಾ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ್ದರು. ಕೆಲವು ಕ್ರಿಕೆಟಿಗರು ಗಾಯಗೊಂಡಿದ್ದರು. ಇದಲ್ಲದೆ ಹಲವಾರು ಬಾರಿ ಕ್ರಿಕೆಟಿಗರಿಗೆ ಸುರಕ್ಷತೆ ನೀಡುವ ವಿಚಾರದಲ್ಲಿ ಪಾಕಿಸ್ತಾನ ವಿಫಲವಾಗಿದೆ.

ಆಸ್ಟ್ರೇಲಿಯಾ ಆಟಗಾರರಿಗೆ ಎಚ್ಚರಿಕೆ

ಐಪಿಎಲ್‌ನಲ್ಲಿ ಬಿಕರಿಯಾಗದ ಆಟಗಾರರನ್ನು ಆರಿಸಿಕೊಂಡು ನಡೆಸುವ ಪಿಎಸ್‌ಎಲ್ ಟೂರ್ನಿಗೆ ಯುದ್ಧದ ಬಿಸಿ ತಟ್ಟಿರುವುದು ಒಂದು ಕಡೆಯಾದರೆ, ಸ್ವಂತ ದೇಶದಲ್ಲಿ ನಡೆಯುತ್ತಿರುವ ಸಂಘರ್ಷ ಮತ್ತೊಂದು ಹೊಡೆತ ನೀಡಿದೆ. ಇದೇ ವೇಳೆ ಲೀಗ್‌ನಲ್ಲಿ ಸ್ಟೀವ್ ಸ್ಮಿತ್, ಡೆವಿಡ್ ವಾರ್ನರ್, ಲಾಬುಷೇನ್, ಗ್ಲೇನ್ ಮ್ಯಾಕ್ಸವೇಲ್ ಅಂತಹ ಆಟಗಾರರು ಭಾಗವಹಿಸಬೇಕಿತ್ತು. ಕೋಚ್‌ಗಳಾದ ಟಿಮ್ ಪೈನ್, ಜೇಸನ್ ಗಿಲಿಪ್ಸ್ ಕೂಡ ಪಾಕಿಸ್ತಾನದ ಲೀಗ್‌ನಲ್ಲಿ ಭಾಗವಹಿಸಬೇಕಿತ್ತು. ಆಸ್ಟ್ರೇಲಿಯಾದ ಸ್ಥಳೀಯ ಕ್ರೀಡಾ ಪತ್ರಿಕೆಯಾದ ಕೋಡ್ ಸ್ಪೋರ್ಟ್ಸ್ ವರದಿಯ ಪ್ರಕಾರ, ಆಟಗಾರರಿಗೆ ಪಾಕಿಸ್ತಾನಕ್ಕೆ ತೆರಳಲು ಅವಕಾಶ ಕೊಟ್ಟರೂ ಪೇಶಾವರಕ್ಕೆ ಮಾತ್ರ ಕಾಲಿಡದಂತೆ ಸೂಚಿಸಿದೆ. ಇದಲ್ಲದೆ, ಯುದ್ಧದ ಸನ್ನಿವೇಶ ಸೃಷ್ಟಿಯಾದರೆ ಸಂಸ್ಥೆಯಿಂದ ವಿಶೇಷ ವಿಮಾನ ಕಳುಹಿಸುವುದಾಗಿ ತಿಳಿಸಿದೆ. ಪೇಶಾವರದಲ್ಲಿ ಹಲವು ಪಂದ್ಯಗಳು ನಡೆಯಬೇಕಿದ್ದವು.

ಪಿಎಸ್‌ಎಲ್ ತ್ಯಜಿಸಿದ ಆಫ್ಘನ್



ಇದಲ್ಲದೆ ಪಾಕಿಸ್ತಾನ ಸೂಪರ್ ಲೀಗ್‌ಗೆ ಮೊದಲೇ ಹಿನ್ನಡೆಯಾಗಿದೆ. ಹಲವು ತಂಡಗಳಿಗೆ ಆಯ್ಕೆಯಾಗಿದ್ದ ಅಫ್ಘಾನಿಸ್ತಾನ ಆಟಗಾರರು ಯಾವುದೇ ಕಾರಣಕ್ಕೂ ಪಾಕ್ ಅಂತಹ ದೇಶಗಳಲ್ಲಿ ನಾವು ಆಡಲ್ಲ ಎಂಬ ನಿರ್ಧಾರ ಕೈಗೊಂಡಿದ್ದರು. ಇಲ್ಲಿಂದ ಶುರುವಾದ ಪಿಎಸ್‌ಎಲ್ ಹಿನ್ನಡೆ ಈಗ ನಿಷೇಧವಾಗುವ ತನಕ ವಿಸ್ತರಿಸಿದೆ.

ಮೋದಿ ಕ್ರೀಡಾಂಗಣದಲ್ಲಿ ಗೆಲ್ಲಲೇಬೇಕಿತ್ತು: ಸೂರ್ಯ

ಹೊಸದಿಲ್ಲಿ: ಭಾರತದಲ್ಲಿ ಅದರಲ್ಲೂ ಅದೇ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಾವು ಕಪ್ ಗೆಲ್ಲಲೇಬೇಕಿತ್ತು ಎಂದು ವಿಶ್ವಕಪ್ ವಿಜೇತ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಪ್ರತಿಪಾದಿಸಿದರು. ವಿಶ್ವಕಪ್ ಗೆದ್ದ ಬಳಿಕ ಪಿಟಿಐದೊಂದಿಗೆ ಮಾತನಾಡಿದ ಅವರು, ನಾವು ಇಲ್ಲೇ ಕಳೆದ ವಿಶ್ವಕಪ್ ಕಳೆದುಕೊಂಡಿದ್ದೇವು. ಇಲ್ಲೇ ಪಡೆಯುವುದು ಅನಿವಾರ್ಯವಾಗಿತ್ತು. 2024ರ ತಂಡಕ್ಕೂ, ಈಗಿನ ತಂಡಕ್ಕೂ ವ್ಯತ್ಯಾಸವಿದೆ. ಆಗ ತಂಡದಲ್ಲಿ ಅನುಭವವಿತ್ತು. ಈ ತಂಡದಲ್ಲಿ ಉತ್ಸಾಹವಿತ್ತು ಎಂದಿದ್ದಾರೆ.

ಮೈದಾನಕ್ಕೆ ಸಾವಿರಾರು ಜನರು ಬರುತ್ತಾರೆ. ಮೊನ್ನೆಯ ಪಂದ್ಯದಲ್ಲಿ ಲಕ್ಷ ಜನರು ಬಂದಿದ್ದರು.



ತವರಲ್ಲಿ ನಡೆಯುವ ಪ್ರತಿ ಪಂದ್ಯದಲ್ಲೂ ಹೀಗೆ ಲಕ್ಷಾಂತರ ಜನರು ಬಂದು ಬೆಂಬಲಿಸುತ್ತಾರೆ. ಅವರಿಗೆ ತವರಲ್ಲೇ ಗೆದ್ದು ಗಿಫ್ಟ್ ಕೊಡುವುದು ತುಂಬಾ ಮುಖ್ಯವಾಗಿತ್ತು ಎಂದರು.

ಯಾರಿಗೂ ಸೋಲುವ ಆಸೆ ಇರಲ್ಲ: ಸೂರ್ಯಕುಮಾರ್ ಯಾದವ್ ನಾಯಕರಾದ ಮೇಲೆ ಹೊಸ ತಂಡ ಕಟ್ಟಬೇಕಾದ ಜವಾಬ್ದಾರಿಯಿತ್ತು. ಇದರ ಹೊರತಾಗಿ ತಂಡವನ್ನು ಕಟ್ಟಿ, ಶೇಕಡ 80ರಷ್ಟು ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದು ಹೇಗೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಶಾಲೆಯಲ್ಲಿದ್ದಾಗ ವಿದ್ಯಾಭ್ಯಾಸದಲ್ಲಿ ತೆಗೆದುಕೊಳ್ಳಬೇಕಾದ ಫಲಿತಾಂಶ ಇಲ್ಲಿ ಪಡೆಯುತ್ತಿದ್ದೇನೆ. ಆದರೆ ನಾಯಕನಾದ ಯಾವುದೇ ವ್ಯಕ್ತಿಗೆ ಗೆಲ್ಲುವುದೊಂದೇ ಗುರಿಯಾಗಿರುತ್ತದೆ. ಶೇಕಡಾವಾರು ಲೆಕ್ಕಾಚಾರ ಬಿಟ್ಟಾಗ ಯಾವುದೇ ತಂಡದ ಯಾವುದೇ ನಾಯಕರೂ ಸೋಲಲು ಇಚ್ಚಿಸುವುದಿಲ್ಲ. ಆದರೂ ಇಂತಹ ಫಲಿತಾಂಶ ಬಂದ ತಕ್ಷಣ ಖುಷಿ ಸಿಗುತ್ತದೆ ಎಂದರು.

ತಂಡಗಳಿಗೆ ಗಾಯದ ಬಿಸಿ

ಮುಂಬೈ: ಸನ್‌ರೈಸರ್ಸ್ ಹೈದರಾಬಾದ್ ನಾಯಕ ಪ್ಯಾಟ್ ಕಮ್ಮಿನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಭರವಸೆಯ ಬೌಲರ್ ಜೋಷ್ ಹ್ಯಾಜೆಲ್ವುಡ್ ಐಪಿಎಲ್ ಆಡುವ ಬಗ್ಗೆ ಅನಿಶ್ಚಿತತೆ ಸೃಷ್ಟಿಯಾಗಿದೆ. ಗಾಯದಿಂದ ಚೇತರಿಸಿಕೊಳ್ಳದಿರುವ ನಿಟ್ಟಿನಲ್ಲಿ ಮೊದಲಿನ ಪಂದ್ಯಗಳಲ್ಲಿ ಲಭ್ಯರಿರುವುದಿಲ್ಲ ಎಂದು ತಿಳಿದುಬಂದಿದೆ.

ಐಪಿಎಲ್‌ಗೆ ಕೆಲವೇ ದಿನಗಳು ಇರುವ ಬೆನ್ನಲ್ಲೇ ಬಹುತೇಕ ತಂಡಗಳಿಗೆ ಗಾಯದ ಸಮಸ್ಯೆ ಎದುರಾಗಿದೆ. ಈ ಮಧ್ಯೆ ಕೋಲ್ಕತ್ತಾ ನೈಟ್‌ರೈಡರ್ಸ್ ತಂಡ ಮಹತ್ವದ ನಿರ್ಧಾರ ಪ್ರಕಟಿಸಿದ್ದು, ವೇಗದ ಬೌಲರ್‌ಗಳಾದ ಹರ್ಷಿತ್ ರಾಣಾ ಮತ್ತು ಮತೀಶಾ ಪಥಿರಾಣ ಅವರಿಗೆ ಬದಲಿ ಆಟಗಾರರನ್ನು ಹುಡುಕುವುದಿಲ್ಲವೆಂದು ಫ್ರಾಂಚೈಸಿ ಸ್ಪಷ್ಟಪಡಿಸಿದೆ. ಹರ್ಷಿತ್ ರಾಣಾ ಇತ್ತೀಚೆಗೆ ಮೊಣಕಾಲಿನ ಗಾಯದಿಂದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಸಂಪೂರ್ಣ ಚೇತರಿಕೆಗೆ ಸಮಯ ಬೇಕಾಗಿದೆ. ಇದರಿಂದ ಅವರು ಈ ಸೀಸನ್‌ಗೆ ಲಭ್ಯವಿರುವುದಿಲ್ಲ, ಕಳೆದ ಎರಡು ಸೀಸನ್‌ಗಳಲ್ಲಿ ರಾಣಾ ಉತ್ತಮ ಪ್ರದರ್ಶನ ನೀಡಿದ್ದು, 2024ರಲ್ಲಿ 19 ಮತ್ತು



2025ರಲ್ಲಿ 15 ವಿಕೆಟ್‌ಗಳನ್ನು ಪಡೆದು ತಂಡದ ಪ್ರಮುಖ ಬೌಲರ್ ಆಗಿ ಹೊರಹೊಮ್ಮಿದ್ದರು. ತಂಡದ ಬಳಿಯಲ್ಲಿ ಸಾಕಷ್ಟು ಭಾರತೀಯ ವೇಗದ ಬೌಲರ್‌ಗಳಿರುವುದರಿಂದ ಬದಲಿ ಆಟಗಾರರ ಅಗತ್ಯವಿಲ್ಲವೆಂದು ನಿರ್ವಹಣೆಯ ಅಭಿಪ್ರಾಯವಾಗಿದೆ. ವೇಗಿಗಳಾದ ವೈಭವ್ ಆರೋರಾ, ಉಮ್ರಾನ್ ಮಲಿಕ್, ಕಾರ್ತಿಕ್ ತ್ಯಾಗಿ ಮತ್ತು ಆಕಾಶ್‌ದೀಪ್ ಇರುವುದು ತಂಡಕ್ಕೆ ಬಲ ತಂದಿದೆ ಎಂದು ಹೇಳಿದೆ. ಇನ್ನೊಂದೆಡೆ, ಪತಿರಣಾ ಗಾಯದಿಂದ ಹೊರಗುಳಿದರೂ, ಅವರು ಟೂರ್ನಿಯ ಕೆಲವು ಹಂತಗಳಲ್ಲಿ ಲಭ್ಯವಾಗಬಹುದು ಎಂಬ ನಿರೀಕ್ಷೆಯಿದೆ. ಈ ಕಾರಣದಿಂದಲೇ ಅವರನ್ನು ತಕ್ಷಣ ಬದಲಾಯಿಸುವ ಯೋಚನೆ ಇಲ್ಲ ಎಂದಿದೆ.

ಬೆಂಗಳೂರು ಎಫ್‌ಸಿ ಪಂದ್ಯ ಡ್ರಾ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ಹಾಗೂ ಮೋಹನ್ ಬಗಾನ್ ನಡುವಿನ ರೋಚಕ ಪಂದ್ಯ ಡ್ರಾದಲ್ಲಿ ಮುಕ್ತಾಯವಾಯಿತು.

ಪಂದ್ಯದ ಮೊದಲಾರ್ಧದಲ್ಲಿ ಎರಡೂ ತಂಡಗಳು ಸಮಾನ ಪೈಪೋಟಿ ನೀಡಿದವು. ಮೋಹನ್ ಬಗಾನ್ ತಂಡದ ಒತ್ತಡವನ್ನು ಸಮರ್ಥವಾಗಿ ಎದುರಿಸಿದ ಬೆಂಗಳೂರು ಎಫ್‌ಸಿ, ವೇಗದ ಪ್ರತಿದಾಳಿ ನಡೆಸಲು ಪ್ರಯತ್ನಿಸಿತು. ಕೊನೆಯಲ್ಲಿ ಪ್ರತಿರೋಧದೊಂದಿಗೆ ಪಂದ್ಯಾವನ್ನು ಡ್ರಾ ಮಾಡಿಕೊಂಡಿತು. ಪಂದ್ಯದ ಮೊದಲ 2 ನಿಮಿಷಗಳಲ್ಲೇ ರಿಯಾನ್ ವಿಲಿಯಮ್ಸ್ ಗೋಲು ಗಳಿಸುವ ಸನಿಹಕ್ಕೆ ಬಂದಿದ್ದರು, ಆದರೆ ವಿಶಾಲ್ ಕೈತ್ ಆ ಹೊಡೆತವನ್ನು ಅದ್ಭುತವಾಗಿ ತಡೆದು ಕಾರ್ನರ್ ಆಗುವಂತೆ ನೋಡಿಕೊಂಡರು.

ಅದಾದ ಸ್ವಲ್ಪ ಸಮಯದಲ್ಲೇ ಮ್ಯಾಕ್ಲಾರೆನ್ ಅವರ ಕಠಿಣ ಹೊಡೆತವನ್ನು ಗುರುಪ್ರೀತ್ ಸಿಂಗ್ ಸಂಧು ತಡೆದರು. ಎರಡೂ ತಂಡಗಳ ರಕ್ಷಣಾ ವಿಭಾಗವು ಶಿಸ್ತಿನ ಪ್ರದರ್ಶನ ನೀಡಿದ್ದರಿಂದ, ವಿರಾಮದ ವೇಳೆಗೆ ಪಂದ್ಯವು ಗೋಲುರಹಿತ ಸಮಬಲದಲ್ಲಿತ್ತು. ದ್ವಿತೀಯಾರ್ಧದಲ್ಲಿಯೂ ಮೈದಾನದ ಮಧ್ಯಭಾಗದಲ್ಲಿ ಜಿದ್ದಾಜಿದ್ದಿನ ಹೋರಾಟ ಮುಂದುವರಿಯಿತು.

ಹೋರಾಡಿದರೂ ದಕ್ಕದ ಗೋಲು: 60ನೇ ನಿಮಿಷದಲ್ಲಿ ಬ್ರಿಯಾನ್ ಮಾಡಿದ ಕಠಿಣ ಟ್ಯಾಕಲ್‌ನಿಂದಾಗಿ ಅವರಿಗೆ ಹಳದಿ ಕಾರ್ಡ್ ನೀಡಲಾಯಿತು. ಮೋಹನ್ ಬಗಾನ್ ತಂಡಕ್ಕೆ



ಫ್ರೀ ಕಿಕ್ ಲಭಿಸಿತು. ಈ ಅಪಾಯಕಾರಿ ಅವಕಾಶದಲ್ಲಿ ಗೋಲಾಗದಂತೆ ತಡೆದ ಗುರುಪ್ರೀತ್ ಸಿಂಗ್ ಸಂಧು, ಬಿಎಫ್‌ಸಿ ಪರ ರಕ್ಷಣಾ ಗೋಡೆಯಾಗಿ ನಿಂತರು. ಮತ್ತೊಂದೆಡೆ, ಆಶಿಕ್ ಕುರುನಿಯನ್ ಎಡಭಾಗದಿಂದ ಅತ್ಯಂತ ವೇಗವಾಗಿ ಓಡಿಬಂದು ಸುನಿಲ್ ಛೇಟ್ರಿ ಅವರಿಗೆ ಚೆಂಡನ್ನು ಪಾಸ್ ಮಾಡಿದರು. ಛೇಟ್ರಿ ಅವರಿಗೆ ಸತತ ಎರಡು ಬಾರಿ ಅವಕಾಶ ಸಿಕ್ಕಿತಾದರೂ ಮೋಹನ್ ಬಗಾನ್‌ನ ಗೋಲ್ ಕೀಪರ್ ಅವುಗಳನ್ನು ವಿಫಲಗೊಳಿಸಿದರು. 85ನೇ ನಿಮಿಷದಲ್ಲಿ ಪೆಟ್ರಾಟೋಸ್ ಅವರಿಗೆ ಗೋಲು ಗಳಿಸುವ ಸುವರ್ಣಾವಕಾಶ ಲಭಿಸಿತ್ತು. ಗುರುಪ್ರೀತ್ ಅವರ ಎದುರು ಒಬ್ಬಂಟಿಯಾಗಿ ಗೋಲು ಗಳಿಸುವ ಹಂತದಲ್ಲಿದ್ದರೂ, ಆ ನಂಬರ್ 9 ಆಟಗಾರ ಚೆಂಡನ್ನು ಪೋಸ್ಟ್‌ನ ಹೊರಕ್ಕೆ ಹೊಡೆದರು. ಅಂತಿಮವಾಗಿ ಈ ರೋಚಕ ಪಂದ್ಯವು 0-0 ಡ್ರಾನಲ್ಲಿ ಅಂತ್ಯಗೊಂಡಿತು.

ದಾವಣಗೆರೆ ದಕ್ಷಿಣ ಕ್ಷೇತ್ರ ಮೊದಲ ಬಾರಿಗೆ ಉಪಚುನಾವಣೆ

ಮಹಿಳಾ ಮತದಾರರೇ ನಿರ್ಣಾಯಕ

ಅರ್ಪಿತ್ ಎನ್.ಜಿ

ದಾವಣಗೆರೆ: ಕ್ಷೇತ್ರ ರಚನೆಗೊಂಡ ಬಳಿಕ ಇದುವರೆಗೂ ನಾಲ್ಕು ಸಾರ್ವತ್ರಿಕ ಚುನಾವಣೆ ಕಂಡಿರುವ ದಾವಣಗೆರೆ ದಕ್ಷಿಣ ಕ್ಷೇತ್ರ ಮೊದಲ ಬಾರಿಗೆ ಉಪಚುನಾವಣೆ ಕಾಣುತ್ತಿದೆ. ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ಕ್ಷೇತ್ರದಲ್ಲಿ ಉಪ ಚುನಾವಣೆ ಎದುರಾಗಿದೆ.



ಕ್ಷೇತ್ರದಲ್ಲಿ ಕಳೆದ 18 ವರ್ಷಗಳಲ್ಲಿ ಶೇ.40ರಷ್ಟು ಮತದಾರರ ಪ್ರಮಾಣ ಹೆಚ್ಚಳಗೊಂಡಿದೆ. ಆದರೆ ನಾಲ್ಕು ಚುನಾವಣೆಗಳಲ್ಲೂ ಶೇ.30ಕ್ಕೂ ಹೆಚ್ಚು ಮತದಾರರು ನಿರಾಸಕ್ತಿ ತೋರಿದ್ದಾರೆ. ಮತದಾನ ಪ್ರಮಾಣ ಮೂರು ಚುನಾವಣೆಯಲ್ಲಿ ಏರಿಕೆ ಕಂಡಿರುವುದು ಸಮಾಧಾನಕರ. ಕ್ಷೇತ್ರದಲ್ಲಿ ಶೇ.69.47ರಷ್ಟು ಮತದಾನ ಪ್ರಮಾಣವೇ ಇದುವರೆಗಿನ ಗರಿಷ್ಠ.

ಮತದಾನಹೆಚ್ಚಳಕ್ಕೆಪ್ರತಿಬಾರಿಯೂ ಜಿಲ್ಲಾಡಳಿತ ಮತದಾರರ ಪರಿಷ್ಕರಣೆ, ಹೊಸದಾಗಿ ಸೇರ್ಪಡೆ ಹಾಗೂ ಮತದಾನ ಹೆಚ್ಚಳಕ್ಕೆ ಬೀದಿ ನಾಟಕ, ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಆದಾಗ್ಯೂ ಶೇ.70ರ ಗಡಿಯನ್ನು ಒಮ್ಮೆಯೂ ದಾಟಿಲ್ಲ. ಮೊದಲ ಉಪಚುನಾವಣೆ ಹೊಸ ದಾಖಲೆ ನಿರ್ಮಿಸುವುದೇ ಎಂದು ಕಾದುನೋಡಬೇಕಿದೆ. 2023ರ ಚುನಾವಣೆಯಲ್ಲಿ 1,01,874 ಪುರುಷ ಮತದಾರರು, 1,02,533 ಮಹಿಳಾ ಮತದಾರರಿದ್ದರು. ಪ್ರಸ್ತುತ ಉಪಚುನಾವಣೆಯಲ್ಲಿ 1,13,654 ಪುರುಷರು, 1,17,986 ಮಹಿಳಾ ಮತದಾರರು ಇದ್ದಾರೆ. ಕಳೆದ ಬಾರಿ ಅಲ್ಪಪ್ರಮಾಣದಲ್ಲಿ ಹೆಚ್ಚಿದ್ದ ಮಹಿಳಾ ಮತದಾರರ ಸಂಖ್ಯೆ ಈ ಬಾರಿ ಮತ್ತಷ್ಟು ಹೆಚ್ಚಳಗೊಂಡಿದೆ. ಹೀಗಾಗಿ ಮಹಿಳೆಯರೇ ಫಲಿತಾಂಶದಲ್ಲಿ ನಿರ್ಣಾಯಕರೂ ಆಗಲಿದ್ದಾರೆ.

ದಿಗಂತ ವಿಶೇಷ

ಕಾಂಗ್ರೆಸ್-ಬಿಜೆಪಿ ಹಣಾಹಣಿ: ಪ್ರತೀ ಬಾರಿಯೂ ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆಯೇ ನೇರ ಹಣಾಹಣಿ ನಡೆದಿದೆ. ಒಮ್ಮೆ ಮಾತ್ರ ಜೆಡಿಎಸ್ ಇಲ್ಲಿ ಗಣನೀಯ ಮತಗಳನ್ನು ಗಳಿಸಿದೆ. ಮತ್ತೊಂದೆಡೆ ಶಾಮನೂರು ಕುಟುಂಬದೆದುರು ಅಲ್ಪಸಂಖ್ಯಾತರು ಹಿಂದಿನ ಚುನಾವಣೆಗಳಲ್ಲಿ ಸ್ಪರ್ಧೆ ಮಾಡಿದ್ದರೂಅವರಾರೂಗಣನೀಯ ಮತ ಪಡೆದಿಲ್ಲ, ಅಲ್ಪಸಂಖ್ಯಾತರೇ ಇಲ್ಲಿ ನಿರ್ಣಾಯಕ ಸಂಖ್ಯೆಯಲ್ಲಿದ್ದರೂ ಬಿಜೆಪಿಯೇ ಕಾಂಗ್ರೆಸ್‌ಗೆ ಪೈಪೋಟಿ ನೀಡಿದೆ.

ಕುಸಿತ ಕಂಡಿದ್ದ ನೋಟಾ ಮತ: ನೋಟಾ ಮತ ಚಲಾವಣೆ 2018, 2023ರ ಚುನಾವಣೆಯಲ್ಲಿ ದಾಖಲಾಗಿದೆ. 2018ರ ಚುನಾವಣೆಯಲ್ಲಿ 888 ಮತದಾರರು ಯಾವುದೇ ಅಭ್ಯರ್ಥಿಗೂ ತಮ್ಮ ಮತ ನೀಡದೇ ನೋಟಾ ಒತ್ತಿದ್ದರು. ಆದರೆ 2023ರ ಚುನಾವಣೆಯಲ್ಲಿ ನೋಟಾ ಕೊಂಚ ಇಳಿಕೆ ಕಂಡು 655 ಮತ ದಾಖಲಾಗಿದೆ. 2018ರ ಚುನಾವಣೆಯಲ್ಲಿ ಒಟ್ಟು 11 ಜನ ಅಭ್ಯರ್ಥಿಗಳು ಸ್ಪರ್ಧಿಸಿದ್ದು, 6 ಅಭ್ಯರ್ಥಿಗಳು ನೋಟಾ ಮತಗಳಿಗಿಂತಲೂ ಕಡಿಮೆ ಮತ ಪಡೆದಿದ್ದಾರೆ. 2023ರಲ್ಲಿ ನಡೆದ ಚುನಾವಣೆಯಲ್ಲಿ ಒಟ್ಟು 16 ಅಭ್ಯರ್ಥಿಗಳು ಕಣದಲ್ಲಿದ್ದು 10 ಮಂದಿ ನೋಟಾ ಮತಗಳಿಗಿಂತ ಕಡಿಮೆ ಮತ ಪಡೆದಿದ್ದಾರೆ. ಜೆಡಿಎಸ್‌ನ ಅಮಾನುಲ್ಲಾ ಖಾನ್ ಅವರು 2018ರಲ್ಲಿ 6020 ಮತ, 2023ರ ಚುನಾವಣೆಯಲ್ಲಿ 1296 ಮತ ಗಳಿಸಿ ನೋಟಾಗಿಂತ ಹೆಚ್ಚು ಮತ ಪಡೆದ ಸಾಮೀಪ್ಯದ ಅಭ್ಯರ್ಥಿಯಾಗಿದ್ದಾರೆ.

2008
ಮತದಾರರು 1,61,435
ಮತ ಚಲಾಯಿಸಿದ ಮತದಾರರು 1,00,415
ಮತ ಪ್ರಮಾಣ ಶೇ.62.02

2013
ಮತದಾರರು 1,82,370
ಮತ ಚಲಾಯಿಸಿದ ಮತದಾರರು 1,20,410
ಮತಪ್ರಮಾಣ ಶೇ.66.03

2018
ಮತದಾರರು 2,01,158
ಮತ ಚಲಾಯಿಸಿದ ಮತದಾರರು 1,36,073
ಮತಪ್ರಮಾಣ ಶೇ.65.81
ನೋಟಾ 888

2023
ಮತದಾರರು 2,04,442
ಪುರುಷ 1,01,874
ಮಹಿಳೆ 1,02,533
ಇತರೆ 35
ಮತ ಚಲಾಯಿಸಿದ ಮತದಾರರು 1,46,382
ಮತಪ್ರಮಾಣ ಶೇ.69.47
ನೋಟಾ 655

ಹಾಲಿ ಇರುವ ಮತದಾರರು
ಮತದಾರರು 2,31,683
ಪುರುಷ 1,13,654
ಮಹಿಳೆ 1,17,986
ಇತರೆ 43

18 ವರ್ಷಗಳಲ್ಲಿ ಶೇ.40ರಷ್ಟು ಮತದಾರರ ಪ್ರಮಾಣ ಹೆಚ್ಚಳ



ಆರೆಸ್ಸೆಸ್ ನಿಷೇಧ ಅಸಾಧ್ಯ: ಈಶ್ವರಪ್ಪ

ಕಲಬುರಗಿ: ಭಾರತವಲ್ಲದೇ ಇಡೀ ವಿಶ್ವದ ಗಮನ ಸೆಳೆದಿರುವ ಆರೆಸ್ಸೆಸ್‌ನ್ನು ನಿಷೇಧ ಮಾಡಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.



ನಗರದ ಐವನ್ ಶಾಹಿ ಅತಿಥಿ ಗೃಹದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದ ಆಂತರೀಕ ವಿಷಯಗಳಲ್ಲಿ ಅಮೇರಿಕಾ ಹಸ್ತಕ್ಷೇಪ ಮಾಡುತ್ತಿದ್ದು,ಧಾರ್ಮಿಕ ಸ್ವಾತಂತ್ರ್ಯ ಉಲ್ಲಂಘನೆ ಮಾಡುತ್ತಿರುವ ಆರೆಸ್ಸೆಸ್‌ನ್ನು ನಿಷೇಧ ಮಾಡುವಂತೆ ಆಗ್ರಹ ಮಾಡುತ್ತಿದೆ. ಆರೆಸ್ಸೆಸ್ ಎಂದಿಗೂ ಕೂಡ ಧರ್ಮ,ವ್ಯಕ್ತಿಗಳ ವಿರುದ್ಧ ಗಲಾಟೆ ಮಾಡಿಲ್ಲ. ದೇಶದ ಲಕ್ಷಾಂತರ ನಗರಗಳಲ್ಲಿ, ಗ್ರಾಮಾಂತರಗಳಲ್ಲಿ ಕಳೆದ ನೂರು ವರ್ಷಗಳಿಂದ ದೇಶ, ಧರ್ಮದ ಜಾಗೃತಿ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರುತ್ತಿದೆ ಎಲ್ಲೂ ಗಲಾಟೆ ನಡೆದಿಲ್ಲ ಎಂದರು.

ಹಿಂದೂ ವಿರೋಧಿ ಸರ್ಕಾರ: ರಾಜ್ಯದ ಮದ್ದೂರು, ನೆಲಮಂಗಲದಲ್ಲಿ ಶಾಂತಿಯಿಂದ ಹೋದ ಗಣೇಶನ ಮೆರವಣಿಗೆಯಲ್ಲಿ ಕಲ್ಲೂ ತೂರಾಟ, ಬಾಗಲಕೋಟೆಯಲ್ಲಿ ಶಿವಾಜಿ ಮೆರವಣಿಗೆ ವೇಳೆ ಮಸೀದಿ ಬಳಿ ನಿಂತು ಕಲ್ಲು, ಚಪ್ಪಲಿ ಎಸೆತ ಹೀಗೆ ದಾವಣಗೆರೆ, ಶಿವಮೊಗ್ಗದಲ್ಲಿ ಹುಡುಕಿ ಹಲ್ಲೆ ಮಾಡುತ್ತಿದ್ದಾರೆ. ಹೀಗಾಗಿ ಮುಸ್ಲಿಂರ ಮನಸ್ಥಿತಿ ಬದಲಾಗಬೇಕಿದೆ, ಇಲ್ಲಾಂದ್ರೆ ರಾಜ್ಯದಲ್ಲಿ ಹಾಗೂ ದೇಶದಲ್ಲಿ ತೊಂದರೆ ಅನುಭವಿಸಬೇಕಾಗುತ್ತದೆ. ಇನ್ನೊಂದೆಡೆ ಭಾರತದ ಮುಸ್ಲಿಮರು ದೇಶದಲ್ಲಿ ಸಾಕಷ್ಟು ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ. ಅಮೆರಿಕಾ-ಇಸ್ರೇಲ್ ಜೊತೆಗೆ ಇರಾನ್ ಯುದ್ಧದ ಸಂದರ್ಭದಲ್ಲಿ ಇರಾನಿನಲ್ಲಿ ಖಮೇನ ಹತ್ಯೆಯಾದರೇ, ಭಾರತದಲ್ಲಿ ಏಕೆ ಪ್ರತಿಭಟನೆ? ಇರಾನಿನಲ್ಲಿ ನಡೆದ ಹತ್ಯೆಗೂ ಭಾರತಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದ ಅವರು, ಇಡೀ ವಿಶ್ವದಲ್ಲಿಯೇ ಮುಸಲ್ಮಾನರು ಸುರಕ್ಷಿತವಾಗಿ, ಸುಭದ್ರವಾಗಿ ಇದ್ದಾರೆ ಎಂದು ಅದು ಭಾರತದಲ್ಲಿ ಮಾತ್ರ ಎಂದು ಹೇಳಿದರು.

ಖೋಟಾ ನೋಟು ಜಾಲ ಪತ್ತೆ: ಬಂಧನ

ಬೆಳಗಾವಿ: ದೊಡ್ಡ ವ್ಯಾಪಾರಿಗಳಿಗೆ ಪಂಗನಾಮ ಹಾಕಲು ಯತ್ನಿಸಿದ್ದ ಅಂತರ್ ರಾಜ್ಯ ಖೋಟಾ ನೋಟು ಜಾಲದ ಕಿಲಾಡಿಗಳು ಇದೀಗ ನ್ಯಾಯಾಂಗ ಬಂಧನದ ಭೀತಿ ಎದುರಾಗಿದೆ. ನಗರ ಪೊಲೀಸ್ ಆಯುಕ್ತರ ಭರ್ಜರಿ ಕಾರ್ಯಾಚರಣೆಯ ಬಳಿಕ, ಬಂಧಿತ ನಾಲ್ವರು ಆರೋಪಿಗಳನ್ನು ಮಾರ್ಚ್ 27ರ ವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಲಯ ಆದೇಶಿಸಿದೆ.

ನಗರದ ಖಡೇಬಜಾರ್ ಹಾಗೂ ಬಾಜಿ ಮಾರ್ಕೆಟ್ ಪ್ರದೇಶದಲ್ಲಿ ಖೋಟಾ ನೋಟು ಚಲಾವಣೆ ಮಾಡುತ್ತಿದ್ದ ಗೋವಾ ಮತ್ತು ಬಿಹಾರ ಮೂಲದ ನಾಲ್ವರು ಆರೋಪಿಗಳನ್ನು ಬೆಳಗಾವಿ ಜೆ.ಎನ್.ಎಂ.ಸಿ ಎರಡನೇ ನ್ಯಾಯಾಲಯವು ಮಾರ್ಚ್ 27ರ ವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಪ್ರಕರಣದ



ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಗರ ಪೊಲೀಸ್ ಆಯುಕ್ತ ಭೂಷಣ ಬೋರಸೆ ಅವರು, ಆರೋಪಿಗಳಿಂದ 500 ರೂಪಾಯಿ ಮುಖ ಬೆಲೆಯ 495 ನಕಲಿ ನೋಟುಗಳು, ಒಂದು ಕಾರು ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ. ವ್ಯಾಪಾರಿಯೊಬ್ಬರು ನೀಡಿದ ಸಮಯೋಚಿತ ಮಾಹಿತಿಯಿಂದ ಈ ಬೃಹತ್ ಜಾಲವನ್ನು ಭೇದಿಸಲು ಸಾಧ್ಯವಾಯಿತು ಎಂದು ಹೇಳಿದರು. ಈ ಜಾಲವು ಕೇವಲ ಬೆಳಗಾವಿ ಮಾತ್ರವಲ್ಲದೆ ಅಕ್ಕಪಕ್ಕದ ರಾಜ್ಯಗಳಿಗೂ ಹರಡಿರುವ ಶಂಕೆ ವ್ಯಕ್ತವಾಗಿದ್ದು, ತಲೆಮರೆಸಿಕೊಂಡಿರುವ ಇನ್ನಿಬ್ಬರು ಆರೋಪಿಗಳ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ. ಮಾರ್ಕೆಟ್ ಠಾಣೆಯ ಇನ್ಸ್‌ಪೆಕ್ಟರ್ ಜೆ.ಎಂ.ಕಾಲಮಿರ್ಚಿ ನೇತೃತ್ವದ ತಂಡದ ಕಾರ್ಯದಕ್ಷತೆಯನ್ನು ಆಯುಕ್ತರು ಶ್ಲಾಘಿಸಿದ್ದಾರೆ.

ಸಾರ್ವಜನಿಕರು ಅದರಲ್ಲೂ ವಿಶೇಷವಾಗಿ ಸಣ್ಣ ವ್ಯಾಪಾರಿಗಳು 500 ರೂಪಾಯಿ ನೋಟುಗಳನ್ನು ಸ್ವೀಕರಿಸುವಾಗ ಹೆಚ್ಚಿನ ಜಾಗರೂಕತೆ ವಹಿಸಬೇಕು ಮತ್ತು ಯಾವುದೇ ಅನುಮಾನ ಬಂದರೆ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಅವರು ಮನವಿ ಮಾಡಿದರು.

ಸರ್ವಪಕ್ಷ ನಿಯೋಗ ಕೊಂಡೊಯ್ಯಲು ತೀರ್ಮಾನ

ಹೊಸದಿಲ್ಲಿ: ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದ (ಯುಕೆಪಿ-3) ಕಾಮಗಾರಿ ಸೇರಿದಂತೆ ರಾಜ್ಯದ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಜಲಶಕ್ತಿ ಸಚಿವರ ಬಳಿಗೆ ಸರ್ವಪಕ್ಷ ನಿಯೋಗ ಕೊಂಡೊಯ್ಯಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಇದಕ್ಕೆ ಸರ್ವಪಕ್ಷಗಳ ಸಂಸದರೂ ಸಮ್ಮತಿ ಸೂಚಿಸಿದ್ದಾರೆ.



ಮಂಗಳವಾರ ದಿಲ್ಲಿಯಲ್ಲಿ ರಾಜ್ಯದ ಸಂಸದರು, ವಕೀಲರ ತಂಡದೊಂದಿಗೆ ಸಭೆ ನಡೆಸಿದ ಜಲಸಂಪನ್ಮೂಲ ಸಚಿವರೂ ಆಗಿರುವ ಡಿಸಿಎಂ ಡಿ.ಕೆ ಶಿವಕುಮಾರ್ ಹಾಗೂ ರಾಜ್ಯ ಸಚಿವರು ರಾಜ್ಯದ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ಮುಂದಿನ ಹೆಜ್ಜೆ ಬಗ್ಗೆ ಸುದೀರ್ಘ ಸಮಾಲೋಚನೆ ನಡೆಸಿದರು.

ಇದುವರೆಗೆ ಯೋಜನೆಗಳ ಸ್ಥಿತಿಗತಿ ಏನೇನಾಗಿದೆ, ನಮ್ಮ ಸರ್ಕಾರ ಏನೆಲ್ಲಾ ಮಾಡಿದೆ ಎಂಬುದನ್ನು ವಿವರಿಸಿದರಲ್ಲದೆ, ಕಾನೂನು ಸಂಘರ್ಷಗಳಿಂದ ಹೊರಬರುವುದರ ಜತೆಗೆ ಕೇಂದ್ರ ಸರ್ಕಾರದ ಅನುಮತಿಗಳನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆಯೂ ವಿಸ್ತೃತ ಚರ್ಚೆ ನಡೆಸಲಾಯಿತು.

ನಾಡು, ನುಡಿ, ಜಲ ವಿಚಾರವಾಗಿ ರಾಜ್ಯದ ಹಿತ ದೃಷ್ಟಿಯಿಂದ ಪಕ್ಷಭೇದ ಮರೆತು ಒಂದಾಗಿರುತ್ತೇವೆ. ಸಮಸ್ಯೆಗಳ ನಿವಾರಣೆಗೆ ನಾವು ಕೇಂದ್ರದ ಮೇಲೆ ಒತ್ತಡ ಹಾಕುತ್ತೇವೆ.

■ **ಬಸವರಾಜ ಬೊಮ್ಮಾಯಿ, ಸಂಸದ**

ಒಮ್ಮತದ ತೀರ್ಮಾನ

ಮುಂದಿನ ಹೆಜ್ಜೆಗಳ ಬಗ್ಗೆ ಇನ್ನೊಮ್ಮೆ ರಾಜ್ಯದ ಸಂಸದರು, ಕಾನೂನು ತಂಡದೊಂದಿಗೆ ದಿಲ್ಲಿಯಲ್ಲೇ ಸಭೆ ನಡೆಸಿ, ಪ್ರಧಾನಿ ಹಾಗೂ ಜಲಶಕ್ತಿ ಸಚಿವರ ಭೇಟಿಗೆ ದಿನಾಂಕಗಳನ್ನು ನಿಗದಿಪಡಿಸುತ್ತೇವೆ. ಒಟ್ಟಿಗೆ ಸರ್ವಪಕ್ಷ ನಿಯೋಗ ಕೊಂಡೊಯ್ಯುತ್ತೇವೆ. ಎಲ್ಲರೂ ಒಮ್ಮತದಿಂದ ಈ ತೀರ್ಮಾನ ಕೈಗೊಂಡಿದ್ದೇವೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಸ್ಪಷ್ಟಪಡಿಸಿದರು.

ಸಭೆ ಬಳಿಕ ಜಂಟಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೃಷ್ಣಾ, ಕಾವೇರಿ, ತುಂಗಭದ್ರಾ ಸೇರಿದಂತೆ ಹಲವು ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಬಹಳ ವರ್ಷಗಳಿಂದ ಇರುವ ಸಮಸ್ಯೆ, ಹೋರಾಟಗಳಿಗೆ ಪರಿಹಾರ ಹತ್ತಿರ ಬಂದಿದೆ ಎಂದು ಆಶಾವಾದ ವ್ಯಕ್ತಪಡಿಸಿದರು. ಯುಕೆಪಿ-3 ಗೆ 1.33 ಲಕ್ಷ ಎಕರೆ ಭೂಮಿ ಒಂದೇ ಬಾರಿಗೆ ಸ್ವಾಧೀನ ಮಾಡಿಕೊಳ್ಳಲು ನಿರ್ಧರಿಸಿದ್ದು, ನೀರಾವರಿ ಜಮೀನಿಗೆ 40ಲಕ್ಷ ರೂ., ಒಣಭೂಮಿಗೆ 30 ಲಕ್ಷ ರೂ.ನಂತೆ ಪ್ರತಿ ಎಕರೆಗೆ ಪರಿಹಾರ ನಿಗದಿಪಡಿಸಿರುವುದರಲ್ಲದೆ, ಈ ಬಾರಿಯ ಬಜೆಟ್‌ನಲ್ಲೂ ಘೋಷಿಸಿದ್ದೇವೆ. ಸುಪ್ರೀಂ ಕೋರ್ಟ್ ಆದೇಶದಂತೆ ತಯಾರಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5927

ಎಡದಿಂದ ಬಲಕ್ಕೆ
2.ಮತದ ನಡುವೆ ಗಾಳಿ ಬೀಸುತ್ತಿದೆ (3)
5.ಯಶಸ್ಸನ್ನು ಹೊಂದಿದವ-ಪ್ರಸಿದ್ಧ ವ್ಯಕ್ತಿ (4)
6.ಕಲಿಸು-ವಿದ್ಯಾಭ್ಯಾಸ ಮಾಡಿಸು (4)
7.ಹೋರಾಟಕ್ಕೆ ಇಳಿಯುವುದು (3)
8.ಮದುವೆಯಾಗುವಿಕೆ ತಿರುಗಿದೆ (3)
10.ಕೆಲಸ ವ್ಯವಸ್ಥೆಗೊಳಿಸುವ ವ್ಯಕ್ತಿ (4)
12.ಇದು ಗಜಾಸುರನ ವೈರಿ-ಸಿಂಹ (4)
14.ಮಟ್ಟಸ, ಚಪ್ಪಟೆಯಾದುದು (3)
15.ಸುರನ ನಡುವೆ ಅಡಗಿದ ಚಂದ್ರ (4)
16.ಈ ರೀತಿಯಲ್ಲಿ ಬಿಡಲ್ಪಟ್ಟದ್ದು (4)

ಮೇಲಿನಿಂದ ಕೆಳಕ್ಕೆ
1.ವ್ಯಕ್ತಿಗಳ ಪರ ವಾದ ಮಾಡುವ ಕಾನೂನು ತಜ್ಞ (3)
2.ಜನರ ಪ್ರಜಾಪ್ರಭುತ್ವದ ಮುಖ್ಯ ಹಕ್ಕು (4)
3.ಕೂಲಂಕಷವಾಗಿ ಪರಿಶೀಲಿಸು (4)
4.ಜೀವಮಾನ-ಸಂಸಾರದ ಸಮಾನಪದ (3)
7.ವಾಹನ ಓಡಿಸುವ ವ್ಯಕ್ತಿ ತಲೆಕೆಳಗಾಗಿದ್ದಾನೆ (3)
9.ಮಂತ್ರಿ ಕಡೆಯಲ್ಲಿ ದೀರ್ಘವಾಗಿದ್ದಾನೆ (3)
10.ಸೂಚನೆಯನ್ನು ನೀಡು (4)
11. ಕಸದಲ್ಲಿ ಅವರ ಕಣ್ಣಿಗೆ ಬಿದ್ದ ಚಿನ್ನ (4)
12.ಇದು ಸಮರ್ಪಕವಲ್ಲದ ಕಾರಣ (4)
13.ಸಾಲವನ್ನು ಸಂಪೂರ್ಣವಾಗಿ ತೀರಿಸಿಕೊಳ್ಳುವುದು (4)

5926 ಉತ್ತರ

ಎಡದಿಂದ ಬಲಕ್ಕೆ:
2.ಗರಡಿ 5.ಗುಬ್ಬಿಗೂಡು
6.ಗೇರುಬೀಜ
7.ಕುಂಬಾರ 8.ನಜರು
10.ಅಂತರಿಕ್ಷ 11.ಸಂಕುಚಿತ
13.ಕೀರ್ತನಕಾರ
15.ಕರುಳು 16.ಸಹಿಸು

ಮೇಲಿನಿಂದ ಕೆಳಕ್ಕೆ :
1.ತೆಂಗು 2.ಗಡುತರ
3.ನಗೆಗೇಡಿ 4.ರಾಜ
7.ಕುಂಠಿತ 9.ಚಿಗುರು
10.ಅಂಗಾರಕ 12.ತತ್ತರಿಸು
13.ಕೀಳು 14.ರಸ

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಮಾರ್ನಿಂಗ್ ಶೋ

ಬುಧವಾರ 18 ಮಾರ್ಚ್ 2026,
ಬೆಂಗಳೂರು



ಇದು ಯಾರನ್ನೂ ಯಾರೂ ಸಹ ನಂಬಲು ಕಷ್ಟವಾಗುವಂಥಾ ಕಾಲಮಾನ. ಇಂಥ ಸಮಯದಲ್ಲಿ ನಂಬಿಕೆಯೆಂಬ ಚುಂಬಕ ಶಕ್ತಿಯ ಸುತ್ತ ಹೊಸೆಯಲ್ಪಟ್ಟಿರುವ, ಪ್ರೇಮದ ಪರಾಗ ಮೆತ್ತಿಕೊಂಡಿರುವ ಅಪರೂಪದ ಕಥಾಹಂದರ ಲವ್ ಸೀಸನ್ಸ್ ಚಿತ್ರದಲ್ಲಿದೆ. ಬಹುತೇಕ ಬೆಂಗಳೂರು ಸುತ್ತಮುತ್ತಲ ಏರಿಯಾಗಳಲ್ಲಿ ಈ ಚಿತ್ರದ ಚಿತ್ರೀಕರಣವನ್ನು ನಡೆಸಲಾಗಿದೆ. ಸಧ್ಯ ಪೋಸ್ಟ್ ಪ್ರೊಡಕ್ಷನ್ಸ್ ಕೆಲಸಗಳಲ್ಲಿ ತೊಡಗಿಕೊಂಡಿರುವ ಚಿತ್ರತಂಡ ಕೆಲವೇ ದಿನಗಳಲ್ಲಿ ಈ ಚಿತ್ರದ ಟೀಸರನ್ನು ಬಿಡುಗಡೆಗೊಳಿಸಲು ತಯಾರಿ ನಡೆಸುತ್ತಿದೆ.

ನಂಬಿಕೆಯ ಸುತ್ತ ಹೆಣೆಯಲಾದ ಪ್ರೇಮಕಥಾನಕ ಲವ್ ಸೀಸನ್ಸ್



ಎಲ್ಲರ ಬದುಕಿಗೆ ಹತ್ತಿರಾದ ಕಥಾನಕವನ್ನು ನವಿರು ಪ್ರೇಮದ ಪರಿಧಿಯಲ್ಲಿ ನಿರ್ದೇಶಕ ಕೃತ್ವಿಕ್ ಅವರು 'ಲವ್ ಸೀಸನ್ಸ್ ಎಂಬ ಚಿತ್ರದ ಮೂಲಕ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಈಗಾಗಲೇ ಲವ್ ಸೀಸನ್ಸ್ ಚಿತ್ರವು ತನ್ನ ಚಿತ್ರೀಕರಣವನ್ನು ಯಶಸ್ವಿಯಾಗಿ ಮುಗಿಸಿಕೊಂಡಿದೆ. ರಂಗಭೂಮಿ ಹಿನ್ನೆಲೆಯಿರುವ ಕೃತ್ವಿಕ್ ಅವರ ನಿರ್ದೇಶನದಲ್ಲಿ ಮೂಡಿ ಬಂದಿರುವ 'ಲವ್ ಸೀಸನ್ಸ್ ಇದೀಗ ಪೋಸ್ಟ್ ಪ್ರೊಡಕ್ಷನ್ ಕೆಲಸ ಕಾರ್ಯಗಳತ್ತ ಹೊರಳಿಕೊಂಡಿದೆ. ಸಾಮಾನ್ಯವಾಗಿ ಕೆಲ ಸಿನಿಮಾಗಳನ್ನು ನೆಲಮೂಲದ ಕಥೆಯ ಮೂಲಕ ವಿಶೇಷವಾಗಿ ಗುರುತಿಸಲಾಗುತ್ತೆ. ಆದರೆ, 'ಲವ್ ಸೀಸನ್ಸ್' ನಮ್ಮ ಕಣ್ಣಿಗೆ ಕಂಡೂ ಕಾಣದಂತಿರುವ ಗಲ್ಲಿ ಗಲ್ಲಿಯಲ್ಲಿ ನಡೆಯುವ ಕಥೆ ಎಂದು ನಿರ್ದೇಶಕ ಕೃತ್ವಿಕ್ ಅವರು ಚಿತ್ರದ ಬಗ್ಗೆ ವಿವರಣೆ ನೀಡುತ್ತಾರೆ.

ರಂಗಭೂಮಿ ಮತ್ತು ಸಿನಿಮಾ ಜಗತ್ತಿನಲ್ಲಿ ಕಳೆದ ಹತ್ತು ವರ್ಷದಿಂದಲೂ ಕಾರ್ಯ ನಿರ್ವಹಿಸುತ್ತಿರುವವ ಕೃತ್ವಿಕ್ ಅವರು 'ಲವ್ ಸೀಸನ್ಸ್' ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಹೊಸ ಹೆಜ್ಜೆ ಇಟ್ಟಿದ್ದಾರೆ. ವಿಶೇಷವೆಂದರೆ, ರಂಗಭೂಮಿ ಹಿನ್ನೆಲೆಯ ಹೊಸಬರಿಂದಲೇ ಈ ಚಿತ್ರ ಕಳೆಗಟ್ಟಿಕೊಂಡಿದೆ. ಮಂಡ್ಯ ರಮೇಶ್ ಅವರ ಸಾರಥ್ಯದ ನಟನಾ ಸಂಸ್ಥೆಯಲ್ಲಿ ಪಳಗಿದ ಮುಕುಂದ ರಾಮಸ್ವಾಮಿ ಅವರು ಈ ಚಿತ್ರದ ನಾಯಕನಾಗಿ ನಟಿಸಿದ್ದಾರೆ. ದಿಯಾ ಕೀರ್ತಿ, ಚಂದನಗೌಡ ಮತ್ತು ಶ್ವೇತಾ ಕೊಗ್ಲೂರ್ ನಾಯಕಿಯರಾಗಿ ಜೊತೆಯಾಗಿದ್ದಾರೆ. ಗಟ್ಟಿ ಕಥೆ ಮತ್ತು ಈಗಿನ ಕಾಲಕ್ಕೆ ಅಗತ್ಯವಾಗಿರುವ ಸಂದೇಶ ಹೊಂದಿರುವ ಕಥೆಯೊಂದಿಗೆ ನಿರ್ದೇಶಕರು ಈ ಚಿತ್ರವನ್ನು ರೂಪಿಸಿದ್ದಾರಂತೆ.

ಎನ್.ಆರ್. ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಎನ್.ಆರ್. ಮಂಜುನಾಥ(ನೀಲೇರಿ) ಅವರು ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ. ಇದು ಯಾರನ್ನೂ ಯಾರೂ ಸಹ ನಂಬಲು ಕಷ್ಟವಾಗುವಂಥಾ ಕಾಲಮಾನ. ಇಂಥ ಸಮಯದಲ್ಲಿ ನಂಬಿಕೆಯೆಂಬ ಚುಂಬಕ ಶಕ್ತಿಯ ಸುತ್ತ ಹೊಸೆಯಲ್ಪಟ್ಟಿರುವ, ಪ್ರೇಮದ ಪರಾಗ ಮೆತ್ತಿಕೊಂಡಿರುವ ಅಪರೂಪದ ಕಥಾಹಂದರ ಲವ್ ಸೀಸನ್ಸ್ ಚಿತ್ರದಲ್ಲಿದೆ. ಬಹುತೇಕ ಬೆಂಗಳೂರು ಸುತ್ತಮುತ್ತಲ ಏರಿಯಾಗಳಲ್ಲಿ ಈ ಚಿತ್ರದ ಚಿತ್ರೀಕರಣವನ್ನು ನಡೆಸಲಾಗಿದೆ. ಸಧ್ಯ ಪೋಸ್ಟ್ ಪ್ರೊಡಕ್ಷನ್ಸ್ ಕೆಲಸಗಳಲ್ಲಿ ತೊಡಗಿಕೊಂಡಿರುವ ಚಿತ್ರತಂಡ ಕೆಲವೇ ದಿನಗಳಲ್ಲಿ ಈ ಚಿತ್ರದ ಟೀಸರನ್ನು ಬಿಡುಗಡೆಗೊಳಿಸಲು ತಯಾರಿ ನಡೆಸುತ್ತಿದೆ.

ವೀರ್ ಸಮರ್ಥ್ ಅವರ ಸಂಗೀತ ಸಂಯೋಜನೆಯಲ್ಲಿ ಈ ಚಿತ್ರದ ಹಾಡುಗಳು ಮೂಡಿ ಬಂದಿವೆ. ಕೆ.ಕಲ್ಯಾಣ್, ಪ್ರಮೋದ್ ಮರವಂತೆ, ಧನಂಜಯ್ ರಂಜನ್ ಹಾಗೂ ಸಾಯಿ ಸರ್ವೇಶ್ ಅವರುಗಳು ಲವ್ ಸೀಸನ್ಸ್ ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಅವಿನಾಶ್ ಶಾಸ್ತ್ರಿ ಅವರ ಛಾಯಾಗ್ರಹಣ, ಮಧು ತುಂಬಕೆರೆ ಅವರ ಸಂಕಲನ, ಭಜರಂಗಿ ಮೋಹನ್ ಅವರ ನೃತ್ಯಸಂಯೋಜನೆಯಿರುವ ಈ ಚಿತ್ರದಲ್ಲಿ ಮಂಡ್ಯ ರಮೇಶ್, ರಾಜೇಶ್ ನಟರಂಗ, ಸಂಗೀತಾ ಅನಿಲ್, ಜಯತೀರ್ಥ, ಚೇತನ್ ದುರ್ಗ, ಹುಲಿ ಕಾರ್ತಿಕ್, ಬೇಬಿ ರಿತುಸಿಂಗ್ ಮುಂತಾದವರು ಪ್ರಮುಖ ತಾರಾಗಣದಲ್ಲಿ ಕಾಣಿಸಿಕೊಂಡಿದ್ದಾರೆ.



ಜನಮೆಚ್ಚಿದ ಮಗ್ಗಿಪುಸ್ತಕ ಅರ್ಧ ಶತಕದತ್ತ..





ಅವನಿ ಎಂಬ ಮಗುವಿನ ಸುತ್ತ ನಡೆಯುವ ಘಟನೆಗಳನ್ನು ಇಟ್ಟುಕೊಂಡು ಹರಿವರಾಸನಂ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಚಿತ್ರ ಮಗ್ಗಿಪುಸ್ತಕ ಬಿಡುಗಡೆಯಾಗಿ ರಾಜ್ಯಾದ್ಯಂತ ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಈಗಾಗಲೇ ಮೂವತ್ತು ದಿನಗಳನ್ನು ಸಹ ದಾಟಿ ಐವತ್ತನೇ ದಿನದತ್ತ ದಾಪುಗಾಲನ್ನಿಟ್ಟಿದೆ, 4 ಆಯಾಮಗಳಲ್ಲಿ ನಡೆಯುವ ಕಥೆ ಹೊಂದಿದ ಈ ಚಿತ್ರದಲ್ಲಿ ಮಕ್ಕಳ ಜತೆಗೆ ಪೋಷಕರಿಗೂ ಸಹ ಈ ಚಿತ್ರದಲ್ಲಿ ಒಂದು ಮೆಸೇಜಿದೆ, ಅದೇ ನಾಡಿನ ಸಿನಿ ಪ್ರೇಕ್ಷಕರನ್ನು ಆಕರ್ಷಿಸಿರುವುದು ಎಂದರೆ ತಪ್ಪಾಗಲಾರದು, ಕನ್ನಡದ ಪ್ರತಿಭಾವಂತ ನಿರ್ದೇಶಕ ಹರಿವರಾಸನಂ ಅವರು ತಮ್ಮ ಮೊದಲ ಚಿತ್ರದಲ್ಲೇ ಪ್ರೇಕ್ಷಕರ ಮನದಾಳವನ್ನರಿತು ಪ್ರೇಕ್ಷಕರನ್ನು ರಂಜಿಸಿದ್ದಾರೆ. ಅವರ ನಿರ್ದೇಶನದ ಪ್ರಥಮ ಚಿತ್ರ ಮಗ್ಗಿ ಪುಸ್ತಕ ಈಗಾಗಲೇ 30 ದಿನಗಳನ್ನು ದಾಟಿ 50ನೇ ದಿನದತ್ತ ದಾಪುಗಾಲು ಹಾಕಿದೆ. ವಿಶೇಷವಾಗಿ ಈ ಚಿತ್ರವನ್ನು ಮಕ್ಕಳ ಜತೆಗೆ ಮಹಿಳಾ ಪ್ರೇಕ್ಷಕರೂ ಸಹ ಹೆಚ್ಚಾಗಿ ಬಂದು ವೀಕ್ಷಿಸುತ್ತಿದ್ದಾರೆ. ಹಲವಾರು ಸೆಂಟರ್‌ಗಳಲ್ಲಿ 30 ದಿನಗಳನ್ನು ಪೂರೈಸಿರುವ ಮಗ್ಗಿ ಪುಸ್ತಕ ಚಿತ್ರವು ತನ್ನ ಕಲೆಕ್ಷನ್‌ನಲ್ಲಿ ಸ್ಥಿರತೆ ಕಾಯ್ದುಕೊಂಡಿದೆ. ಈಗಾಗಲೇ ರಾಜ್ಯಾದ್ಯಂತ ಸಹಸ್ರಾರು ಸಂಖ್ಯೆಯಲ್ಲಿ ಶಾಲಾ ವಿದ್ಯಾರ್ಥಿಗಳು ಮಗ್ಗಿ ಪುಸ್ತಕ ಚಿತ್ರವನ್ನು ವೀಕ್ಷಿಸಿ ಮೆಚ್ಚಿಕೊಂಡಿದ್ದಾರೆ. ಈ ಚಿತ್ರವೀಗ ಉತ್ತರ ಕರ್ನಾಟಕದಲ್ಲೂ ಸಹ ಪ್ರೇಕ್ಷಕರನ್ನು ಹೆಚ್ಚು ಹೆಚ್ಚು ಸೆಳೆಯುತ್ತ ಸಾಗಿದೆ,

ಚಿನ್ನಸ್ವಾಮಿ ಫಿಲಂಸ್ ಬ್ಯಾನರ್ ಅಡಿ ಎತಿರಾಜ್ ಸ್ನೇಹಿತರ ಜತೆಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಜತೆಗೆ ನಿರ್ದೇಶಕರೂ ಕೈಜೋಡಿಸಿದ್ದಾರೆ. ಮಗ್ಗಿ ಪುಸ್ತಕ ಬದುಕಿನ ಲೆಕ್ಕಾಚಾರ, ನಮ್ಮ ಜೀವನವೇ ಒಂದು ಮಗ್ಗಿಪುಸ್ತಕ ಇದ್ದಂತೆ, ಇದರಲ್ಲಿ ಒಳ್ಳೆಯದನ್ನು ಕೂಡಬೇಕು, ಕೆಟ್ಟದ್ದನ್ನು ಕಳೆಯಬೇಕು, ಜ್ಞಾನವನ್ನು ಗುಣಿಸಬೇಕು, ಅಜ್ಞಾನವನ್ನು ಭಾಗಿಸಬೇಕು. ಅವನಿ ಎಂಬ ಕಾದಂಬರಿಯನ್ನು ಆಧರಿಸಿ ಮಾಡಿದ ಈ ಚಿತ್ರವು ನಾಲ್ಕು ಆಯಾಮಗಳಲ್ಲಿ ನಡೆಯುವ ಹೈಪರ್ ಲಿಂಕ್ ಸ್ಟೋರಿಯಾಗಿದ್ದು, ಜೀವನದ ಲೆಕ್ಕಾಚಾರವನ್ನು ಈ ಚಿತ್ರದಲ್ಲಿ ಹೇಳಲಾಗಿದೆ,





ಬೆಂಗಳೂರು, ಮೈಸೂರು, ಮಂಗಳೂರು, ನಂಜನಗೂಡು, ಶ್ರೀರಂಗಪಟ್ಟಣ, ಹೆಚ್.ಡಿ. ಕೋಟೆ ಸುತ್ತಮುತ್ತಲ ಪ್ರದೇಶಗಳಲ್ಲಿ ಸುಮಾರು 80ಕ್ಕೂ ಹೆಚ್ಚು ದಿನಗಳ ಕಾಲ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ, ಮಗ್ಗಿಪುಸ್ತಕ ಚಿತ್ರದಲ್ಲಿ ಒಟ್ಟಿ 7 ಹಾಡುಗಳಿದ್ದು ಎಸ್.ಎಸ್. ನಾಚಪ್ಪ ಅವರ ಸಂಗೀತ ಸಂಯೋಜನೆಯಿದೆ. ಡಾ. ವಿಷ್ಣುವರ್ಧನ್ ಅಭಿನಯದ ಅಪ್ಪಾಜಿ, ಜಮೀನ್ದಾರ್ರು ಚಿತ್ರಗಳಿಗೆ ಸಂಗೀತ ನೀಡಿದ್ದ ಎಂ.ಎಂ. ಕೀರವಾಣಿ ಅವರು ಬಹಳ ದಿನಗಳ ನಂತರ ಈ ಚಿತ್ರದ ಹಾಡೊಂದಕ್ಕೆ ದನಿಯಾಗಿರುವುದು ವಿಶೇಷ. ಉಳಿದಂತೆ ಕನ್ನಡ ಗಾಯಕರಾದ ರಾಜೇಶ್ ಕೃಷ್ಣನ್, ವಿಜಯ ಪ್ರಕಾಶ್, ಕಂಭದ ರಂಗಯ್ಯ, ನವೀನ್ ಸಜ್ಜು, ಇಂದು ನಾಗರಾಜ್, ಗುರುರಾಜ್ ಹೊಸಕೋಟೆ, ಸೈಂಧವಿ, ವೈಕಂ ವಿಜಯಲಕ್ಷ್ಮಿ ಹಾಗೂ ರವೀಂದ್ರ ಸೊರಗಾವಿ ಸೇರಿದಂತೆ 17 ಜನ ಈ ಚಿತ್ರದಲ್ಲಿ ಹಾಡಿರುವುದು ಮತ್ತೊಂದು ವಿಶೇಷ.

ಈ ಚಿತ್ರವನ್ನು ಎಂ.ಪಿ. ಫಿಲಂಸ್ ಮೂಲಕ ಕೆ. ಮುನೀಂದ್ರ ಅವರು ರಿಲೀಸ್ ಮಾಡಿದ್ದರು. ಮುನೀಂದ್ರ ಅವರ ಸಂಸ್ಥೆಯಿಂದ ಬಿಡುಗಡೆಯಾದ ಎಲ್ಲಾ ಚಿತ್ರಗಳು 25, 50ನೇ ದಿನದ ಸಂಭ್ರಮ ಆಚರಿಸುತ್ತಿರುವುದು ಇವರ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ, ಈ ಹಿಂದೆ ಇವರದೇ ವಿತರಣೆಯ ಕಂಗ್ರಾಚುಲೇಶನ್ಸ್ ಬ್ರದರ್ ಕೂಡ 50 ದಿನ ಪ್ರದರ್ಶನಗೊಂಡಿತ್ತು, ಈ ಚಿತ್ರದಲ್ಲಿ ಸರ್ಕಾರಿ ಹಿರಿಯ ಪಾಠಶಾಲೆ ಖ್ಯಾತಿಯ ರಂಜನ್ ಕಾಸರಗೋಡು, ರಾನ್ವಿ ಶೇಖರ್, ಶೋಭರಾಜ್, ಗಿರಿಜಾ ಲೋಕೇಶ್, ಮೇಘನಾ, ಮೈಸೂರು ರಮಾನಂದ್, ಮೇಘಶ್ರೀ, ಮಿಮಿಕ್ರಿ ಗೋಪಿ, ಚಂದ್ರಪ್ರಭ, ರಘು ರಮನಕೊಪ್ಪ ಹಾಗೂ ಇನ್ನಿತರರು ನಟಿಸಿದ್ದಾರೆ. ಈ ಚಿತ್ರಕ್ಕೆ ನಂದಕುಮಾರ್ ಅವರ ಛಾಯಾಗ್ರಹಣ, ಶಿವಕುಮಾರ್ ಅವರ ಸಂಕಲನವಿದೆ.

ಮಾರ್ಚ್ 23 ಶೀರ್ಷಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಿಡುಗಡೆ



ಕನ್ನಡ ಚಿತ್ರರಂಗದಲ್ಲಿ ಆಗಾಗ ಒಂದಷ್ಟು ನೈಜ ಘಟನೆಗಳನ್ನು ಆಧರಿಸಿದ ಚಲನಚಿತ್ರಗಳು ತೆರೆಮೇಲೆ ಬಂದಿರುವುದನ್ನು ನೀವು ನೋಡಿರುತ್ತೀರಿ. ಈಗ ಅಂಥದ್ದೇ ಮತ್ತೊಂದು ನೈಜ ಘಟನೆ ಸಿನಿಮಾ ರೂಪದಲ್ಲಿ ತೆರೆಮೇಲೆ ಬರಲು ತಯಾರಾಗುತ್ತಿದೆ. ಅಂದಹಾಗೆ, ಆ ಸಿನಿಮಾದ ಹೆಸರು ಮಾರ್ಚ್ 23.

2021ರ ಮಾರ್ಚ್ 23ರಂದು ಸಂಜೆ 6.30ರ ಬಳಿಕ ಬೆಂಗಳೂರಿನ ರೈಲು ನಿಲ್ದಾಣದಲ್ಲಿ ನಡೆದ ನೈಜ ಘಟನೆಯೊಂದನ್ನು ಆಧರಿಸಿ, ಈ ಚಿತ್ರವನ್ನು ನಿರ್ಮಿಸಲಾಗುತ್ತಿದೆ. ಹಾಗಾಗಿ, ಚಿತ್ರಕ್ಕೆ ಮಾರ್ಚ್ 23 ಎಂದು ಹೆಸರಿಡಲಾಗಿದೆ. ರೈಲು ನಿಲ್ದಾಣದ ಆವರಣದಲ್ಲಿಯೇ ಅಮಾಯಕ ರೈಲ್ವೇ ನೌಕರನೊಬ್ಬನ ಮೇಲೆ ನಡೆಯುವ ಅನ್ಯಾಯವನ್ನು ಪ್ರತಿಭಟಿಸುವ ವ್ಯಕ್ತಿ ಹೇಗೆಲ್ಲ ದೌರ್ಜನ್ಯಕ್ಕೆ ಒಳಗಾಗುತ್ತಾನೆ. ಅಂತಿಮವಾಗಿ ಜನಸಾಮಾನ್ಯನೊಬ್ಬ ಶೋಷಣೆಯ ವಿರುದ್ದ ಹೇಗೆಲ್ಲ ಹೋರಾಡುತ್ತಾನೆ? ಎಂಬ ವಿಷಯದ ಸುತ್ತ ಮಾರ್ಚ್ 23 ಚಿತ್ರದ ಕಥಾಹಂದರ ಸಾಗುತ್ತದೆ.

ಕನ್ನಡ ಚಿತ್ರರಂಗದಲ್ಲಿ ಸುಮಾರು ಮೂರು ದಶಕಗಳಿಂದ ಸಕ್ರಿಯರಾಗಿರುವ, ಹತ್ತಾರು ವಿಭಿನ್ನ ಪಾತ್ರಗಳಲ್ಲಿ ಸಹನಟನಾಗಿ ಕಾಣಿಸಿಕೊಂಡಿರುವ ಮಧು ಮಂದಗೆರೆ ಅವರು ಮಾರ್ಚ್ 23 ಚಿತ್ರದಲ್ಲಿ ನಾಯಕ ನಟನಾಗಿ ಮುಖ್ಯಭೂಮಿಕೆಯಲ್ಲಿ ಅಭಿನಯಿಸುತ್ತಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಈಗಾಗಲೇ ನಿರ್ದೇಶಕನಾಗಿ ಮತ್ತು ಸಂಕಲನಕಾರನಾಗಿ ಗುರುತಿಸಿಕೊಂಡಿರುವ ವೇದ್ ಅವರು ಮಾರ್ಚ್ 23 ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಜಿ. ರಾಜು ಅವರು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಈಗಾಗಲೇ ಮಾರ್ಚ್ 23 ಚಿತ್ರದ ಬಹುತೇಕ ಸ್ಕ್ರಿಪ್ಟ್ ಕೆಲಸಗಳನ್ನು ಪೂರ್ಣಗೊಳಿಸಿರುವ ಚಿತ್ರತಂಡ, ಇತ್ತೀಚೆಗೆ ಮಾರ್ಚ್ 23 ಚಿತ್ರದ ಶೀರ್ಷಿಕೆ ಮತ್ತು ಟೈಟಲ್ ಟೀಸರನ್ನು ಬಿಡುಗಡೆ ಮಾಡಿದೆ.



2021ರಲ್ಲಿ ನಡೆದ ನೈಜ ಘಟನೆಗೆ ಚಿತ್ರರೂಪ ತೆರೆಗೆ ಬರುತ್ತಿದೆ ಕ್ರೌರ್ಯದ ಹಿಂದಿನ ಹೋರಾಟದ ಕಥೆ

ಕರ್ನಾಟಕದ ಮಾಜಿ ಮುಖ್ಯಮಂತ್ರಿ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಮಾರ್ಚ್ 23 ಚಿತ್ರದ ಶೀರ್ಷಿಕೆ ಮತ್ತು ಟೈಟಲ್ ಟೀಸರನ್ನು ಬಿಡುಗಡೆಗೊಳಿಸಿ, ಚಿತ್ರತಂಡಕ್ಕೆ ಶುಭ ಹಾರೈಸಿದರು. ಮಾರ್ಚ್ 23 ಚಿತ್ರಕ್ಕೆ ನಂದಕುಮಾರ್ ಅವರ ಛಾಯಾಗ್ರಹಣವಿದ್ದು, ನಿರ್ದೇಶಕ ವೇದ್ ಅವರೇ ಕಥೆ ಚಿತ್ರಕಥೆ ಬರೆದಯುವುದರೊಂದಿಗೆ ಸಂಕಲನ ಕಾರ್ಯವನ್ನು ಸಹ ನಿರ್ವಹಿಸುತ್ತಿದ್ದಾರೆ. ಈ ಚಿತ್ರದ ಹಾಡುಗಳಿಗೆ ಅನಂತ ಆರ್ಯನ್ ಅವರು ಸಂಗೀತ ಸಂಯೋಜಿಸುತ್ತಿದ್ದು, ಕೆ. ಕಲ್ಯಾಣ್, ನಾಗೇಶ್ ಪ್ರಸನ್ನ ಅವರುಗಳು ಹಾಡುಗಳಿಗೆ ಸಾಹಿತ್ಯ ರಚಿಸುತ್ತಿದ್ದಾರೆ. ಉಳಿದಂತೆ ಮಾರ್ಚ್ 23 ಚಿತ್ರಕ್ಕೆ ಕಲಾವಿದರು ಮತ್ತು ತಂತ್ರಜ್ಞರ ಆಯ್ಕೆ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.

ಸದ್ಯ ಮಾರ್ಚ್ 23 ಚಿತ್ರದ ಶೀರ್ಷಿಕೆ ಮತ್ತು ಟೈಟಲ್ ಟೀಸರ್ ಬಿಡುಗಡೆ ಮಾಡಿರುವ ಚಿತ್ರತಂಡ, ಇದೇ ಏಪ್ರಿಲ್ ಅಂತ್ಯದೊಳಗೆ ಚಿತ್ರದ ಮುಹೂರ್ತವನ್ನು ನೆರವೇರಿಸಿಕೊಂಡು ಚಿತ್ರೀಕರಣಕ್ಕೆ ಹೊರಡುವ ಯೋಜನೆ ಹಾಕಿಕೊಂಡಿದೆ. ಬೆಂಗಳೂರು ಸುತ್ತಮುತ್ತ ಮಾರ್ಚ್ 23 ಚಿತ್ರದ ಬಹುತೇಕ ಚಿತ್ರೀಕರಣ ನಡೆಯಲಿದೆ.

ಅಭಿಮಾನಿಗಳಿಂದ ಪುನೀತ್ ಹುಟ್ಟುಹಬ್ಬ ತಮ್ಮನ ನೆನಪಲ್ಲಿ ಶಿವಣ್ಣ ಭಾವುಕ



ಕೋಟ್ಯಂತರ ಅಭಿಮಾನಿಗಳ ಆರಾಧ್ಯದೈವ ಡಾ.ಪುನೀತ್ ರಾಜಕುಮಾರ್ ಅವರ 51ನೇ ಜನ್ಮದಿನವನ್ನು ಅಭಿಮಾನಿಗಳು ಸಂಭ್ರಮದಿಂದ ಆಚರಿಸಿದರು, ಭೌತಿಕವಾಗಿ ಅವರು ನಮ್ಮೊಂದಿಗಿಲ್ಲದಿದ್ದರೂ ಅವರ ನೆನಪುಗಳು, ಅವರು ಹಾಕಿಕೊಟ್ಟ ಆದರ್ಶಗಳು ಕನ್ನಡಿಗರ ಹೃದಯದಲ್ಲಿ ಅಚ್ಚಳಿಯದೆ ಉಳಿದಿವೆ. ದಿ.17ರ ಮಂಗಳವಾರ ಬೆಳಿಗ್ಗೆಯಿಂದಲೇ ಕಂಠೀರವ ಸ್ಟುಡಿಯೋ ಆವರಣದಲ್ಲಿರುವ ಪುನೀತ್ ರಾಜ್‌ಕುಮಾರ್ ಅವರ ಸಮಾಧಿಯತ್ತ ರಾಜ್ಯಾದ್ಯಂತ ಇರುವ ಸಹಸ್ರಾರು ಅಭಿಮಾನಿಗಳು ಬಂದು ನಮನ ಸಲ್ಲಿಸುತ್ತಿದ್ದುದು ಕಂಡು ಬಂದಿತು, ಅಭಿಮಾನಿಗಳಿಂದ ತುಂಬಿ ತುಳುಕುತ್ತಿದ್ದ ಆ ಸ್ಥಳದಲ್ಲಿ ಹಬ್ಬದ ವಾತಾವರಣವೇ ಸೃಷ್ಟಿಯಾಗಿತ್ತು, ರಾಘವೇಂದ್ರ ರಾಜ್‌ಕುಮಾರ್, ಗುರು ರಾಜ್‌ಕುಮಾರ್, ವಿನಯ್ ರಾಜ್ ಕುಮಾರ್ ಸೇರಿದಂತೆ ರಾಜ್‌ಕುಮಾರ್ ಕುಟುಂಬದ ಎಲ್ಲರೂ ಅಲ್ಲಿಗೆ ಬಂದು ಪುನೀತ್ ಸಮಾಧಿಗೆ ಪುಷ್ಪನಮನ ಸಲ್ಲಿಸಿದರು,

ತಮ್ಮನನ್ನು ನೆನೆದು ಭಾವುಕರಾದ ಶಿವರಾಜ್‌ಕುಮಾರ್ : ಪ್ರೀತಿಯ ತಮ್ಮನ ಹುಟ್ಟುಹಬ್ಬದ ಪ್ರಯುಕ್ತ ಹ್ಯಾಟ್ರಿಕ್‌ಹೀರೋ ಶಿವರಾಜಕುಮಾರ್ ಅವರು ಸೋಷಿಯಲ್ ಮೀಡಿಯಾದಲ್ಲಿ ಸಿನಿಮಾದ ಹಾಡಿನ ಸಾಲುಗಳ ಮೂಲಕ ಭಾವುಕ ನುಡಿಗಳನ್ನಾಡಿದ್ದಾರೆ. ಆಕಾಶದಾಚೆ ಎಲ್ಲೋ ದೇವರಿಲ್ಲವೋ, ಇದು ಆಗ ಕೇಳಿದಾಗ ಎಷ್ಟು ನಿಜ ಅನ್ನಿಸ್ತು.. ಈಗಲೂ ಹಾಗೇ ಇದೆ. ನಿನ್ನನ್ನು ಆಕಾಶದಾಚೆ ಹುಡುಕುವ ಅವಶ್ಯಕತೆ ಇಲ್ಲವೇ ಇಲ್ಲ. ಇಡೀ ಕರ್ನಾಟಕದಲ್ಲಿ ಎಲ್ಲೇ ಹೋದರೂ ಜನ ನಿನ್ನನ್ನು ಪ್ರತಿದಿನ ಸಂಭ್ರಮಿಸುತ್ತಾರೆ. ನಿನ್ನ ಹುಟ್ಟುಹಬ್ಬ ನಮ್ಮೆಲ್ಲರಿಗೂ ಹಬ್ಬ. ನಿನ್ನ ಹೆಸರು ಹೇಳಿದೊಡನೆ ಮೂಡುವ ನಗು, ನೀನು ಎಲ್ಲರಿಗೂ ಕೊಟ್ಟಿರುವ ಉಡುಗೊರೆ ಎಂದು ಬರೆಯುವ ಮೂಲಕ ಶಿವಣ್ಣ ಪ್ರೀತಿಯ ಸಹೋದರನನ್ನು ಸ್ಮರಿಸಿದ್ದಾರೆ

ಪತಿಯ ನೆನಪಲ್ಲಿ ಅಶ್ವಿನಿ ಪುನೀತ್ ರಾಜ್‌ಕುಮಾರ್ : ಅಶ್ವಿನಿ ಪುನೀತ್ ರಾಜಕುಮಾರ್ ಅವರು ತಮ್ಮ ಪತಿಯನ್ನು ನೆನದು, ಅಪ್ಪು ಈಗ ಕೇವಲ ಒಬ್ಬ ವ್ಯಕ್ತಿ ಅಲ್ಲ.. ಅವರು ಒಂದು ಭಾವನೆ. ಕನ್ನಡಿಗರಷ್ಟೇ ಅಲ್ಲ, ವಿಶ್ವದಾದ್ಯಂತ ಅನೇಕ ಜನ ಅವರ ಮಾನವೀಯತೆ ಮತ್ತು ವಿನಮ್ರತೆಯ ಗುಣಗಳನ್ನು ಆಳವಾಗಿ ಅನುಭವಿಸುತ್ತಿದ್ದಾರೆ. ಅಪ್ಪುವನ್ನು ತಮ್ಮವರಂತೆ ಪ್ರೀತಿಸುವ ಲಕ್ಷಾಂತರ ಜನರೊಂದಿಗೆ ಈ ದಿನವನ್ನು ಆಚರಿಸುವುದು ನನಗೆ ವಿನಮ್ರತೆಯ ಸಂಗತಿ. ನಮ್ಮ ಕುಟುಂಬ, ಸ್ನೇಹಿತರು ಮತ್ತು ಅಭಿಮಾನಿಗಳಂತೆ ಎಲ್ಲರ ಮನದಲ್ಲೂ ಅಪ್ಪು ಜೀವಂತವಾಗಿದ್ದಾರೆ ಎಂದು ಹೇಳಿದ್ದಾರೆ.

ಪುನೀತ್ ರಾಜಕುಮಾರ್ ಅವರ ನಿಸ್ವಾರ್ಥ ಸೇವೆ ಹಾಗೂ ಸಮಾಜಮುಖಿ ಕಾರ್ಯಗಳನ್ನು ಗೌರವಿಸಿದ ಕರ್ನಾಟಕ ಸರ್ಕಾರವು ಅವರಿಗೆ ಮರಣೋತ್ತರವಾಗಿ ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಕರ್ನಾಟಕ ರತ್ನ ನೀಡಿ ಗೌರವಿಸಿದೆ. ಪುನೀತ್ ಅವರ ಹುಟ್ಟುಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸಲು ಅವರು ನಟಿಸಿದ ಎವರ್ ಗ್ರೀನ್ ಸಿನಿಮಾ ಆಕಾಶ್ ಮರುಬಿಡುಗಡೆಯಾಗಿದೆ. ಇದರ ಜೊತೆಗೆ ಅಭಿಮಾನಿಗಳು ರಕ್ತದಾನ ಶಿಬಿರಗಳು, ಅನ್ನದಾನ ಮತ್ತು ನೇತ್ರದಾನ ನೋಂದಣಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ತಮ್ಮ ನೆಚ್ಚಿನ ನಟನಿಗೆ ಅರ್ಥಪೂರ್ಣ ಗೌರವ ಸಲ್ಲಿಸಿದ್ದಾರೆ.

ಗಾಡ್ ಪ್ರಾಮಿಸ್‌ನಲ್ಲಿ ಸೂಚನ್-ಜೂಹಿ ಜಯಕುಮಾರ್



ನವ ನಿರ್ದೇಶಕ ಸೂಚನ್ ಶೆಟ್ಟಿ ಅವರ ಪರಿಕಲ್ಪನೆಯಲ್ಲಿ ಮೂಡಿ ಬರ್ತಿರುವ ಚಿತ್ರ, ಗಾಡ್ ಪ್ರಾಮಿಸ್. ತನ್ನ ವಿಭಿನ್ನ ಶೈಲಿಯ ಟೈಟಲ್‌ನಿಂದಲೇ ಕುತೂಹಲ ಹುಟ್ಟು ಹಾಕಿರುವ ಈ ಚಿತ್ರದಿಂದ ಹೊಸ ಅಪ್‌ಡೇಟ್‌ವೊಂದು ಈಗ ಸಿಕ್ಕಿದೆ. ಸೂಚನ್ ಶೆಟ್ಟಿ ನಾಯಕನಾಗಿ ನಟಿಸಿರುವ ಗಾಡ್ ಪ್ರಾಮಿಸ್ ಸಿನಿಮಾಗೀಗ ನಾಯಕಿಯೊಬ್ಬರು ಸಿಕ್ಕಿದ್ದಾರೆ. ಹೌದು, ಕೇರಳ ಮೂಲದ ಮಲಯಾಳಂ ಚಿತ್ರಗಳಲ್ಲಿ ಮಿಂಚಿರುವ ಜೂಹಿ ಜಯಕುಮಾರ್ ಅವರು ಸೂಚನ್ ಶೆಟ್ಟಿ ಅವರ ಜತೆ ನಾಯಕಿಯಾಗಿ ಸಾಥ್ ಕೊಟ್ಟಿದ್ದಾರೆ.

ಪವಿ ಕೇರ್ ಟೇಕರ್, ತಲೈವಾ ತಲೈವಿ ಹಾಗೂ ಸುಮತಿ ಒಲವು ಮುಂತಾದ ಸಿನಿಮಾಗಳಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿರುವ ಜೂಹಿ ಜಯಕುಮಾರ್ ಅವರೀಗ ಗಾಡ್ ಪ್ರಾಮಿಸ್ ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಾಯಕಿಯಾಗಿ ಕನ್ನಡಿಗರಿಗೆ ಪರಿಚಯವಾಗುತ್ತಿದ್ದಾರೆ. ಜೂಹಿ ಜಯಕುಮಾರ್ ಅವರನ್ನು ಚಿತ್ರತಂಡ ಆಡಿಷನ್ ಮೂಲಕ ಆಯ್ಕೆ ಮಾಡಿದೆ.

ಕುಂದಾಪುರ ಹಾಗೂ ಬೆಂಗಳೂರು ಎರಡೂ ನಗರಗಳಲ್ಲಿ ನಾಯಕಿಯ ಪಾತ್ರಕ್ಕೆ ಆಡಿಷನ್ ನಡೆಸಲಾಯಿತು. ಆನ್‌ಲೈನ್ ಹಾಗೂ ಆಫ್‌ಲೈನ್ ಎರಡರಲ್ಲೂ ನಡೆದ ಆಡಿಷನ್‌ನಲ್ಲಿ ಇವರು ಸೆಲೆಕ್ಟ್ ಆಗಿದ್ದಾರೆ, 4 ಸಾವಿರಕ್ಕೂ ಹೆಚ್ಚು ಆಕಾಂಕ್ಷಿಗಳು ಆನ್‌ಲೈನ್‌ನಲ್ಲಿ ಹಾಗೂ ಆಫ್‌ಲೈನ್ ಆಡಿಷನ್‌ನಲ್ಲಿ 1 ಸಾವಿರಕ್ಕೂ ಹೆಚ್ಚು ಯುವತಿಯರು ಭಾಗಿಯಾಗಿದ್ದರು. ಇಷ್ಟು ಜನರ ಪೈಕಿ ನಾಯಕಿ ಪಾತ್ರಕ್ಕೆ ಜೂಹಿ ಜಯಕುಮಾರ್ ಅವರೇ ಸೂಕ್ತರಾಗಿದ್ದಾರೆಂದು ಚಿತ್ರತಂಡ ಅವರನ್ನು ಆಯ್ಕೆ ಮಾಡಿದೆ. ಆಯ್ಕೆಯ ಬಳಿಕ ಜೂಹಿ ಅವರಿಗಾಗಿ ವರ್ಕ್ ಶಾಪ್ ನಡೆಸಲಾಯಿತು. ಈ ವೇಳೆ ಅವರು ತಮ್ಮ ಕಲಾ ಕೌಶಲ್ಯವನ್ನು ಅಚ್ಚುಕಟ್ಟಾಗಿ ಪ್ರದರ್ಶಿಸಿದರು. ತಮ್ಮ ಪಾತ್ರದ ಬಗ್ಗೆ ಮಾತನಾಡಿರುವ ಜೂಹಿ ಜಯಕುಮಾರ್, ಗಾಡ್ ಪ್ರಾಮಿಸ್ ಸಿನಿಮಾದಲ್ಲಿ ತಮ್ಮ ಪಾತ್ರಕ್ಕೆ ಒಳ್ಳೆಯ ಸ್ಕೋಪ್ ಇದೆ. ಇದು ಬರೀ ಮರ ಸುತ್ತವಂಥ ಪಾತ್ರವಲ್ಲ, ಬದಲಿಗೆ ತೂಕ ಇರುವಂತಹ ಪಾತ್ರದಲ್ಲಿ ತಾವು ಅಭಿನಯಿಸಿದ್ದೇನೆ. ಒಂದೊಳ್ಳೆ ತಂಡದ ಜೊತೆ ಕೆಲಸ ಮಾಡುತ್ತಿರುವ ಖುಷಿ ನನಗಿದೆ. ನಿರ್ದೇಶಕ ಸೂಚನ್ ಶೆಟ್ಟಿ ಅವರು ಹೊಸತನಕ್ಕೆ ತುಡಿತ ಹೊಂದಿರುವ ನಿರ್ದೇಶಕರು. ಗಾಡ್ ಪ್ರಾಮಿಸ್ ಪ್ರೇಕ್ಷಕರಿಗೆ ಮನರಂಜನೆಯ ಮಹಾಪೂರವನ್ನೇ ಉಣಬಡಿಸಲಿದೆ ಎಂದರು.

ಪಾಂಚಜನ್ಯ ಫಿಲಂ ಪ್ರೊಡಕ್ಷನ್ ಅಡಿ ಮಹೇಂದ್ರ ಶೆಟ್ಟಿ ಅವರು ನಿರ್ಮಿಸುತ್ತಿರುವ ಗಾಡ್ ಪ್ರಾಮಿಸ್ ಸಿನಿಮಾಗೆ ಗುರುಪ್ರಸಾದ್ ನರ್ನಾಡ್ ಅವರು ಛಾಯಾಗ್ರಹಣ ಮಾಡುತ್ತಿದ್ದಾರೆ. ಭರತ್ ಮಧುಸೂದನ್ ಅವರ ಸಂಗೀತ ಸಂಯೋಜನೆ, ನವೀನ್ ಶೆಟ್ಟಿ ಅವರ ಸಂಕಲನ ಈ ಚಿತ್ರಕ್ಕಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

ಗರಿಷ್ಠ 32° ಕನಿಷ್ಠ 19°
ಹೊಸ ದಿಗಂತ
ಮೈಸೂರು
ಬುಧವಾರ
18 ಮಾರ್ಚ್ 2026



ಕಣ್ಣಿನ ತಪಾಸಣೆ ಕೊಯಮತ್ತೂರು ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ನಡೆದ ಕಣ್ಣಿನ ಉಚಿತ ತಪಾಸಣಾ ಶಿಬಿರದಲ್ಲಿ ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ಮುಗಿಸಿಕೊಂಡು ಬಂದ ಶಿಬಿರಾರ್ಥಿಗಳಿಗೆ ಬನ್ನೂರಿನ ರೋಟರಿ ಮಾಜಿ ಅಧ್ಯಕ್ಷ ಡಾ.ಮಹೇಂದ್ರಸಿಂಗ್ ಕಾಳಪ್ಪ ಕಣ್ಣಿನ ಕಳಜಿ ಕುರಿತಂತೆ ತಪಾಸಣೆಯ ಮಾಹಿತಿಯನ್ನು ನೀಡಿದರು.

ಅಂಬೇಡ್ಕರ್ ವಿಶ್ವಕ್ಕೆ ಮಾದರಿ | ೨
ಬದುಕು-ಬರಹ ತಿಳಿದುಕೊಳ್ಳಿ | ೩
ಐದಳ್ಳ ಕಾವಲು ಭೂಮಿ ವಿವಾದ: ಹೋರಾಟ | ೪

ಕಿರುಸುದ್ದಿ

ವೇಶ್ಯಾವಾಟಿಕೆ ನಡೆಸುತ್ತಿದ್ದ ನಾಲ್ವರಿಗೆ ಶಿಕ್ಷೆ

ಮೈಸೂರು: ವೇಶ್ಯಾವಾಟಿಕೆ ನಡೆಸುತ್ತಿದ್ದಾಗ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದ ನಾಲ್ವರಿಗೆ ನ್ಯಾಯಾಲಯ ಒಂದು ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ಸಾವಿರ ರೂ. ದಂಡ ವಿಧಿಸಿದೆ.

ಮೈಸೂರಿನ ಶಾಂತವೇರಿ ಗೋಪಾಲಗೌಡ ನಗರದ ನಿವಾಸಿಗಳಾದ ಅಶೋಕ, ದಸ್ತಗೀರ್, ಚೇತನ್ ಮತ್ತು ಸತೀಶ್ ಶಿಕ್ಷೆಗೆ ಒಳಗಾದವರು. ಈ ನಾಲ್ವರೂ ಹೆಣ್ಣು ಮಕ್ಕಳಿಗೆ ಕೆಲಸ ಕೊಡಿಸುವುದಾಗಿ ನಂಬಿಸಿ, ಮನೆಗೆ ಕರೆದುಕೊಂಡು ಬರುತ್ತಿದ್ದರು. ಬಳಿಕ ಮನೆಯಲ್ಲಿ ಬಲವಂತವಾಗಿ ವೇಶ್ಯಾವಾಟಿಕೆಗೆ ದೂಡುವ ಮೂಲಕ ದಂಧೆ ನಡೆಸುತ್ತಿದ್ದರು. ಈ ಬಗ್ಗೆ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನಗರದ ಏಳನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಎಂ. ರಮೇಶ, ಆರೋಪಿಗಳ ಮೇಲಿನ ಆರೋಪ ಸಾಬೀತಾದ ಕಾರಣ ಜೈಲು ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ.

ಮಹಿಳೆಯ ಸ್ಕೂಟರ್ ಕಳವು

ಮೈಸೂರು: ಮಹಿಳೆಯೊಬ್ಬರು ನಿಲ್ಲಿಸಿದ್ದ ಸ್ಕೂಟರನ್ನು ಖದೀಮನೊಬ್ಬ ಕದ್ದೊಯ್ದಿರುವ ಘಟನೆ ನಗರದಲ್ಲಿ ನಡೆದಿದೆ. ನಗರದ ಅಗ್ರಹಾರದಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ಉದ್ಯೋಗಿ ಶೈಲಕುಮಾರಿ ಸ್ಕೂಟರ್ ಕಳೆದುಕೊಂಡವರು. ಇವರು ಬ್ಯಾಂಕ್‌ಗೆ ಬಂದಿದ್ದು, ತಮ್ಮ ಜ್ಯೂಪಿಟರ್ ಸ್ಕೂಟರ್ ಅನ್ನು ಕಚೇರಿಯ ಮುಂದೆ ನಿಲ್ಲಿಸಿ ಕೀಲಿಯನ್ನು ಮರೆತು, ಬ್ಯಾಂಕ್ ಒಳಗೆ ತೆರಳಿದ್ದಾರೆ. ಕೆಲಸ ಮುಗಿದ ಬಳಿಕ ವಾಪಸ್ ಬಂದು ನೋಡಿದಾಗ ಸ್ಕೂಟರ್ ಇರಲಿಲ್ಲ. ಈ ಸಂಬಂಧ ಅವರು ಕೃಷ್ಣರಾಜ ಠಾಣೆಯ ಪೊಲೀಸರಿಗೆ ದೂರು ನೀಡಿದ್ದು, ಈ ಬಗ್ಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

8 ಲಕ್ಷ ರೂ. ಪಡೆದು ಮೋಸ ಮಾಡಿದ್ದ ಇಬ್ಬರಿಗೆ ಜೈಲು ಶಿಕ್ಷೆ

ಮೈಸೂರು: ನಗರದಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಮೂವರಿಂದ 8 ಲಕ್ಷ ರೂ. ಪಡೆದು ವಂಚಿಸಿದ್ದ ಕರಾಮುಕ್ತ ವಿವಿಯ ಇಬ್ಬರು ಆರೋಪಿಗಳಿಗೆ ನಗರದ ನ್ಯಾಯಾಲಯ 2 ವರ್ಷ 6 ತಿಂಗಳ ಶಿಕ್ಷೆ ಹಾಗೂ 40 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ. ಮೈಸೂರಿನ ಗಾಂಧಿನಗರದ ನಿವಾಸಿ ಎಂ.ಕೃಷ್ಣಮೂರ್ತಿ ಹಾಗೂ ಎನ್. ಆರ್.ಮೊಹಲ್ಲಾದ ನಿವಾಸಿ ಮಂಜುನಾಥ್ ಶಿಕ್ಷೆಗೆ ಒಳಗಾದವರು. ಆರೋಪಿಗಳ ಮಾತನ್ನು ನಂಬಿ ಗೋವಿಂದ ಪವಾರ್, ಪ್ರಕಾಶ್ ಹಾಗೂ ಮಾರುತಿ ಎಂಬವರು ಹಣ ಕಳೆದುಕೊಂಡಿದ್ದರು.

ಆರೋಪಿಗಳು ಕರ್ನಾಟಕ ರಾಜ್ಯ ಮುಕ್ತ ವಿವಿಯಲ್ಲಿ ಪ್ರಥಮ ದರ್ಜೆ ಹಾಗೂ ದ್ವಿತೀಯ ದರ್ಜೆ ಗುಮಾಸ್ತರ ಕೆಲಸ ಕೊಡಿಸುತ್ತೇವೆ ಎಂದು ನಂಬಿಸಿ ಮೂವರಿಂದಲೂ 8 ಲಕ್ಷ ರೂ. ಹಣ ಪಡೆದಿದ್ದರು. ನಂತರ ಸರ್ಕಾರಿ ಹುದ್ದೆಗಳ ನಕಲಿ ಆದೇಶಗಳನ್ನು ಸೃಷ್ಟಿಸಿದ್ದರು. ಅವುಗಳನ್ನೇ ನಿಜವಾದ ಆದೇಶ ಪತ್ರಗಳು ಎಂದು ಬಿಂಬಿಸಿ ಮೂವರಿಗೂ ನೀಡಿದ್ದರು. ನೇಮಕಾತಿ ಆದೇಶ ಪತ್ರಗಳು ನಕಲಿ ಎಂದು ತಿಳಿದ ಬಳಿಕ ಮೋಸ ಹೋದ ಮೂವರೂ ಮೈಸೂರಿನ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿ ಸಿದ್ದರು. ಅಂದಿನ ಇನ್‌ಸ್ಪೆಕ್ಟರ್ ಟಿ.ಪಿ.ಮುತ್ತಣ್ಣ ಅವರು ನ್ಯಾಯಾಲಯಕ್ಕೆ ದೋಷಾರೋಪಣಾಪಟ್ಟಿ ಸಲ್ಲಿಸಿದ್ದರು. ಈ ಸಂಬಂಧ ವಿಚಾರಣೆ ನಡೆಸಿದ ನಗರದ ಒಂದನೇ ಅಧಿಕ ಸಿಜೆಎಂ ನ್ಯಾಯಾಲಯದ ನ್ಯಾಯಾಧೀಶರಾದ ಎ.ಜಿ.ಶಿಲ್ಪ ಅವರು, ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ ಎಂ.ಕೃಷ್ಣಮೂರ್ತಿ ಹಾಗೂ ಮಂಜುನಾಥ್‌ಗೆ ಶಿಕ್ಷೆ ವಿಧಿಸಿದ್ದಾರೆ. ಸರ್ಕಾರಿ ಅಭಿಯೋಜಕ ಕೆ.ಪ್ರಕಾಶ್ ವಾದ ಮಂಡಿಸಿದ್ದರು.

ವಿದ್ಯಾರ್ಥಿಗೆ ವಂಚನೆ

ಮೈಸೂರು: ವ್ಯಾಪಾರ ಆರಂಭಿಸಲು ಪ್ರತಿಷ್ಠಿತ ಕಂಪೆನಿಯ ಉತ್ಪನ್ನಗಳ ವಿತರಕಯನ್ನು ಕೊಡಿಸುವುದಾಗಿ ವಿದ್ಯಾರ್ಥಿಯೊಬ್ಬರಿಗೆ ನಂಬಿಸಿದ ಖದೀಮನೊಬ್ಬ 4.44 ಲಕ್ಷ ರೂ. ವಂಚಿಸಿರುವ ಘಟನೆ ಮೈಸೂರು ನಗರದಲ್ಲಿ ನಡೆದಿದೆ. ಮೈಸೂರಿನ ನಿಮಿಷಾಂಬ ಬಡಾವಣೆಯ ನಿವಾಸಿಯಾದ ದಂತ ವೈದ್ಯಕೀಯ ವಿದ್ಯಾರ್ಥಿ ರೋಹಿತ್ ಹಣ ಕಳೆದುಕೊಂಡವರು. ಅವರಿಗೆ ಇ-ಮೇಲ್ ಮೂಲಕ ವ್ಯಾಪಾರ ಆರಂಭಿಸಲು ಪ್ರತಿಷ್ಠಿತ ಕಂಪೆನಿಯ ವಿತರಕ ಹೊಣೆಯನ್ನು ಕೊಡಿಸುತ್ತೇನೆ ಎಂಬ ಸಂದೇಶ ಖದೀಮನಿಂದ ಬಂದಿದೆ.

ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹೇಳಿಕೆ

ಯುದ್ಧಕ್ಕೆ ನಮ್ಮ ಅಹಂ ಕಾರಣ

ಮೈಸೂರು: ನಾನು ಶ್ರೇಷ್ಠ ಎನ್ನುವ ಮನಸ್ಥಿತಿಯಿಂದ ಯುದ್ಧಗಳು ನಡೆಯುತ್ತಿವೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಹೇಳಿದರು.

ಮಂಗಳವಾರ ನಗರದ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಎನ್.ರಾಚಯ್ಯ ಅಧ್ಯಯನ ಪೀಠ, ರಾಜ್ಯಶಾಸ್ತ್ರ ವಿಭಾಗದ, ಸಾರ್ವಜನಿಕ ಆಡಳಿತ ವಿಭಾಗದ ಸಹಯೋಗದಲ್ಲಿ ಏರ್ಪಡಿಸಿದ್ದ ಭಾರತದಲ್ಲಿ ಸಮಕಾಲೀನ ರಾಜ್ಯ, ಪ್ರಜಾಪ್ರಭುತ್ವ ಮತ್ತು ಸಮಾಜ ಕಲ್ಯಾಣ ವಿಷಯ ಕುರಿತು ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಡೀ ಪ್ರಪಂಚವೇ ದುಸ್ಥಿತಿಗೆ ಬಂದಿಲ್ಲ, ಕೆಲವು ದೇಶಗಳಲ್ಲಿ ಯುದ್ಧವಾ ಗುತ್ತಿದೆ ಅಷ್ಟೇ. ಇನ್ನುಳಿದ ದೇಶಗಳು ಶಾಂತಿ ಕಾಪಾಡಿಕೊಂಡಿವೆ. ಯುದ್ಧದ ಪರಿಣಾಮವನ್ನು ನಾವು ಕೂಡ ಎದುರಿಸುತ್ತಿವೆ. ಇದಕ್ಕೆಲ್ಲ ಕಾರಣ ರಾಜಕಾರಣಿಗಳು ಎಂದು ಬೇಸರ ವ್ಯಕ್ತಪಡಿಸಿದರು. ಎನ್.ರಾಚಯ್ಯನವರ ಜೀವನ ವನ್ನು ಸಮಕಾಲೀನಗೊಳಿಸಿ ಇಂದಿನ ಸಮಸ್ಯೆಗಳಿಗೆ ಪರಿಹಾರ ವನ್ನು ಸೂಚಿಸಬೇಕು. ಈ ರೀತಿಯ ಆಲೋಚನೆ ವಿದ್ಯಾರ್ಥಿಗಳಲ್ಲಿ ಬರಬೇಕಾದರೆ ನಿತ್ಯ ಓದುವ ಅಭ್ಯಾಸ ಬೆಳೆಸಿಕೊಳ್ಳ ಬೇಕು ಎಂದು ಹೇಳಿದರು. ನಿವೃತ್ತ ಪ್ರಾಧ್ಯಾಪಕ ಡಾ.ಉಮಾಪತಿ ಮಾತನಾಡಿ, ರಾಜ್ಯ ವಿಧಾನಸಭೆಯ ಕಲಾಪದಲ್ಲಿ ಶಾಸಕರ ಲಿಖಿತ ಪ್ರಶ್ನೆಗಳಿಗೆ ಸಚಿವರ ಉತ್ತರ ನೀಡದಿರುವ ಪ್ರಕ್ರಿಯೂ ಪ್ರಜಾಪ್ರಭುತ್ವಕ್ಕೆ ಶೋಭೆಯಲ್ಲ ಎಂದು ಹೇಳಿದರು. ಪ್ರಸ್ತುತ ದಿನಗಳಲ್ಲಿ ನೈಜ ಪ್ರಜಾಪ್ರಭುತ್ವ ವ್ಯವಸ್ಥೆ ಇಲ್ಲ. ಹಣ ಬಲ ಮತ್ತು ತೋಳ್ಬಲಗಳು ಪ್ರಜಾಪ್ರಭುತ್ವನ್ನು ಆಳುತ್ತಿವೆ. ಒರಿಸ್ಸಾದ ಶಾಸಕರನ್ನು ಖರೀದಿಸುವ ಕುತಂತ್ರಗಳು ನಡೆದಿವೆ. ಇದು ಪ್ರಜಾಪ್ರಭುತ್ವದ ಗುಣಮಟ್ಟವನ್ನು ಕ್ಷೀಣಿಸುವ ಕೆಲಸಗಳಾಗಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಉಚಿತ ಯೋಜನೆಗಳು ರಾಜ್ಯಗಳ ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರಿವೆ. ಹೀಗಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಉಚಿತ ಯೋಜನೆಗಳ ಘೋಷಣೆಯನ್ನು ನಿಲ್ಲಿಸಬೇಕು. ಮಹಾರಾಷ್ಟ್ರದ ಅರಣ್ಯ ಸಚಿವ 'ಲಡಾಕಿ ಬೆಹಾನ್' ಯೋಜನೆ ಜಾರಿಗೆ ತಂದಿದ್ದು, ಇದಕ್ಕೆ ಹಣ ಇಲ್ಲದೆ 12 ಸಾವಿರ ಎಕರೆ ಕಾಡನ್ನು ಕಡಿದು ಯೋಜನೆ ಅನುಷ್ಠಾನಗೊಳಿಸಬಹುದು ಎನ್ನುತ್ತಿದ್ದಾರೆ. ಇದು ಸೂಕ್ತ ಕ್ರಮವಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರದ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಕೃಷ್ಣ ಹೊಂಬಾಳ್ ಮತ್ತಿತರರು ಹಾಜರಿದ್ದರು.



ವಿರೋಧ ಪಕ್ಷಗಳ ಪಾತ್ರ ಮುಖ್ಯ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷಗಳ ಪಾತ್ರ ಮುಖ್ಯ. ಇತ್ತೀಚೆಗೆ ವಿಧಾನಸಭೆಯಲ್ಲಿ ನಡೆದ ಕಲಾಪದಲ್ಲಿ ಎಲ್ಲ ಕ್ಷೇತ್ರದ ಶಾಸಕರೂ, ವಿರೋಧ ಪಕ್ಷಗಳ ಸದಸ್ಯರ ಪ್ರಶ್ನೆಗಳಿಗೆ ಸಚಿವರು ಉತ್ತರ ನೀಡಿಲ್ಲ. ಇದರಿಂದ ಅಸಮಾಧಾನಗೊಂಡ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಸದನದಿಂದ ಹೊರ ನಡೆದಿದ್ದರು. ಇಂತಹ ಪ್ರಸಂಗಗಳು ಪ್ರಜಾಪ್ರಭುತ್ವ ವ್ಯವಸ್ಥೆಗೆ ಶೋಭೆ ತರುವುದಿಲ್ಲ.

ಎಸೆಸ್ಸೆಲ್ಸಿ ಪರೀಕ್ಷೆಗೆ ಸಕಲ ಸಿದ್ಧತೆ: ಕೃಷ್ಣಪ್ಪ

ಕೆ.ಆರ್.ನಗರ: ಇಂದಿನಿಂದ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದ್ದು, ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ವಹಿಸಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಕೃಷ್ಣಪ್ಪ ಹೇಳಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಯಲ್ಲಿ ಪರೀಕ್ಷಾಪೂರ್ವ ಸಿದ್ಧತೆ ಸಂಬಂಧ ಪರೀಕ್ಷಾ ಕೇಂದ್ರಗಳಿಗೆ ಬೇಟಿ ನೀಡಿ ಪರಿಶೀಲನೆ ನಡೆಸಿ ಸಂಬಂದಿಸಿದ ಶಿಕ್ಷಕರಿಗೆ ಸಲಹೆ ಸೂಚನೆ ನೀಡಿದ ನಂತರ ಸುದ್ದಿಗಾರ ರೊಂದಿಗೆ ಮಾತನಾಡಿ ಈ ವಿಚಾರ ತಿಳಿಸಿದರು.

ಕೆ.ಆರ್.ನಗರಮತ್ತುಸಾಲಿಗ್ರಾಮಆವಳಿ ತಾಲ್ಲೂಕಿನಲ್ಲಿ ಪರೀಕ್ಷೆಗಳನ್ನು ಸುಗಮವಾಗಿ ಹಾಗೂ ನಿಯಮಾನುಸಾರವಾಗಿ ನಡೆಸಲು ಅಗತ್ಯವಾದ ಎಲ್ಲಾ ಪೂರ್ವ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದ ಬಿಇಓ ಆರ್.ಕೃಷ್ಣಪ್ಪ ಪ್ರಸಕ್ತ ಸಾಲಿನಲ್ಲಿ ನಮ್ಮ ತಾಲೂಕಿನಲ್ಲಿ 35 ಸರ್ಕಾರಿ , 6 ವಸತಿ ಶಾಲೆ, 13 ಅನುದಾನಿತ 18 ಅನುದಾನರಹಿತ ಒಟ್ಟು 72 ಪ್ರೌಢ ಶಾಲೆಗಳಿದ್ದು, 11 ಪರೀಕ್ಷಾ ಕೇಂದ್ರಗಳು, 130 ಕೊಠಡಿಗಳಲ್ಲಿ ಎಸ್‌ಎಸ್ ಎಲ್‌ಸಿ ಪರೀಕ್ಷೆ-1 ನಡೆಯಲಿವೆ. ಒಟ್ಟು 2979 ಮಕ್ಕಳು ಪರೀಕ್ಷೆ ಬರೆಯಲಿದ್ದಾರೆ. ಇದರಲ್ಲಿ ಹೊಸದಾಗಿ ಪರೀಕ್ಷೆ ಬರೆಯುವವರು ಬಾಲಕರು-1348, ಬಾಲಕಿಯರು 1340, ಇನ್ನೂ ಪುನರಾವರ್ತಿತ ಬಾಲಕರು - 161, ಬಾಲಕಿಯರು - 130 ಇದ್ದಾರೆ. 220 ಕೊಠಡಿ ಮೇಲ್ವಿಚಾರಕರು 75 ಸಿಬ್ಬಂದಿ ವರ್ಗದವರು ಪರೀಕ್ಷಾ ಕಾರ್ಯಕ್ಕೆ ನಿಯೋಜನೆ ಮಾಡಲಾಗಿದೆ ಎಂದರು.

ಈ ಎಲ್ಲಾ ಕ್ರಮಗಳ ಮೂಲಕ ತಾಲೂಕಿನಫಲಿತಾಂಶಜಿಲ್ಲೆಯಲ್ಲಿಮೊದಲಮೂರು ಸ್ಥಾನದೊಳಗೆ ಪಡೆಯುವ ನಿರೀಕ್ಷೆ ಹೊಂದಿದ್ದೇವೆ ಎಂದು ಮಾಹಿತಿ ನೀಡಿದರು.



ಅಧ್ಯಕ್ಷರಾಗಿ ಕಿಟ್ಟಪ್ಪ ಅವಿರೋಧ ಆಯ್ಕೆ



ನಂಜನಗೂಡು: ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜಿ.ಕಿಟ್ಟಪ್ಪ, ಉಪಾಧ್ಯಕ್ಷರಾಗಿ ಕೃಷ್ಣಪ್ಪ ಅವಿರೋಧವಾಗಿ ಆಯ್ಕೆಯಾದರು.

13 ಸದಸ್ಯರ ಬಲವನ್ನು ಹೊಂದಿರುವ ನಂಜನಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಮಂಗಳವಾರ ಚುನಾವಣೆಯನ್ನು ನಡೆಸಲಾಯಿತು. ಅಧ್ಯಕ್ಷ ಸ್ಥಾನಕ್ಕೆ ಜಿ.ಕಿಟ್ಟಪ್ಪ, ಉಪಾಧ್ಯಕ್ಷ ಸ್ಥಾನಕ್ಕೆ ಕೃಷ್ಣಪ್ಪ ಹೊರತುಪಡಿಸಿ ಯಾರೊಬ್ಬರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯನ್ನು ಘೋಷಿಸಲಾಯಿತು.

ನೂತನ ಅಧ್ಯಕ್ಷ ಜಿ.ಕಿಟ್ಟಪ್ಪ ಮಾತನಾಡಿ ನಂಜನಗೂಡು ಪಟ್ಟಣ ಮತ್ತು ಸುತ್ತಮುತ್ತಲಿನ ಗ್ರಾಮಗಳ ರೈತರಿಗೆ ನೆರವಾಗುವ ಸದುದ್ದೇಶದೊಂದಿಗೆ 2010 ರಲ್ಲಿ ನಂಜನಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಸ್ಥಾಪಿಸಲಾಯಿತು, ಸಂಘದ ಸದಸ್ಯರುಗಳು ಸಕಾಲಕ್ಕೆ ಸಾಲವನ್ನು ಮರುಪಾವತಿ ಮಾಡುತ್ತಿರುವುದರಿಂದ ಸಂಘವು ಕಳೆದ 15 ವರ್ಷಗಳಿಂದ ಲಾಭದತ್ತ ಮುನ್ನಡೆದಿದೆ, ಮುಂಬರುವ ದಿನಗಳಲ್ಲಿ ಈ ಕೃಷಿ ಪತ್ತಿನ ಸಹಕಾರ ಸಂಘವನ್ನು ಸಹಕಾರ ಬ್ಯಾಂಕ್ ಆಗಿ ಅಭಿವೃದ್ಧಿಪಡಿಸಲು ಶ್ರಮಿಸುವ ಜೊತೆಗೆ ನಗರ ಪ್ರದೇಶ ಮತ್ತು ಸುತ್ತಮುತ್ತಲಿನ ಗ್ರಾಮಗಳಿಂದ ರೈತರಿಗೆ ಕೃಷಿ ಚಟುವಟಿಕೆಯಲ್ಲಿ ತೊಡಗಲು ಆರ್ಥಿಕ ನೆರವು ಒದಗಿಸಿ ರೈತರಿಗೆ ಅನುಕೂಲ ಕಲ್ಪಿಸಲಾಗುವುದು ಎಂದರು.

ಉಪಾಧ್ಯಕ್ಷ ಕೃಷ್ಣಪ್ಪ ಮಾತನಾಡಿ ನನ್ನ ಆಯ್ಕೆಗೆ ಸಹಕಾರ ನೀಡಿದ ಎಲ್ಲಾ ನಿರ್ದೇಶಕರಿಗೂ ಕೃತಜ್ಞತೆ ಸಲ್ಲಿಸುವ ಜೊತೆಗೆ ನಮಗೆ ಸಿಕ್ಕ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಅಧ್ಯಕ್ಷರ ಜೊತೆಗೂಡಿ ಸರ್ಕಾರದ ಸವಲತ್ತುಗಳನ್ನು ರೈತರ ಮನೆ ಬಾಗಿಲಿಗೆ ತಲುಪಿಸುವ ಮೂಲಕ ರೈತರ ಸೇವೆ ಮಾಡಲು ಮುಂದಾಗುತ್ತೇನೆ ಎಂದರು.

ನಿರ್ದೇಶಕರಾದ ಎನ್.ರಾಜು, ಸಂಜಯ್, ಸತೀಶ್, ಪ್ರೇಮ, ನಾಗರತ್ನ, ಆರ್. ಮಹೇಶ್, ವೆಂಕಟಸ್ವಾಮಿ, ಶ್ರೀನಿವಾಸ್, ಪುಟ್ಟಲಿಂಗ, ನಂಜುಂಡಸ್ವಾಮಿ, ಶಿವಲಿಂಗೇಗೌಡ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಟಿ.ಗೋವಿಂದ, ಪ್ರತಿನಿಧಿಗಳಾದ ಭವ್ಯ, ಮುಖಂಡರಾದ ನಂದನ್ ಗಿರಿ ಉಪಸ್ಥಿತರಿದ್ದರು.

ಆಶ್ರಮಕ್ಕೆ ನಾರೇಯಣ ಪ್ರಶಸ್ತಿ

ಮೈಸೂರು: ಶ್ರೀ ಯೋಗಿನಾರೇಯಣ ಯತೀಂದ್ರ ಪ್ರಚಾರ ಸಭಾ ವತಿಯಿಂದ 2026ನೇ ಸಾಲಿನ ಪ್ರತಿಷ್ಠಿತ ನಾರೇಯಣ ಪ್ರಶಸ್ತಿಗೆ ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮವನ್ನು ಆಯ್ಕೆ ಮಾಡಲಾಗಿದ್ದು, ಮಾರ್ಚ್ 22 ರಂದು ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯಲಿದೆ.

ಅಂದು ಬೆಳಗ್ಗೆ 11 ಗಂಟೆಗೆ ಚಾಮರಾಜನಗರದ ವರನಟ ಡಾ. ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ 'ನಾರೇಯಣ ಪ್ರಶಸ್ತಿ'ಯನ್ನು ಆಶ್ರಮದ ಪರವಾಗಿ ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಜಿ ಮಹರಾಜ್ ಸ್ವೀಕರಿಸಲಿದ್ದಾರೆ. ಪ್ರಶಸ್ತಿಯು ಅಭಿನಂದನಾ ಪ್ರಶಂಸಾ ಪತ್ರ, ಶ್ರೀ ಯೋಗಿನಾರೇಯಣ ಯತೀಂದ್ರರ ಸ್ಮರಣ ಫಲಕ ಹಾಗೂ 50,000 ರೂಪಾಯಿಗಳ ನಗದು ನೀಡಿ ಗೌರವಿಸಲಾಗುತ್ತದೆ.

ಮೊದಲನೇ ಬಾರಿ ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ ಪ್ರೊ ಸಿ ಎನ್ ಶ್ರೀನಾಥ್ ಅವರಿಗೆ ಎರಡನೇ ಬಾರಿ ಮಂಡ್ಯ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ರಾಜ್ಯದ ಹಿರಿಯ ಐಎಎಸ್ ಅಧಿಕಾರಿ ಎಂ ಆರ್ ಶ್ರೀನಿವಾಸ್ ಮೂರ್ತಿ ಅವರಿಗೆ ಉತ್ತಮ ಆಡಳಿತಗಾರರಾಗಿ ಸೇವೆ ಸಲ್ಲಿಸಿದ್ದಕ್ಕೆ 'ನಾರೇಯಣ ಪ್ರಶಸ್ತಿ' ನೀಡಲಾಗಿತ್ತು.

ಪ್ರಶಸ್ತಿ ಸಮಾರಂಭದಲ್ಲಿ ಸುತ್ತೂರು ವ ೃ ತದ ಪೀಠಾಧಿಪತಿಗಳಾದ ಶ್ರೀಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮಿಯವರ ಸಾನಿಧ್ಯದಲ್ಲಿ ಕೈವಾರ ಶ್ರೀಕ್ಷೇತ್ರದ ಧರ್ಮಾ ಧಿಕಾರಿ ಡಾ.ಎಂ. ಆರ್.ಜಯರಾಮ್, ವಿಧಾನ ಪರಿಷತ್ ಸದಸ್ಯ ಡಾ. ಎಂ.ಆರ್ ಸೀತಾರಾಮ್, ಚಾಮರಾಜನಗರದ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎಂ ಆರ್ ಗಂಗಾಧರ್, ಚಾಮರಾಜನಗರದ ಜಿಲ್ಲಾಧಿಕಾರಿ ಶ್ರೀರೂಪಾ, ಚಾಮರಾಜನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ ಮುತ್ತುರಾಜು ಮತ್ತಿತರರು ಭಾಗವಹಿಸಲಿದ್ದು, ಶ್ರೀ ಯೋಗಿನಾರೇಯಣ ಯತೀಂದ್ರರ ಕುರಿತು ಲೇಖಕಿ ಡಾ. ಎಂ ಎನ್ ಕವಿತಾ ವಿಷಯ ಮಂಡಿಸಲಿದ್ದಾರೆ ಎಂದು ಪ್ರಧಾನ ಸಂಚಾಲಕ ಎಚ್.ಎ. ವೆಂಕಟೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯಮಟ್ಟದ ಯೋಗಾಸನ ಸ್ಪರ್ಧೆ

ಮೈಸೂರು: ಮೈಸೂರಿನ ಸುವರ್ಣ ಬೆಳಕು ಫೌಂಡೇಷನ್ ವತಿಯಿಂದ ಮೊದಲ ಬಾರಿಗೆ 2026ನೇ ಸಾಲಿನ ಶ್ರೀ ಮಹರ್ಷಿ ವಾಲ್ಮೀಕಿ ಯೋಗ ರತ್ನ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆಯನ್ನು ಮೇ 10 ರಂದು ಆಯೋಜಿಸಲಾಗಿದೆ ಎಂದು ಫೌಂಡೇಶನ್ ಗೌರಾವಧ್ಯಕ್ಷ ಮಹೇಶ್ ತಿಳಿಸಿದ್ದಾರೆ.

ರಾಜ್ಯದ ವಿವಿಧ ಜಿಲ್ಲೆಗಳ ಯೋಗ ಪಟುಗಳಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ವೇದಿಕೆ ಒದಗಿಸುವ ಉದ್ದೇಶದಿಂದ ಈ ಸ್ಪರ್ಧೆಯನ್ನು ಮೇ ತಿಂಗಳ ಮೊದಲ ವಾರದಲ್ಲಿ ನಡೆಸಲಾಗುತ್ತದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುಸುವವರು ನೋಂದಣಿ ಮಾಡಿಸಿಕೊಳ್ಳುವಂತೆ ತಿಳಿಸಿದ್ದಾರೆ.

ಸ್ಪರ್ಧೆಯಲ್ಲಿ ಚಾಂಪಿಯನ್ ಆಫ್ ಚಾಂಪಿಯನ್ ಪಟ್ಟ ಗೆದ್ದ ವಿಜೇತರಿಗೆ ಆಕರ್ಷಕ ಅಪ್ಪಟ ಬೆಳ್ಳಿ ಟ್ರೋಫಿ, ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು. ವಿಶೇಷ ವಿಭಾಗಗಳ ವಿಜೇತರಿಗೆ ಆಕರ್ಷಕ ಬಹುಮಾನಗಳನ್ನು ನೀಡಲಾಗುತ್ತದೆ. ಭಾಗವಹಿಸಿದ ಎಲ್ಲಾ ಸ್ಪರ್ಧಾರ್ಥಿಗಳಿಗೆ ಪ್ರಮಾಣಪತ್ರ ನೀಡಿ ಗೌರವಿಸಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ ನಂ 9448980010ನ್ನು ಸಂಪರ್ಕಿಸಬೇಕೆಂದು ತಿಳಿಸಿದ್ದಾರೆ.

ನಾಲ್ಕು ಲಕ್ಷ ರೂ. ಮೌಲ್ಯದ 40 ಗ್ರಾಂ ಎಂಡಿಎಂಎ ವಶ


ಮೈಸೂರು: ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ನಗರದ ಪೊಲೀಸರು ಬಂಧಿಸಿ, ಆತನಿಂದ 4 ಲಕ್ಷರೂ ಮೌಲ್ಯದ 40 ಗ್ರಾಂ ಎಂಡಿಎಂಎನ್ನು ವಶಪಡಿಸಿಕೊಂಡಿದ್ದಾರೆ.

ಕುವೆಂಪುನಗರ ಪೊಲೀಸರ ವಿಶೇಷ ತಂಡವು ಕುವೆಂಪುನಗರ ಠಾಣಾ ವ್ಯಾಪ್ತಿಯ ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿ ಎಂಡಿಎಂಎ ಮಾದಕ ವಸ್ತು ಇರುವಿಕೆ ಬಗ್ಗೆ ಮಾಹಿತಿ ಸಂಗ್ರಹಿಸಿದ್ದು, ಹಾಲಿಡೇ ಇನ್ ಸರ್ವೀಸ್ ಅಪಾರ್ಟ್‌ಮೆಂಟ್‌ನ ರೂಂ ನಂ: 03 ರ ಮೇಲೆ ದಾಳಿ ಮಾಡಿ, ರೂಂನಲ್ಲಿದ್ದ ಕೇರಳ ರಾಜ್ಯದ ಕಾಸರಗೂರು ಜಿಲ್ಲೆಯ ಬಲ್ಲಾ ಗ್ರಾಮದ ನಿವಾಸಿ ಶಬೀರ್ (28) ಎಂಬಾತನನ್ನು ಬಂಧಿಸಿ, ಈತನ ಸ್ವಾಧೀನದಲ್ಲಿದ್ದ ರೂ. 4,00,000 ಮೌಲ್ಯದ 40 ಗ್ರಾಂ ಎಂ.ಡಿ.ಎಂ.ಎ. ಮಾದಕ ವಸ್ತುವನ್ನು ಅಮಾನತ್ತುಪಡಿಸಿಕೊಳ್ಳಲಾಗಿದೆ. ಆರೋಪಿ ಶಬೀರ್‌ನನ್ನು ವಿಚಾರಣೆಗೊಳಪಡಿಸಲಾಗಿ, ಈತನ ವಿರುದ್ದ ಕೇರಳಾ ರಾಜ್ಯದ ಕಾಸರಗೂಡು ಜಿಲ್ಲೆಯ ಹೊಸದುರ್ಗ ಪೊಲೀಸ್ ಠಾಣೆಯಲ್ಲಿ 1-ದರೋಡೆ ಪ್ರಕರಣ ಹಾಗೂ ಬೆಂಗಳೂರು ಬಾಣಸವಾಗಿ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ 1 ಪ್ರಕರಣ ದಾಖಲಾಗಿರುವುದು ತಿಳಿದು ಬಂದಿರುತ್ತದೆ. ಹೆಚ್ಚಿನ ತನಿಖೆ ಮುಂದುವರೆದಿದೆ.

ಆರೋಗ್ಯ ತಪಾಸಣಾ ಶಿಬಿರ

ಮೈಸೂರು: ಚಿತ್ರ ನಟ.ದಿ.ಪುನೀತ್ ರಾಜ್ ಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ದಟ್ಟಗಳ್ಳಿಯ ನೇತಾಜಿ ವೃತ್ತದ ಬಳಿ ಇರುವ ನಯನ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಆರೋಗ್ಯ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕ ಪ್ರೊ. ಭಾಷ್ಯಂ ಸ್ವಾಮೀಜಿ, ''ಆರೋಗ್ಯವೇ ಭಾಗ್ಯ'' ಎಂಬುದು ಅಕ್ಷರಶಃ ಸತ್ಯ.. ದೈಹಿಕ ಮತ್ತು ಮಾನಸಿಕ ಆರೋಗ್ಯವು ಸಂತೋಷ, ಉತ್ಪಾದಕತೆ ಮತ್ತು ಜೀವನದ ಒಟ್ಟಾರೆ ಯೋಗಕ್ಷೇಮಕ್ಕೆ ಅತ್ಯಗತ್ಯ ಎಂದು ತಿಳಿಸಿದರು. ಹಣ ಅಥವಾ ಆಸ್ತಿಯಿಂದ ಭೌತಿಕ ವಸ್ತುಗಳನ್ನು ಕೊಳ್ಳಬಹುದು, ಆದರೆ ಆರೋಗ್ಯವನ್ನು ಕೊಳ್ಳಲು ಸಾಧ್ಯವಿಲ್ಲ, ಉತ್ತಮ ಆರೋಗ್ಯವೇ ನೈಜ ಸಂಪತ್ತು ಮತ್ತು ಜೀವನದ ಅತಿದೊಡ್ಡ ಆಸ್ತಿಯಾಗಿದೆ. ಆರೋಗ್ಯವಿದ್ದರೆ ಮಾತ್ರ ಜೀವನದ ಸಂತೋಷವನ್ನು ಅನುಭವಿಸಲು ಸಾಧ್ಯ..ಆದ್ದರಿಂದ, ಆರೋಗ್ಯವನ್ನು ಕಾಪಾಡಿಕೊಳ್ಳುವುದು ನಮ್ಮ ಮೊದಲ ಆದ್ಯತೆಯಾಗಿರಬೇಕು ಎಂದು ಸಲಹೆ ನೀಡಿದರು.

ಅಭಿಮಾನಿಗಳಿಂದ ರಕ್ತದಾನ



ಮೈಸೂರು: ನಗರದ ಸಯಾಜಿ ರಾವ್ ರಸ್ತೆಯಲ್ಲಿರುವ ರಕ್ತ ನಿಧಿ ಕೇಂದ್ರದಲ್ಲಿ ಅಪ್ಪು ಅಭಿಮಾನಿಗಳು ರಕ್ತ ದಾನ ಮಾಡುವ ಮೂಲಕ ರಕ್ತದಾನ ಮಹಾದಾನ ಎಂಬ ಸಂದೇಶ ಸಾರುವ ಮೂಲಕ ಪುನೀತ್ ರಾಜಕುಮಾರ್ ಜನ್ಮದಿನ ಸ್ಮರಣೆ ಮಾಡಿದರು.

ರಕ್ತದಾನ ಮಾಡಿ ನಂತರ ಮಾತನಾಡಿದ ಮುಖಂಡ ಸೋನಾಲಿ ಜೈನ್, ಪುನೀತ್ ರಾಜಕುಮಾರ್ ನನ್ನ ನೆಚ್ಚಿನ ನಟ. ಪ್ರತಿ 4 ತಿಂಗಳಿಗೊಮ್ಮೆ ನಾನು ರಕ್ತದಾನ ಮಾಡುತ್ತಿದ್ದು, ಇದಕ್ಕೆ ಕಾರಣ ನನ್ನ ನೆಚ್ಚಿನ ನಟ ಅಪ್ಪು. ಪ್ರತಿ ಹೆಣ್ಣು ಮಕ್ಕಳು ಕೂಡ ರಕ್ತದಾನವನ್ನು ಮಾಡಬಹುದು. ಇದರಿಂದ ನಮಗೆ ಹೆಚ್ಚಿನ ಆರೋಗ್ಯ ಲಭಿಸಲಿದ್ದು, ಒಂದು ಜೀವವನ್ನು ಉಳಿಸಿದ ಪುಣ್ಯವೂ ಕೂಡ ಲಭಿಸಲಿದೆ ಎಂದು ತಿಳಿಸಿದರು. ರಕ್ತ ದಾನಿ ಎಸ್.ಪಿ.ಅಕ್ಷಯ್ ಪ್ರಿಯಾದರ್ಶನ ಮಾತನಾಡಿ, ನಾನು ಪ್ರತಿ ವರ್ಷ ಅಪ್ಪು ಜನ್ಮದಿನದಂದು ರಕ್ತದಾನ ಮಾಡುತ್ತಾ ಬಂದಿದ್ದೇನೆ. ಅಪ್ಪು ಇಂದು ನಮ್ಮ ಜೊತೆ ಇಲ್ಲದಿದ್ದರೂ ಅವರ ಸರಳತೆ, ಸಜ್ಜನಿಕೆ,ಬದುಕಿನ ಪ್ರೀತಿ ಎಲ್ಲರಲ್ಲೂ ಜೀವಂತವಾಗಿಸಿದೆ ಎಂದರು.

ನುಡಿ ನಮನದೊಂದಿಗೆ ಡಾ. ಪುನೀತ್ ರಾಜಕುಮಾರ್ ಸ್ಮರಣೆ

ನಿಸ್ವಾರ್ಥ ಸೇವೆಗಳಿಂದ ಅಪ್ಪು ಮಾದರಿ


ಮೈಸೂರು: ಮನುಷ್ಯನು ಹುಟ್ಟಿದ ಕ್ಷಣದಿಂದಲೇ ಅವನ ಪಯಣ ಆರಂಭ. ಬಾಳ ಪಯಣ ಎಂದರೆ ಕೇವಲ ಸುಖದ ಹಾದಿಯಲ್ಲ. ಅದು ಒಂದು ಅದ್ಭುತ ಅನುಭವಗಳ ಸರಮಾಲೆ. ಬಾಳನ್ನು ಸಾರ್ಥಕವಾಗಿ ಬದುಕುವ, ಇತರರಿಗೆ ಸಹಾಯ ಮಾಡುವ, ಪ್ರೀತಿ ಮತ್ತು ಮಾನವೀಯತೆಯನ್ನು ಹಂಚುವುದು ಬಾಳ ಪಯಣದ ನಿಜವಾದ ಅರ್ಥ ಎಂದು ನಮ್ಮೆಲ್ಲರಿಗೂ ತಿಳಿಸಿ ಹೋದ ಅದ್ಭುತ ನಟ ಪುನೀತ್ ರಾಜಕುಮಾರ್ ರಾಜ್ಯದ ಅನೇಕ ಜನರ ಬಾಳನ್ನು ಬೆಳಗಿಸಿದ ನಂದಾ ದೀಪ. ಈ ರೀತಿಯ ವ್ಯಕ್ತಿತ್ವ ಉಳ್ಳ ಮಹಾ ಚೇತನ ಅಪ್ಪು ಮನುಷ್ಯತ್ವಕ್ಕೆ ದೊಡ್ಡ ಉದಾಹರಣೆ ಎಂದು ಜೆಡಿಎಸ್ ಮೈಸೂರು ನಗರ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯಾದರ್ಶನ್ ತಿಳಿಸಿದರು.

ನಗರದ ರಾಮನುಜ ರಸ್ತೆಯಲ್ಲಿರುವ ಜೆ.ಎಸ್. ಎಸ್. ಸಂಸ್ಥೆಯವರ ದೃಷ್ಟಿ ದೋಷವುಳ್ಳ ಉದ್ಯೋಗಸ್ಥ ಹಾಗೂ ವಿದ್ಯಾರ್ಥಿನಿಯರ ನಿಲಯದ ಬಂಧುಗಳಿಗೆ ಎಸ್ ಪ್ರಕಾಶ್ ಪ್ರಿಯಾದರ್ಶನ ಸ್ನೇಹ ಬಳಗದ ವತಿಯಿಂದ ಡ್ರೈ ಫ್ರೂಟ್ಸ್, ಹಣ್ಣು ಹಂಪಲ, ವಿತರಿಸುವ ಸೇವಾ ಕಾರ್ಯದೊಂದಿಗೆ ಪುನೀತ್ ರಾಜಕುಮಾರ್ ಜನ್ಮದಿನ ಸ್ಮರಣೆ ಮಾಡುವ ಮೂಲಕ ನುಡಿ ನಮನ ಸಲ್ಲಿಸಿ ಮಾತನಾಡಿ, ಅಪ್ಪು ಸಮಾಜದಿಂದ ಪಡೆದು ಸಮಾಜಕ್ಕೆ ಹಲವಾರು ಕಾಣಿಕೆಗಳನ್ನು ಕೊಟ್ಟು ಹೋಗಿದ್ದಾರೆ. ತಮ್ಮ ಗುರುತನ್ನು ಬಿಟ್ಟು ಹೋಗಿದ್ದಾರೆ. ನಟನಾಗಿ ಮಾತ್ರವಲ್ಲ, ಸಾಮಾಜಿಕ ಕಳಕಳಿ ಮತ್ತು ನಿಸ್ವರ್ತ ಸೇವೆಗಳಿಂದ ಇತರರಿಗೆ ಮಾದರಿಯಾದವರು ಅಪ್ಪು ಇಂದು ನಮ್ಮ ಜತೆ ಇಲ್ಲದಿದ್ದರೂ, ಅವರ ಸರಳತೆ, ಸಜ್ಜನಿಕೆ, ಬದುಕಿನ ಪ್ರೀತಿ ಎಲ್ಲರದಲ್ಲೂ ಜೀವಂತವಾಗಿಸಿದೆ. ಎಂದಿಗೂ ಮಾಸದ ನಗು ಮುಖದ ಅಪ್ಪುವಿಗೆ ಕೋಟ್ಯಂತರ ಅಭಿಮಾನಿಗಳ ಹೃದಯದಲ್ಲಿ ಅಜರಾಮರವಾಗಿ ಉಳಿದಿರುವ ನಮ್ಮೆಲ್ಲರ ಪ್ರೀತಿಯ ಅಪ್ಪು ಸೇವಾ ಕಾರ್ಯಗಳನ್ನು ಅವರ ಜನ್ಮದಿನದಂದು ಸ್ಮರಿಸುವುದು ಮತ್ತು ಇವತ್ತಿನ ಯುವ ಪೀಳಿಗೆಗೆ ತಿಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಸಿಂಚನಗೌಡ, ಹಿರಿಯ ಕ್ರೀಡಾಪಟು ಮಹದೇವ್, ಛಾಯಾ ಗಾಯಕ ಯಶ್ವಂತ್ ಕುಮಾರ್, ಬಿಜೆಪಿ ಮುಖಂಡ ಪುರುಷೋತ್ತಮ್, ರಾಜೇಶ್ ಕುಮಾರ್, ಮಹೇಶ, ಎಸ್ ಪಿ ಅಕ್ಷಯ್ ಪ್ರಿಯಾದರ್ಶನ್, ಹರ್ಷಿತ್ ಎಸ್ ನಾಗೇಶ್, ದತ್ತ ಇದ್ದರು.



ಸಿಹಿ ವಿತರಣೆ



ಮೈಸೂರು: ನಗರದ ಚಾಮುಂಡಿಪುರಂ ವೃತ್ತದಲ್ಲಿ ಶ್ರೀರಾಮ ಗೆಳೆಯರ ಬಳಗ'ದ ವತಿಯಿಂದ ಚಿತ್ರನಟ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅವರ ಜನ್ಮದಿನೋತ್ಸವನ್ನು ಸಾರ್ವಜನಿಕರಿಗೆ ಮಜ್ಜಿಗೆ ಮತ್ತು ಸಿಹಿಯನ್ನು ವಿತರಿಸುವ ಮೂಲಕ ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ. ಲಿಂಗರಾಜು ಮಾತನಾಡಿ, ಪುನೀತ್ ರಾಜಕುಮಾರ್ ಅವರು ಕೇವಲ ನಟರಾಗಿರಲಿಲ್ಲ, ಅವರು ಕೋಟ್ಯಂತರ ಕನ್ನಡಿಗರ ಪಾಲಿನ ಶಕ್ತಿಯಾಗಿದ್ದರು. ಅವರ ಸರಳತೆ ಮತ್ತು ಸಮಾಜಮುಖಿ ಚಿಂತನೆಗಳು ಇಂದಿನ ಯುವ ಪೀಳಿಗೆಗೆ ಮಾದರಿ, ಎಂದು ಶ್ಲಾಘಿಸಿದರು.

ಶ್ರೀರಾಮ ಗೆಳೆಯರ ಬಳಗದ ಅಧ್ಯಕ್ಷ ಸಿ. ಸಂದೀಪ್ ಮಾತನಾಡಿ, ಪುನೀತ್ ರಾಜಕುಮಾರ್ ಅವರು ಮಾಡಿರುವ ಸೇವಾ ಕಾರ್ಯಗಳು ಪ್ರತಿಯೊಬ್ಬರಿಗೂ ಪ್ರೇರಣೆಯಾಗಿವೆ. ಅವರ ಜನ್ಮದಿನವನ್ನು ಕೇವಲ ಸಂಭ್ರಮಕ್ಕೆ ಸೀಮಿತಗೊಳಿಸದೆ, 'ಸ್ಫೂರ್ತಿ ದಿನ'ವಾಗಿ ಆಚರಿಸಲಾಗುತ್ತಿದೆ.

ಬಳಿಕ ಸಾರ್ವಜನಿಕರಿಗೆ ತಂಪು ಮಜ್ಜಿಗೆ ಮತ್ತು ಸಿಹಿ ಹಂಚಿ ಅಪ್ಪು ನೆನಪನ್ನು ಸಂಭ್ರಮಿಸಲಾಯಿತು. ಈ ಸಂದರ್ಭದಲ್ಲಿ ಸುರೇಶ್, ಬಸಪ್ಪ, ರಾಜಣ್ಣ, ಜೋಗಿ ಮಂಜು, ಅಂಬಳೆ ಶಿವಣ್ಣ, ಬಸವರಾಜು ಪುರುಷೋತ್ತಮ್, ರಾಜೇಂದ್ರ , ಪ್ರಭುಶಂಕರ್, ಗುರುಸ್ವಾಮಿ, ಪ್ರಕಾಶ್ , ಮೋಹನ್, ಗೋಪಾಲ್ ಅರಸ್, ನಾಗೇಂದ್ರ, ಚಂದ್ರಶೇಖರ್, ಭಾನು ಕುಮಾರ್, ವಿನಯ್, ಪವನ್, ಧನುಷ್, ಚೇತನ್ ಹಾಜರಿದ್ದರು.

ಕಿರುಸುದ್ದಿ

ಯುಗಾದಿ ಸಂಗೀತೋತ್ಸವ ನಾಳೆ

ಮೈಸೂರು: ಮೈಸೂರು ಅರಮನೆ ಮಂಡಳಿ ವತಿಯಿಂದ ಯುಗಾದಿ ಸಂಗೀತೋತ್ಸ ವ ಶ್ರೀ ಪರಾಭವ ಸಂವತ್ಸರ ಕಾರ್ಯಕ್ರಮವನ್ನು ಮಾರ್ಚ್ 19ರಂದು ಸಂಜೆ 5:30 ಕ್ಕೆ ಅರಮನೆ ಆವರಣದಲ್ಲಿ ಆಯೋಜಿಸಲಾಗಿದೆ. ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ಹಾಗೂ ಉಕ್ಕು ಮತ್ತು ಕೈಗಾರಿಕಾ ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿಯವರ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಚಿವ ಡಾ. ಎಚ್.ಸಿ. ಮಹದೇವಪ್ಪರವರು ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಲಿದ್ದಾರೆ. ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಪರೀಕ್ಷಾ ಕೇಂದ್ರ ಸುತ್ತಲೂ ನಿಷೇಧಾಜ್ಞೆ

ಮೈಸೂರು: ಮೈಸೂರು ನಗರದ ಪರೀಕ್ಷಾ ಕೇಂದ್ರಗಳಲ್ಲಿ ಮಾರ್ಚ್ 18ರಿಂದ ಏಪ್ರಿಲ್ 2ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯಲಿದೆ. ಸದರಿ ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಸೂಕ್ತ ಬಂದೋಬಸ್ತ್ ವ್ಯವಸ್ಥೆ ಹಾಗೂ ಪರೀಕ್ಷಾ ಕೇಂದ್ರದ 200 ಮೀಟರ್ ವ್ಯಾಪ್ತಿ ಪ್ರದೇಶದ ಸುತ್ತಲೂ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ 2023 ಸೆಕ್ಷನ್ 163 ರೀತ್ಯ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಪರೀಕ್ಷಾ ಕೇಂದ್ರದ ಪ್ರದೇಶಗಳಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಇತರೆ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್, ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಧ್ವನಿ, ಬೆಳಕು ಕಾರ್ಯಕ್ರಮ ರದ್ದು

ಮೈಸೂರು: ವಿಶ್ವವಿಖ್ಯಾತ ಮೈಸೂರು ಅರಮನೆ ಆವರಣದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಅರಮನೆ ಮಂಡಳಿ ವತಿಯಿಂದ 2026 ರ ಯುಗಾದಿ ಸಂಗೀತೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪೂರ್ವಭಾವಿ ಕಾರ್ಯಗಳು ಪ್ರಗತಿಯಲ್ಲಿರುವುದರಿಂದ ಮಾರ್ಚ್ 16 ರಿಂದ 22 ರವರೆಗೆ ಅರಮನೆ ಆವರಣದಲ್ಲಿ ಸಂಜೆ 7 ರಿಂದ 8 ಗಂಟೆಯವರೆಗೆ ನಡೆಸಲ್ಪಡುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿರುತ್ತದೆ ಎಂದು ಮೈಸೂರು ಅರಮನೆ ಮಂಡಳಿಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪಘಾತ: ಸವಾರ ಸಾವು

ಮೈಸೂರು: ಅಪಘಾತದಲ್ಲಿ ಗಾಯಗೊಂಡಿದ್ದ ಸ್ಕೂಟರ್ ಸವಾರನೊಬ್ಬ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನಲ್ಲಿ ನಡೆದಿದೆ. ಪಿರಿಯಾಪಟ್ಟಣ ತಾಲೂಕಿನ ಲಕ್ಷ್ಮೀಪುರ ಗ್ರಾಮದ ನಿವಾಸಿಯಾದ ಶಿವಣ್ಣೆಗೌಡರ ಪುತ್ರ ಜಗದೀಶ(36) ಮೃತಪಟ್ಟವರು. ಇವರು ಫೆಬ್ರವರಿ 23ರಂದು ಮುತ್ತಿನ ಮುಳಸೋಗೆ ಮುಖ್ಯರಸ್ತೆಯಲ್ಲಿ ಬೈಕ್‌ನಲ್ಲಿ ಬರುವಾಗ ನಿಯಂತ್ರಣ ತಪ್ಪಿ ಕೆಳಗೆ ಬಿದ್ದು ಗಾಯಗೊಂಡಿದ್ದರು. ನಂತರ ಮಡಿಕೇರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಇದೀಗ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಮೃತರ ತಾಯಿ ಚಂದ್ರಮ್ಮ ನೀಡಿದ ದೂರಿನ ಮೇರೆಗೆ ಪಿಎಸ್‌ಐ ರವಿಕುಮಾರ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹುಲಿ ದಾಳಿಗೆ 4 ಕುರಿ ಬಲಿ

ಗುಂಡ್ಲುಪೇಟೆ: ತಾಲೂಕಿನ ಕಲ್ಲಹಳ್ಳಿ ಗ್ರಾಮದಲ್ಲಿ ಸೋಮವಾರ ಮತ್ತು ಮಂಗಳವಾರ ಹುಲಿ ದಾಳಿಗೆ ಪ್ರತ್ಯೇಕ ನಾಲ್ಕು ಕುರಿ ಸಾವನ್ನಪ್ಪಿರುವ ಘಟನೆ ನಡೆದಿದೆ. ಗ್ರಾಮದ ಮಹದೇವಶೆಟ್ಟಿ ಎಂಬುವವರು ಕುರಿ ಮೆಯಿಸುವ ಸಂದರ್ಭದಲ್ಲಿ ಹುಲಿ ದಾಳಿ ನಡೆಸಿ ಎರಡು ಕುರಿಗಳನ್ನು ಸೋಮವಾರ ಸಂಜೆ ಕೊಂದುಹಾಕಿತ್ತು ಮಂಗಳವಾರ ಹಕ್ಕಳಪುರ ಕೆರೆ ಸಮಿಪದಲ್ಲಿ ಪುಟ್ಟ ಎಂಬುವವರು ಕುರಿ ಮೇಯಿಸುವ ಸಂದರ್ಭದಲ್ಲಿ ದಾಳಿ ನಡೆಸಿ ಕೊಂದುಹಾಕಿರುವ ಘಟನೆ ನಡೆದಿದೆ.
ನಮ್ಮ ಗ್ರಾಮದಲ್ಲಿ ಜಾನುವಾರುಗಳು, ಕುರಿಗಳ ಮೇಲೆ ಸತತವಾಗಿ ಹುಲಿ ದಾಳಿ ನಡೆಸುತಿದ್ದು ಸುಕ್ತ ಪರಿಹಾರ ಸಿಗೊತ್ತಿಲ್ಲ ಜೊತೆಗೆ ಜನರು ಓಡಾಡಲು ಭಯಪಡುತಿದ್ದು ಜಮೀನಿಗೆ ತೆರಳಲು ಅತಂಕ ಪಡುತಿದ್ದಾರೆ ,ಕುಲಿ ಕಾರ್ಮಿಕರು ಸರಿಯಾಗಿ ಸಿಗುತ್ತಿಲ್ಲ ಸೂಕ್ತ ಪರಿಹಾರ ನೀಡುವುದರ ಜೊತೆಗೆ ಹುಲಿ ಸೆರೆ ಹಿಡಿಯುವಂತೆ ಒತ್ತಾಯಿಸುದರು.



ಗುಂಡ್ಲುಪೇಟೆ ತಾಲೂಕಿನ ಸಂಪಿಗೆಪುರ ಗ್ರಾಮದ ವೃದ್ಧೆ ಕಾಡ ಬಸಮ್ಮಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ವತಿಯಿಂದ ವಾತ್ಸಲ್ಯ ಮನೆ ನಿರ್ಮಿಸಿಕೊಟ್ಟರು.

ನೂತನ ಪದಾಧಿಕಾರಿಗಳ ಆಯ್ಕೆ

ಸರಗೂರು: ಪ್ರವಾಸಿ ಮಂದಿರದಲ್ಲಿ ಕೆಆರ್‌ಎಸ್ ಪಕ್ಷದ ಸರಗೂರು ತಾಲೂಕು ಘಟಕ ರಚನೆಯಾಗಿದ್ದು, ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಕೆಆರ್‌ಎಸ್ ಪಕ್ಷದ ಸರಗೂರು ತಾಲೂಕು ಘಟಕ ರಚನೆಯಾಗಿದ್ದು, ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಎಚ್.ಎಂ.ರವೀಂದ್ರ ಅಧ್ಯಕ್ಷತೆಯಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಸರಗೂರು ತಾಲೂಕು ಘಟಕಕ್ಕೆ ಅಧ್ಯಕ್ಷರಾಗಿ ಮನುಗನಹಳ್ಳಿ ಗುರುಸ್ವಾಮಿ, ಉಪಾಧ್ಯಕ್ಷರಾಗಿ ವೆಂಕಟರಾಜು, ಪ್ರಧಾನ ಕಾರ್ಯದರ್ಶಿಯಾಗಿ ಗೋವಿಂದರಾಜು, ಕಾರ್ಯದರ್ಶಿಯಾಗಿ ಉಮಾಪತಿ, ಗಣೇಶ್, ಚಿಕ್ಕಣ್ಣ, ಮಹದೇವಮ್ಮ, ನಾಗರಾಜು, ಸಂಘಟನಾ ಕಾರ್ಯದರ್ಶಿಯಾಗಿ ಸುಂದರ್ ರಾಜು ಆಯ್ಕೆಯಾಗಿದ್ದಾರೆ. ಇದೇ ಸಂದರ್ಭದಲ್ಲಿ ಮಾತನಾಡಿದ ತಾಲೂಕು ಅಧ್ಯಕ್ಷ ಮನುಗನಹಳ್ಳಿ ಗುರುಸ್ವಾಮಿ, ಪಕ್ಷ ನೀಡಲಾದ ಜವಾಬ್ದಾರಿಯನ್ನು ಪ್ರಾಮಾಣಿಕತೆಯಿಂದ ನಿಭಾಯಿಸುತ್ತೇನೆ. ಸ್ವಚ್ಛ, ಜನಪರ ರಾಜಕಾರಣಕ್ಕಾಗಿ ಕೊಟ್ಟ ಜವಾಬ್ದಾರಿಯನ್ನು ಮಾಡುತ್ತೇನೆ. ಗ್ರಾಮಾಂತರ ಭಾಗದಲ್ಲಿ ಪಕ್ಷವನ್ನು ಸಂಘಟಿಸಿ, ಭ್ರಷ್ಟಾಚಾರ ನಿರ್ಮೂಲನೆಗೆ ಮುಂದಾಗುತ್ತೇನೆ. ಸಮಾಜದ ಏಳಿಗೆಗಾಗಿ ದುಡಿದು ಉತ್ತಮ ಸಮಾಜವನ್ನು ಕಟ್ಟುವ ಕೆಲಸ ಮಾಡುತ್ತೇನೆ ಎಂದು ಹೇಳಿದರು. ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹರೀಶ್, ಎಸ್ಸಿ , ಎಸ್ಟಿ ಘಟಕದ ಕಾರ್ಯದರ್ಶಿ ಅನುಸ್ವಾಮಿ ಸೇರಿದಂತೆ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಇದ್ದರು.



ಸರಗೂರು ಪ್ರವಾಸಿ ಮಂದಿರದಲ್ಲಿ ಕೆಆರ್‌ಎಸ್ ಪಕ್ಷದ ಸರಗೂರು ತಾಲೂಕು ಘಟಕ ರಚನೆಯಾಗಿದ್ದು, ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಸಂವಿಧಾನ ಅಧ್ಯಯನ ಮಾಡುವ ಮಹತ್ವದ ಕಾರ್ಯ ಮಾಡಿ: ಡಾ. ಪ್ರೇಮಾ

ಅಂಬೇಡ್ಕರ್ ವಿಶ್ವಕ್ಕೆ ಮಾದರಿ

ಚಾಮರಾಜನಗರ: ದೇಶಕ್ಕೆ ಸ್ವಾತಂತ್ರ ಬಂದ ನಂತರ ಸಾಕಷ್ಟು ಬದಲಾವಣೆಯಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನದಲ್ಲಿ ಮಹಿಳೆಯರಿಗಾಗಿ ಹಕ್ಕುಗಳನ್ನು ಒದಗಿಸಲಾಗಿದೆ. ಮತದಾನದಿಂದ ವಂಚಿತರಾಗಿ ದ್ದವರಿಗೆ ಮತದಾನದ ಹಕ್ಕನ್ನು ಕೊಡಿಸಿದರು. ಎಲ್ಲ ಕ್ಷೇತ್ರದಲ್ಲೂ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ. ಆದರೂ ಅವರ ಮೇಲೆ ಇನ್ನು ಸಹ ಶೋಷಣೆ, ದಬ್ಬಾಳಿಕೆ ನಡೆಯುತ್ತಿದೆ. ಇದರಿಂದ ಮಹಿಳೆಯರು ಹೊರಬ ಬೇಕಾದರೆ ಸುಶಿಕ್ಷಿತರಾಗುವುದೇ ಮುಂದಿನ ದಾರಿ ಎಂದು ಅನುಪಮಾ ಸೇವಾ ಟ್ರಸ್ಟ್ ಅಧ್ಯಕ್ಷೆ ಡಾ. ಪ್ರೇಮಾ ತಿಳಿಸದರು.

ಗರದ ಅಂಬೇಡ್ಕರ್ ಸರ್ಕಾರಿ ವರ್ಗೀಕೃತ ಕಾಲೇಜಿನ ವಿದ್ಯಾರ್ಥಿನಿಲಯದಲ್ಲಿ ಮಾನಸ ಜಿಲ್ಲಾ ಸಂಪನ್ಮೂಲ ಕೇಂದ್ರದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಆಚರಿಸಲಾಯಿತು. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದ ಮಾತನಾಡಿ, ಇಂದು ಶಿಕ್ಷಣ ತಂತ್ರ ಜ್ಞಾನ ಸೇರಿದಂತೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಸೇವೆ ಸಲ್ಲಿಸುತ್ತಿದ್ದಾರೆ ಸಮಾಜದ ಉತ್ತಮ ಬೆಳವಣಿಗೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್, ಅವರು ಜಿಲ್ಲಾ ಜನಹಿತಾಶಕ್ತಿ ಹೋರಾಟ ಸಮಿತಿ ಅಧ್ಯಕ್ಷ ರಾಮಸಮುದ್ರ ಸುರೇಶ್ ಮಾತನಾಡಿ, ಅಂಬೇಡ್ಕರ್ ಅವರು ಇಡೀ ವಿಶ್ವಕ್ಕೆ ಮಾದರಿಯಾಗುವ ಸಂವಿಧಾನ ರಚನೆ ಮಾಡಿದ್ದು, ಅದರ ಮೂಲ ಆಶಯಗಳನ್ನು ಪ್ರತಿಯೊಬ್ಬ ಭಾರತೀಯರಾದ ನಾವುಗಳು ಪಾಲನೆ ಮಾಡಬೇಕು ಅಂಬೇಡ್ಕರ್ ಅವರು ಭಾರತ ದೇಶದ ಅಭಿವೃದ್ಧಿಗೆ ಪೂರಕವಾಗಿ ಉತ್ತಮ ಸಂವಿಧಾನ ಬರೆದು ಲೋಕಾರ್ಪಣೆ ಮಾಡಿದ್ದಾರೆ. ಮಹಿಳೆಯರು ಸಂವಿಧಾನವನ್ನು ಅಧ್ಯಯನ ಮಾಡುವ ಮಹತ್ವದ ಕಾರ್ಯ ಮಾಡಬೇಕು ಎಂದರು.



ಮಾನಸ ಜಿಲ್ಲಾ ಸಂಪನ್ಮೂಲ ಕೇಂದ್ರದ ಸಂಯೋಜಕ ರೇವಣ್ಣ ಪ್ರಾಸ್ತಾವಿವಾಗಿ ಮಾತನಾಡಿದರು.

ಸಿದ್ಧಾರ್ಥಪದವಿಪೂರ್ವಕಾಲೇಜಿನಪ್ರಾಂಶುಪಾಲ ರಂಗಸ್ವಾಮಿ, ಮಾತನಾಡಿ ಅಂಬೇಡ್ಕರ್ ಜ್ಞಾನದ ಕಣಜವಾಗಿದ್ದು, ತಮ್ಮ ಜ್ಞಾನ ಸಂಪತ್ತಿನಿಂದಲೇ ವಿಶ್ವದ ಗಮನ ಸೆಳೆದು, ಪ್ರಪಂಚದಲ್ಲೇ ಅತ್ಯುತ್ತಮವಾದ ಸಂವಿಧಾನ ರಚನೆ ಮಾಡಿ, ಭಾರತವನ್ನು ಶ್ರೀಮಂತಗೊಳಿಸಿದರು ಸುಮಾರು 50 ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಅಧ್ಯಯನ ನಡೆಸುವ ಮೂಲಕ ಜ್ಞಾನರತ್ನ ಎನಿಸಿಕೊಂಡರು, ವಿಶ್ವಜ್ಞಾನಿಯಾದರು. ಎಂದರು.

ಸಿದ್ಧಾರ್ಥಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರಂಗಸ್ವಾಮಿ, ವಕೀಲೆ ಮಂಜುಳ, ವಾರ್ಡನ್ ಸರಸ್ವತಿ, ಹಾಜರಿದ್ದರು.

ಜಿಲ್ಲೆಯಾದ್ಯಂತ ಆಲಿಕಲ್ಲು ಮಳೆ: ರೈತರ ಫಸಲುಗಳಿಗೆ ಅಪಾರ ಹಾನಿ

ಚಾಮರಾಜನಗರ: ಜಿಲ್ಲೆಯಲ್ಲಿ ಮಧ್ಯಾಹ್ನ ಸುರಿದ ಆಲಿಕಲ್ಲು ಮಳೆಯಿಂದ ಜನರು ಮನೆಯಿಂದ ಹೊರ ಬರುವುದು ಕಷ್ಟವಾಯಿತು. ಆಲಿಕಲ್ಲು ಸಹಿತ ಮಳೆ ಅರ್ಧ ಗಂಟೆಗೂ ಹೆಚ್ಚು ಕಾಲ ಒಂದೇ ಸಮ ಸುರಿದ ಪರಿಣಾಮ ಮನೆಗಳ ಹೆಂಚು, ಕಲ್ನರ್ ಸೀಟ್ ಹೊಡೆದು ಹೋಗಿದ್ದು, ರೈತರ ಫಸಲುಗಳಿಗೆ ಭಾರಿ ಪ್ರಮಾಣದಲ್ಲಿ ಹಾನಿಯಾಗಿದೆ.

ಜಿಲ್ಲೆಯ ಯಳಂದೂರು, ಚಾಮರಾಜನಗರ ಕೊಳ್ಳೇಗಾಲ ಭಾಗದಲ್ಲಿ ಆಲಿಕಲ್ಲು ಮಳೆ ಪ್ರಮಾಣ ತೀವ್ರವಾಗಿತ್ತು. ಚಾ.ನಗರ ತಾಲೂಕಿನ ವೀರನಪುರ, ಉಡಿಗಾಲ, ನಂಜೇದೇವನಪುರ, ಶಿವಪುರ, ಹರವೆ ಭಾಗ, ಯಳಂದೂರು ಮೆಲ್ಲಹಳ್ಳಿ, ಕುದೇರು ಹಾಗೂ ಅನೇಕ ಗ್ರಾಮಗಳಲ್ಲಿ ಭಾರಿ ಮಳೆಯ ಜತೆಗೆ ಆಲಿಕಲ್ಲು ಸುರಿದೆ.

ಮಳೆ ಬಂತು ಎಂದು ರೈತರು ಹಾಗು ಸಾರ್ವಜನಿಕರು ಸಂತಸ ಪಟ್ಟರೆ, ಆಲಿಕಲ್ಲು ಅವರ ಕೆಲವೇ ಗಂಟೆಗಳಲ್ಲಿ ಅವರ ಸಂತೋಷಕ್ಕೆ ತಣ್ಣೀರು ಎರೆಚಿದಂತಾಗಿದೆ. ಆಲಿಕಲ್ಲು ರಭಸವಾಗಿ ಬಿದ್ದ ಪರಿಣಾಮ ಹಳೆ ಮನೆಗಳ ಹೆಂಚು ಹೊಡೆದು ಹೋಗಿವೆ. ಅಲ್ಲದೇ ಮನೆಗಳಿಗೆ ಆಳವಡಿಸಿದ್ದ ಕಲ್ನರ್ ಸೀಟುಗಳು, ಬೆಳಕು ನೀಡುವ ಸೀಟ್ ಮತ್ತು ಹೆಂಚುಗಳು ಹೊಡೆದು ಹಾನಿಯಾಗಿವೆ.

ರೈತರ ಫಸಲು ಹಾನಿ: ಆಲಿಕಲ್ಲು ಮಳೆಯಿಂದಾಗಿ ರೈತರು ಬೆಳೆದಿದ್ದ ಅನೇಕ ಫಸಲುಗಳಿಗೆ ಹಾನಿಯಾಗಿದೆ. ಬಾಳೆ, ಟಮೋಟೋ, ಮಾವಿನಕಾಯಿ ಇತರೇ ತೋಟಗಾರಿಕೆ ಹಾಗು ಹಣ್ಣಿನ ಫಸಲು ಆಲಿಕಲ್ಲು ಮಳೆಗೆ ಹಾನಿಯಾಗಿವೆ. ಮಾವಿನ ಫಸಲು ಹೂವು ಕಚ್ಚು ಹಾಗೂ ಕಾಯಿ ಬಿಡುವ ಹಂತದಲ್ಲಿದ್ದು, ಉದುರಿ ಬಿದ್ದಿವೆ. ಅಲ್ಲದೇ ರಸ್ತೆಯ ತಂಬುಲ್ಲೇ ಅಲಿಕಲ್ಲುಗಳನ್ನು ನೋಡಿದರೆ ಇದ್ಯಾವುದು ಹಿಮಪಾತ ಬಳಿಯಿರುವ ಹಳ್ಳಿಗೆ ಬಂದಂತೆ ಭಾಸವಾಗಿದೆ. ಒಟ್ಟಾರೆ ದಿಢೀರ್ ಎಂದು ಬಂದ ಆಲಿಕಲ್ಲು ಮಳೆ ರೈತರು ಹಾಗೂ ಸಾರ್ವಜನಿಕರ ನೆಮ್ಮದಿಗೆ ಭಂಗವನ್ನು ಉಂಟು ಮಾಡಿದೆ.



ಕಟ್ಟಡ ನಿರ್ಮಾಣ ವಿರೋಧಿಸಿ ಪ್ರತಿಭಟನೆ

ಮೈಸೂರು: ನಗರದ ಹೃದಯ ಭಾಗದಲ್ಲಿರುವ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಮುಂದಾಗಿರುವುದನ್ನು ವಿರೋಧಿಸಿ ಪರಿಸರ ಪ್ರೇಮಿಗಳು ಹಾಗೂ ಹಿರಿಯ ನಾಗರೀಕರು ಪ್ರತಿಭಟನೆ ನಡೆಸಿದರು.

ಕುಕ್ಕರಹಳ್ಳಿ ಕೆರೆಯ ಮುಖ್ಯ ದ್ವಾರದ ಮುಂಭಾಗ ಜಮಾಯಿಸಿದ ಮೈಸೂರಿನ ಪ್ರಜ್ಞಾವಂತ ನಾಗರಿಕರು ವಿವಿಧ ಘೋಷಣೆಗಳನ್ನು ಬರೆದಿದ್ದ ಭಿತ್ತಿ ಪತ್ರಗಳನ್ನು ಹಿಡಿದುಕೊಂಡು ಕೆಲಕಾಲ ಧರಣಿ ನಡೆಸಿ, ಘೋಷಣೆಗಳನ್ನು ಕೂಗಿದರು. ಐತಿಹಾಸಿಕ ಹಿನ್ನಲೆಯುಳ್ಳ ಹಾಗೂ ಮೈಸೂರು ನಗರದ ಪರಿಸರದ ಸಮತೋಲನ ಕಾಪಾಡುವಲ್ಲಿ ಪ್ರಮುಖ ಎನಿಸಿರುವ ಕುಕ್ಕರಹಳ್ಳಿ ಕೆರೆಯ ಅಂಗಳವನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಶಪಡಿಸಿಕೊಂಡು ಬಹುಮಾಡಿ ಕಟ್ಟಡಗಳನ್ನು ನಿರ್ಮಿಸಲು ಮುಂದಾಗಿದೆ ಎಂದು ಆರೋಪಿಸಿದರು.

ಈ ಹಿಂದೆ ಮೈಸೂರು ರಾಜರು ಮೈಸೂರಿನ ಜನರಿಗಾಗಿ ಈ ಪ್ರದೇಶವನ್ನು 400 ಎಕರೆಗಿಂತಲೂ ಅಧಿಕವಾಗಿ ನಿರ್ಮಿಸಿದ್ದರು. ಆದರೆ, ಪ್ರಸ್ತುತ ಈ ಕರೆ ಸುತ್ತಮುತ್ತಲಿನ ಪ್ರದೇಶಗಳು ಒತ್ತುವರಿಯಾಗಿ ಈಗ ಕೆರೆಯು 100 ಎಕರೆ ಹಾಗೂ ಕೆರೆ ಆವರಣವು 110 ಎಕರೆ ಮಾತ್ರ ಉಳಿದಿದೆ. ಈ ಪ್ರದೇಶವನ್ನು ಸಂರಕ್ಷಿಸಿ ಪರಿಸರ ಕಾಪಾಡುವುದು ನಮ್ಮೆಲ್ಲರ ಹೊಣೆಯಾಗಿದೆ ಎಂದು ನಾಗರಿಕರು ಪ್ರತಿಪಾದಿಸಿದರು. ಈ ಪ್ರದೇಶದಲ್ಲಿ ಪ್ರಾಧಿಕಾರವು 2021, ಫೆಬ್ರವರಿ 3ರಲ್ಲಿ ಭೂದೇವಿ ಘಾರಂನ ಮೂಲಕ ನಿವೇಶನ ಸಂಖ್ಯೆ 1/4ಎ, 1/4ಬಿ, ಎ/4ಸಿ, 1/4ಡಿ, 1/5ಎ, 1/5ಎ, ಎ/5ಬಿ, 1/5ಸಿ, 1/5ಡಿರ ಉದ್ಯಾನ ಮತ್ತು ಬಯಲು ಪ್ರದೇಶದಿಂದ 2 ಎಕರೆ 20 ಗುಂಟೆ ಪ್ರದೇಶವನ್ನು ವಾಣಿಜ್ಯ ವಲಯಕ್ಕೆ ಬದಲಾಯಿಸಿಕೊಂಡಿದ್ದಾರೆ. ಆಮೂಲಕ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಲು ಮುಂದಾಗಿದೆ ಎಂದು ಆರೋಪಿಸಿದರು. ಕೆರೆಯ ಪ್ರದೇಶದಲ್ಲಿ ಯಾವುದೇ ಬಹುಮಹಡಿ ಕಟ್ಟಡ ನಿರ್ಮಾಣ ಮಾಡಿ, ಕೆರೆ ಪರಿಸರಕ್ಕೆ ಹಾನಿ ಉಂಟು ಮಾಡಬಾರದು ಎಂದು ಒತ್ತಾಯಿಸಿದರು.

ಪರಿಸರ ಸಂರಕ್ಷಿಸಿ ಹೋರಾಟ ಸಮಿತಿಯ ಪ್ರೊ. ಜಯರಾಮಯ್ಯ, ಸೋಸಲೆ ಸಿದ್ದರಾಜು, ಅರವಿಂದ ಶರ್ಮ ಭಾಗವಹಿಸಿದ್ದರು.



ಅಧಿಕಾರಿಗಳಿಂದ ಫುಟ್‌ಪಾತ್ ತೆರವು ಕಾರ್ಯಾಚರಣೆ

ನಂಜನಗೂಡು: ನಗರದ ದೇವರಾಜ ಅರಸು ಸೇತುವೆಯ ಬಳಿ ಮೈಸೂರು- ಊಟಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಫುಟ್ ಪಾತ್ ನಲ್ಲಿ ಅಂಗಡಿ ಮುಂಗಟ್ಟುಗಳನ್ನು ನಿರ್ಮಿಸಿಕೊಂಡ ಪರಿಣಾಮ ಸಂಚಾರಕ್ಕೆ ತೊಂದರೆಯಾಗುತ್ತಿದ್ದ ಹಿನ್ನೆಲೆಯಲ್ಲಿ ನಗರಸಭಾ ಅಧಿಕಾರಿಗಳು ಮಂಗಳವಾರ ಜೆಸಿಬಿ ಮತ್ತು ಕ್ರೇನ್ ಬಳಸಿ ಅಂಗಡಿಗಳನ್ನು ತೆರವು ಮಾಡಿದರು.



ಮೈಸೂರು-ಊಟಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೀದಿ ಬದಿ ವ್ಯಾಪಾರಿಗಳು ಮೀನು, ಮಾಂಸದ ಅಂಗಡಿಗಳು, ಹಣ್ಣಿನ ಅಂಗಡಿಗಳು, ಮತ್ತು ಪೆಟ್ಟಿಗೆ ಅಂಗಡಿಗಳನ್ನು ನಿರ್ಮಿಸಿಕೊಂಡ ಪರಿಣಾಮವಾಗಿ ರಸ್ತೆಯ ಬದಿಯಲ್ಲಿ ವಾಹನಗಳು ನಿಂತು ಸಂಚಾರಕ್ಕೆ ತೊಂದರೆಯಾಗಿ ಹೆಚ್ಚಾಗಿ ಅಪಘಾತಗಳು ಸಂಭವಿಸುತ್ತಿದ್ದ ಹಿನ್ನೆಲೆಯಲ್ಲಿ ನಗರದ ಹಲವು ಸಂಘ ಸಂಸ್ಥೆಗಳು, ಮತ್ತು ಸಾರ್ವಜನಿಕರು ಫುಟ್ ಪಾತ್ ಅನ್ನು ತೆರವುಗೊಳಿಸುವಂತೆ ನಗರಸಭೆ ಅಧಿಕಾರಿಗಳಿಗೆ ಪತ್ರ ಬರೆದು ಒತ್ತಾಯಿಸಿದರು, ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ನಗರಸಭಾ ಆಯುಕ್ತ ಬಸವರಾಜು ರವರ ಆದೇಶದ ಮೇರೆಗೆ ನಗರ ಸಭೆಯ ಕಂದಾಯ ಅಧಿಕಾರಿ ಮಮತಾ, ಆರ್.ಐ.ಪ್ರೀತಮ್, ಹಾಗೂ ಮಹೇಶ್, ಆರೋಗ್ಯ ನಿರೀಕ್ಷಕರಾದ ವಸಂತ್ ಕುಮಾರ್, ವಿಷಯ ನಿರ್ವಾಹಕ ಅಧಿಕಾರಿ ಪಾತುಲಿಂಗಪ್ಪ ನೇತೃತ್ವದ ನಗರಸಭಾ ಅಧಿಕಾರಿಗಳು ಜೆಸಿಬಿ ಮತ್ತು ಕ್ರೇನ್ ಬಳಸಿ ಕಾರ್ಯಾಚರಣೆ ನಡೆಸುವ ಮೂಲಕ ಅಂಗಡಿ ಮತ್ತು ಪೆಟ್ಟಿಗೆ ಅಂಗಡಿಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಕಾರ್ಯಾಚರಣೆಯಲ್ಲಿ ಕಂದಾಯ ಅಧಿಕಾರಿ ಮಮತಾ, ಆರ್.ಐ.ಪ್ರೀತಮ್, ಹಾಗೂ ಮಹೇಶ್, ಆರೋಗ್ಯ ನಿರೀಕ್ಷಕರಾದ ವಸಂತ್ ಕುಮಾರ್, ವಿಷಯ ನಿರ್ವಾಹಕ ಅಧಿಕಾರಿ ಪಾತುಲಿಂಗಪ್ಪ ಸಿಬ್ಬಂದಿ ಮಹೇಶ್ ಬೀರೇಗೌಡ, ಬಿಲ್ ಕಲೆಕ್ಟರು ರಾಘವೇಂದ್ರ, ಉಪಸ್ಥಿತರಿದ್ದರು.

ಅವೈಜ್ಞಾನಿಕ ನಿರ್ಧಾರ ಕೈಗೊಳ್ಳುತ್ತಿರುವ ನಗರಪಾಲಿಕೆ

ಮೈಸೂರು: ಪಾರಂಪರಿಕ ಮತ್ತು ಐತಿಹಾಸಿಕ ಮಹತ್ವ ಹೊಂದಿರುವ ಮೈಸೂರು ನಗರದಲ್ಲಿ ಮಹಾನಗರ ಪಾಲಿಕೆಯು ಇತ್ತೀಚಿಗೆ ಕೈಗೊಳ್ಳುತ್ತಿರುವ ನಿರ್ಧಾರಗಳು ಜನ ವಿರೋಧಿಯಾಗಿದೆ ಎಂದು ಬಿಜೆಪಿ ಮೈಸೂರು ನಗರ ಮಾಧ್ಯಮ ಸಹ ಸಂಚಾಲಕ ಬಿ.ಎಂ.ಸಂತೋಷ್‌ಕುಮಾರ್ ಆರೋಪಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಅರಮನೆ ಮುಂಭಾಗದ ಚಾಮರಾಜ ವೃತ್ತದ ಸಮೀಪ, ಪುರಭವನದ ಕಾಂಪೌಂಡ್‌ಗೆ ಹೊಂದಿಕೊಂಡ ರಾಜಪಥ (ಪಾದಚಾರಿ ಮಾರ್ಗ)ದಲ್ಲಿ ಟಾಂಗಾ ನಿಲ್ದಾಣ ಹಾಗೂ ಟಿಕೆಟ್ ಕೌಂಟರ್ ನಿರ್ಮಿಸಲು ಮುಂದಾಗಿರುವುದು ಸರಿಯಲ್ಲ, ಮೈಸೂರು ನಗರವು ದೇಶ-ವಿದೇಶಗಳಿಂದ ಪ್ರವಾಸಿಗರನ್ನು ಆಕರ್ಷಿಸುವ ಪಾರಂಪರಿಕ ನಗರವಾಗಿದ್ದು, ಇಂತಹ ಪ್ರದೇಶದ ಹೃದಯಭಾಗದಲ್ಲಿ ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿ ಟಾಂಗಾ ನಿಲ್ದಾಣ ನಿರ್ಮಿಸುವುದು ಸೂಕ್ತವಲ್ಲ ಎಂದು ಹೇಳಿದ್ದಾರೆ

ಸಾರ್ವಜನಿಕ ದಟ್ಟಣೆ ಇರುವ ಪ್ರದೇಶದಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಳ್ಳುವ ಮೊದಲು ಪೂರ್ವಭಾವಿ ಸಭೆ ನಡೆಸಿ, ಸಾಧಕ ಬಾಧಕಗಳನ್ನು ಚರ್ಚಿಸಬೇಕಾಗಿತ್ತು. ಆದರೆ ಮಹಾನಗರ ಪಾಲಿಕೆ ಮತ್ತು ಜಿಲ್ಲಾಡಳಿತವು ಈ ಕ್ರಮವನ್ನು ಅನುಸರಿಸದೇ ಜಾಣಕುರುಡುತನ ತೋರಿದೆ ಎಂದು ಟೀಕಿಸಿದ್ದಾರೆ. ಮೈಸೂರು ನಗರದಲ್ಲಿ ಈಗಾಗಲೇ 200ರಿಂದ 300 ಮೀಟರ್ ಅಂತರದಲ್ಲಿ ಅನಗತ್ಯವಾಗಿ ಟ್ರಾಫಿಕ್ ಸಿಗ್ನಲ್‌ಗಳನ್ನು ಸ್ಥಾಪಿಸಿರುವುದು ವಾಹನ ಸವಾರರಿಗೆ ತೊಂದರೆ ಉಂಟುಮಾಡುತ್ತಿದೆ. ಸಮಗ್ರ ಯೋಜನೆ ಇಲ್ಲದೆ ತರಾತುರಿಯಲ್ಲಿ ತೆಗೆದುಕೊಳ್ಳುತ್ತಿರುವ ನಿರ್ಧಾರಗಳು ಅನುಮಾನಗಳಿಗೆ ಕಾರಣವಾಗುತ್ತವೆ ಎಂದು ಹೇಳಿದ್ದಾರೆ. ಮೈಸೂರು ನಗರದ ಅಭಿವೃದ್ಧಿ ಕುರಿತಂತೆ ಉಸ್ತುವಾರಿ ಸಚಿವರ ಪಾತ್ರದ ಬಗ್ಗೆ ಸಾರ್ವಜನಿಕರಲ್ಲಿ ಪ್ರಶ್ನೆಗಳು ಮೂಡುತ್ತಿವೆ. ಇಂತಹ ಅವೈಜ್ಞಾನಿಕ ನಿರ್ಧಾರಗಳನ್ನು ತಕ್ಷಣ ನಿಲ್ಲಿಸಬೇಕು. ಇಲ್ಲವಾದಲ್ಲಿ ಭವಿಷ್ಯದಲ್ಲಿ ಉಂಟಾಗುವ ಸಮಸ್ಯೆಗಳಿಗೆ ಮಹಾನಗರ ಪಾಲಿಕೆ ಮತ್ತು ಜಿಲ್ಲಾಡಳಿತವೇ ಹೊಣೆಗಾರರಾಗಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ಅಧಿಕಾರಿಗಳ ವಿರುದ್ಧ ದಲಿತ ಮುಖಂಡರ ಆಕ್ರೋಶ

ಹದಗೆಟ್ಟಿದೆ ತಾಲೂಕು ಆಡಳಿತ ವ್ಯವಸ್ಥೆ

ಕೆ.ಆರ್.ನಗರ: ತಾಲೂಕು ಆಡಳಿತ ವ್ಯವಸ್ಥೆ ಹದಗೆಟ್ಟಿದೆ, ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ನಿರ್ಲಕ್ಷ್ಯದಿಂದ ದಲಿತರಿಗೆ ದೊರೆಯ ಬೇಕಾದ ಸರ್ಕಾರಿ ಸವಲತ್ತು ದೊರೆಯುತ್ತಿಲ್ಲ ಎಂದು

ತಾಲೂಕಿನ ದಲಿತ ಮುಖಂಡರು ತಾಲೂಕು ಆಡಳಿತ ಹಾಗೂ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ತಹಸೀಲ್ದಾರ್ ಅಧ್ಯಕ್ಷತೆಯಲ್ಲಿ ನಡೆದ ತಾಲೂಕು ಮಟ್ಟದ ಎಸ್‌ಸಿ/ಎಸ್‌ಟಿ ಸಭೆಯಲ್ಲಿ ಪಾಲ್ಗೊಂಡ ದಲಿತ ಮುಖಂಡರು ಮಾತನಾಡಿ, ಕಳೆದ ಎರಡೂ ಕ್ಕಾಲು ವರ್ಷದ ನಂತರ ಇವಾಗ ಸಭೆ ಕರೆದಿದ್ದೀರಿ. ಆದರೂ, ಅಧಿಕಾರಿಗಳಿಂದ ಸಮರ್ಪಕ ಉತ್ತರ ದೊರೆಯುತ್ತಿಲ್ಲ. ಈ ಎರಡೂ ಕ್ಕಾಲು ವರ್ಷದಲ್ಲಿ ದಲಿತರಿಗೆ ಆಗಿರುವ ಅನ್ಯಾಯ ಹಾಗೂ ಒದಗಿರುವ ಸರ್ಕಾರಿ ಸವಲತ್ತುಗಳಬಗ್ಗೆ ಚರ್ಚೆ ಮಾಡಲು ಸಾಧ್ಯವಿಲ್ಲ, ಹಾಗಾಗಿ ಸಭೆ ಮುಂದೂಡಬೇಕು, ಎಂದು ಕೆಲ ದಲಿತ ಮುಖಂಡರು ಪಟ್ಟುಹಿಡಿದರು.



ಮಧ್ಯಪ್ರವೇಶ ಮಾಡಿದ ಮತ್ತಿತರ ಮುಖಂಡರು, ಸಭೆ ಮುಂದೂಡಿದರೆ ಮತ್ತೆ ಸಭೆ ಕರೆಯಲು ಮೂರು ವರ್ಷ ತೆಗೆದುಕೊಳ್ಳುತ್ತಾರೆ ಹಾಗಾಗಿ ನಮ್ಮ ಕಷ್ಟವನ್ನು ಯಾರ ಮುಂದೆ ಹೇಳಿ ಕೊಳ್ಳುವುದು, ಸಭೆ ನಡೆಯಲಿ ಎಂದಾಗ ಸಭೆ ನಡೆಯಲು ಅನುವು ಮಾಡಿಕೊಟ್ಟರು.

ಜಿ.ಪಂ.ಮಾಜಿ ಸದಸ್ಯ ಸಿದ್ದಪ್ಪ, ದಲಿತ ಮುಖಂಡ ಹನಸೋಗೆ ನಾಗರಾಜ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಸ್.ಮಹದೇವ್, ತಾ.ಪಂ. ಮಾಜಿ ಅಧ್ಯಕ್ಷ ಸ್ವಾಮಿ, ಸಿದ್ದಾಪುರ ಕಾಳಪ್ಪ, ಹಂಪಾಪುರ ಸೂರಿ, ಡಿ.ಕೆ.ಕೊಪ್ಪಲು ರಾಜಯ್ಯ, ಕಳ್ಳಿಮುದ್ದನಹಳ್ಳಿ ಚಂದ್ರು, ಗಳಿಗೆಕೆರೆ ಜಿ.ಕೆ. ತೋಟಪ್ಪನಾಯಕ, ಕೃಷ್ಣನಾಯಕ, ತಿಪ್ಪೂರು ಮಹದೇವನಾಯಕ, ಅರ್ಜುನಹಳ್ಳಿ ಮುತ್ತುರಾಜ್, ಹೊಸ ಅಗ್ರಹಾರ ಹೆಚ್.ಎಸ್.ಸ್ವಾಮಿ ಇದ್ದರು.

ಕರ್ನಾಟಕ ಮಾದರ ಮಹಾಸಭಾ, ಮಾದಿಗ ಸಂಘಟನೆ ಒಕ್ಕೂಟದಿಂದ ಪ್ರತಿಭಟನೆ

ಸರ್ಕಾರ ಕೂಡಲೇ ಒಳಮೀಸಲಾತಿ ಜಾರಿಗೊಳಿಸಲಿ

ಪಿರಿಯಾಪಟ್ಟಣ: ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಕುರಿತಂತೆ ನ್ಯಾ. ನಾಗಮೋಹನ ದಾಸ್ ನೀಡಿರುವ ವರದಿಯನ್ನು ರಾಜ್ಯ ಸರ್ಕಾರ ಕಾಯ್ದೆ ರೂಪಿಸಿ ರಾಜ್ಯಪಾಲರಿಂದ ಅಂಕಿತ ಪಡೆದಿರುವುದು ಮಾದಿಗ ಸಮುದಾಯದ 35 ವರ್ಷಗಳ ಹೋರಾಟಕ್ಕೆ ದೊರೆತ ಸಾಮಾಜಿಕ ನ್ಯಾಯವಾಗಿದೆ. ಕೂಡಲೇ ಸರ್ಕಾರ ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ಮಾದರ ಮಹಾಸಭಾ ಮತ್ತು ಮಾದಿಗ ಸಂಘಟನೆಗಳ ಒಕ್ಕೂಟ ಪಿರಿಯಾಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಸಂಘದ ಅಧ್ಯಕ್ಷ ಸೀಗೂರು ವಿಜಯ್ ಕುಮಾರ್ ಮಾತನಾಡಿ ಸಾಮಾಜಿಕ ನ್ಯಾಯದ ಪ್ರತಿಪಾದಕಾರದ ಮುಖ್ಯ ಮಂತ್ರಿ ಸಿದ್ದರಾಮಯ್ಯ ನವರು ಮಾದಿಗ ಸಮಾಜಕ್ಕೆ ನ್ಯಾಯ ಕೊಡಿಸಬೇಕು.ನಾವು ಯಾರಿಗೂ ತೊಂದರೆ ಕೊಡುವವರಲ್ಲ.ಮುಗ್ಧ ಜನರಿದ್ದೇವೆ.ನಮಗೆ ಸಾಕಷ್ಟು ಸಾಮಾಜಿಕ ಅನ್ಯಾಯಗಳಾಗಿವೆ ಇದನ್ನು ಸರಿಪಡಿಸಲು ಒಳ ಮೀಸಲಾತಿ ಅನಿವಾರ್ಯವಾಗಿದೆ. ಕೆಲವು ವ್ಯಕ್ತಿಗಳು ಒಳ ಮೀಸಲಾತಿ ಜಾರಿಯಾಗದಂತೆ ವಿರೋದಿಸುತ್ತಿರುವುದು ಬೇಸರದ ಸಂಗತಿಯಾಗಿದೆ ಎಂದರು. ನ್ಯಾಯಮೂರ್ತಿ ನಾಗಮೋಹನದಾಸ್ ವರದಿಯ ಆದಾರದ ಮೇಲೆ ಶೇಕಡ 15% ಒಳ ಮೀಸಲಾತಿಯನ್ನು ಪರಿಶಿಷ್ಟ ಜಾತಿಯ ಎಬಿಸಿ ಉಪ ವರ್ಗೀಕರಣದಂತೆ ಜಾರಿಗೊಳಿಸಿ ಸ್ಪಷ್ಟ ತಿದ್ದುಪಡಿ ಆದೇಶ ಹೊರಡಿಸಬೇಕು ಇದಲ್ಲದೆ ಒಟ್ಟು ಮೀಸಲಾತಿ ಪ್ರಮಾಣವನ್ನು ತಿಳಿಸಿರುವ ವಿಚಾರದಲ್ಲಿ ಸರ್ಕಾರವು ನ್ಯಾಯಾಲಯದ ಮುಂದೆ ಸಂವಿಧಾನಾತ್ಮಕ ಮತ್ತು ಕಾನೂನು ಆಧಾರದ ಮೇಲೆ ಸಮಗ್ರ ಪ್ರಭಲ ವಾದ ಮಂಡಿಸಬೇಕು.



56,342 ಖಾಲಿ ಹುದ್ದೆಗಳ ಬರ್ತಿಗೆ ಶೇ.15 ಒಳ ಮೀಸಲಾತಿಯನ್ನು ಅನ್ವಯಿಸುವ ತಿದ್ದುಪಡಿ ಆದೇಶವನ್ನು ಒಳ ಮೀಸಲಾತಿ ಅನುಸಾರ ಹೊರಡಿಸಬೇಕು ಅಲ್ಲದೆ ಸರ್ಕಾರ ತಕ್ಷಣ ಗೊಂದಲವನ್ನು ಕೂಡಲೇ ಸರಿಪಡಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಗೌರವಾಧ್ಯಕ್ಷ ಭೂತನಹಳ್ಳಿ ಶಿವಣ್ಣ, ಸಮುದಾಯದ ಮುಖಂಡರಾದ ಸಣ್ಣಪ್ಪ ಗಿರಗೂರು, ರವಿ ಕುಶಾಲನಗರ, ಬೇಗೂರು ಮಹದೇವ್ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಸಾಧಕರಿಗೆ ಸನ್ಮಾನ

ಪಾಂಡವಪುರ: ತಾಲೂಕಿನ ಹಾಗನಹಳ್ಳಿ ಗ್ರಾಮದಲ್ಲಿರುವ ವೃದ್ಧಾಶ್ರಮ ಅಮ್ಮನ ಆಸರೆ ಚಾರಿಟಬಲ್ ಸೇವಾ ಟ್ರಸ್ಟ್ ಆಶ್ರಯದಲ್ಲಿ ನಡೆದ ನಾಮಕರಣ ಮಹೋತ್ಸವದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಾದ ಜಿಲ್ಲಾ ವರದಿಗಾರರು ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಜಿಲ್ಲಾ ಮಾಜಿ ನಿರ್ದೇಶಕರಾದ ಎನ್.ಕೃಷ್ಣೇಗೌಡ, ರೈತ ಸಂಘದ ಮುಖಂಡರು, ಹೊಸಕೋಟೆ ವಿಜಯಕುಮಾರ್, ಸಮಾಜ ಸೇವಕ ಹುಲ್ಕೆರೆ ಕೊಪ್ಪಲು ನಾರಾಯಣಗೌಡ, ಪೈಲ್ವಾನ್ ಅರಳುಕುಪ್ಪೆ ಗುರುಮೂರ್ತಿ ಸೇರಿದಂತೆ ಇತರರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಂಶುಪಾಲ ಪ್ರೊ.ಬಿ.ನಾರಾಯಣಗೌಡ, ಸರ್ಕಾರಿ ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷ ವೇದಮೂರ್ತಿ, ತಾಲೂಕು ಮಾಜಿ ಅಧ್ಯಕ್ಷ ಎಸ್. ಮಲ್ಲಿಕಾರ್ಜುನೇಗೌಡ, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ನ ಅಧ್ಯಕ್ಷ ಎಚ್.ಆರ್.ಧನ್ಯಕುಮಾರ್, ನಿವೃತ್ತ ಮುಖ್ಯ ಶಿಕ್ಷಕರಾದ ಸಿದ್ದಪ್ಪ, ರಮೇಶ್, ಶಿಕ್ಷಕ ರವಿಕುಮಾರ್, ಪ್ರಗತಿ ಸೇವಾ ಟ್ರಸ್ಟ್ ಅಧ್ಯಕ್ಷ ರಾಗಿಮುದ್ದನಹಳ್ಳಿ ನಾಗೇಶ್, ಅಖಂಡ ಕರ್ನಾಟಕ ರಾಜ್ಯ ರಹಿತ ರೈತರ ಸಂಘದ ಮೈಸೂರು ಜಿಲ್ಲಾ ಮಹಿಳಾ ಅಧ್ಯಕ್ಷೆ ಉಮಾದೇವಿ, ರೈತ ಸಂಘ ಮುಖಂಡ ಅತ್ತಿಗಾನಹಳ್ಳಿ ಜಗದೀಶ್, ಕಟ್ಟೇರಿ ಗ್ರಾ.ಪಂ ಮಾಜಿ ಅಧ್ಯಕ್ಷ ರಾಜೇಂದ್ರ,ಹಿರೇಮರಳಿ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಜೆಡಿಎಸ್ ಮುಖಂಡ, ಟಿಎಪಿಸಿಎಂಎಸ್ ನಿರ್ದೇಶಕ ಪಿ.ಎಲ್.ಆದರ್ಶ, ವೀರಶೈವ ಜಿಲ್ಲಾ ನಿರ್ದೇಶಕ ಹಾಗನಹಳ್ಳಿ ಸುರೇಶ್, ಅಮ್ಮನ ಆಸರೆ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಪ್ರಭುಸ್ವಾಮಿ, ಪ್ರಧಾನ ಕಾರ್ಯದರ್ಶಿ ಪುಷ್ಪಾವತಿ ಉಮೇಶ್ ಇದ್ದರು.

ಮಾ.28ಕ್ಕೆ ಚಕ್ಕಡಿ ಓಟ ಸ್ಪರ್ಧೆ

ಮಳವಳ್ಳಿ: ಶ್ರೀ ಗಂಗಾಪರಮೇಶ್ವರಿ ಯುವಕರ ಬಳಗದ ವತಿಯಿಂದ ಗಡಿಕುಲದ ಯಜಮಾನರುಗಳ ಸಮ್ಮುಖದಲ್ಲಿ 1ನೇ ವರ್ಷದ ರಾಜ್ಯಮಟ್ಟದ ಜೋಡಿ ಹಸುಗಳ ಮತ್ತು ಚಕ್ಕಡಿ ಓಟ ಸ್ಪರ್ಧೆ ಮಾರ್ಚ್ 28 ಮತ್ತು 29ರಂದು ಪಟ್ಟಣದ ದೊಡ್ಡಕೆರೆ ಮಹದೇಶ್ವರ ದೇವಸ್ಥಾನದ ಗದ್ದೆ ಮಾಳದಲ್ಲಿ ನಡೆಯಲಿದೆ. ಮಾರ್ಚ್ 28ರಂದು ಹಾಲು ಹಲ್ಲು ಮತ್ತು ಎರಡು ಹಲ್ಲುಗಳ ಹಸುಗಳು ಓಟ ಹಾಗೂ 29ರಂದು ಹಸುಗಳ ಓಟದ ಸ್ಪರ್ಧೆ ನಡೆಯಲಿದ್ದು, ಮೊದಲನೇ ಬಹುಮಾನ 50 ಸಾವಿರ, ದ್ವಿತೀಯ 30 ಸಾವಿರ, ತೃತೀಯ 20 ಸಾವಿರ, ಚತುರ್ಥ ಬಹುಮಾನ10ಸಾವಿರ ಜೊತೆಗೆ ಆಕರ್ಷಕ ಟ್ರೋಫಿ ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಗೌತಮ್ 8088837179, ಭರತ್ 8105212588, ಎಂ.ಡಿ ಅರುಣ್ 8747815490, ಕುಮಾರ್ 7353454881, ಶಂಕರ್ 9535516151 ಸಂಪರ್ಕಿಸಬಹುದಾಗಿದೆ.

ಜನಸಂಪರ್ಕ ಸಭೆ

ಪಾಂಡವಪುರ: ಪಟ್ಟಣದ ಸೆಸ್ಕ್ ಉಪವಿಭಾಗೀಯ ಕಚೇರಿ ಆವರಣದಲ್ಲಿ ಜನಸಂಪರ್ಕ ಸಭೆ ನಡೆಯಿತು. ಸೆಸ್ಕ್ ಕಾರ್ಯನಿರ್ವಾಹಕ ಇಂಜನಿಯರ್ ವಿನುತಾ ಅವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಸಾರ್ವಜನಿಕರು ದೂರುಗಳ ಸುರಿಮಳೆಗೈದರು. ಪ್ರಮುಖವಾಗಿ ಜಮೀನುಗಳಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಗಳನ್ನು ಅಳವಡಿಸಿಕೊಡುವಂತೆ ಅನೇಕರು ಸಮಸ್ಯೆ ಅನಾವರಣಗೊಳಿಸಿದರು. ಕೆಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸಿಕೊಟ್ಟ ಸೆಸ್ಕ್ ಅಧಿಕಾರಿ ವರ್ಗ ಉಳಿದ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸುವುದಾಗಿ ತಿಳಿಸಿದರು.

ಜನಸಂಪರ್ಕ ಸಭೆಯಲ್ಲಿ ಸೆಸ್ಕ್ ಸಹಾಯಕ ಇಂಜನಿಯರ್ ರೂಪಿಣಿ, ಕಿರಿಯ ಇಂಜನಿಯರ್ ಸುಷ್ಮಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಲೋಕ ಅದಾಲತ್: 326 ಪ್ರಕರಣ ಇತ್ಯರ್ಥ

ಪಾಂಡವಪುರ: ಲೋಕ ಅದಾಲತ್‌ನಲ್ಲಿ ರಾಜಿ ಸಂಧಾನದ ಮೂಲಕ ಬಗೆಹರಿದ 326 ಪ್ರಕರಣಗಳು ಇತ್ಯರ್ಥಗೊಂಡವು. ಪಾಂಡವಪುರ ತಾಲೂಕಿನ ನ್ಯಾಯಾಲಯಗಳಲ್ಲಿ ಆಯೋಜಿಸಿದ್ದ ಲೋಕ ಅದಾಲತ್ ಕಾರ್ಯಕ್ರಮದಲ್ಲಿ ಹಿರಿಯ ಪ್ರಧಾನ ಸಿವಿಲ್ ನ್ಯಾಯಾಧೀಶ ಆರ್.ಮಹೇಶ್ ಹಾಗೂ ಪ್ರಧಾನ ಸಿವಿಲ್ ನ್ಯಾಯಾಧೀಶ ಬಿ.ಪಾರ್ವತಮ್ಮ ಅವರ ನೇತೃತ್ವದಲ್ಲಿ ಹಲವಾರು ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿದರು. ಲೋಕ ಅದಾಲತ್ ಕಾರ್ಯಕ್ರಮದಲ್ಲಿ ಒಟ್ಟು 6506 ಬಾಕಿ ಪ್ರಕರಣಗಳಲ್ಲಿ 678 ಪ್ರಕರಣಗಳನ್ನು ರಾಜಿ ಸಂಧಾನಕ್ಕಾಗಿ ತೆಗೆದುಕೊಳ್ಳಲಾಗಿತ್ತು. ಅದರಲ್ಲಿ ಒಟ್ಟು 326 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಯಿತು. ಹಿರಿಯ ಪ್ರಧಾನ ಸಿವಿಲ್ ನ್ಯಾಯಾಧೀಶ ಆರ್.ಮಹೇಶ್ ಮಾತನಾಡಿ, ಸಾರ್ವಜನಿಕರು ವೃಥಾ ನ್ಯಾಯಾಲಯಕ್ಕೆ ಅಲೆದು ಹಣ ಹಾಗೂ ತಮ್ಮ ಅಮೂಲ್ಯವಾದ ಸಮಯವನ್ನು ವ್ಯರ್ಥ ಮಾಡಿಕೊಳ್ಳದೇ ಲೋಕ ಅದಾಲತ್ ನಂತಹ ಕಾರ್ಯಕ್ರಮಗಳ ಮೂಲಕ ಪ್ರಕರಣಗಳನ್ನು ರಾಜಿ ಸಂಧಾನದ ಮುಖಾಂತರ ಇತ್ಯರ್ಥಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಮಳವಳ್ಳಿ ತಾಲೂಕಿನ ತಮ್ಮಡಹಳ್ಳಿಯಲ್ಲಿ ಸಿದ್ದಪ್ಪಾಜಿ ಸೇವಾ ಸಮಿತಿ ವತಿಯಿಂದ ಪುನೀತ್‌ರಾಜ್‌ಕುಮಾರ್‌ಅವರ 51ನೇ ಹುಟ್ಟುಹಬ್ಬದ ಅಂಗವಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಕಲಿಕೆ ಸಾಮಾಗ್ರಿಗಳನ್ನು ವಿತರಿಸಲಾಯಿತು.

ಮಕ್ಕಳಿಗೆ ಕಲಿಕೆ ಸಾಮಗ್ರಿ ವಿತರಣೆ

ಮಳವಳ್ಳಿ: ಕಲೆಯ ಜೊತೆಗೆ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡು ಜನರ ಮನಸ್ಸಿನಲ್ಲಿ ಕರ್ನಾಟಕ ರತ್ನ ಪುನೀತ್‌ರಾಜ್‌ಕುಮಾರ್ ಶಾಶ್ವತವಾಗಿ ಜನರ ಮನದಲ್ಲಿ ಉಳಿದಿದ್ದಾರೆಂದು ಡಾ.ರಾಜ್‌ಕುಮಾರ್ ಕಲಾ ಸಂಘದ ಅಧ್ಯಕ್ಷ ದೊಡ್ಡಯ್ಯ ತಿಳಿಸಿದರು.

ತಾಲ್ಲೂಕಿನ ತಮ್ಮಡಹಳ್ಳಿಯಲ್ಲಿ ಸಿದ್ದಪ್ಪಾಜಿ ಸೇವಾ ಸಮಿತಿ ವತಿಯಿಂದ ಪುನೀತ್ ರಾಜ್‌ಕುಮಾರ್‌ಅವರ 51ನೇ ಹುಟ್ಟುಹಬ್ಬದ ಅಂಗವಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಕಲಿಕೆ ಸಾಮಾಗ್ರಿಗಳ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪುನೀತ್ ಅವರ ಅಗಲಿಕೆಯ ನಂತರ, ಜನ್ಮದಿನವನ್ನು ಕರ್ನಾಟಕ ಸರ್ಕಾರ ಮತ್ತು ಅಭಿಮಾನಿಗಳು ಸ್ಫೂರ್ತಿ ದಿನ ಎಂದು ಆಚರಿಸಲಾಗುತ್ತಿದೆ. ಸಾಮಾಜಿಕ ಕಳಕಳಿ ಮತ್ತು ಸರಳತೆಯನ್ನು ಯುವ ಪೀಳಿಗೆಗೆ ಮಾದರಿಯಾಗಿದೆ ಎಂದರು.ಪುನೀತ್ ರಾಜ್‌ಕುಮಾರ್ ಚಲನಚಿತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದು, ಕಲೆಯ ಜೊತೆಗೆ ಸಾವಿರಾರು ವಿದ್ಯಾರ್ಥಿಗಳ ಶಿಕ್ಷಣಕ್ಕೆ ಮತ್ತು ಹಲವಾರು ಗೋಶಾಲೆಗಳಿಗೆ ಕಾಣದಂತೆ ಸಹಾಯದಲ್ಲಿ ತೊಡಗಿದ್ದರು. ಆದರ್ಶ ಪುರುಷ ಕರ್ನಾಟಕದ ಹೆಮ್ಮೆಯ ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಅವರ ಹುಟ್ಟುಹಬ್ಬವನ್ನು ಅಭಿಮಾನಿಗಳು ರಾಜ್ಯಾದ್ಯಂತ ಸಂಭ್ರಮದಿಂದ ಮತ್ತು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದು ಹೇಳಿದರು. ಪುನೀತ್‌ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಶಾಲಾ ಮಕ್ಕಳಿಗೆ ಕಲಿಕಾ ಸಾಮಾಗ್ರಿಗಳು ಹಾಗೂ ಸಹಿಯನ್ನು ವಿತರಿಸಲಾಯಿತು.



ಕರ್ನಾಟಕ ರತ್ನ, ನಟ ದಿ. ಪುನೀತ್ ರಾಜ್ ಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಮಂಡ್ಯ ಜಿಲ್ಲಾ ಘಟಕದ ವತಿಯಿಂದ ಮಂಡ್ಯ ನಗರದ ಜಯಚಾಮ ರಾಜೇಂದ್ರ ವೃತ್ತದಲ್ಲಿರುವ ಪುನೀತ್ ರಾಜ್‌ಕುಮಾರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು.

ಡಾಪುತಿನ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಡಿಸಿ ಡಾ. ಕುಮಾರ

ಬದುಕು-ಬರಹ ತಿಳಿದುಕೊಳ್ಳಿ

ಮಂಡ್ಯ: ಸಾಹಿತ್ಯವನ್ನು ತಿಳಿದುಕೊಳ್ಳುವ ಮೊದಲುಸಾಹಿತಿಯವ್ಯೆಯಕ್ತಿಕಬದುಕು-ಬರಹನ್ನು ತಿಳಿದುಕೊಳ್ಳಬೇಕು. ಬದುಕು-ಬರಹವನ್ನು ತಿಳಿದುಕೊಳ್ಳದಿದ್ದರೆ ಸಾಹಿತ್ಯ ಅರ್ಥವಾಗುವುದಿಲ್ಲ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಹೇಳಿದರು.



ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಮೇಲುಕೋಟೆಯ ಡಾ.ಪು.ತಿ.ನ.ಟ್ರಸ್ಟ್, ಜಿಲ್ಲಾ ಮಾಂಡವ್ಯ ಪ್ರಥಮ ದರ್ಜೆ ಕಾಲೇಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಕನ್ನಡದ ಮಹಾಕವಿ ಡಾ.ಪು.ತಿನ ಜನ್ಮದಿನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪು.ತಿ.ನ. ಕನ್ನಡ ಸಾಹಿತ್ಯ ಲೋಕದ ಶ್ರೇಷ್ಠ ಕವಿ. ಅವರ ಸಾಹಿತ್ಯ ಕಷ್ಟ ಎನಿಸಬಹುದು. ಆದರೆ ಸಾಹಿತ್ಯದೊಳಗಿನ ಭಾವ, ಸಂದೇಶ, ಮೌಲ್ಯ ಈಗಲೂ ಪ್ರಸ್ತುತ. ಚಿಂತನೆಗಳ ಮೂಲಕ ಅವರನ್ನು ಜೀವಂತವಾಗಿಡಬೇಕು. ಒಳ್ಳೆಯ ಸಾಧನೆ ಮತ್ತು ಸಮಸ್ಯೆ ಮುಕ್ತ ಬದುಕಿಗೆ ಸಾಹಿತ್ಯವನ್ನು ಓದಬೇಕು. ಸಾಹಿತ್ಯವನ್ನು ಓದದಿದ್ದರೆ ಬದುಕು ನಿರರ್ಥಕ ಎಂದು ವಿಶ್ಲೇಷಿಸಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶಗೌಡ ಮಾತನಾಡಿ, ಪು.ತಿ.ನ. ಮತ್ತು ಕೆ.ಎಸ್.ನ. ಇಬ್ಬರೂ ನಮ್ಮ ಜಿಲ್ಲೆಯಕವಿಗಳು. ಆದರೆ, ಟ್ರಸ್ಟ್ ಕಾರ್ಯಚಟುವಟಿಕೆಗಳೆಲ್ಲವೂ ಬೆಂಗಳೂರಿಗಷ್ಟೇ ಸೀಮಿತವಾಗಿತ್ತು. ಪ್ರೊ. ಎಂ.ಕೃಷ್ಣೇಗೌಡರು ಅಧ್ಯಕ್ಷರಾದ ಬಳಿಕ ಪು.ತಿ.ನ. ಟ್ರಸ್ಟ್‌ನ ಕಾರ್ಯಚಟುವಟಿಕೆಗಳನ್ನು ಮಂಡ್ಯಕ್ಕೆ ತಂದಿದ್ದಾರೆ. ಇಬ್ಬರು ಕವಿದ್ವಯರ ತವರಿನಲ್ಲೇ ಕಾರ್ಯಕ್ರಮಗಳು ನಡೆದಾಗ ಅವರು ನಮ್ಮವರೆಂಬ ಭಾವನೆಯೊಂದಿಗೆ ಸ್ಥಳೀಯರು ಕೈಜೋಡಿಸುತ್ತಾರೆ. ಅದರಿಂದ ಕಾರ್ಯಕ್ರಮದ ಮಹತ್ವ ಹೆಚ್ಚುತ್ತದೆ. ಸ್ಥಳೀಯರಿಗೆ ಅವರನ್ನು ಅರ್ಥೈಸಿಕೊಡುವುದಕ್ಕೆ, ಅಭಿಮಾನ ಮೂಡಿಸುವುದಕ್ಕೆ ಸಹಕಾರಿಯಾಗುತ್ತದೆ ಎಂದು ಹೇಳಿದರು.

ಎಸ್.ಬಿ.ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಮೀರಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಬಿ.ವಿ.ನಂದೀಶ್, ಕನ್ನಡ ಸಾಹಿತ್ಯ ಪರಿಷತ್ತಿನ ಹರ್ಷ, ಡಾ.ಪು.ತಿ.ನ.ಟ್ರಸ್ಟ್ ಸದಸ್ಯ ಡಾ.ಪಿ. ಸುಮಾರಾಣಿ ಕುಮಾರ ಕೊಪ್ಪ ಭಾಗವಹಿಸಿದ್ದರು.

ಡಿಜಿಟಲ್ ಮಾದರಿಯಲ್ಲಿ ಜನಗಣತಿ: ಡಿಸಿ

ಮಂಡ್ಯ: 2027ರ ಜನಗಣತಿಯು ಸಂಪೂರ್ಣವಾಗಿ ಡಿಜಿಟಲ್ ಮಾದರಿಯಲ್ಲಿ ನಡೆಯುತ್ತಿರುವುದರಿಂದ ಕಾರ್ಯಾಚರಣೆಯನ್ನು ದೋಷರಹಿತವಾಗಿ ನಿರ್ವಹಿಸಲು ತಾಂತ್ರಿಕ ಪರಿಣಿತರು ಮತ್ತು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜನಗಣತಿ 2027ರ 1ನೇ ಹಂತದ ಕಾರ್ಯಾಚರಣೆ ಸಂಬಂಧ ನಿಯೋಜನೆಗೊಂಡಿರುವ ತಾಂತ್ರಿಕ ಸಿಬ್ಬಂದಿ ತರಬೇತಿಯಲ್ಲಿ ಮಾತನಾಡಿದ ಅವರು, 2027ರ ಜನಗಣತಿಯು ಸಂಪೂರ್ಣವಾಗಿ ಮೊಬೈಲ್ ಆಪ್ ಮೂಲಕ ನಡೆಯಲಿದೆ. ದತ್ತಾಂಶ ನಿಖರತೆ ಮತ್ತು ಪಾರದರ್ಶಕತೆ ಹೆಚ್ಚಲಿದ್ದು, ಸರ್ಕಾರದ ಸೌಲಭ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸಲು ಸಹಕಾರಿ ಎಂದು ಹೇಳಿದರು.

> ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಗಳಿಸುವ ಅಂಕಗಳಿಗಿಂತ ಜೀವನದಲ್ಲಿ ಗಳಿಸುವ ಅಂಕಗಳು ಮುಖ್ಯ. ತಂದೆ-ತಾಯಿಯರ ಕನಸನ್ನು ನನಸು ಮಾಡುವುದು ನಿಮ್ಮ ಗುರಿಯಾಗಬೇಕು.
> ■ ಡಾ.ಕುಮಾರ, ಜಿಲ್ಲಾಧಿಕಾರಿ

ಅಧಿಕಾರಿಗಳ ಕ್ರಮ ಖಂಡಿಸಿ ಪ್ರತಿಭಟನೆ

ಮದ್ದೂರು: ತಾಲೂಕಿನ ಗೊರವನಹಳ್ಳಿ ಗ್ರಾಮವನ್ನು ನಗರಸಭೆಗೆ ಸೇರ್ಪಡೆಗೊಳಿಸಿರುವ ಕ್ರಮ ಖಂಡಿಸಿ ಸ್ಥಳೀಯ ನಿವಾಸಿಗಳು ನಡೆಸುತ್ತಿದ್ದ ಧರಣಿ ಸ್ಥಳಕ್ಕೆ ಆಗಮಿಸಿದ ಪೊಲೀಸರು ಏಕಾಏಕಿ ಮಹಿಳೆಯರ ಮತ್ತು ಪ್ರತಿಭಟನಾಕಾರರ ಮೇಲೆ ದೌರ್ಜನ್ಯವೆಸಗಿರುವ ಪೊಲೀಸ್ ಅಧಿಕಾರಿಗಳ ಕ್ರಮ ಖಂಡಿಸಿ ಗೊರವನಹಳ್ಳಿ ಹಾಗೂ ಗೆಜ್ಜಲಗೆರೆ ಗ್ರಾಮಸ್ಥರು ಬೃಹತ್ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪಟ್ಟಣದ ಪ್ರವಾಸಿ ಮಂದಿರದ ಬಳಿ ಆಗಮಿಸಿದ ಗೆಜ್ಜಲಗೆರೆ, ಗೊರವನಹಳ್ಳಿ ಗ್ರಾಮದ ಸ್ಥಳೀಯ ನಿವಾಸಿಗಳು ಸೇರಿದಂತೆ ರೈತ ಸಂಘಟನೆ ಹಾಗೂ ಭಾರತೀಯ ಕಿಸಾನ್ ಸಂಘದ ಪದಾಧಿಕಾರಿಗಳು ನೂರಾರು ಸಂಖ್ಯೆಯಲ್ಲಿ ಆಗಮಿಸಿ ರಾಜ್ಯ ಸರಕಾರ, ಜಿಲ್ಲಾಡಳಿತ, ತಾಲೂಕು ಆಡಳಿತ ಹಾಗೂ ಚುನಾಯಿತ ಪ್ರತಿನಿಧಿಗಳ ವಿರುದ್ಧ ಘೋಷಣೆ ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ವೃತ್ತದಿಂದ ಮೆರವಣಿಗೆ ಹೊರಟ ಪ್ರತಿಭಟನಾಕಾರರು ದಾರಿಯುದ್ದಕ್ಕೂ ಸ್ಥಳೀಯ ಶಾಸಕರ ಮತ್ತು ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಪೇಟೆಬೀದಿ ಮೂಲಕ ಮೆರವಣಿಗೆ ಕೈಗೊಂಡು ಬಳಿಕ ತಾಲೂಕು ಕಚೇರಿಗೆ ಆಗಮಿಸಿ ಮನವಿ ಪತ್ರ ಸಲ್ಲಿಸಿದರು. ಗೊರವನಹಳ್ಳಿ ಗ್ರಾ.ಪಂ. ಕಚೇರಿ



ಆವರಣದಲ್ಲಿ ಕಳೆದ 66 ದಿನಗಳಿಂದಲೂ ಸ್ಥಳೀಯ ನಿವಾಸಿಗಳು ಶಾಂತಿಯುತ ಧರಣಿ ಕೈಗೊಂಡಿದ್ದರೂ ಕಡತ ತೆಗೆದುಕೊಳ್ಳುವ ನೆಪದಲ್ಲಿ ಅಧಿಕಾರಿಗಳೊಟ್ಟಿಗೆ ಆಗಮಿಸಿದ ಪೋಲೀಸರು ಏಕಾಏಕಿ ದೌರ್ಜನ್ಯವೆಸಗಿದ್ದಾರೆಂದು ದೂರಿದರು.

ತಾಪಂ ಇಒ ರವರು ಪಿಡಿಒ ರವರ ಮೇಲೆ ಒತ್ತಡ ತಂದು ಹಲವು ಪ್ರಕ್ರಿಯೆಗಳ ಬಗ್ಗೆ ಕಾರ್ಯ ನಿರ್ವಹಿಸಿದ್ದು ಇದನ್ನು ವಿರೋಧಿಸಿ ಸ್ಥಳೀಯ ಗ್ರಾಮಸ್ಥರೆಲ್ಲರೂ ನಿರಂತರವಾಗಿ ಧರಣಿ ಮತ್ತು ಅಹೋರಾತ್ರಿ ಧರಣಿ ಕೈಗೊಂಡಿದ್ದು ಪೋಲೀಸರು ಮತ್ತು ಅಧಿಕಾರಿಗಳು ಚಳುವಳಿಯ ದಿಕ್ಕು ತಪ್ಪಿಸಲು ಇಲ್ಲಸಲ್ಲದ ಕಾರ್ಯತಂತ್ರಗಳನ್ನು ರೂಪಿಸುತ್ತಿದ್ದಾರೆಂದರು.

ಪ್ರತಿಭಟನೆ ವೇಳೆ ಭಾರತೀಯ ಕಿಸಾನ್ ಸಂಘದ ಸದಸ್ಯೆ ಪುಟ್ಟಮ್ಮ, ಶ್ರೀಕಂಠೇಗೌಡ, ಸ್ಥಳೀಯ ಮುಖಂಡರಾದ ಸುನಂದಜಯರಾಂ, ಗೊರವನಹಳ್ಳಿ ಪ್ರಸನ್ನ, ಲಿಂಗಪ್ಪಾಜಿ, ಜಿ.ಎ.ಶಂಕರ್, ಚಂದ್ರಶೇಖರ್, ಶಿವರಾಮು, ಯಧುಶೈಲಸಂಪತ್, ಸಂತೋಷ್, ರಾಮಕೃಷ್ಣ, ಮಹೇಶ್, ಸತೀಶ್, ಶಿವರಾಮು, ಶಿವಪ್ಪ, ಸುರೇಶ್ ನೇತೃತ್ವ ವಹಿಸಿದ್ದರು.

ಶಾಲೆ ಅಭಿವೃದ್ಧಿಗೆ ಕೈಜೋಡಿಸಿ

ಮಳವಳ್ಳಿ: ಸರ್ಕಾರದ ಜೊತೆಗೆ ಸಾರ್ವಜನಿಕರು ಕೈ ಜೋಡಿಸಿದರೇ ಸರ್ಕಾರಿ ಶಾಲೆಗಳನ್ನು ಮಾದರಿ ಶಾಲೆಗಳನ್ನಾಗಿ ಪರಿವರ್ತಿಸಬಹುದಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವಿ.ಈ ಉಮಾ ತಿಳಿಸಿದರು.

ಪಟ್ಟಣದ ಅಶೋಕ್‌ನಗರ ಸರ್ಕಾರಿ ಪ್ರಾಥಮಿಕ ಶಾಲೆಗೆ ಮೂಳೆ ತಜ್ಞ ಡಾ. ಸುನೀಲ್ ಕುಮಾರ್ ಅವರು ಕೊಡುಗೆಯಾಗಿ ನೀಡಿದ ಬ್ಯಾಂಡ್‌ಸೆಟ್, ಚೇರ್ ಹಾಗೂ ಟೇಬಲ್ ಗಳನ್ನು ವಿತರಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳನ್ನು ಗುಣಾತ್ಮಕ ಶಿಕ್ಷಣವನ್ನು ನೀಡುವುದರ ಮೂಲಕ ಮಕ್ಕಳ ಕಲಿಕೆಯ ಸಾಮಾರ್ಥ್ಯವನ್ನು ಹೆಚ್ಚಿಸಲಾಗುತ್ತಿದೆ ಎಂದು ಹೇಳಿದರು.

ಶಾಸಕ ಪಿ.ಎಂ ನರೇಂದ್ರಸ್ವಾಮಿ ಅವರ ನೆರವಿನಿಂದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿಯೂ ಡಿಜಿಟಲಿಕರಣಗೊಳಿಸಿ ಮಲ್ಟಿ ಮೀಡಿಯಾ ಆರಂಭಿಸಲಾಗಿದ್ದು, ಖಾಸಗಿ ಶಾಲೆಗಳ ವ್ಯಾಮೋಹಕ್ಕೆ ಮೊರೆಹೋಗದೇ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಬೇಕೆಂದು ಕಿವಿಮಾತು ಹೇಳಿದರು.

ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ಕಲಿಕಾ ಹಬ್ಬವನ್ನು ನಡೆಸಿ ವಿದ್ಯಾರ್ಥಿಗಳಲ್ಲಿ ನಾಯಕತ್ವಗುಣ ಬೆಳೆಯುವುದು, ಸ್ಪಷ್ಟವಾಗಿ ಓದು, ಬರಹ ಸೇರಿದಂತೆ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ತಯಾರು ಮಾಡಲಾಗುವುದು. ವಿದ್ಯಾರ್ಥಿಗಳ ಪ್ರತಭೆಯನ್ನು ಅನಾವರಣಗೊಳಿಸಲು ಪ್ರತಿಭಾಕರಂಜಿ ಹಾಗೂ ಕ್ರೀಡೆಗಳನ್ನು ಸರ್ಕಾರದ ವತಿಯಿಂದ ನಡೆಸಲಾಗುತ್ತಿದೆ. ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ ದೊಡ್ಡ ಹುದ್ದೆಗಳನ್ನು ಅಲಂಕರಿಸಿ ತಾವು ಓದಿದ ಶಾಲೆ ಹಾಗೂ ಗ್ರಾಮಕ್ಕೆ ಸಹಾಯ ಮಾಡಬೇಕೆಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ದಾನಿ ಡಾ. ಸುನೀಲ್ ಕುಮಾರ್ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಉಮಾ ಅವರನ್ನು ಅಭಿನಂದಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಸತೀಶ್ ಮುಖಂಡರಾದ ಶಿವಣ್ಣ, ರಮೇಶ್, ಶಿವನಂದ್, ಅರುಣ್, ಸಿದ್ದರಾಜು, ಮಂಜುನಾಥ್, ಕೃಷ್ಣಮೂರ್ತಿ, ಕುಮಾರ್, ಚಾಮರಾಜಮೂರ್ತಿ ಸೇರಿದಂತೆ ಮುಖ್ಯ ಶಿಕ್ಷಕರು ಹಾಗೂ ಸಹಶಿಕ್ಷಕರು ಇದ್ದರು.



ಕನ್ನಡ ಚಿತ್ರರಂಗದ ಉಳಿವಿಗೆ ಚಿಂತನೆ ನಡೆಸಿ

ಮಂಡ್ಯ: ಪ್ರೇಕ್ಷಕರ ನಿರಾಸಕ್ತಿ ಮತ್ತು ಕೊರತೆಯಿಂದ ವಿನಾಶದತ್ತ ಮುಖ ಮಾಡಿರುವ ಕನ್ನಡ ಚಿತ್ರರಂಗದ ಉಳಿವಿಗೆ ಸರ್ಕಾರ ಹಾಗೂ ಚಿತ್ರೋದ್ಯಮ ಗಂಭೀರ ಚಿಂತನೆ ನಡೆಸಬೇಕು ಎಂದು ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಎಲ್. ಸಂದೇಶ್ ಹೇಳಿದರು.

ನಗರದ ಉಪ ಕಾರಾಗೃಹ ವೃತ್ತದ ಸಮೀಪ ಇರುವ ಅಪ್ಪು ಬಿರಿಯಾನಿ ಸೆಂಟರ್ ಬಳಿ ಡಾ. ಪುನೀತ್ ರಾಜ್‌ಕುಮಾರ್ ಅಭಿಮಾನಿಗಳು ಆಯೋಜಿಸಿದ್ದ ಅಪ್ಪು ಜನ್ಮದಿನ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿ, ದರ ಏರಿಕೆ, ವಿಭಿನ್ನ ಮನೋರಂಜನೆ, ಸಮಯದ ಅಭಾವ, ಕೆಲಸದ ಒತ್ತಡ, ಮೊಬೈಲ್ ಬಳಕೆಯಂತಹ ಹತ್ತಾರು ಕಾರಣದಿಂದ ಚಿತ್ರರಂಗ ಕಳೆಗುಂದಿದ್ದುಘಿ, ಭವಿಷ್ಯದಲ್ಲಿ ಜನರ ಅಭಿರುಚಿಗೆ ಪೂರಕವಾಗಿ ತಂತ್ರಜ್ಞಾನವನ್ನು ಬಳಸಿಕೊಂಡು ಚಿತ್ರರಂಗವನ್ನು ಉಳಿಸಿಕೊಳ್ಳುವ ಪ್ರಯತ್ನ ಆಗಬೇಕು ಎಂದು ಹೇಳಿದರು.



ಸದಭಿರುಚಿ ಚಿತ್ರದ ಮೂಲಕ ಅಸಂಖ್ಯಾತ ಪ್ರೇಕ್ಷಕ ವೃಂದವನ್ನು ಹೊಂದಿದ್ದಂತಹ ಪುನೀತ್ ರಾಜ್‌ಕುಮಾರ ಉತ್ತಮ ಕಥೆಗಳ ಮೂಲಕ ಸಮಾಜವನ್ನು ತಿದ್ದುವ ಪ್ರಯತ್ನ ಮಾಡಿದ್ದರು. ಅಂತಹ ಚಿತ್ರಗಳು ಇಂದಿಗೂ ಪ್ರಸ್ತುತ ಎಂದರು.

ನಿಜ ಜೀವನದಲ್ಲಿ ಜನಮುಖಿಯಾಗಿ ತಮ್ಮನ್ನು ತೊಡಗಿಸಿಕೊಂಡಿದ್ದ ಪುನೀತ್ ರಾಜ್‌ಕುಮಾರ್ ಯುವಜನರ ಆದರ್ಶವೇ ಆಗಿದ್ದಾರೆ ಎಂದ ಅವರು, ಅಪ್ಪು ಬಿರಿಯಾನಿ ಸೆಂಟರ್‌ನ ಮಾಲೀಕರಾದ ಕೆ.ಎಸ್. ಗುರುರಾಜ್ ಪ್ರತಿ ವರ್ಷ ಸಮಾಜಸೇವಾ ಕಾರ್ಯದ ಮೂಲಕ ಪುನೀತ್ ಹುಟ್ಟುಹಬ್ಬವನ್ನು ಆಚರಿಸುತ್ತಿರುವುದು ಶ್ಲಾಘನೀಯ ಎಂದರು. ಅಪ್ಪು ಅಭಿಮಾನಿ ಬಳಗದ ಕೆ.ಎಸ್. ಗುರುರಾಜ್, ಮುಖಂಡರಾದ ಎಂ. ಕೃಷ್ಣ, ಪ್ರದೀಪ್ ಯಲಿಯೂರು, ಶಿವಕುಮಾರ್ ಸಂತೆಕಸಲಗೆರೆ ಅಭಿಮಾನಿಗಳು ಹಾಜರಿದ್ದರು.

ಬಲಿದಾನ ದಿವಸ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ

ಮದ್ದೂರು: ಹಿಂದುಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಮಾ. 23ರಂದು ಪಟ್ಟಣ ಹಳೇ ಬಸ್ ನಿಲ್ದಾಣದಲ್ಲಿ ನಡೆಯುವ ಬಲಿದಾನ ದಿವಸ ಕಾರ್ಯಕ್ರಮದ ಪೋಸ್ಟರನ್ನು ಪಟ್ಟಣದ ಮಹಾವೀರ ಚಿತ್ರಮಂದಿರದ ಮುಂಭಾಗ ಹಿಂದೂ ಸಂಘಟಕ ಕೆ.ಟಿ. ನವೀನ್‌ಕುಮಾರ್ ಅವರು ಬಿಡುಗಡೆ ಮಾಡಿದರು.



ನಂತರ ಮಾತನಾಡಿದ ಅವರು, ಅಂದು ಸಂಜೆ 5 ಗಂಟೆಗೆ ವಿಶ್ವ ಒಕ್ಕಲಿಗರ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಸ್ವರ್ಣನೃಸಿಂಹಸಾಯಿ ಪೀಠಿಕಾ ಸೇವಾ ಟ್ರಸ್ಟ್‌ನ ಗುರುಮಹಾರಾಜರು ಶ್ರೀ ಅರ್ಜುನ ವಧೂತರು ಪ್ರಾಸ್ತಾವಿಕವಾಗಿ ಮಾತನಾಡುವರು ಎಂದರು.

ಕದಂಬ ಸಮೂಹ ಸಂಸ್ಥೆ ಮುಖ್ಯಸ್ಥ ಅನಂತ ಕುಮಾರ್ ಹೆಗಡೆ ಶೋಭಯಾತ್ರೆ ಚಾಲನೆ ನೀಡುವರು. ಶಾಸಕ ಬಸವನಗೌಡ ಪಾಟೀಲ ಯತ್ನಾಳ್ ಅವರು ಮುಖ್ಯ ಭಾಷಣ ಮಾಡುವರು. ಲೇಖಕ ಶ್ರೀಕಾಂತ್ ಶೆಟ್ಟಿ ಅವರು ದಿಕ್ಸೂಚಿ ಭಾಷಣ ಮಾಡುವರು. ಅಂದು ಸಂಜೆ 4 ಗಂಟೆಗೆ ಮದ್ದೂರಿನ ಟಿ.ಬಿ. ವೃತ್ತದಿಂದ ಶೋಭಾಯಾತ್ರೆ ನಡೆಯಲಿದೆ. ಹಿಂದೂ ಸಂಘಟನೆಗಳ ಕಾರ್ಯಕರ್ತರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಅವರು ಮನವಿ ಮಾಡಿದರು.

ಹಿಂದು ಸಂಘಟನೆಗಳ ಕಾರ್ಯಕರ್ತರಾದ ಗುರು ಮಲ್ಲೇಶ್, ಜಗನ್ನಾಥ್, ವೀರಭದ್ರಸ್ವಾಮಿ, ಅನಿಲ್ ಇತರರು ಪೋಸ್ಟರ್ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿದ್ದರು.

ಅನುಪಯುಕ್ತ ವಸ್ತುಗಳ ಮಾರಾಟ, ಸರ್ಕಾರಿ ವಾಹನಗಳ ದುರ್ಬಳಕೆಗೆ ಖಂಡನೆ

ಅಧಿಕಾರಿ, ನೌಕರರ ವಿರುದ್ಧ ಕ್ರಮಕ್ಕೆ ಒತ್ತಾಯ

ಮಂಡ್ಯ: ಜಿಲ್ಲಾ ಪಂಚಾಯಿತಿಗೆ ಸೇರಿದ ಅನುಪಯುಕ್ತ ವಸ್ತುಗಳ ಮಾರಾಟ ಹಾಗೂ ಸರ್ಕಾರಿ ವಾಹನಗಳ ದುರ್ಬಳಕೆ ಮಾಡುತ್ತಿರುವ ಅಧಿಕಾರಿ, ನೌಕರರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಗ್ರಾಮ ಮಾಜಿ ಪಂಚಾಯಿತಿ ಸದಸ್ಯರು ಜಿ.ಪಂ. ಉಪ ಕಾರ್ಯದರ್ಶಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ಪಂಚಾಯತ್ ಕಚೇರಿಗೆ ತೆರಳಿದ ಗ್ರಾ.ಪಂ. ಮಾಜಿ ಸದಸ್ಯರು, ಜಿಲ್ಲಾ ಪಂಚಾಯಿತಿಗೆ ಸೇರಿದ ಅನುಪಯುಕ್ತ ವಸ್ತುಗಳನ್ನು ಯಾವುದೇ ಟೆಂಡರ್ ಪ್ರಕ್ರಿಯೆ ನಡೆಸದೆ ಏಕಾಏಕಿ ಲಾರಿಯಲ್ಲಿ ಸಾಗಾಣಿಕೆ ಮಾಡಲಾಗಿದೆ. ಈ ಬಗ್ಗೆ ಕಚೇರಿಯ ಕಡತದಲ್ಲಿ ಯಾವುದೇ ದಾಖಲೆಗಳನ್ನು ಮಾಡಿಲ್ಲ ಎಂದು ಆರೋಪಿಸಿದರು.

ಸರ್ಕಾರಕ್ಕೆ ಸೇರಿದ ಯಾವುದೇ ವಸ್ತುಗಳು, ಸಾಮಗ್ರಿಗಳನ್ನು ಹಳೆಯದ್ದು ಮತ್ತು ಅನುಪಯುಕ್ತವಾಗಿರುವುದನ್ನು ಮಾರಾಟ ಮಾಡಬೇಕಾದರೆ ಸರ್ಕಾರದ ನಿಯಮಾವಳಿಗಳಂತೆ ಪತ್ರಿಕಾ ಪ್ರಕಟಣೆ ಹೊರಡಿಸಿ, ಬಹಿರಂಗ ಅಥವಾ ಟೆಂಡರ್ ಹರಾಜು ಮಾಡಬೇಕಾಗಿರುತ್ತದೆ. ಆದರೆ ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ಸರ್ಕಾರದ ಯಾವುದೇ ನಿಯಮಗಳನ್ನು ಪಾಲಿಸದೆ ಏಕಾಏಕಿ ಲಾರಿಗಳಲ್ಲಿ ಸಾಗಿಸಿ ಮಾರಾಟ ಮಾಡಿದ್ದಾರೆ. ಈ ಬಗ್ಗೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಪಂಚಾಯಿತಿಗೆ ಸೇರಿದ ಅಧ್ಯಕ್ಷರು, ಉಪಾಧ್ಯಕ್ಷರು, ರಜಾ ಹಾಕಿರುವ ಅಧಿಕಾರಿಗಳ ವಾಹನಗಳನ್ನು ಕೆಲ ಅಧಿಕಾರಿ, ಸಿಬ್ಬಂದಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದು, ಇದರಿಂದ ಸರ್ಕಾರದ ಖಜಾನೆಗೆ ಲಕ್ಷಾಂತರ ರೂ. ನಷ್ಟವಾಗುತ್ತಿದೆ.



ಸಾರ್ವಜನಿಕರ ತೆರಿಗೆ ಹಣ ಪೋಲಾಗುತ್ತಿದೆ. ಈ ಬಗ್ಗೆ ಉನ್ನತ ಅಧಿಕಾರಿಗಳಿಗೆ ತಿಳಿದಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ದೂರಿದರು.

ಅನುಪಯುಕ್ತ ಸಾಮಾಗ್ರಿಗಳ ಅನಧಿಕೃತ ಮಾರಾಟ ಹಾಗೂ ಸರ್ಕಾರಿ ವಾಹನಗಳ ದುರ್ಬಳಕೆ ಬಗ್ಗೆ ಜಿಲ್ಲಾ ಪಂಚಾಯತ್ ಸಿಇಒ ಅವರು ಸಾರ್ವಜನಿಕರಿಗೆ ಮಾಹಿತಿ ನೀಡಬೇಕು. ಇಂತಹ ದುರ್ಬಳಕೆ ಪ್ರಕರಣಗಳನ್ನು ತಡೆಗಟ್ಟಬೇಕು. ಇಲ್ಲದಿದ್ದಲ್ಲಿ ಕಚೇರಿ ಮುಂದೆ ಸಾರ್ವಜನಿಕರು, ರೈತರು, ಸಂಘಟನೆಗಳ ಕಾರ್ಯಕರ್ತರೊಂದಿಗೆ ಬೃಹತ್ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಗ್ರಾ.ಪಂ. ಮಾಜಿ ಸದಸ್ಯರಾದ ಎಂ. ಚಾಮರಾಜ್, ಬಿ.ಕೆ. ಕೆಂಪೇಗೌಡ, ರೈತ ಮುಖಂಡ ಗಾಣದಾಳು ಜಯರಾಂ ಇದ್ದರು.

ಜಿಲ್ಲೆಯ ಅಭಿವೃದ್ಧಿಗೆ ಸರಿಯಾದ ಯೋಜನೆ ರೂಪಿಸಿ: ನಾಗಣ್ಣಗೌಡ

ಸಮನ್ವಯತೆಯಿಂದ ಕೆಲಸ ನಿರ್ವಹಿಸಿ

ಮಂಡ್ಯ: ಮಂಡ್ಯ ನಗರ ಸೇರಿದಂತೆ ಜಿಲ್ಲೆಯ ಅಭಿವೃದ್ಧಿ ವಿಚಾರದಲ್ಲಿ ಎಲ್ಲ ಪಕ್ಷಗಳೂ ಸಮನ್ವಯತೆಯಿಂದ ಕೆಲಸ ಮಾಡಬೇಕು. ಇದಕ್ಕೆ ಅಧಿಕಾರಿಗಳು ಸರಿಯಾದ ಯೋಜನೆ ರೂಪಿಸಬೇಕು ಎಂದು ಕನ್ನಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ.ಬಿ.ನಾಗಣ್ಣಗೌಡ ತಿಳಿಸಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಖೇಲೋ ಇಂಡಿಯಾದ ಕ್ರೀಡಾಂಗಣವನ್ನು ಮಂಡ್ಯ ನಗರದಲ್ಲೇ ನಿರ್ಮಿಸಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತು. ನಗರದಿಂದ ಏಳೆಂಟು ಕಿ.ಮೀ. ದೂರದ ವಿ.ಸಿ. ಫಾರಂ ಕೃಷಿ ವಿಶ್ವವಿದ್ಯಾಲಯದ ಬಳಿ ನಿರ್ಮಿಸುವುದರಿಂದ ಹೆಚ್ಚೇನು ಪ್ರಯೋಜನವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಮಂಡ್ಯದ ಮೈಷುಗರ್ ಪ್ರೌಢಶಾಲಾ ಆವರಣದಲ್ಲಿ 3 ಎಕರೆಯಷ್ಟು ಜಾಗ ಇದೆ. ಜೊತೆಗೆ ಮೈಷುಗರ್ ಕಾರ್ಖಾನೆಗೆ ಸೇರಿದ ಈಜುಕೊಳವಿದ್ದು, ಅದು ಸಂಪೂರ್ಣ ಹಾಳಾಗಿದೆ. ಇದನ್ನು ಅಭಿವೃದ್ಧಿಪಡಿಸಿದರೆ ಹೆಚ್ಚು ಮಂದಿ ಯುವಜನರಿಗೆ ಅನುಕೂಲವಾಗಲಿದೆ ಎಂದು ಅಭಿಪ್ರಾಯಿಸಿದರು.

ಮಂಡ್ಯ ನಗರದಿಂದ 10 ಕಿ.ಮೀ. ದೂರದ ಬಿ.



ಹೊಸೂರಿನಲ್ಲಿತಾಯಿ-ಮಕ್ಕಳ ಆಸ್ಪತ್ರೆ ನಿರ್ಮಾಣವಾಗಿದ್ದು, ಇದು ಅಷ್ಟೇನೂ ಉಪಯೋಗಕ್ಕೆ ಬಾರದಂತಾಗಿದೆ. ಜೊತೆಗೆ ಇದೇ ಗ್ರಾಮದ ಬಳಿ ಗಾಂಧಿ ಭವನ ನಿರ್ಮಿಸಿ ಬಾಗಿಲು ಹಾಕಲಾಗಿದ್ದು, ಇದೀಗ ಅದನ್ನು ಪ್ರಾರಂಭಿಸಲಾಗಿದೆ. ಆದರೂ ಅಲ್ಲೂ ಯಾವುದೇ ಕಾರ್ಯಕ್ರಮಗಳು ನಿತ್ಯ ನಡೆಯುವುದಿಲ್ಲ. ಇದಕ್ಕೆ ಈ ಮಾರ್ಗದಲ್ಲಿ ಸಾರಿಗೆ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಲಭ್ಯಗಳ ಕೊರತೆ ಇರುವುದರಿಂದ ಅನುಕೂಲಕರವಾಗಿಲ್ಲ. ಇದೇ ರೀತಿ ಖೇಲೋ ಇಂಡಿಯಾ ಕ್ರೀಡಾಂಗಣ ಸಹ ಆಗಬಹುದು ಎಂದು ಹೇಳಿದರು.

ಒಳ ಕ್ರೀಡಾಂಗಣ ಬಳಿ ಕನ್ನಡ ಭವನ ಬೇಡ: ಸಾಹಿತ್ಯ ಸಮ್ಮೇಳನದ ಸವಿನೆನಪಿಗಾಗಿ ನಗರದ ಒಳಾಂಗಣ ಕ್ರೀಡಾಂಗಣದ ಪಕ್ಕದ ಜಾಗದಲ್ಲಿ ಕನ್ನಡ ಭವನ ನಿರ್ಮಿಸಲು ಉದ್ದೇಶಿಸಿರುವ ಜಿಲ್ಲಾಡಳಿತದ ಕ್ರಮವನ್ನು ವಿರೋಧಿಸಿ, ಕನ್ನಡ ಭವನ ನಿರ್ಮಾಣಕ್ಕೆ ನಗರದೊಳಗೆ ಸಾಕಷ್ಟು ಜಾಗಗಳಿವೆ. ಅಲ್ಲಿ ನಿರ್ಮಾಣ ಮಾಡಬಹುದು. ಅದು ಬಿಟ್ಟು ಕ್ರೀಡಾ ಚಟುವಟಿಕೆಗೆ ಮೀಸಲಿಟ್ಟ ಜಾಗದಲ್ಲಿ ಭವನ ನಿರ್ಮಿಸುವುದು ಸರಿಯಾದ ಕ್ರಮವಲ್ಲ. ಮಂಡ್ಯದ ಶಾಸಕರು, ಜಿಲ್ಲಾಧಿಕಾರಿ ಡಾ. ಕುಮಾರ್ ಅವರ ಏಕಪಕ್ಷೀಯ ನಿರ್ಧಾರವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕರವೇ ಜಿಲ್ಲಾಧ್ಯಕ್ಷ ಎಚ್.ಡಿ. ಜಯರಾಮ್, ಮುಖಂಡರಾದ ಸಂಜು ಆಲಕೆರೆ, ರಾಜೇಂದ್ರಸಿಂಗ್ ಬಾಬು ಇದ್ದರು.

ಯುಗಾದಿ ಹಬ್ಬ: ರಸ್ತೆ ಬದಿ ವ್ಯಾಪಾರಕ್ಕೆ ತಡೆ



ಬೇಲೂರು: ಯುಗಾದಿ ಹಬ್ಬದ ಪ್ರಯುಕ್ತ ನಗರದಲ್ಲಿ ಉಂಟಾಗುವ ಟ್ರಾಫಿಕ್ ಸಮಸ್ಯೆಯನ್ನು ನಿಯಂತ್ರಿಸಲು ಪುರಸಭೆ ಮತ್ತು ಪೊಲೀಸ್ ಇಲಾಖೆ ಪ್ರಮುಖ ಕ್ರಮ ಕೈಗೊಂಡಿದೆ.ರಸ್ತೆ ಬದಿಯಲ್ಲಿ ನಡೆಯುತ್ತಿರುವ ತರಕಾರಿ, ಹಣ್ಣು ಹಾಗೂ ಹೂವಿನ ವ್ಯಾಪಾರವನ್ನು ತಾತ್ಕಾಲಿಕ ವಾಗಿ ಜೂನಿಯರ್ ಕಾಲೇಜು ಮೈದಾನಕ್ಕೆ ಸ್ಥಳಾಂತರಿಸುವ ನಿರ್ಧಾರ ಕೈಗೊಳ್ಳಲಾಗಿದೆ.ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಮಾತನಾಡಿ, ಯುಗಾದಿ ಹಬ್ಬದ ಶುಭಾಶಯಗಳನ್ನು ತಿಳಿಸಿ, ರಸ್ತೆ ಬದಿಯ ಅಕ್ರಮ ವ್ಯಾಪಾರದಿಂದ ಟ್ರಾಫಿಕ್ ಸಮಸ್ಯೆ ಹೆಚ್ಚು ತ್ತಿರುವುದನ್ನು ಗಮನಕ್ಕೆ ತಂದರು. ಹಲವಾರು ಬಾರಿ ಸೂಚನೆ ನೀಡಿದರೂ ವ್ಯಾಪಾರಸ್ಥರು ಗಮನ ಹರಿಸದ ಹಿನ್ನೆಲೆ, ಹಬ್ಬದ ದಿನಗಳಲ್ಲಿ ಜನಸಂದಣಿ ಹೆಚ್ಚಾಗುವುದರಿಂದ ಸಮಸ್ಯೆ ಗಂಭೀರವಾಗುವ ಸಾಧ್ಯತೆ ಇದೆ ಎಂದು ಹೇಳಿದರು. ಈ ಹಿನ್ನೆಲೆ ಯಲ್ಲಿ ಎಲ್ಲಾ ಸಣ್ಣಪುಟ್ಟ ವ್ಯಾಪಾರಸ್ಥರನ್ನು ಜೂನಿಯರ್ ಕಾಲೇಜು ಮೈದಾನಕ್ಕೆ ಸ್ಥಳಾಂತರಿಸ ಲಾಗುತ್ತಿದ್ದು, ಅಲ್ಲಿ ಕುಡಿಯುವ ನೀರು ಹಾಗೂ ಬೆಳಕಿನ ವ್ಯವಸ್ಥೆಯನ್ನೂ ಪುರಸಭೆ ಮಾಡಿದೆ. ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಪಿ ಐ ರೇವಣ್ಣ ಮಾತನಾಡಿ, ಬೇಲೂರಿನ ಕಿರಿದಾದ ರಸ್ತೆಗಳ ಕಾರಣದಿಂ ದಲೇ ಪ್ರತಿದಿನ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದೆ ಎಂದು ತಿಳಿಸಿದರು. ಕೆಲವು ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ರಸ್ತೆ ಕಡೆಗೆ ವಿಸ್ತರಿಸಿ, ಜನರ ಗಮನ ಸೆಳೆಯುವ ಉದ್ದೇಶದಿಂದ ಮಾರಾಟ ನಡೆಸುತ್ತಿರು ವುದು ಸಮಸ್ಯೆಗೆ ಕಾರಣವಾಗಿದೆ ಎಂದರು. ಹಬ್ಬದ ಸಂದರ್ಭಗಳಲ್ಲಿ ಈ ಸಮಸ್ಯೆ ಇನ್ನಷ್ಟು ತೀವ್ರವಾ ಗುತ್ತಿದ್ದು, ಪೂರ್ವಭಾವಿಯಾಗಿ ಯೋಜನೆ ರೂಪಿಸಿ ಪುರಸಭೆಯೊಂದಿಗೆ ಸಮಾ ಲೋಚನೆ ನಡೆಸಲಾಗಿದೆ ಎಂದು ಹೇಳಿದರು.

ಒಟ್ಟಾರೆ,ಟ್ರಾಫಿಕ್ ಸುಗಮ ಗೊಳಿಸುವ ಹಾಗೂ ಸಾರ್ವಜನಿಕರಿಗೆಅನುಕೂಲಕಲ್ಪಿಸುವಉದ್ದೇಶದಿಂದ ಕೈಗೊಂಡಿ ರುವ ಈ ಕ್ರಮಕ್ಕೆ ಸಾರ್ವಜನಿಕರು ಮತ್ತು ವ್ಯಾಪಾರಸ್ಥರು ಸಹಕ ರಿಸಬೇಕೆಂದು ಅಧಿಕಾರಿಗಳು ಮನವಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಬಸವರಾಜು ಶಿಗ್ಗಾವಿ, ಆರೋಗ್ಯಾಧಿಕಾರಿ ಲೋಹಿತ್, ಮೀನಾಕ್ಷಿ ವೆಂಕಟೇಶ್, ನಟರಾಜ್ ಇದ್ದರು.

ಪುನೀತ್ ಕೊಡುಗೆ ಅಪಾರ

ಬೇಲೂರು: ಪುನೀತ್ ರಾಜ್ ಕುಮಾರ್ ಅವರು ಕೇವಲ ಒಬ್ಬ ಪ್ರತಿಭಾವಂತ ನಟ ರಷ್ಟೇ ಅಲ್ಲ, ಮಾನವೀಯ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡ ಮಹಾನ್ ವ್ಯಕ್ತಿ ಎಂದು ಡಾ. ರಾಜ್ ಕುಮಾರ್ ಸಂಘದ ಅಧ್ಯಕ್ಷ ಬಿ.ಆರ್. ತೀರ್ಥಂಕರ್ ಹೇಳಿದರು.

ಪುನೀತ್ ರಾಜ್ ಕುಮಾರ್ ಅವರ 51ನೇ ಹುಟ್ಟುಹಬ್ಬದ ಪ್ರಯುಕ್ತ ಪಟ್ಟಣದ ಡಾ. ರಾಜ್ ಕುಮಾರ್ ಧ್ವಜ ಸ್ಥಂಭದ ಬಳಿ ಪುನೀತ್ ರಾಜ್ ಕುಮಾರ್ ಭಾವಚಿತ್ರಕ್ಕೆ ಪುಷ್ಪಾಂಜಲಿ ಅರ್ಪಿಸಿ, ನೂರಾರು ಅಭಿಮಾನಿಗಳ ಸಮ್ಮುಖದಲ್ಲಿ ಕೇಕ್ ಕತ್ತರಿಸುವ ಮಾತನಾಡಿದ ಅವರು, ಪುನೀತ್ ಅವರು ಕನ್ನಡ ಚಿತ್ರರಂಗಕ್ಕೆ ನೀಡಿದ ಕೊಡುಗೆ ಅಪಾರವಾಗಿದ್ದು, ಅವರ ಅಗಲಿಕೆಯಾದರೂ ಅಭಿಮಾನಿಗಳ ಮನಸ್ಸಿನಲ್ಲಿ ಅವರು ಸದಾ ಜೀವಂತವಾಗಿದ್ದಾರೆ ಎಂದು ಹೇಳಿದರು. ಪ್ರತಿವರ್ಷವೂ ಅವರ ಹುಟ್ಟುಹಬ್ಬವನ್ನು ಸಮಾಜಮುಖಿ ಕಾರ್ಯ ಕ್ರಮಗಳ ಮೂಲಕ ಆಚರಿಸುವುದು ನಮ್ಮ ಹೊಣೆ ಗಾರಿಕೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪುನೀತ್ ರಾಜ್ ಕುಮಾರ್ ಸಂಘದ ನವೀನ್, ಡೆಕೊರೇಷನ್ ರಾಜು, ಎಸ್ ಬಿಐ ಮಂಜು, ಫಣೀಂದ್ರ, ತಿಲಕ್, ಅಶು, ಕುಮಾರ್, ಮುಜ್ಜು, ಸುಬ್ರಹ್ಮಣ್ಯ, ಸುಲೈಮನ್, ಶಶಿಕುಮಾರ್ ಹಾಜರಿದ್ದರು.



ಬೇಲೂರು ಪಟ್ಟಣದ ಡಾ. ರಾಜ್ ಕುಮಾರ್ ಧ್ವಜ ಸ್ಥಂಭದ ಬಳಿ ಪುನೀತ್ ರಾಜ್ ಕುಮಾರ್ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

ಐದಳ್ಳ ಕಾವಲು ಭೂಮಿ ವಿವಾದ: ಅರಣ್ಯ ಇಲಾಖೆ ವಶಕ್ಕೆ ಪಡೆಯಲು ಯತ್ನ, ಆರೋಪ

ರಾಜ್ಯಮಟ್ಟದ ಹೋರಾಟ ಎಚ್ಚರಿಕೆ



ಹೆದ್ದಾರಿ ಬಂದ್ ಮಾಡಿ ಹೋರಾಟ

ಅರಣ್ಯ ಇಲಾಖೆ ಅಧಿಕಾರಿಗಳು ಮುಂದೆಯೂ ಇದೇ ರೀತಿಯಾಗಿ ಭೂಮಿಗೆ ಪ್ರವೇಶಿಸಲು ಯತ್ನಿಸಿದರೆ, ಬೇಲೂರು ಪಟ್ಟಣದಲ್ಲಿ ಚಿಕ್ಕಮಗಳೂರು, ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯನ್ನು ಬಂದ್ ಮಾಡುವುದಾಗಿ ರೈತರು ಎಚ್ಚರಿಸಿದ್ದಾರೆ. ಇದು ತಾತ್ಕಾಲಿಕ ಪ್ರತಿಭ ಟನೆ ಅಲ್ಲ, ನಿರಂತರ ಹೋರಾಟ. ನಮ್ಮ ಹಕ್ಕು ಸಿಗುವವರೆಗೂ ಹೋರಾಟ ನಿಲ್ಲುವುದಿಲ್ಲ.

ಬೇಲೂರು: ಭೂಮಿಯನ್ನು ಬಡ ಮತ್ತು ಭೂಹೀನ ರೈತರಿಗೆ ಕೃಷಿಗಾಗಿ ಹಂಚಿಕೆ ಮಾಡಬೇಕು ಎಂಬುದು ಮುಖ್ಯ ಬೇಡಿಕೆಯಾಗಿದೆ. ಆದರೆ, ಅರಣ್ಯ ಇಲಾಖೆ ಅಧಿಕಾರಿಗಳು ಪದೇ ಪದೇ ಜೆಸಿಬಿ ಯಂತ್ರಗಳನ್ನು ಬಳಸಿ ಟ್ರೆಂಚ್ ಹೊಡೆದು ಭೂಮಿಯನ್ನು ಅರಣ್ಯ ಇಲಾಖೆಯ ವಶಕ್ಕೆ ಪಡೆಯಲು ಯತ್ನಿಸುತ್ತಿದ್ದಾರೆ ಎಂದು ರಾಜ್ಯ ರೈತ ಸಂಘದ ಸಂಚಾಲಕ ಕನಕಂಚೇನಹಳ್ಳಿ ಪ್ರಸನ್ನ ಕುಮಾರ್ ಆರೋಪ ಮಾಡಿದ್ದಾರೆ.

ತಾಲೂಕು ಕಚೇರಿಯಲ್ಲಿ ಮನವಿ ಸಲ್ಲಿಸಿ ಮಾತನಾಡಿ, ಬೇಲೂರು ತಾಲೂಕಿನ ಹಳೇಬೀಡು ಹೋಬಳಿಯ ಐದಳ್ಳ ಕಾವಲು ಪ್ರದೇಶದಲ್ಲಿರುವ ಸುಮಾರು 2550 ಎಕರೆ ಸರ್ಕಾರಿ ಭೂಮಿಗಾಗಿ ರೈತರು 2021ರಿಂದ ನಿರಂತರ ಹೋರಾಟ ನಡೆಸುತ್ತಿದ್ದು, ಇದೀಗ ಈ ಹೋರಾಟ ಮತ್ತಷ್ಟು ತೀವ್ರಗೊಳ್ಳುವ ಲಕ್ಷಣಗಳು ಗೋಚರಿಸುತ್ತಿವೆ.

ಈ ಭೂಮಿ ಪುರಾತನ ಕಾಲದಿಂದಲೇ ಸರ್ಕಾರಿ ಸ್ವತ್ತಾಗಿದ್ದು, ಕದಂಬ ಮತ್ತು ಚಾಲುಕ್ಯ ರಾಜವಂಶಗಳ ಕಾಲದಿಂದಲೂ ಸರ್ಕಾರದ ಅಧೀನದಲ್ಲೇ ಉಳಿದಿದೆ. ಈ ಹಿನ್ನೆಲೆಯಲ್ಲಿ ಭೂಮಿಯನ್ನು ಬಡ ಮತ್ತು ಭೂಹೀನ ರೈತರಿಗೆ ಕೃಷಿಗಾಗಿ ಹಂಚಿಕೆ ಮಾಡಬೇಕು ಎಂಬುದು ಅವರ ಮುಖ್ಯ ಬೇಡಿಕೆಯಾಗಿದೆ. ಆದರೆ, ಅರಣ್ಯ ಇಲಾಖೆ ಅಧಿಕಾರಿ ಗಳು ಪದೇ ಪದೇ ಜೆಸಿಬಿ ಯಂತ್ರಗಳನ್ನು ಬಳಸಿ ಟ್ರಂಚ್ ಹೊಡೆದು ಭೂಮಿಯನ್ನು ಅರಣ್ಯ ಇಲಾಖೆಯ ವಶಕ್ಕೆ ಪಡೆಯಲು ಯತ್ನಿ ಸುತ್ತಿದ್ದಾರೆ ಎಂದು ರೈತರು ಆರೋಪಿಸಿದರು. ಭಾನುವಾರ ಮಧ್ಯರಾತ್ರಿ ವೇಳೆ ಜೆಸಿಬಿ ಯಂತ್ರವನ್ನು ಗುಪ್ತವಾಗಿ ಸ್ಥಳಕ್ಕೆ ತಂದು ಕೆಲಸ ಆರಂಭಿಸಿದ ಘಟನೆ ಉದ್ವಿಗ್ನತೆಯನ್ನುಹೆಚ್ಚಿಸಿದೆ. ವಿಷಯ ತಿಳಿದ ಕೂಡಲೇ ರೈತರು ಸ್ಥಳಕ್ಕೆ ಧಾವಿಸಿ, ನಡೆಯುತ್ತಿದ್ದ ಕಾಮಗಾರಿ ಯನ್ನು ತಕ್ಷಣ ನಿಲ್ಲಿಸಿ ಅಧಿಕಾರಿಗಳಿಗೆ ಕಠಿಣ ಎಚ್ಚರಿಕೆ ನೀಡಿದ್ದಾರೆ. ಈ ಭೂಮಿ ಸರ್ಕಾರಿ ಭೂಮಿ ಆಗಿದ್ದು, ರೈತರಿಗೆ ಮಾತ್ರ ಹಂಚಿಕೆ ಮಾಡಬೇಕು. ಬೇರೆ ಯಾವುದೇ ಇಲಾಖೆಗೆ ಅಥವಾ ವ್ಯಕ್ತಿಗಳಿಗೆ ನೀಡಲು ಅವಕಾಶ ಇಲ್ಲ ಎಂದು ಅವರು ಸ್ಪಷ್ಟಪಡಿಸಿದರು. ರಾಷ್ಟ್ರಪತಿ ಆದೇಶಗಳು ಹಾಗೂ 1961ರ ನಿಯ ಮಾನುಸಾರ ರೈತರಿಗೆ ಕೃಷಿ ಭೂಮಿ ಹಂಚಿಕೆ ಮಾಡಬೇಕೆಂಬ ಪ್ರಾಧಾನ್ಯವಿದೆ. ಸರ್ಕಾರ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಆಗ್ರಹಿಸಿ. ಈ ಭೂಮಿಗಾಗಿ ಹೋರಾಟಗಾರರು ಸುಮಾರು 5000 ಕಿಲೋ ಮೀಟರ್ ಪಾದಯಾತ್ರೆ ನಡೆಸಿದ್ದು, ಕನಿಷ್ಠ 875 ರೈತರಿಗೆ ಭೂಮಿ ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದರು. ಈ ಹೋರಾಟವು ಒಂದು ತಾಲೂಕಿಗೆ ಮಾತ್ರ ಸೀಮಿತವಾಗಿಲ್ಲ. ತುಮಕೂರು, ಚಿತ್ರದುರ್ಗ, ದಾವಣಗೆರೆ, ಮೈಸೂರು, ಹಾಸನ, ಚಿಕ್ಕಮಗಳೂರು ಹಾಗೂ ಕೋಲಾರ ಸೇರಿ ದಂತೆ ಹಲವು ಜಿಲ್ಲೆಗಳ ರೈತರು ಈ ಹೋರಾಟದಲ್ಲಿ ಭಾಗವಹಿಸಿದ್ದು, ಇದು ರಾಜ್ಯಮಟ್ಟದ ಚಳುವಳಿಯಾಗಿ ರೂಪುಗೊಂಡಿದೆ. ವಿವಿಧ ಭಾಗಗಳ ರೈತರ ಪಟ್ಟಿಯನ್ನು ಸಿದ್ಧಪಡಿಸಿ, ಸಂಬಂಧಿತ ಜಿಲ್ಲೆಗಳ ಎಸ್‌ಪಿ, ತಹಸೀಲ್ದಾರ್ ಹಾಗೂ ಇತರೆ ಅಧಿಕಾರಿಗಳ ಸಮ್ಮುಖದಲ್ಲಿ ಸರ್ವೆ ನಡೆಸಿ, ಅರ್ಹ ರೈತರಿಗೆ ಭೂಮಿಯನ್ನು ಹಸ್ತಾಂತ ರಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಈ ಸಂದರ್ಭದಲ್ಲಿ ಮಾಮ ದಸ್ತಗಿರಿ, ಏಜಾಸ್ ಪಾಷ, ಅಯೂಬ್ ಪಾಷ, ನಂಜಮ್ಮ, ವೆಂಕಟೇಶಣ್ಣ ಸೇರಿದಂತೆ ರೈತ ಮುಖಂಡರು ಹಾಗೂ ಸ್ಥಳೀಯರು ಹಾಜರಿದ್ದರು.

ರಾಗಿ ಖರೀದಿ ಕೇಂದ್ರದ ಅವಧಿ ವಿಸ್ತರಣೆ

ಹಾಸನ: 2025–26 ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಜಿಲ್ಲೆಯ ರೈತರಿಂದ ರಾಗಿ ಖರೀದಿ ಕೇಂದ್ರದಲ್ಲಿ ರಾಗಿ ಖರೀದಿಸುತ್ತಿದ್ದು, ರಾಗಿ ಖರೀದಿಯ ಅವಧಿ ವಿಸ್ತರಣೆ ಮಾಡಲಾಗಿದೆ. ಸರ್ಕಾರದ ಆದೇಶದನ್ವಯ ಮಾ.31 ರಾಗಿ ಖರೀದಿಗೆ ಕೊನೆಯ ದಿನಾಂಕವಾಗಿತ್ತು, ರೈತರಿಗೆ ಅನುಕೂಲವಾಗುವಂತೆ ರಾಗಿ ಖರೀದಿ ಕೇಂದ್ರಗಳ ಕಾರ್ಯಾವಧಿಯನ್ನು ವಿಸ್ತರಿಸಲಾಗಿದೆ. ಆದ್ದರಿಂದ, ರಾಗಿ ಖರೀದಿ ನಡೆಯುತ್ತಿರುವ ಜಿಲ್ಲೆಯ ಎಲ್ಲಾ 24 ಖರೀದಿ ಕೇಂದ್ರಗಳನ್ನು ಪ್ರತಿದಿನ ಬೆಳಿಗ್ಗೆ 8 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಕಾರ್ಯನಿರ್ವಹಿಸುವಂತೆ ವ್ಯವಸ್ಥೆ ಮಾಡಲಾಗಿದೆ.

ಅನಗತ್ಯ ಬುಕಿಂಗ್ ಮಾಡದಿರಲು ಸೂಚನೆ

ಹಾಸನ: ಜಿಲ್ಲೆಯಲ್ಲಿ ಗೃಹಬಳಕೆ ಅಡುಗೆ ಅನಿಲ ಗ್ಯಾಸ್ ಸಿಲಿಂಡರ್ ಉಪಯೋಗಿಸುವ ಗ್ರಾಹಕರು ಆತಂಕ ಪಡುವ ಅಗತ್ಯವಿಲ್ಲ, ಜಿಲ್ಲೆಯಲ್ಲಿ ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ತಿಳಿಸಿದ್ದಾರೆ.

ಇರಾನ್–ಇಸ್ರೇಲ್ ನಡುವಿನ ಯುದ್ಧದ ಹಿನ್ನೆಲೆ ದೇಶದ ಹಲವು ಭಾಗಗಳಲ್ಲಿ ಎಲ್‌ಪಿಜಿ ಸಿಲಿಂಡರ್ ಕೊರತೆ ಉಂಟಾಗಬಹುದೆಂಬ ವದಂತಿಗಳು ಹರಿದಾಡುತ್ತಿವೆ. ಎಲ್.ಪಿ.ಜಿ ಸಿಲಿಂಡರ್‌ಗಳ ಸರಬರಾಜಿನ ಬಗ್ಗೆ ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ಗ್ರಾಹಕರು ಆತಂಕದಲ್ಲಿ ಅನಗತ್ಯ ಬುಕಿಂಗ್ ಮಾಡಬಾರದು. ಅದರ ಜೊತೆಗೆ, FAI, @AI ಹಾಗೂ ಔಅಐ ಕಂಪನಿಗಳ ಅಧಿಕೃತ ಮೊಬೈಲ್ ಅಪ್ಲಿಕೇಶನ್‌ಗಳ ಮೂಲಕವೂ ಗ್ರಾಹಕರು ಸಿಲಿಂಡರ್ ಬುಕ್ಕಿಂಗ್ ಮಾಡಬಹುದಾಗಿದೆ. ಬುಕ್ಕಿಂಗ್ ಮಾಡಿದ ಬಳಿಕ ಔಖ ಆಧಾರಿತ ಸರಬರಾಜು ವ್ಯವಸ್ಥೆ ಜಾರಿಯಲ್ಲಿದ್ದು, ಪಾರದರ್ಶಕ ವಿತರಣೆ ಖಚಿತಪಡಿಸಲಾಗಿದೆ. ಗೃಹಬಳಕೆ ಅನಿಲ ಸಿಲಿಂಡರ್ ಸಂಬಂಧಿಸಿದ ಯಾವುದೇ ಸಮಸ್ಯೆಗಳಿದ್ದಲ್ಲಿ ಹತ್ತಿರದ ಗ್ಯಾಸ್ ಏಜೆನ್ಸಿ , ತಹಶೀಲ್ದಾರ್ ಕಚೇರಿ ಅಥವಾ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ. ಗ್ರಾಹಕರಿಗೆ ಗೃಹಬಳಕೆ ಅನಿಲ ಸಿಲಿಂಡರ್ ಕುರಿತು ಯಾವುದೇ ಸಮಸ್ಯೆ ಇದ್ದಲ್ಲಿ ಹತ್ತಿರದ ಗ್ಯಾಸ್ ಏಜೆನ್ಸಿ , ತಾಲ್ಲೂಕಿನ ತಹಸೀಲ್ದಾರ್ ಕಛೇರಿಯ ಆಹಾರ ಶಾಖೆಯನ್ನು ಹಾಗೂ ಜಿಲ್ಲೆಯಲ್ಲಿನ ಜಂಟಿ ನಿರ್ದೇಶಕರ ಕಛೇರಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಂಪರ್ಕಿಸಬಹುದುವುದು. ಈ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ ಪರಿಹಾರ ಕಂಡುಕೊಳ್ಳಬಹುದಾಗಿದೆ.



ಅಭಿನಂದನೆ ಗುಬ್ಬಿ ಪಟ್ಟಣದ ಜಯಸಿಂಹ ಆಸ್ಪತ್ರೆ ಹತ್ತಿರ ಇರುವ ಜೊಲ್ಲೆ ಗ್ರೂಪ್ ಶ್ರೀ ಬೀರೇಶ್ವರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್ ಪ್ರೇರಣ ಉತ್ಸವದ ಅಂಗವಾಗಿ ಬ್ಯಾಂಕ್ ನಿರ್ದೇಶಕರನ್ನು ಅಭಿನಂದಿಸಲಾಯಿತು. ಜಿ.ಆರ್.ಶಿವಕುಮಾರ್, ಧರಣೇಂದ್ರ ಕುಮಾರ್, ಕೈಲಾಸಂ, ಚಂದ್ರಯ್ಯ,ಬಸವರಾಜು, ಗಿರೀಶ್, ಸುಚಿತ್ ವ್ಯವಸ್ಥಾಪಕ ವಿಠಲ್ ಜನನವಾಡ, ಸ್ಮಿತಾ, ಸತೀಶ್ ಓಂಕಾರ್ ಇತರರು ಇದ್ದರು.

ಗರಿಷ್ಠ 31° | ಕನಿಷ್ಠ 18°

ಹೊಸ ದಿಗಂತ

ಬುಧವಾರ 18 ಮಾರ್ಚ್ 2026

ತುಮಕೂರು

ಹಳ್ಳಹಿಡಿದ ಅನ್ನಭಾಗ್ಯ ಯೋಜನೆ: ಆರೋಪ | ೨

ಹಾಲು ಉತ್ಪಾದಕರಿಗೆ ಲೀಟರ್‌ಗೆ ₹2 ಹೆಚ್ಚಳ | ೩

ಎಗ್ಗಿಲ್ಲದ ಕ್ಯಾಟ್ ಫಿಶ್ ದಂಧೆ | ೪

ಕಿರುಸುದ್ದಿ

ಕೇಬಲ್ ಕಳ್ಳರನ್ನು ಕಂಬಕ್ಕೆ ಕಟ್ಟಿದ ಗ್ರಾಮಸ್ಥರ ವಿರುದ್ಧ ಪ್ರಕರಣ ದಾಖಲು

ಕುಣಿಗಲ್: ಕೇಬಲ್ ಕದ್ದು ತಪ್ಪಿಸಿಕೊಂಡು ಹೋಗುತ್ತಿದ್ದ ಕಳ್ಳರನ್ನು ಪೊಲೀಸರಿಗೆ ಒಪ್ಪಿಸಲೆಂದು ಕಂಬಕ್ಕೆ ಕಟ್ಟಿ ಹಾಕಿದ್ದ ಕುಂಟೆಯ್ಯನಪಾಳ್ಯ ಗ್ರಾಮದ ಜನರ ವಿರುದ್ಧ ಹುಲಿಯೂರುದುರ್ಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಂಗಳವಾರ ಬೆಳಗ್ಗೆ ಮಾಗಡಿ ತಾಲೂಕಿನ ಮಾಡಬಾಳು ಹೋಬಳಿ ಬೆಳಗೋಡಿ ಗ್ರಾಮದ ತಿಮ್ಮೇಗೌಡ ಮತ್ತು ಗಂಗಯ್ಯ ಮೋಟರ್ ಕೇಬಲ್ ಗಳನ್ನು ಕದ್ದು ತಾಲೂಕಿನ ಹುಲಿಯೂರುದುರ್ಗ ಹೋಬಳಿ ಚೌಡನ ಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ



ಕುಂಟೆಯನಪಾಳ್ಯ ಗ್ರಾಮದ ಕೆರೆಯ ಏರಿಯ ಮೇಲೆ ಬೈಕ್ ನಲ್ಲಿ ಕದ್ದು ಕೇಬಲ್ ಸಾಗಿಸುತ್ತಿದ್ದಾಗ ಆಕಸ್ಮಿಕವಾಗಿ ಬೈಕ್ ನಲ್ಲಿ ಪೆಟ್ರೋಲ್ ಖಾಲಿಯಾಗಿದೆ, ವಿಧಿ ಇಲ್ಲದೆ ಕಳ್ಳರು ಕೇಬಲ್ ಲನ್ನ ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಿದ್ದಾಗ ಗ್ರಾಮದ ಜನರು ಅಡ್ಡಗಟ್ಟಿ ಹಿಡಿದು ಕೇಳಿದ್ದಾರೆ, ಭಯ ಬಿದ್ದ ಕಳ್ಳರು ತಪ್ಪೊಪ್ಪಿಕೊಂಡಿದ್ದಾರೆ. ಬೇಸಿಗೆಯಲ್ಲಿ ಕರೆಂಟ್ ಇಲ್ಲದೆ ರೈತರು ಪರದಾಡುತ್ತಿದ್ದಾರೆ ನೀವುಗಳು ಕೇಬಲ್ ಗಳನ್ನ ಕಳ್ಳತನ ಮಾಡಿ ರೈತರಿಗೆ ತೊಂದರೆ ಕೊಡುತ್ತೀರಾ ಎಂದು ಸಿಟ್ಟಿಗೆದ್ದ ಜನರು ಪೊಲೀಸರಿಗೆ ಒಪ್ಪಿಸಲು ಕಂಬಕ್ಕೆ ಕಟ್ಟಿ ಹಾಕಿದ್ದಾರೆ. ಕಂಬಕ್ಕೆ ಕಟ್ಟಿ ಹಾಕಿರುವ ವಿಡಿಯೋ ವೈರಲ್ ಆಗುತ್ತಿದ್ದಂತೆ ಹುಲಿಯೂರುದುರ್ಗ ಪೊಲೀಸರು ಸ್ಥಳಕ್ಕೆ ತೆರಳಿ ಕಳ್ಳ ರನ್ನ ವಶಕ್ಕೆ ಪಡೆದು ಕಂಬಕ್ಕೆ ಕಟ್ಟಿ ಹಾಕಿದ ಗ್ರಾಮಸ್ಥರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ತಾಲೂಕಿನ ಹುತ್ರಿದುರ್ಗ ಹೋಬಳಿ ಯಲಿಯೂರು, ಬುಕ್ಕ ಸಾಗರ, ತಾವರೆಕೆರೆ ಗ್ರಾಮ ಹಾಗೂ ಹಲವು ಭಾಗಗಳಲ್ಲಿ ಕೇಬಲ್ ಕಳ್ಳತನ ಹೆಚ್ಚಾಗಿರುವ ಆರೋಪಗಳು ಕೇಳಿ ಬಂದಿದ್ದವು. ಕಳ್ಳರು ಮಾಗಡಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಕೇಬಲ್ ಗಳನ್ನು ಕಳ್ಳತನ ಮಾಡಿದ್ದರಿಂದ ಕಳ್ಳರನ್ನು ಮಾಗಡಿ ಪೊಲೀಸರ ವಶಕ್ಕೆ ನೀಡಲಾಗಿದೆ ಎಂದು ಹುಲಿಯೂರುದುರ್ಗ ಪೊಲೀಸರು ತಿಳಿಸಿದ್ದಾರೆ.

ಹಾವು ಕಡಿತಕ್ಕೆ ಚಿಕಿತ್ಸೆ ಸಿಗದೆ ವ್ಯಕ್ತಿ ಸಾವು

ಗುಬ್ಬಿ: ತಾಲೂಕಿನ ಸಿ.ಎಸ್.ಪುರ ಹೋಬಳಿ ಬೋರನಪಾಳ್ಯ ಗ್ರಾಮದಲ್ಲಿ ಬಿ.ಜಿ.ಬೇಲೂರೇಗೌಡ(53) ಹಾವು ಕಚ್ಚಿ ಮೃತಪಟ್ಟಿದ್ದಾರೆ. ಸೋಮವಾರ ರಾತ್ರಿ ತೋಟಕ್ಕೆ ನೀರು ಹಾಯಿಸಲು ಹೋದಾಗ ಅಕಸ್ಮಿಕವಾಗಿ ಹಾವು ಕಚ್ಚಿದೆ. ಹಾವು ಕಡಿತವನ್ನು ಖಚಿತಪಡಿಸಿಕೊಂಡ ರೈತ ತಕ್ಷಣ ಸಿ. ಎಸ್.ಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದಿದ್ದಾರೆ. ಇಲ್ಲಿ ಹಾವು ಕಡಿತಕ್ಕೆ ಔಷದಿ ಇಲ್ಲವೆಂದು



ತಿಳಿದುದ್ದರಿಂದ ಗುಬ್ಬಿ ಸಾರ್ವಜನಿಕ ಆಸ್ಪತ್ರೆಗೆ ಬಂದು ಪ್ರಥಮ ಚಿಕಿತ್ಸೆ ಮಾಡಿಸಿಕೊಂಡು, ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರು ಜಿಲ್ಲಾಸ್ಪತ್ರೆಗೆ ಹೋಗುವ ಸಂದರ್ಭದಲ್ಲಿ ವ್ಯಕ್ತಿಯು ಸಾವನಪ್ಪಿದ್ದಾರೆ . ತುಮಕೂರು ಜಿಲ್ಲಾ ಆಸ್ಪತ್ರೆಯ ಶವಗಾರದಲ್ಲಿ ಮರಣೋತ್ತರ ಪರೀಕ್ಷೆ ನಂತರ ಶವವನ್ನು ಸ್ವಗ್ರಾಮಕ್ಕೆ ಕಳಿಸಿಕೊಡಲಾಯಿತು. ಸರ್ಕಾರ ಹೋಬಳಿ ಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾವು ಸೇರಿದಂತೆ ವಿಷ ಜಂತುಗಳ ಕಡಿತಕ್ಕೆ ನೀಡುವ ಔಷಧಗಳನ್ನು ಸಮರ್ಪಕವಾಗಿ ನೀಡುವಲ್ಲಿ ನಿರ್ಲಕ್ಷ್ಯ ತೋರುತ್ತಿದ್ದು ಈ ಹಿಂದೆಯೂ ಹಲವು ಬಾರಿ ಸಿ ಎಸ್ ಪುರ ಆಸ್ಪತ್ರೆಯಲ್ಲಿ ಹಾವು ಕಡಿತಕ್ಕೆ ಔಷಧ ನೀಡದೆ ತಾಲೂಕು ಕೇಂದ್ರಕ್ಕೆ ಸಾಗಹಾಕಿದ್ದಾರೆ ಎಂದು ಸಾರ್ವಜನಿಕರು ಆಸ್ಪತ್ರೆ ವಿರುದ್ಧ ಕಿಡಿಕಾರಿದ್ದಾರೆ.ಗ್ಯಾರಂಟಿಯ ಗುಂಗಿನಲ್ಲಿರುವ ಸರ್ಕಾರ ಜನತೆಗೆ ಸಾವಿನ ಗ್ಯಾರಂಟಿ ನೀಡುತ್ತಿದೆಯೇ..? ಸಿ.ಎಸ್.ಪುರ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ನೀಡಿದ್ದರೆ ಇಂದು ಒಬ್ಬ ಜನಾನುರಾಗಿ ವ್ಯಕ್ತಿಯ ಜೀವ ಉಳಿಯುತ್ತಿತ್ತು. ಇವರು ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ ಹಾಗೂ ಅಪಾರ ಸಂಖ್ಯೆಯ ಬಂಧು ಬಳಗ ಹಾಗೂ ಸ್ನೇಹಿತ ಬಳಗವನ್ನು ಅಗಲಿದ್ದಾರೆ.

ಮತಿಘಟ್ಟದಲ್ಲಿ ಜನಸಂಪರ್ಕ ಸಭೆ | ವೈದ್ಯರ ಸೇವೆಗೆ ಪ್ರಶಂಸೆ

ಅಹವಾಲುಗಳಿಗೆ ಡಿಸಿ ಸ್ಪಂದನೆ

ಚಿಕ್ಕನಾಯಕಹಳ್ಳಿ: ಹಂದನಕೆರೆ ಹೋಬಳಿಯ ಮತಿಘಟ್ಟದಲ್ಲಿ ಜಿಲ್ಲಾಧಿಕಾರಿ ಶುಭಕಲ್ಯಾಣ್ ಅವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಸಾರ್ವಜನಿಕರಿಂದ ಅನೇಕ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಮುಂದಿಡಲಾಯಿತು.

ಅಹವಾಲುಗಳನ್ನು ಸ್ವೀಕರಿಸಿ ಮಾತನಾಡಿದ ಅವರು, ಮತಿಘಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರನ್ನು ಪ್ರಶಂಸಿದರು, ಕಳೆದ ವರ್ಷದಲ್ಲಿ 14 ಡೆಲಿವರಿಗಳನ್ನು ಮಾಡಿದ್ದಾರೆ. ಸಾರ್ವಜನಿಕರು ಅವರಬಗ್ಗೆಒಳ್ಳೆಅಭಿಪ್ರಾಯವನ್ನುವ್ಯಕ್ತಪಡಿಸಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ವೀಕ್ಷಿಸಿದರು. ಸಭೆಯಲ್ಲಿ 71 ಅರ್ಜಿಗಳು ಬಂದಿವೆ ಅದರಲ್ಲಿ ಮುಖ್ಯವಾಗಿ ಗ್ರಾಮ ಪಂಚಾಯಿತಿಯಿಂದ ತುಂಬಾ ಸಮಸ್ಯೆಗಳು ಬಂದಿವೆ. ಈಗಾಗಲೇ ಮಧುಗಿರಿ, ಶಿರಾ, ಕೊರಟಗೆರೆ, ಗುಬ್ಬಿಯ ಜನಸಂರ್ಪಕ ಸಭೆ ಯಲ್ಲಿ ಕಂದಾಯ ಇಲಾಖೆಗೆ ಸಂಬಂಧಪಟ್ಟ ಅರ್ಜಿಗಳೇ ಬಂದಿದ್ದವು. ಇಲ್ಲಿ ಮಾದಾಪುರ ಗ್ರಾಮ ದಲ್ಲಿ ಜಲ ಜೀವನ್ ಕಾಮಗಾರಿ ಒಂದೂವರೆ ವರ್ಷ ವಾಗಿದ್ದರು ಸಹ ರಸ್ತೆಯಲ್ಲಿ ಪೈಪ್‌ಲೈನ್‌ಗೆ ಗುಂಡಿ ತೆಗೆದು ಹಾಗೇಯೆ ಬಿಟ್ಟಿದ್ದಾರೆ, ಕೆಲವು ಮನೆ ಗಳನ್ನು ಕೈಬಿಟ್ಟಿದ್ದಾರೆ ಎಂದ ಅವರು. ಕಾಮಗಾರಿ ಮುಗಿಸುವಂತೆ ತಕ್ಷಣ ಕರೆ ಮಾಡಿ ಸಿಇಒ ಮತ್ತು ಸ್ಥಳದಲ್ಲಿದ್ದ ತಾಪಂ ಇಒಗೆ ಸೂಚನೆ ನೀಡಿದರು.

ಮತಿಘಟ್ಟ ಗ್ರಾಮ ಪಂಚಾಯಿತಿಯಲ್ಲಿ ಮನೆಯಿಲ್ಲದವರಿಗೆ ಆಶ್ರಯ ಯೋಜನೆಯಡಿ ಫಲಾನುಭವಿಗಳನ್ನು ನಾವು ಆಯ್ಕೆ ಮಾಡುತ್ತೇವೆ. ಮತಿಘಟ್ಟದ ಕೈಮರದಲ್ಲಿ ಗುಡಿಸಲು ಸುಟ್ಟು ಹೋಗಿ ಒಂದು ವರ್ಷವಾದರೂ ಅವರಿಗೆ ಏನು ವ್ಯವಸ್ಥೆ ಯಾಗಿಲ್ಲ ಅಂತವರಿಗೆ ಸ್ಥಳದಲ್ಲೇ ಆಧಾರ ಕಾರ್ಡ್ ಹಾಗೂ ರೇಷನ್ ಕಾರ್ಡ್‌ಗೆ ಅರ್ಜಿ ಹಾಕಿಸುವ ವ್ಯವಸ್ಥೆ ಮಾಡಿದರು.

ಸಭೆಯಲ್ಲಿ ಪ್ರಮುಖವಾಗಿ ಮತಿಘಟ್ಟದಲ್ಲಿ ತೆರ ವಾಗಿದ್ದ ಉಪಠಾಣೆಯನ್ನು ಮರು ನಿರ್ಮಾಣ ಮಾಡುವ ಬಗ್ಗೆ, ಪೌತಿ ಖಾತೆ, ರೇಷನ್‌ಕಾರ್ಡ್,



ಚಿಕ್ಕನಾಯಕನಹಳ್ಳಿ ತಾಲೂಕಿನ ಹಂದನಕೆರೆ ಹೋಬಳಿಯ ಮತಿಘಟ್ಟದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಜಿಲ್ಲಾಧಿಕಾರಿ ಶುಭಕಲ್ಯಾಣ್ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು.

- ಕಾಮಗಾರಿ ಮುಗಿಸುವಂತೆ ತಕ್ಷಣ ಕರೆ ಮಾಡಿ ಸಿಇಒ ಮತ್ತು ಸ್ಥಳದಲ್ಲಿದ್ದ ತಾಪಂ ಇಒಗೆ ಸೂಚನೆ
- ಸ್ಥಳದಲ್ಲೇ ಆಧಾರ ಕಾರ್ಡ್ ಹಾಗೂ ರೇಷನ್ ಕಾರ್ಡ್‌ಗೆ ಅರ್ಜಿ ಹಾಕಿಸುವ ವ್ಯವಸ್ಥೆ
- ಶಾಲೆಯಲ್ಲಿ ನಿರ್ಮಾಣವಾದ ಶೌಚಾಲಯವನ್ನು ಬಳಕೆಗೆ ನೀಡುವಂತೆ ಒತ್ತಾಯ

ಸಾಗುವಳಿ ಚೀಟಿ ಹಾಗೂ ಪಹಣಿ ದುರಸ್ತಿ ಕುರಿತ ಅಹವಾಲುಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾದವು. ಕೆಲವರು ಮನೆಗಳಿಗೆ ವಿದ್ಯುತ್ ಸಂಪರ್ಕ ಇಲ್ಲದಿರುವುದು, ಕುಡಿಯುವ ನೀರಿನ ಸಮಸ್ಯೆ ಹಾಗೂ ಮೂಲ ಸೌಲಭ್ಯಗಳ ಕೊರತೆಯನ್ನು ವಿವರಿಸಿದರು.

ಮತಿಘಟ್ಟದಲ್ಲಿವಿಎಕಚೇರಿಸೋರುತ್ತಿರುವುದನ್ನು ಸರಿಪಡಿಸುವಂತೆ ಹಾಗೂ ಬಿಳಿಗೆಹಳ್ಳಿ ಶಾಲೆಯಲ್ಲಿ ನಿರ್ಮಾಣವಾದ ಶೌಚಾಲಯವನ್ನು ಬಳಕೆಗೆ ನೀಡುವಂತೆ ಒತ್ತಾಯಿಸಲಾಯಿತು. ಸಾರ್ವಜನಿಕ ಶೌಚಾಲಯ ನಿರ್ಮಾಣ, ನಿವೇಶನ ಮತ್ತು ಮನೆ ನಿರ್ಮಾಣಕ್ಕೆ ಅನುದಾನನೀಡುವಂತೆ ಹಲವಾರು ಅರ್ಜಿಗಳು ಸ್ವೀಕರಿಸಲ್ಪಟ್ಟವು. ಸಮುದಾಯ ಭವನ ದಲ್ಲೇ ವಾಸಿಸುತ್ತಿರುವ ಮಹಿಳೆಗೆ ಶಾಶ್ವತ ವಸತಿ ವ್ಯವಸ್ಥೆ ಕಲ್ಪಿಸುವಂತೆ ಮನವಿಗಳು ಬಂದವು.

ಸಭೆಯಲ್ಲಿ ಜಿಲ್ಲಾಧಿಕಾರಿ ಸಂಬಂಧಿಸಿದ ಅಧಿಕಾರಿ ಗಳಿಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿ, ಸಾರ್ವಜನಿಕರ ಸಮಸ್ಯೆಗಳಿಗೆ ಆದ್ಯತೆ ನೀಡುವ ಭರವಸೆ ನೀಡಿದರು. ಈ ವೇಳೆ ತಿಪಟೂರು ಉಪವಿಭಾಗಾಧಿಕಾರಿ ಸಪ್ತಶ್ರೀ, ತಹಸೀಲ್ದಾರ್ ಮಮತಾ ಎಂ, ತಾಪಂ ಇಒ ದೊಡ್ಡಸಿದ್ದಯ್ಯ, ಸಿಡಿಪಿಒ ಹೊನ್ನಪ್ಪ, ಕೃಷಿ ಇಲಾಖೆಯ ಶಿವರಾಜ್, ಕ್ಷೇತ್ರ ಶಿಕ್ಷಣಾಧಿಕಾರಿ ಕಾಂತ ರಾಜು, ಅರಣ್ಯ ಇಲಾಖೆಯ ಅಮಿತ್, ಎಇಇ ಗವಿರಂಗಯ್ಯ, ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಅಧಿಕಾರಿಗಳಿಗೆ ಬಿಇಒ ಹನುಮಂತರಾಯಪ್ಪ ಸೂಚನೆ

ಪರೀಕ್ಷಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮ

ಕೊಡಿಗೇನಹಳ್ಳಿ: ಸಾರ್ವಜನಿಕ ಶಿಕ್ಷಣ ಇಲಾಖೆಯ ಸೂಚನೆಯಂತೆ ಬುಧವಾರ ದಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಪ್ರಾರಂಭವಾಗುತ್ತಿದ್ದು ಪರೀಕ್ಷೆಗೆ ಹಾಜರಾಗುವ ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳ ಬೇಕೆಂದು ಬಿಇಒ ಹನುಮಂತ ರಾಯಪ್ಪ ಅಧಿಕಾರಿ ಗಳಿಗೆ ಸೂಚಿಸಿದ್ದಾರೆ.

ಮಧುಗಿರಿ ತಾಲೂಕಿನ ವಿವಿಧ ಶಾಲೆಗಳ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಮಾತನಾಡಿದ ಅವರು, ಬೇಸಿಗೆ ಇರುವುದರಿಂದ ಮಕ್ಕಳಿಗೆ ಕಾಲಕಾಲಕ್ಕೆ ಕುಡಿಯಲು ನೀರು ಒದಗಿಸುವುದು ಸೇರಿದಂತೆ ಮಕ್ಕಳಿಗೆ ಉತ್ತಮ ರೀತಿಯಲ್ಲಿ ಭದ್ರತೆಗಾಗಿ ಸಿಸಿ ಕ್ಯಾಮೆರಾ ಅಳವಡಿಕೆ ಪ್ರಶ್ನೆಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳನ್ನು ಪೊಲೀಸ್ ಭದ್ರತೆಯಲ್ಲಿ ಜಿಪಿಎಸ್ ಅಳವಡಿಸಿದ ವಾಹನಗಳ ಮೂಲಕ ಪರೀಕ್ಷೆ ಕೇಂದ್ರ ಗಳಿಗೆ ತಲುಪಿಸಲು ಹಾಗೂ ಎಲ್ಲಾ ಕೇಂದ್ರಗಳಿಗೆ ಪೊಲೀಸ್ ಭದ್ರತೆ ಒದಗಿಸಲು ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದರು. ಮಧುಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ನೊಂದಾಯಿಸಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯ ಒದಗಿಸುವಂತೆ ಮತ್ತು ಯಾವುದೇ ವಿದ್ಯಾರ್ಥಿ ಗೈರು ಹಾಜರಾಗದಂತೆ ಎಚ್ಚರ ವಹಿಸುವಂತೆ ಪರೀಕ್ಷೆ ಕುರಿತಂತೆ ವಿದ್ಯಾರ್ಥಿಗಳಿಗೆ ಈ ಬಾರಿ ಶಿಕ್ಷಣ ಇಲಾಖೆ ವತಿಯಿಂದ ಉತ್ತಮ ರೀತಿಯಲ್ಲಿ ತರಬೇತಿ ನೀಡಿದ್ದು, ಪರೀಕ್ಷೆಗೆ ಹಾಜರಾದ ಪ್ರತಿಯೊಬ್ಬ ವಿದ್ಯಾರ್ಥಿಯೂ ಉತ್ತೀರ್ಣರಾಗುವ ರೀತಿಯಲ್ಲಿ ಅವರನ್ನು ಸಿದ್ದಗೊಳಿಸಲಾಗಿದೆ ಹಾಗೂ ಪರೀಕ್ಷಾ ಹಾಜರಾತಿಯು ಶೇ.100 ಆದಲ್ಲಿ ಫಲಿತಾಂಶವು ಶೇ.100 ಬರಬಹುದಾದ ಎಲ್ಲಾ ಸಾಧ್ಯತೆಗಳಿರುವ ಕಾರಣ, ಯಾವುದೇ ವಿದ್ಯಾರ್ಥಿ ಗೈರು ಹಾಜರಾಗದಂತೆ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ತಿಳಿಸಿದರು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾದ ಮಾರ್ಗದಲ್ಲಿ ಮತ್ತು ನಿಗದಿತ ಸಮಯಕ್ಕೆ ಬಸ್ ವ್ಯವಸ್ಥೆ ಒದಗಿಸುವಂತೆ ತಿಳಿಸಿದರು.

ಸಿದ್ಧತಾ ಕಾರ್ಯಕ್ಕೆ ಸೂಚನೆ

ಪರೀಕ್ಷೆಗಳು ಪಾರದರ್ಶಕವಾಗಿ ಹಾಗೂ ಅತ್ಯಂತ ವ್ಯವಸ್ಥಿತವಾಗಿ ನಡೆಸಲು ಅಗತ್ಯವಿರುವ ಸಿದ್ಧತೆ ಮಾಡಿಕೊಳ್ಳುವಂತೆ ಮತ್ತು ಪರೀಕ್ಷಾ ಮಂಡಳಿಯು ಸೂಚಿಸಿರುವಂತೆ ಪರೀಕ್ಷಾ ಕೇಂದ್ರಗಳಲ್ಲಿ ಎಲ್ಲಾ ರೀತಿಯ ಸಿದ್ಧತೆ ನಡೆಸಬೇಕು ಎಂದು ಅಧಿಕಾರಿಗಳಿಗೆ ಹಾಗೂ ಮುಖ್ಯ ಶಿಕ್ಷಕರಿಗೆ ಹನುಮಂತರಾಯಪ್ಪ ಸೂಚಿಸಿದ್ದಾರೆ.



ರಾಜ್ಯಮಟ್ಟದ ಉಪನ್ಯಾಸಕರ ವಾಲಿಬಾಲ್ ಪಂದ್ಯಾವಳಿ

ಗೆದ್ದು ಬೀಗಿದ ಸಾಹೇ ತಂಡ

ತುಮಕೂರು: ಇತ್ತೀಚೆಗೆ ಬೆಂಗಳೂರಿನ ಆಚಾರ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ರಾಜ್ಯ ಮಟ್ಟದ ಅಂತರ ಕಾಲೇಜು ಉಪನ್ಯಾಸಕರ ವಾಲೀಬಾಲ್ ಪಂದ್ಯಾವಳಿಗಳಲ್ಲಿ ಸಾಹೇ ವಿಶ್ವವಿದ್ಯಾನಿಲಯದ ವಾಲಿಬಾಲ್ ತಂಡ ಭಾಗವಹಿಸಿ ಈಸ್ಟ್ ಪಾಯಿಂಟ್ ಇಂಜಿನಿಯರಿಂಗ್ ಕಾಲೇಜಿನ ವಿರುದ್ಧ ಸೆಣಸಾಡಿ 25-18, 25-20ರಲ್ಲಿ ಅಂಕಗಳನ್ನು ಪಡೆಯುವ ಮೂಲಕ ಜಯಗಳಿಸಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ.

ಶ್ರೀ ಸಿದ್ಧಾರ್ಥ ಇಂಜಿನಿಯರಿಂಗ್ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ರುದ್ರೇಶ ಕೆ.ಆರ್ ರವರು ತಂಡವನ್ನು ಮುನ್ನಡೆಸಿದ್ದರು. ಸಾಹೇ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ನಿರ್ದೇಶಕ ಶಶಿ ಕುಮಾರ್ ಹಾಗೂ ನಿಖಿಲ್ ಗೌಡ, ಮನೋಜ ಮೆಗಾನಿ ರೆಡ್ಡಿ, ಕಿರಣ್ ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದರು.

ವಿಜೇತ ತಂಡಕ್ಕೆ ಸಾಹೇ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳು ಹಾಗೂ ಗೃಹ ಸಚಿವರಾದ ಡಾ.ಜಿ.ಪರಮೇಶ್ವರ ಹಾಗೂ ಕುಲಾಧಿಪತಿಗಳ ಸಲಹೆಗಾರ ಡಾ.ವಿವೇಕ್ ವೀರಯ್ಯ, ಉಪ ಕುಲಪತಿ ಡಾ.ಕೆ.ಬಿ.ಲಿಂಗೇಗೌಡ,

ಕುಲಸಚಿವರಾದ ಡಾ.ಅಶೋಕ್ ಮೆಹ್ತ, ಪರಿಕ್ಷಾಂಗ ನಿಯಂತ್ರಕರಾದ ಡಾ.ಗುರುಶಂಕರ್, ಎಸ್‌ಎಸ್‌ಐಟಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಮಹಾಂತೇಶ್ ಎಂ. ನಡಕಟ್ಟಿ ಹಾಗೂ ಎಲ್ಲ ವಿಭಾಗದ ಮುಖ್ಯಸ್ಥರು ಈ ತಂಡಕ್ಕೆ ಅಭಿನಂಧಿಸಿದ್ದಾರೆ.



ಪೋಷಣ್ ಮಾಸಾಚರಣೆ: ಅಂಗವಾಗಿ ಕಿರುಚಿತ್ರ ಪ್ರದರ್ಶನ

ಮಧುಗಿರಿ: ತಾಲೂಕಿನ ದೊಡ್ಡೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ 'ಪೋಷಣ್ ಮಾಸಾಚರಣೆ' ಅಂಗವಾಗಿ ಕಿರುಚಿತ್ರ ಪ್ರದರ್ಶಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ಇಲಾಖೆಯ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಕರಿಬಸವಯ್ಯ ಹಾಗೂ ನಾಗಭೂಷಣ್ ಮಕ್ಕಳೊಂದಿಗೆ ಸಂವಾದ ನಡೆಸಿ ಮಕ್ಕಳಿಗೆ ವೈಯಕ್ತಿಕ ಸ್ವಚ್ಛತೆ, ಸಮತೋಲಿತ ಆಹಾರ, ಅಪೌಷ್ಟಿಕತೆಯಿಂದ ಉಂಟಾಗುವ ತೊಂದರೆಗಳು, ಲಿಂಗ ಸಮಾನತೆಯ ಮಹತ್ವ ಸೇರಿದಂತೆ ಹಲವು ವಿಚಾರಗಳ ಕುರಿತು ಅರಿವು ಮೂಡಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಶಿಕ್ಷಕಿ ಪುಷ್ಪಾವತಿ, ಸರ್ಕಾರ ಮಕ್ಕಳ ಪೌಷ್ಟಿಕತೆ ಹೆಚ್ಚಿಸುವ ಸಲುವಾಗಿ ಪ್ರತಿನಿತ್ಯ ಮೊಟ್ಟೆ, ಬಾಳೆಹಣ್ಣು, ಬಿಸಿಯೂಟ ಯೋಜನೆ, ಕ್ಷೀರ ಭಾಗ್ಯ, ಜಂತು ಹುಳು ನಿವಾರಕ ಮಾತ್ರೆ, ಕಬ್ಬಿಣ ಅಂಶವುಳ್ಳ ಮಾತ್ರೆಗಳ ವಿತರಣೆ ಸೇರಿದಂತೆ ಶುದ್ಧ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ, ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ಪ್ಯಾಡ್ ಸೇರಿದಂತೆ ಹಲವಾರು ಉಪಯುಕ್ತ ಉಪಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ ಎಂದು ತಿಳಿಸಿದರು. ಶಿಕ್ಷಕರಾದ ಪಾಪಣ್ಣ, ಲಕ್ಷ್ಮೀಕಾಂತ್, ಸೌಭಾಗ್ಯ, ಪುಷ್ಪಲತ,ರಘು ಗಂಕಾರನಹಳ್ಳಿ, ಹಾಗೂ ಅಂಗನವಾಡಿ ಕಾರ್ಯಕರ್ತೆಯರಾದ ಭೀಮಕ್ಕ, ಜಯಲಕ್ಷ್ಮಿ ಹಾಗೂ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷೆ ಆಶಾ ಹಾಜರಿದ್ದರು.



ನಾಳೆ ಯುಗಾದಿ ಜಾತ್ರಾ ಮಹೋತ್ಸವ

ಮಧುಗಿರಿ: ತಾಡಿ ವೀರ ನಾಗಮ್ಮ ದೇವಸ್ಥಾನದ ಸಮಿತಿ ವತಿಯಿಂದ ಮಾರ್ಚ್ 19 ಮತ್ತು 20ರಂದು ಎಲೆ ರಾಂಪುರ ಕುಂಚಿಟಿಗ ಮಠದ ಪೀಠಾಧ್ಯಕ್ಷರಾದ ಶ್ರೀ ಹನುಮಂತನಾಥ ಸ್ವಾಮೀಜಿರವರ ದಿವ್ಯ ಸಾನ್ನಿಧ್ಯದಲ್ಲಿ ಯುಗಾದಿ ಜಾತ್ರಾ ಮಹೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಸಮಿತಿಯ ಕಾರ್ಯದರ್ಶಿ ಬಿಎನ್ ನಾಗಾರ್ಜುನ ತಿಳಿಸಿದ್ದಾರೆ. ತಾಡಿ ಗುಡಿಕಟ್ಟೆಗೆ ಸೇರಿದ ಗುರು ಮನೆ ಯಜಮಾನರುಗಳು ಅಮಾವಾಸ್ಯೆ ಪೂಜಾರಪ್ಪನವರು ಕಟ್ಟೆ ಮನೆ ಗೌಡ್ರು 33 ಬಂಡಿ ಮನೆಕಾರರು ವತಿಯಿಂದ ಮಾರ್ಚ್ 19ರಂದು ಕಳಸ ಪ್ರತಿಷ್ಠಾಪನೆ, ಬೇವು ಬೆಲ್ಲ ವಿತರಣೆ, ಮಾರ್ಚ್ 20ರಂದು ಭಂಡಾರೋತ್ಸವ, ಅನ್ನಸಾರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಭಕ್ತಾದಿಗಳು ಸಕಾಲಕ್ಕೆ ಆಗಮಿಸಿ ಯುಗಾದಿ ಜಾತ್ರಾ ಮಹೋತ್ಸವ ಯಶಸ್ವಿಗೊಳಿಸುವಂತೆ ಮನವಿ ಮಾಡಿದ್ದಾರೆ.

ದೇವಪಟ್ಟಣದಲ್ಲಿ ದೈವಿಕ ವಿಸ್ಮಯ

ಕುಣಿಗಲ್: ಭಕ್ತಿ, ಭಾವ ಹಾಗೂ ಪ್ರಕೃತಿಯ ದೈವಿಕ ಸಂಗಮಕ್ಕೆ ಕೆ.ಜಿ.ದೇವಪಟ್ಟಣದ ಶ್ರೀ ವಿದ್ಯಾ ಚೌಡೇಶ್ವರಿ ಪುಣ್ಯಕ್ಷೇತ್ರ ಸಾಕ್ಷಿಯಾಯಿತು. ಶೃಂಗೇರಿ ಶಾರದಾ ಪೀಠದ ಜಗದ್ಗುರುಗಳಾದ ಪರಮಪೂಜ್ಯ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ ದಿವ್ಯ ಪಾದಾರ್ಪಣೆಯ ಸಂದರ್ಭದಲ್ಲಿ ವರುಣದೇವನು ಮಳೆಯ ರೂಪದಲ್ಲಿ ಸುರಿದು, ಅಮ್ಮನವರ ಕೃಪಾಶೀರ್ವಾದವನ್ನು ಸಾಭೀತು ಪಡಿಸಿದ ಅಪರೂಪದ ಘಟನೆ ನಡೆಯಿತು.

ಶ್ರೀಗಳ ಸ್ವಾಗತಕ್ಕೆ ಪುಳಕಗೊಂಡ ಪ್ರಕೃತಿ, ಮದುವಣಗಿತ್ತಿಯಂತೆ ಶೃಂಗಾರಗೊಂಡ ಶ್ರೀಕ್ಷೇತ್ರ ಮಾರ್ಚ್ 16ರಂದು ಸಂಜೆ ಶೃಂಗೇರಿ ಜಗದ್ಗುರುಗಳು ಕ್ಷೇತ್ರಕ್ಕೆ ಆಗಮಿಸುತ್ತಿದ್ದಂತೆಯೇ ಭಕ್ತಸಾಗರದಲ್ಲಿ ಹರ್ಷೋದ್ಗಾರ ಮನೆಮಾಡಿತ್ತು. ವೇದ ಮಂತ್ರಗಳ ಘೋಷದ ನಡುವೆ ಶ್ರೀಗಳು ಜಗನ್ಮಾತೆ ಶ್ರೀ ವಿದ್ಯಾ ಚೌಡೇಶ್ವರಿ ಸನ್ನಿಧಾನದಲ್ಲಿ ವಿಶೇಷ ಪೂಜೆ ಹಾಗೂ ಪುನಸ್ಕಾರ ಗಳನ್ನು ನೆರವೇರಿಸಿದರು. ಶ್ರೀಗಳ ಆಗಮನಕ್ಕೆ ಮಧುವಣಗಿತ್ತಿಯಂತೆ ಶೃಂಗಾರಗೊಂಡ ಕೆಜಿ ದೇವಪಟ್ಟಣವು ತಳಿರು ತೋರಣ, ಪುಷ್ಪಾಲಂಕಾರದಿಂದ ಕಂಗೊಳಿ ಸುತ್ತಿತ್ತು. ಭಕ್ತರು ಶ್ರೀಗಳ ಆಗಮನಕ್ಕೆ ಕಾದು ಕುಳಿತಿದ್ದರು. ಪೂಜಾ ವಿಧಿ ವಿಧಾನಗಳು ನಡೆಯುತ್ತಿದ್ದ ಬೆನ್ನಲ್ಲೇ, ಆಕಾಶದಿಂದ ಹಗುರವಾದ ಮಳೆ ಸುರಿಯಲಾರಂಭಿಸಿತು. ಇದು ಕೇವಲ ಮಳೆಯಾಗಿರದೆ, ಚೌಡೇಶ್ವರಿಯೇ ದಿವ್ಯ ಆಶೀರ್ವಾದಂತೆ ಭಾಸವಾಯಿತು.

- ಶೃಂಗೇರಿ ಜಗದ್ಗುರುಗಳ ಆಗಮನ ವೇಳೆ ಮಳೆಯ ಸಿಂಚನ



ರಂಜಾನ್, ಯುಗಾದಿ ಹಬ್ಬದ ಹಿನ್ನೆಲೆ ಶಾಂತಿ ಸಭೆ | ಐಪಿಎಸ್ ಅಧಿಕಾರಿ ಎಚ್ಚರಿಕೆ

ಕಾನೂನು ಉಲ್ಲಂಘಿಸಿದರೆ ಕಠಿಣ ಕ್ರಮ

ಹುಲಿಯೂರು: ಮುಂಬರುವ ಪವಿತ್ರ ರಂಜಾನ್ ಹಾಗೂ ಯುಗಾದಿ ಹಬ್ಬಗಳ ಆಚರಣೆಯ ಸಂದರ್ಭದಲ್ಲಿ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಕಾಪಾಡುವ ನಿಟ್ಟಿನಲ್ಲಿ ಹುಳಿಯಾರು ಪೊಲೀಸ್ ಠಾಣೆಯಲ್ಲಿ ಸಾರ್ವಜನಿಕ ಶಾಂತಿ ಸಭೆಯನ್ನು ಆಯೋಜಿಸಲಾಗಿತ್ತು.

ಐಪಿಎಸ್ ಅಧಿಕಾರಿ ರಾನು ಗುಪ್ತಾ ಅವರ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ವಿವಿಧ ಸಮುದಾಯಗಳ ಮುಖಂಡರು ಹಾಗೂ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿ ದ್ದರು. ಹಬ್ಬದ ಸಂಭ್ರಮವು ಯಾರಿಗೂ ತೊಂದರೆಯಾಗದಂತೆ ಇರಬೇಕು ಮತ್ತು ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ಸಾರ್ವಜನಿಕರು ಸಹಕರಿಸಬೇಕು ಎಂದು ಅಧಿಕಾರಿಗಳು ಮನವಿ ಮಾಡಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಐಪಿಎಸ್ ಅಧಿಕಾರಿ ರಾನು ಗುಪ್ತಾ ಅವರು, ಹಬ್ಬಗಳ ಮೆರವಣಿಗೆ ಅಥವಾ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮುನ್ನ ಕಡ್ಡಾಯವಾಗಿ ಪೊಲೀಸ್ ಠಾಣೆಯ ಗಮನಕ್ಕೆ ತರಬೇಕು ಎಂದು ಸೂಚಿಸಿದರು. ಸಾರ್ವಜನಿಕರು ಕಾನೂನು ಸುವ್ಯವಸ್ಥೆಗೆ ಧಕ್ಕೆ ಬಾರದಂತೆ ಮತ್ತು ಸಂಚಾರಕ್ಕೆ ಅಡಚಣೆಯಾಗದಂತೆ ನಡೆದುಕೊಳ್ಳ ಬೇಕು. ಹಬ್ಬಗಳ ಆಚರಣೆಗೆ ಎರಡೂ ಸಮುದಾಯದವರು ಪರಸ್ಪರ ಸಹಕರಿಸಿ ಸೌಹಾರ್ದಯುತವಾಗಿ ನಡೆದುಕೊಳ್ಳಬೇಕು ಹಾಗೂ ಯಾವುದೇ ಸಮಸ್ಯೆಗಳಾದಲ್ಲಿ ತಕ್ಷಣವೇ ಪೊಲೀಸರ ಗಮನಕ್ಕೆ ತರಬೇಕು ಎಂದು ಅವರು ತಿಳಿಸಿದರು. ಅತಿಯಾದ ಸಂಭ್ರಮದ ಹೆಸರಿನಲ್ಲಿ ಸಮಾಜದ ಶಾಂತಿಗೆ ಭಂಗ ತರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು.

ಹಬ್ಬಗಳ ಮೆರವಣಿಗೆ ಅಥವಾ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮುನ್ನ ಕಡ್ಡಾಯವಾಗಿ ಪೊಲೀಸ್ ಠಾಣೆಯ ಗಮನಕ್ಕೆ ತರಬೇಕು ಎಂದು ಸೂಚಿಸಿದರು. ವಿಶೇಷವಾಗಿ ಸಾಮಾಜಿಕ ಜಾಲತಾಣಗಳ ಬಳಕೆಯ ಬಗ್ಗೆ ಎಚ್ಚರಿಸಿದ ರಾನುಗುಪ್ತಾ ಅವರು, ಇಸ್ರೇಲ್-ಪ್ಯಾಲೆಸ್ಟೈನ್ ಸಂಘರ್ಷದಂತಹ ಸೂಕ್ಷ್ಮ ವಿಚಾರಗಳ ಬಗ್ಗೆ ಅಥವಾ ಹಳೆಯ ವಿವಾದಾತ್ಮಕ ವೀಡಿಯೊಗಳನ್ನು ಹಂಚಿಕೊಂಡು ಸಮಾಜದಲ್ಲಿ ಗೊಂದಲ ಸೃಷ್ಟಿಸಬಾರದು ಎಂದು ತಿಳಿಸಿದರು.



ತುಮಕೂರು ವಿಶ್ವವಿದ್ಯಾಲಯದಲ್ಲಿ ಡಿ.ವಿ.ಗುಂಡಪ್ಪ ಜನ್ಮದಿನಾಚರಣೆ

ಬರೆದಂತೆ ಬದುಕಿದವರು ಡಿವಿಜಿ: ನಾಹಿದಾ ಜಮ್ ಜಮ್

ತುಮಕೂರು: ಬರೆದಂತೆ ಬದುಕುವುದು ಎಲ್ಲರಿಗೂ ಸಾಧ್ಯವಿಲ್ಲ, ಆದರೆ ಡಿವಿಜಿ ಅವರು ಅಂತಹ ಅಪರೂಪದ ಸಾಧಕರ ಸಾಲಿನಲ್ಲಿ ಮುಂಚೂಣಿಯಲ್ಲಿದ್ದಾರೆ. ಪತ್ರಿಕೋದ್ಯಮವನ್ನು ಕೇವಲ ವೃತ್ತಿಯನ್ನಾಗಿ ಮಾಡಿಕೊಳ್ಳದೆ, ಸಾರ್ವಜನಿಕರಿಗೆ ನಿಖರ ಮಾಹಿತಿ ನೀಡುವ ಸೇವೆಯನ್ನಾಗಿ ಅವರು ಪರಿಗಣಿಸಿದ್ದರು ಎಂದು ತುಮಕೂರು ವಿಶ್ವವಿದ್ಯಾನಿಲಯದ ಕುಲಸಚಿವೆ ನಾಹಿದಾ ಜಮ್ ಜಮ್ ಅವರು ಅಭಿಪ್ರಾಯ ಪಟ್ಟರು.

ಕರ್ನಾಟಕಕಾರ್ಯನಿರತಪತ್ರಕರ್ತರಸಂಘ ತುಮಕೂರು ಜಿಲ್ಲಾ ಘಟಕ, ತುಮಕೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಡಿವಿಜಿ ಕನ್ನಡ ಅಧ್ಯಯನ ಕೇಂದ್ರ ಇವುಗಳ ಸಹಯೋಗದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಡಿವಿಜಿ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಡಿವಿಜಿ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

ಡಿವಿಜಿಯವರ ತತ್ವಗಳು ಯುವಜನರ ಪಾಲಿಗೆ ಜ್ಞಾನ ತುಂಬುವ ದಾರಿದೀಪಗಳಾಗಿವೆ. ವಸ್ತುನಿಷ್ಠವಾಗಿ ಸಮಾಜಕ್ಕೆ ಮಾಹಿತಿ ನೀಡುವ ವಿಷಯದಲ್ಲಿ ಡಿವಿಜಿಯವರು ನಂಬಿದ್ದ ತತ್ವಗಳು ಇಂದಿನ ಮಾಧ್ಯಮಗಳಿಗೆ ಮಾರ್ಗದರ್ಶಿ ಸೂತ್ರಗಳಾಗಿವೆ ಎಂದರು.

ತುಮಕೂರು ವಿವಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ. ಸಿಬಂತಿ ಪದ್ಮನಾಭ ಕೆ.ವಿ. ಮಾತನಾಡಿ, ಡಿವಿಜಿಯವರು ಪತ್ರಿಕಾ ಸ್ವಾತಂತ್ರ್ಯದ ಪರವಾದ ನಿಲುವು ಹೊಂದಿದ್ದರು. ಸಾಮಾನ್ಯ ಪ್ರಜೆಗಿಂತ ಹೆಚ್ಚಿನ ಸ್ಥಾನಮಾನವೇನೂ ಪತ್ರಕರ್ತನಿಗೆ ಬೇಕಾಗಿಲ್ಲ, ಆದರೆ ಅದಕ್ಕಿಂತ ಕಡಿಮೆಯೂ ಇರಬಾರದು ಎಂದು ನಂಬಿದ್ದರು. ಆದರೆ ಆ ಕಾರಣಕ್ಕೆ ಪತ್ರಕರ್ತರು ತಾವು ಸಮಾಜದ ಇತರರಿಗಿಂತ ಹೆಚ್ಚಿನವರೆಂದು ಭಾವಿಸಬಾರದೆಂದು ಡಿವಿಜಿ ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದ್ದರು ಎಂದರು.

ಕಾರ್ಯಕ್ರಮದಲ್ಲಿ ಡಿವಿಜಿ ಕನ್ನಡ ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಪ್ರೊ. ಡಾ. ಅಣ್ಣಮ್ಮ, ವಿವಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಜಿ. ದಾಕ್ಷಾಯಿಣಿ, ಪತ್ರಕರ್ತ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಇ. ರಘುರಾಮ್, ಪದಾಧಿಕಾರಿಗಳು, ಹಿರಿಯ ಪತ್ರಕರ್ತರು ಇದ್ದರು.



> ಇಂದಿನ ಕೃತಕ ಬುದ್ಧಿಮತ್ತೆ ಕಾಲದಲ್ಲಿ ಮಾಧ್ಯಮ ಗಳಲ್ಲಿ ಬಿತ್ತರವಾಗುವ ಸುದ್ದಿಗಳ ಸತ್ಯಾಸತ್ಯತೆಯನ್ನು ಗುರುತಿಸುವುದು ದೊಡ್ಡ ಸವಾಲಾಗಿದೆ. ಸುದ್ದಿಗಳನ್ನು ವಸ್ತುನಿಷ್ಠವಾಗಿ ತಲುಪಿಸಬೇಕು ಎಂಬುದಕ್ಕಿಂತಲೂ ಸುಳ್ಳುಸುದ್ದಿಗಳ ಹಾವಳಿಯಿಂದ ತಮ್ಮ ವೃತ್ತಿಘನತೆಯನ್ನು ರಕ್ಷಿಸಿಕೊಳ್ಳುವುದು ಹೇಗೆ ಎಂಬುದೇ ಮಾಧ್ಯಮರಂಗದ ಇಂದಿನ ಆತಂಕವಾಗಿದೆ.
>
> ■ ಡಾ. ಸಿಬಂತಿ ಪದ್ಮನಾಭ ಕೆ.ವಿ., ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ, ತುಮಕೂರು ವಿವಿ

ಕಿರುಸುದ್ದಿ

ಪುನೀತ್ ತತ್ತ್ವ ಯುವಪೀಳಿಗೆ ಅಳವಡಿಸಿಕೊಳ್ಳಲಿ: ಧನಂಜಯ

ಮಾಗಡಿ: ಪಟ್ಟಣದ ಕಲ್ಯಾಗೇಟ್‌ನಲ್ಲಿ ಮಂಗಳವಾರ ಕರ್ನಾಟಕ ರತ್ನ, ಅಗಲಿದ ನಟ ಡಾ. ಪುನೀತ್ ರಾಜ್ ಕುಮಾರ್ ಅವರ ಹುಟ್ಟುಹಬ್ಬವನ್ನು ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಪುಷ್ಪನಮನ ಸಲ್ಲಿಸಿ ಮಾತನಾಡಿದ ಮಾಜಿ ಜಿಪಂ ಅಧ್ಯಕ್ಷ ಎಂ.ಕೆ.ಧನಂಜಯ, ಕಿರಿಯ ವಯಸ್ಸಿನಲ್ಲಿಯೇ ಡಾ. ಪುನಿತ್ ರಾಜ್ ಅವರು ಸಾಮಜಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ ಅವರ ಆದರ್ಶ ತತ್ವ ಸಿದ್ಧಾಂತಗಳನ್ನು ಯುವ ಪೀಳಿಗೆ ತಮ್ಮ ಜೀವನದಲ್ಲಿ ಅಳವಡಿಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ಅಭಿಮಾನಿಗಳು ಕೇಕ್ ಕತ್ತರಿಸುವ ಮೂಲಕ ಸಂಭ್ರಮಿಸಿದರಲ್ಲದೆ, ಸಾರ್ವಜನಿಕರಿಗೆ ಅನ್ನದಾನದ ವ್ಯವಸ್ಥೆ ಮಾಡಿದ್ದರು. ಡಾ. ರಾಜ್ ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಬಸವರಾಜು ಮಾತನಾಡಿ, ಅವರ ಸರಳತೆ ಮತ್ತು ಸಮಾಜಮುಖಿ ಕಾರ್ಯಗಳು ನಮಗೆಲ್ಲರಿಗೂ ಪ್ರೇರಣೆ ಎಂದು ತಿಳಿಸಿದರು. ತಿರುಪತಿ ತಿರುಮಲೆ ಪಾದಯಾತ್ರೆ ಸಮಿತಿ ಅಧ್ಯಕ್ಷ ಎಂ.ಜಿ.ಗೋಪಾಲ್ ಮಾತನಾಡಿದರು. ಈ ಸಂದರ್ಭದಲ್ಲಿ ಅಭಿಮಾನಿಗಳಾದ ಚಂದ್ರಣ್ಣ, ರೇಖಪ್ಪ, ಮೋಹನ್, ಮಂಜುನಾಥ್, ಪುಟ್ಟರಾಜು, ನಾಗಣ್ಣ ಸೇರಿದಂತೆ ನೂರಾರು ಅಪ್ಪು ಅಭಿಮಾನಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಕೃತಿ ಬಿಡುಗಡೆ

ರಾಮನಗರ: ಶ್ರೀ ಬಸವೇಶ್ವರ ಸಾರ್ವಜನಿಕ ವಿದ್ಯಾರ್ಥಿ ನಿಲಯ ಟ್ರಸ್ಟ್ (ಎಸ್‌ಬಿಎಸ್‌ವಿಎನ್ ಟ್ರಸ್ಟ್) ವತಿಯಿಂದ ವಿದ್ವಾನ್ ಚಂದ್ರಶೇಖರಯ್ಯ ಅವರ 'ಶಿವಕುಲತಿಲಕ ಆಚಾರ್ಯ ಶ್ರೀ ರೇವಣಸಿದ್ದೇಶ್ವರ' ಕೃತಿ ಲೋಕಾರ್ಪಣೆ ಸಮಾರಂಭವನ್ನು ಮಾ.21ರಂದು ಬೆಳಿಗ್ಗೆ 10.30 ಗಂಟೆಗೆ ತಾಲ್ಲೂಕಿನ ಅವ್ವೇರಹಳ್ಳಿಯ ಶ್ರೀ ರೇವಣಸಿದ್ದೇಶ್ವರಸ್ವಾಮಿ ಬೆಟ್ಟದಲ್ಲಿರುವ ಶ್ರೀ ರೇವಣಸಿದ್ದೇಶ್ವರಸ್ವಾಮಿ ದಾಸೋಹ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿವಗಂಗಾ ಕ್ಷೇತ್ರದ ಮೇಲಣಗವಿ ಮಠದ ಶ್ರೀ ಮಲಯಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ನಿವೃತ್ತ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಎಲ್. ರೇವಣಸಿದ್ದಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಕೃತಿಯನ್ನು ರಾಮನಗರ-ಚನ್ನಪಟ್ಟನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜಶೇಖರ್ ಬಿಡುಗಡೆ ಮಾಡಲಿದ್ದಾರೆ. ಕೃತಿ ಕುರಿತು ಸಾಹಿತಿ ಡಾ.ಸಿ. ಶಿವಕುಮಾರಸ್ವಾಮಿ ಮಾತನಾಡಲಿದ್ದಾರೆ. ಶ್ರೀ ರೇವಣಸಿದ್ದೇಶ್ವರ ಕ್ಷೇತ್ರಾಭಿವೃದ್ಧಿ ಸೇವಾ ಸಮಿತಿ ಟ್ರಸ್ಟಿನ ರೇಣುಕಾನಂದಸ್ವಾಮಿ, ಚನ್ನಬಸಪ್ಪನವರು ಸಮಾರಂಭದಲ್ಲಿ ಉಪಸ್ಥಿತರಿರುವರು. ಇದೇ ಸಂದರ್ಭದಲ್ಲಿ ವಿದ್ವಾನ್ ಚಂದ್ರಶೇಖರಯ್ಯವರನ್ನು ಸನ್ಮಾನಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



ಪೂರ್ವಭಾವಿ ಸಭೆ ಇಂದು

ರಾಮನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಾ.23ರಂದು ದೇವರ ದಾಸಿಮಯ್ಯ ಜಯಂತಿ ಹಾಗೂ ಮಾ.31ರಂದು ಭಗವಾನ್ ಮಹಾವೀರ ಜಯಂತಿ ಆಚರಣೆ ಸಂಬಂಧ ಬುಧವಾರ ಬೆಳಗ್ಗೆ 10.30ಕ್ಕೆ ದೇವರ ದಾಸಿಮಯ್ಯ ಜಯಂತಿ ಹಾಗೂ ಬೆಳಗ್ಗೆ 11.30ಕ್ಕೆ ಭಗವಾನ್ ಮಹಾವೀರ ಜಯಂತಿಯ ಪೂರ್ವಭಾವಿ ಸಭೆಯನ್ನು ನಗರದ ಕಂದಾಯ ಭವನದ ಮೂರನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 409ರಲ್ಲಿ ಏರ್ಪಡಿಸಲಾಗಿದೆ. ಈ ಸಂಬಂಧ ಜಯಂತಿ ಕಾರ್ಯಕ್ರಮ ಆಚರಣೆಯ ರೂಪುರೇಷೆಗಳ ಕುರಿತು ಚರ್ಚಿಸಲು ಜಿಲ್ಲೆಯ ಎಲ್ಲಾ ಸಮುದಾಯದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಮುಖಂಡರು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಪೂರ್ವಭಾವಿ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಗಾಯಾಳು ಸಾವು

ಕನಕಪುರ: ಭಾನುವಾರ ಖಾಸಗಿ ಬಸ್ ಹಾಗು ಬೈಕ್ ನಡುವೆ ನಡೆದ ರಸ್ತೆ ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ವ್ಯಕ್ತಿಯೊಬ್ಬ ಆಸ್ಪತ್ರೆಯಲ್ಲಿ ಅಸುನೀಗಿದ್ದಾನೆ. ಹೊಸದುರ್ಗ ಗ್ರಾಮದ ನವೀನ್ (37) ಮೃತಪಟ್ಟ ದುರ್ದೈವಿಯಾಗಿದ್ದಾನೆ, ಭಾನುವಾರ ಹೊಸದುರ್ಗದಿಂದ ಕೋಡಿಹಳ್ಳಿಗೆ ಬರುವ ವೇಳೆ ತಾವರೆಗಟ್ಟೆ ಕ್ರಾಸ್ ಬಳಿ ಖಾಸಗಿ ಬಸ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿತ್ತು, ಜೊತೆಯಲ್ಲಿದ್ದ ತಂದೆ ವೀರಭದ್ರೇಗೌಡ ಇನ್ನೂ ಹಾರೋಹಳ್ಳಿ ಸಮೀಪದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಅಪಘಾತದಲ್ಲಿ ಪಾದಚಾರಿ ಬೊಮ್ಮಸಂದ್ರದ ಲಿಂಗೇಗೌಡ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಹಾರೋಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ಮಾಗಡಿ ಪಟ್ಟಣದ ಕಲ್ಯಾಗೇಟ್‌ನಲ್ಲಿ ಮಂಗಳವಾರ ದಿ.ನಟ ಡಾ. ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬವನ್ನು ಡಾ. ರಾಜ್ ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಸಂಭ್ರಮದಿಂದ ಆಚರಿಸಲಾಯಿತು.

ಮೀಸಲಾತಿ ವರದಿ ಬಲಗೈಗೆ ಮಾರಕ: ಚಿಕ್ಕರಾಜು

ಮಾಗಡಿ: ನ್ಯಾಯಮೂರ್ತಿ ನಾಗ ಮೋಹನ್ ದಾಸ್ ವರದಿಯಲ್ಲಿ ಎಡಗೈ ಸಮುದಾಯವನ್ನು ಓಲೈಸುವ ಸಲುವಾಗಿ ಬಲಗೈ ಸಮುದಾಯವನ್ನು ಕಡೆಗಣಿಸಿದ್ದಾರೆ ಎಂದು ತಾಲೂಕು ದಲಿತ ಸಮುದಾಯದ ಅಧ್ಯಕ್ಷ ಬ್ಯಾಲಕೆರೆ ಚಿಕ್ಕರಾಜು ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಹಳೆ ಮೀಸಲಾತಿಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಮಾ: 25 ರಂದು ಬೃಹತ್ ಪ್ರತಿಭಟಬಾ ಸಮಾವೇಶದ ಪೂರ್ವ ಸಿದ್ದತಾ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ನ್ಯಾಯಮೂರ್ತಿ ನಾಗಮೋಇಹನ್ ದಾಸ್ ಅವರ ವರದಿಯಲ್ಲಿ ದಲಿತ ಸಮುದಾಯವನ್ನು ಒಡೆದು ಆಳುವ ನೀತಿಯನ್ನು ಅಳವಡಿಸಿಕೊಂಡು ದಲಿತ ನಾಯಕರು ಮತ್ತು ಶ್ರೀಗಳನ್ನು ಅವಹೇಳನ ಮಾಡುವುದರ ಮೂಲಕ ಅವೈಜ್ಞಾನಿಕ ವರದಿಯನ್ನು ಈಗಾಗಲೇ ರಾಜ್ಯ ಸರಕಾರರ ಅಂಗೀಕಾರ ಮಾಡಲು ಕೆಲವು ಕಾನೂನು ತೊಡುಕಗಳಿವೆ, ಹಾಗೂ ನಾಗಮೋಹನ್ ದಾಸ್ ಅವರ ವರದಿಯಲ್ಲಿ ಕಳೆದ 2011 ಜಾತಿಗಣತಿಯಂತೆ ಪ್ರತಿ ಜಾತಿಗಣತಿಯಲ್ಲು ಶೇಖಡ ಹತ್ತರಷ್ಟು ಹೆಚ್ಚಳ ಮಾಡಬೇಕಾಗಿತ್ತು, ಈ ವರದಿಯಲ್ಲಿ ಒಂದು ಸಮುದಾಯವನ್ನು ಓಲೇಸಲು ಬಲಗೈ ಸಮುದಾಯದ ಜಾತಿಗಣತಿಯಲ್ಲಿ ಲೋಪದೋಷಗಳು ಕಂಡಿಬಂದಿರುವುದು ಜಗಜ್ಜಾಹೀರಾಗಿದ ಎಂದರು. ದಲಿತ ಮುಖಂಡರಾದ ಕಲ್ಲುದೇವನಹಳ್ಳಿ ಮಹದೇವ್, ಬೆಳ್ಳಿಯಪ್ಪ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.



ಮಾಗಡಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಏರ್ಪಡಿಸಿದ್ದ ಹಳೆ ಮೀಸಲಾತಿ ಜಾರಿಗಿಳಿಸುವ ನಿಟ್ಟಿನಲ್ಲಿ ಮಾ.25 ರಂದು ಬೃಹತ್ ಪ್ರತಿಭಟಬಾ ಸಮಾವೇಶದ ಪೂರ್ವ ಸಿದ್ಧತಾ ಸಭೆಯನ್ನು ಉದ್ದೇಶಿಸಿ ತಾಲೂಕು ದಲಿತ ಸಮುದಾಯದ ಅಧ್ಯಕ್ಷ ಬ್ಯಾಲಕೆರೆ ಚಿಕ್ಕರಾಜು ಮಾತನಾಡಿದರು.

ರೈತ, ಇತರೆ ಸಂಘಟನೆಗಳ ಆರೋಪ | ಅಧಿಕಾರಿಗಳ ನಿರ್ಲಕ್ಷ್ಯ

ಹಳ್ಳಹಿಡಿದ ಅನ್ನಭಾಗ್ಯ ಯೋಜನೆ

ಕನಕಪುರ: ಬಡತನ ರೇಖೆಯಿಂದ ಕೆಳಗಿರುವ ಜನರು ಪಡಿತರ ದೊರಕದೆ ಹಸಿವಿನಿಂದ ನರಬಾರದೆಂಬ ಸದುದ್ದೇಶದಿಂದ ಜಾರಿಗೆ ತಂದ ಅನ್ನಭಾಗ್ಯ ಯೋಜನೆಯನ್ನು ಕನಕಪುರದಲ್ಲಿ ಹಳ್ಳ ಹಿಡಿಸಲಾಗುತ್ತಿದೆ ಎಂದು ರೈತ ಹಾಗೂ ಇತರೆ ಸಂಘಟನೆಗಳು ಆರೋಪಿಸಿದವು.

ಮಂಗಳವಾರ ಮೆಳೆಕೋಟೆ ರಾಗಿ ಕೇಂದ್ರದಲ್ಲಿ ನ್ಯಾಯಬೆಲೆ ಅಂಗಡಿಯಲ್ಲಿ ಮಾರಾಟ ಮಾಡಬೇಕಿದ್ದ ರಾಗಿಯನ್ನು ತಡೆದು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದರೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು ಮತ್ತು ರಾಗಿ ಕೇಂದ್ರದ ವ್ಯವಸ್ಥಾಪಕರುವಾಹನಗಳನ್ನು ಬಿಟ್ಟು ಕಳುಹಿಸಿದ್ದಾರೆಂದು ರಾಜ್ಯ ರೈತ ಹಿತ ರಕ್ಷಣಾ ಸಮಿತಿ ಸಲಹೆಗಾರ ಪ್ರಶಾಂತ್ ಹೊಸದುರ್ಗ ಆರೋಪಿಸಿದರು.

ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿ ಮಾರಾಟ ಮಾಡಬೇಕಿದ್ದ ಪಡಿತರ ರಾಗಿ ಗ್ರಾಹಕರಿಗೆ ವಿತರಣೆಯಾಗದೆ, ಸರ್ಕಾರದಿಂದ ಸೀಲ್ ಸಮೇತವಾಗಿ ಲಾರಿಗಳಲ್ಲಿ ತುಂಬಿಕೊಂಡು ಬಂದು ನಗರದ ರಾಗಿ ಕೇಂದ್ರದಲ್ಲಿ ಮರುಮಾರಾಟ ಮಾಡುತ್ತಿದ್ದ ಲೋಡ್‌ಗಟ್ಟಲೆ ರಾಗಿಯನ್ನು ತಡೆದು ಅಧಿಕಾರಿಗಳಿಗೆ ಒಪ್ಪಿಸಿದರೇ, ಅದನ್ನು ವಿಚಾರಣೆ ಹಾಗೂ ತಪಾಸಣೆಯನ್ನು ಮಾಡದೆ ಬಿಟ್ಟು ಕಳುಹಿಸಿದ್ದಾರೆ. ಈ ಸಂಬಂಧ ನಾವು ಜಿಲ್ಲಾ ಆಹಾರ ಇಲಾಖೆಯ ಉಪನಿರ್ದೇಶಕರು ಹಾಗೂ ತಾಲೂಕು ಕೃಷಿ ಹಾಗೂ ಆಹಾರ ಇಲಾಖೆ ಅಧಿಕಾರಿಗಳು ಫೋಟೊ ವಿಡಿಯೋ ಸಮೇತ ಹಿಡಿದುಕೊಟ್ಟಿದ್ದರು ಈ ರಾಗಿ ಸರ್ಕಾರದ ಪಡಿತರ ನ್ಯಾಯಬೆಲೆ ರಾಗಿ ಎಂದು ಖಚಿತ ಪಡಿಸಿದ ಅವರು, ಈ ಬಗ್ಗೆ ಕ್ರಮ ಕೈಗೊಳ್ಳದೆ ಉದಾಸೀನ ಮಾಡಿದ್ದಾರೆ. ರಾಜ್ಯದಲ್ಲಿ ಜಾರಿಯಲ್ಲಿರುವ ಅನ್ನಭಾಗ್ಯ ಯೋಜನೆಯ ಆಹಾರ ಧಾನ್ಯಗಳನ್ನು ಲೂಟಿ ಹೊಡೆಯಲು ಬಳಸಲಾಗುತ್ತಿದೆ. ಅಧಿಕಾರಿಗಳ ಬೇಜವಾಬ್ದಾರಿತನದಿಂದ ದಲ್ಲಾಳಿಗಳು ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ನಷ್ಟ ಮಾಡುತ್ತಿದ್ದರೂ ಸಾರ್ವಜನಿಕಪಡಿತರವ್ಯವಸ್ಥೆಯಲ್ಲಿಹಾಸುಹೊಕ್ಕಾಗಿರುವ ತೋರಿಕೆ, ಭ್ರಷ್ಟಾಚಾರ ಹಾಗೂ ಅವ್ಯವಹಾರ ಪ್ರಕರಣಗಳು ಪದೇ ಪದೇ ವರದಿಯಾಗುತ್ತಲೇ ಇದೆ. ಇಂತಹ ಪ್ರಕರಣಗಳನ್ನು ಹಾಗೇ ಬಿಟ್ಟು ಕಳುಹಿಸಿದರೆ ಇದಕ್ಕೆ ಯಾರು ಜವಾಬ್ದಾರರು ಎಂದು ಅವರು ಪ್ರಶ್ನಿಸಿದರು. ಸ್ಥಳದಲ್ಲಿ ಆಹಾರ ಇಲಾಖೆಯ ಜಯಸಿಂಹ, ಕೃಷಿ ಇಲಾಖೆ ಅಧಿಕಾರಿ ರಾಧಾಕೃಷ್ಣ, ಕೃಷಿಕ ಸಮಾಜದ ಅಧ್ಯಕ್ಷ ದೊಡ್ಡವೀರೇಗೌಡ ಸ್ಥಳದಲ್ಲಿ ಹಾಜರಿದ್ದು ಈ ರಾಗಿ ನ್ಯಾಯಬೆಲೆ ಅಂಗಡಿಗೆ ವಿತರಿಸಬೇಕಾದ ರಾಗಿ, ಮತ್ತೆ ರಾಗಿ ಕೇಂದ್ರಕ್ಕೆ ವಾಪಸ್ಸು ಬಂದಿರುವುದನ್ನು ಧೃಡಪಡಿಸಿದರು.



ಕಾಳಸಂತೆಯಲ್ಲಿ ರಾಗಿ ಮಾರಾಟ: ಆರೋಪ

ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಬೊಮ್ಮನಹಳ್ಳಿ ಕುಮಾರಸ್ವಾಮಿ, ರೈತ ಸಂಘದ ಸಂಪತ್ ಹಲವರು ಮಾತನಾಡಿ, ದಲ್ಲಾಳಿಗಳು ನಕಲಿ ಪಹಣಿಗಳನ್ನು ಸೃಷ್ಟಿಮಾಡಿಕೊಂಡು ನಿತ್ಯ ಲೋಡುಗಟ್ಟಲೆ ರಾಗಿಯನ್ನು ರಾಗಿ ಕೇಂದ್ರಕ್ಕೆ ತಂದು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ತಾಲೂಕಿನ ರೈತರಿಗೆ ಗೊತ್ತಾಗದ ರೀತಿಯಲ್ಲಿ ಅವರ ಪಹಣಿಯಲ್ಲಿ ರಾಗಿ ಬೆಳೆಯಲಾಗಿದೆ ಎಂದು ನಮೂದಿಸಿ ರಾಗಿ ಮಾರಟ ಮಾಡುತ್ತಿದ್ದಾರೆ. ಇಂತಹ ಪಹಣಿ ಸರ್ವೆ ನಂಬರ್‌ಗಳಲ್ಲಿ ಪರಿಶೀಲಿಸಿದರೆ ರೈತರು ನಾವು ಹಿಪ್ಪನೇರಳೆ ಬೆಳೆ ಬೆಳೆದಿರುವುದು ಕಂಡು ಬಂದಿದೆ. ಈ ರೀತಿ ನಕಲಿ ಪಹಣಿಗಳನ್ನು ಹಿಡಿದು ರಾಗಿ ಕೇಂದ್ರದ ಅಧಿಕಾರಿ ಶಿವರಾಜ್‌ರವರಿಗೆ ನೀಡಿದರೂ ಅವರು ತೋರುತ್ತಿರುವ ನಿರ್ಲಕ್ಷ್ಯ ಮತ್ತು ಅಸಡ್ಡೆಯಿಂದ ಪಡಿತರ ವಿತರಣೆ ವ್ಯವಸ್ಥೆ ಹಾಳಾಗುತ್ತಿದೆ. ಇಂತಹ ಭ್ರಷ್ಟರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಅವರು ಒತ್ತಾಯಿಸಿದರು.

ನ್ಯಾಯಾಧೀಶರಾದ ಪಂಚಾಕ್ಷರಿ ಎಂ. ಅಭಿಮತ

ಮುಂಚೂಣಿಯಲ್ಲಿ ಮಹಿಳೆ

ರಾಮನಗರ: ಇಂದಿನ ಆಧುನಿಕ ಯುಗದ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆ ಮುಂಚೂಣಿಯಲ್ಲಿದ್ದಾರೆ. ಮಹಿಳೆ ಸಾಧನೆ ಮಾಡಲು ನಿಂತರೆ ಅದಕ್ಕೆ ಕೊನೆ ಎಂಬುದೇ ಇರುವುದಿಲ್ಲ, ಮಹಿಳೆಯರ ಸಾಧನೆಯನ್ನು ಜಗತ್ತಿಗೆ ತೋರಿಸಲು ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ನ್ಯಾ. ಪಂಚಾಕ್ಷರಿ.ಎಂ ತಿಳಿಸಿದರು.

ಇಲ್ಲಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಹಿಳಾ ಸಬಲೀಕರಣ ಘಟಕ ಹಾಗೂ ಜಿಲ್ಲಾ ವಕೀಲರ ಸಂಘದ ವತಿಯಿಂದ ಬೇಟಿ ಬಜಾವೋ - ಬೇಟಿ ಪಡಾವೋ ಅಭಿಯಾನದಡಿ ಆಯೋಜಿಸಲಾಗಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳಾ ದಿನಾಚರಣೆ ಒಂದು ದಿನಕ್ಕೆ ಸೀಮಿತವಲ್ಲ. ವರ್ಷದ 365 ದಿನಗಳು ಮಹಿಳೆಯರ ದಿನವೇ ಆಗಿದೆ. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದರೆ ಸಮಾಜಕ್ಕೆ ಅವರ ಕೊಡುಗೆ ಅಪಾರವಿರುತ್ತದೆ, ಆದ್ದರಿಂದ ಯಾವುದೇ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು.



ಪುರುಷನಿಗೆ ಸರಿಸಮಾನವಾದ ಹಕ್ಕುಗಳನ್ನು ಭಾರತದ ಸಂವಿಧಾನ ಎಲ್ಲಾ ಹೆಣ್ಣು ಮಕ್ಕಳಿಗೂ ನೀಡಿದೆ, ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಜಿ. ಧನರಾಜು ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿರುವ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಹಾಗೂ ಸಾಮಾಜಿಕ ಕಾರ್ಯಕರ್ತೆ ಚಿತ್ರರಾವ್ ಅವರನ್ನು ಸನ್ಮಾನಿಸಲಾಯಿತು ಹಾಗೂ ಅಂಗನವಾಡಿ ಮೇಲ್ವಿಚಾರಕಿಯರಿಗೆ ಪ್ರಶಸ್ತಿ ನೀಡಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ದಿನೇಶ ಜೆ.ಆರ್., ಜಿಲ್ಲಾ ನಿರೂಪಣಾಧಿಕಾರಿ ಡಾ. ಲಕ್ಷ್ಮೀದೇವಿ ವೇದಿಕೆಯಲ್ಲಿದ್ದರು. ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಮೇಲ್ವಿಚಾರಕರು ಹಾಗೂ ಇತರರು ಇದ್ದರು.

ಡಿವಿಜಿ ಸಮಾಜಕ್ಕೆ ದಾರಿದೀಪ

ರಾಮನಗರ: ಡಿ.ವಿ. ಗುಂಡಪ್ಪ ಅವರ ಪತ್ರಿಕಾ ವೃತ್ತಿ ಸಮಾಜಕ್ಕೆ ದಾರಿದೀಪವಾಗಿದ್ದು, ಸತ್ಯ, ನೈತಿಕತೆ ಮತ್ತು ಜ್ಞಾನವನ್ನು ಜನರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ಜೀವನ ಮತ್ತು ಕಾರ್ಯಗಳು ಇಂದಿನ ಪತ್ರಕರ್ತರಿಗೆ ಮಾದರಿಯಾಗಿವೆ ಎಂದು ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಶಿವಲಿಂಗಯ್ಯ ವಿಭೂತಿಕೆರೆ ತಿಳಿಸಿದರು.

ಇಲ್ಲಿನ ಪತ್ರಕರ್ತರ ಸಂಘದ ಕಚೇರಿಯಲ್ಲಿ ಮಂಗಳವಾರ ಡಿವಿಜಿ ಜನ್ಮ ದಿನದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಅದ್ಯಕ್ಷತೆ ವಹಿಸಿ ಮಾತನಾಡಿದ ಅವರು, ಡಿವಿಜಿ ಅವರು ಕನ್ನಡ ಸಾಹಿತ್ಯ, ಚಿಂತನೆ ಮತ್ತು ಸಾರ್ವಜನಿಕ ಬದುಕಿನ ಮಹತ್ವದ ವ್ಯಕ್ತಿಗಳಲ್ಲಿ ಒಬ್ಬರು. ಅವರ ಪತ್ರಿಕಾ ವೃತ್ತಿ ಸಮಾಜದ ಜಾಗೃತಿ, ನೈತಿಕತೆ ಮತ್ತು ಚಿಂತನೆಯ ವಿಸ್ತರಣೆಗೆ ಮಹತ್ತರವಾಗಿ ಕೊಡುಗೆ ನೀಡಿದೆ ಎಂದರು.

ಡಿವಿಜಿ ಅವರ ಪತ್ರಿಕಾ ವೃತ್ತಿಯ ಮೂಲ ಉದ್ದೇಶ ಸಮಾಜದಲ್ಲಿ ಜ್ಞಾನವನ್ನು ಹರಡುವುದಾಗಿತ್ತು. ಸತ್ಯವನ್ನು ಬಹಿರಂಗಪಡಿಸುವುದು ಮತ್ತು ಜನರಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವುದು ಆಗಿತ್ತು. ಡಿ.ವಿ.ಜಿ ಅವರು ಪತ್ರಿಕೋದ್ಯಮದ ಮೂಲಕ ಕನ್ನಡ ಭಾಷೆಯ ಬೆಳವಣಿಗೆಗೂ ಮಹತ್ವದ ಕೊಡುಗೆ ನೀಡಿದ್ದಾರೆ. ಅವರ ಬರಹಗಳು ಕನ್ನಡದ ಸರಳತೆ ಮತ್ತು ಶೈಲಿಯನ್ನು ಹೆಚ್ಚಿಸಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ಮಂಜುನಾಥ್ ಮಾತನಾಡಿ, ಡಿವಿಜಿ ಅವರು 'ಭಾರತ', 'ಕರ್ನಾಟಕ' ಮುಂತಾದ ಪತ್ರಿಕೆಗಳ ಮೂಲಕ ತಮ್ಮ ಚಿಂತನೆಗಳನ್ನು ಜನರಿಗೆ ತಲುಪಿಸಿದರು. ಪತ್ರಿಕೋದ್ಯಮವನ್ನು ಅವರು ವ್ಯವಹಾರವಾಗಿ ನೋಡುವುದಕ್ಕಿಂತ, ಒಂದು ಸಾಮಾಜಿಕ ಜವಾಬ್ದಾರಿಯಾಗಿ ಕಂಡಿದ್ದರು. ಆ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟ, ಸಮಾಜ ಸುಧಾರಣೆ, ಶಿಕ್ಷಣ ಮತ್ತು ಸಂಸ್ಕೃತಿ ಬಗ್ಗೆ ಜನರಲ್ಲಿ ಅರಿವು ಮೂಡಿಸುವಲ್ಲಿ ಅವರ ಲೇಖನಗಳು ಪ್ರಮುಖ ಪಾತ್ರ ವಹಿಸಿವೆ ಎಂದು ಹೇಳಿದರು.

ಡಿ.ವಿ.ಜಿ ಅವರ ಬರವಣಿಗೆ ಸರಳ, ಸ್ಪಷ್ಟ ಮತ್ತು ಆಳವಾದ ಅರ್ಥ ಹೊಂದಿದ್ದವು. ಅವರು ಯಾವ ವಿಷಯವನ್ನಾದರೂ ಸಮತೋಲನದಿಂದ ವಿಶ್ಲೇಷಿಸಿ, ಓದುಗರಿಗೆ ನಿಜವಾದ ದಾರಿದೀಪವಾಗುತ್ತಿದ್ದರು. ಪತ್ರಕರ್ತನಾಗಿ ಅವರು ಸತ್ಯನಿಷ್ಠೆ, ನಿಷ್ಪಕ್ಷಪಾತತೆ ಮತ್ತು ಜವಾಬ್ದಾರಿತನವನ್ನು ಕಟ್ಟುನಿಟ್ಟಾಗಿ ಪಾಲಿಸಿದರು ಎಂದರು.

ಅವರು ಜನರ ಸಮಸ್ಯೆಗಳನ್ನು ತಮ್ಮ ಸಮಸ್ಯೆಗಳಂತೆ ಕಂಡು, ಅದರ ಪರಿಹಾರಗಳ ಬಗ್ಗೆ ಚಿಂತನೆ ಮಾಡುವುದು. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವಿಷಯಗಳಲ್ಲಿ ಅವರು ನೀಡಿದ ಅಭಿಪ್ರಾಯಗಳು ಜನಮನಗಳಲ್ಲಿ ಪ್ರಭಾವ ಬೀರಿವೆ ಎಂದರು.



ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಮಾಗಡಿ: ಮಾ.18 ರಿಂದ 2026ರ ಸಾಲಿನ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆ ನಡೆಯಲಿದ್ದು ತಾಲ್ಲೂಕಿನಾದ್ಯಂತ ಪರೀಕ್ಷಾ ಕೇಂದ್ರಗಳಲ್ಲಿ ಸಕಲ ಸೌಲಭ್ಯ ಹಾಗೂ ಸಿದ್ಧತೆಗಳನ್ನು ಪೂರೈಸಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಚಂದ್ರಶೇಖರ್ ಅವರು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲ್ಲೂಕಿನ ಒಟ್ಟು ಪರೀಕ್ಷಾ ಕೇಂದ್ರಗಳು 09, ಒಟ್ಟು ಪರೀಕ್ಷಾರ್ಥಿಗಳು: 2638 ರೆಗ್ಯುಲರ್ ವಿದ್ಯಾರ್ಥಿಗಳು: 2569 ಖಾಸಗಿ 36, ರಿಪೀಟರ್ 33, ಗಂಡು ಮಕ್ಕಳು-1317, ಹೆಣ್ಣು ಮಕ್ಕಳು 1321 ಪರೀಕ್ಷೆ ಬರೆಯುತ್ತಿದ್ದಾರೆ.

ನಿಗದಿಪಡಿಸಲಾದ ಪರೀಕ್ಷಾ ಕೇಂದ್ರಗಳು: ತಾಲ್ಲೂಕಿನಲ್ಲಿ ಈ ಕೆಳಗಿನ 9 ಕೇಂದ್ರಗಳನ್ನು ಗುರುತಿಸಲಾಗಿದ್ದು, ಅಲ್ಲಿ ಕುಡಿಯುವ ನೀರು, ಆಸನ ವ್ಯವಸ್ಥೆ ಹಾಗೂ ಶೌಚಾಲಯ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ನೀಡಲಾಗಿದೆ. ಎಸ್‌ಜೆಎಸ್ ಇಂಗ್ಲಿಷ್ ಶಾಲೆ, ಮಾಗಡಿ, ಬಾಲಾಜಿ ನ್ಯಾಷನಲ್ ಪಬ್ಲಿಕ್ ಶಾಲೆ, ಮಾಗಡಿ, ಮಾರುತಿ ಪಬ್ಲಿಕ್ ಶಾಲೆ ಮಾಗಡಿ ಟೌನ್, ಕೆಪಿಎಸ್ ಕುದೂರು, ಎಸ್‌ಜೆಎಸ್ ಇಂಗ್ಲಿಷ್ ಶಾಲೆ, ಗುಡೇಮಾರನಹಳ್ಳಿ, ಕೆಪಿಎಸ್ ತಿಪ್ಪಸಂದ್ರ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹುಲಿಕಟ್ಟೆ, ಸರ್ಕಾರಿ ಪ್ರೌಢಶಾಲೆ ಸುಗ್ಗನಹಳ್ಳಿ, ಎಸ್‌ಎಸ್‌ಆರ್ ಎಚ್ ಎಸ್ ಕೆ ಜೆ ಮಠ ಪರೀಕ್ಷಾ ಅಕ್ರಮಗಳಿಗೆ ಅವಕಾಶವಿಲ್ಲದಂತೆ ಬಿಗಿ ಭದ್ರತೆ ಹಾಗೂ ಸುಗಮ ನಿರ್ವಹಣೆಗೆ ಎಲ್ಲಾ ಕೇಂದ್ರಗಳ ಮುಖ್ಯಸ್ಥರಿಗೆ ಅಗತ್ಯ ಸೂಚನೆಗಳನ್ನು ನೀಡಲಾಗಿದೆ ಎಂದು ಬಿಇಒ ಚಂದ್ರಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಸ್ವಾಗತ ಮಾಡಲು ಶಿಕ್ಷಕರು ಗುಲಾಬಿ ಹೂವ ನೀಡಿ ಪರೀಕ್ಷಾ ಕೇಂದ್ರಕ್ಕೆ ಬರಮಾಡಿಕೊಳ್ಳಲಿದ್ದು ಕಳೆದ ಬಾರಿ ಮಾಗಡಿ ತಾಲ್ಲೂಕಿನಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಲಿತಾಂಶ ಬಂದಿದ್ದು ಈ ಬಾರಿ ಕೂಡ ಮಾಗಡಿ ತಾಲೂಕು ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆಯುವ ನಿರೀಕ್ಷೆಯಿದ್ದು ಎಲ್ಲಾ ವಿದ್ಯಾರ್ಥಿಗಳು ಉತ್ತಮ ಅಂಕ ಗಳಿಸಲಿ ಎಂದು ಚಂದ್ರಶೇಖರ್ ಹಾರೈಸಿದರು.

ಕೇಬಲ್ ಕಳ್ಳರಿಗೆ ಗ್ರಾಮಸ್ಥರಿಂದ ಧರ್ಮದೇಟು

ಮಾಗಡಿ: ಕಳೆದ ಕೆಲವು ದಿನಗಳಿಂದ ರೈತರ ಪಂಪ್‌ಸೆಟ್ ಹಾಗೂ ಬೋರ್‌ವೆಲ್ ಕೇಬಲ್‌ಗಳನ್ನು ಕಳ್ಳತ ಪ್ರಕರಣ ಹೆಚ್ಚಾಗಿತ್ತು ಮಂಗಳವಾರ ಕೇಬಲ್ ಕಳ್ಳತನ ಮಾಡಿದ ಇಬ್ಬರು ಆರೋಪಿಗಳನ್ನು ಗ್ರಾಮಸ್ಥರು ಮಾಲು ಸಮೇತ ಹಿಡಿದು ಪೊಲೀಸರಿಗೊಪ್ಪಿಸಿರುವ ಘಟನೆ ನಡೆದಿದೆ.



ತಾಲ್ಲೂಕಿನ ಬೆಳಗವಾಡಿ ಗ್ರಾಮದ ತಿಮ್ಮೇಗೌಡ (35) ಮತ್ತು ಗಂಗಯ್ಯ (43) ಬಂಧಿತ ಆರೋಪಿಗಳು ಇವರು ಮಂಗಳವಾರ ಬೆಳಗ್ಗೆ ಕುಣಿಗಲ್ ತಾಲ್ಲೂಕಿನ ಚೌಡನಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಂಟಯ್ಯನಪಾಳ್ಯದ ಬಳಿ ಬೋರ್‌ವೆಲ್ ಕೇಬಲ್ ಕಳ್ಳತನ ಮಾಡಿ ಬೈಕ್‌ನಲ್ಲಿ ಸಾಗಿಸುತ್ತಿದ್ದು ಬೈಕ್ ನಲ್ಲಿ ಪೆಟ್ರೋಲ್ ಖಾಲಿಯಾಗಿ ರಸ್ತೆ ಪಕ್ಕದ ಬೇಲಿಗೆ ಕಳ್ಳತನ ಮಾಡಿದ ಕೇಬಲ್ ವೈರ್ ಹಾಕುವ ವೇಳೆ ಅನುಮಾನಗೊಂಡ ಗ್ರಾಮಸ್ಥರು ತಡೆದು ತಪಾಸಣೆ ನಡೆಸಿದಾಗ ಕಳ್ಳತನದ ಪ್ರಕರಣ ಬೆಳಕಿಗೆ ಬಂದಿದೆ.

ರೈತರ ಬೋರ್‌ವೆಲ್ ಕೇಬಲ್‌ಗಳು ಪದೇ ಪದೇ ಕಳ್ಳತನವಾಗುತ್ತಿರುವುದರಿಂದ ಕಂಗೆಟ್ಟಿದ್ದ ಗ್ರಾಮಸ್ಥರಿಗೆ ಸಿಕ್ಕಿಬಿದ್ದ ಕಳ್ಳರನ್ನು ಮರಕ್ಕೆ ಕಟ್ಟಿ ಹಾಕಿ ಸರಿಯಾಗಿ ಧರ್ಮದೇಟು ನೀಡಿದ್ದಾರೆ ನಂತರ ವಿಷಯವನ್ನು ಪೊಲೀಸರಿಗೆ ತಿಳಿಸಲಾಯಿತು.

ಮಾಹಿತಿ ತಿಳಿದ ಕೂಡಲೇ ಸ್ಥಳಕ್ಕೆ ಆಗಮಿಸಿದ ಹುಲಿಯೂರುದುರ್ಗ ಪೊಲೀಸರು ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ ಕಳ್ಳತನ ನಡೆದ ಸ್ಥಳವು ಮಾಗಡಿ ವ್ಯಾಪ್ತಿಗೆ ಬರುವುದರಿಂದ ಆರೋಪಿಗಳನ್ನು ಮಾಗಡಿ ಪೊಲೀಸರಿಗೆ ಹಸ್ತಾಂತರಿಸಲಾಗಿದೆ ಮಾಗಡಿ ಪೊಲೀಸರು ಆರೋಪಿಗಳನ್ನು ಕಳ್ಳತನ ನಡೆದ ಸ್ಥಳಕ್ಕೆ ಕರೆದೊಯ್ದು ಮಹಾಜರು ಪ್ರಕ್ರಿಯೆ ಪೂರೈಸಿದ್ದು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.

ಕುಡಿಯುವುದಕ್ಕಾಗಿ ಕಳ್ಳತನ ಮಾಡಿದ ಆರೋಪ

ಇಬ್ಬರೂ ಆರೋಪಿಗಳು ಕುಡಿಯುವ ಚಟ ಇದ್ದ ಹಿನ್ನೆಲೆಯಲ್ಲಿ ಹಣ ಸಿಗದ ಕಾರಣ ಕೇಬಲ್ ಕಳ್ಳತನ ಮಾಡಿರುವುದಾಗಿ ಗ್ರಾಮಸ್ಥರು ಅನುಮಾನ ವ್ಯಕ್ತಪಡಿಸಿದ್ದಾರೆ ಗಂಗಯ್ಯ ಎಂಬುವರಿಗೆ ಜಮೀನು ಕೂಡ ಇದ್ದು ಕುಡಿಯುವ ಚಟ ಬೆಳೆಸಿಕೊಂಡಿದ್ದ ಎಂದು ತಿಳಿಸಿದ್ದಾರೆ ಈಗ ಬೇಸಿಗೆಯಲ್ಲಿ ಬೆಳೆಯನ್ನೇ ಉಳಿಸಿಕೊಳ್ಳುವುದು ಕಷ್ಟದ ಸಮಯದಲ್ಲಿ ಈ ರೀತಿ ಬೋರ್ ವೆಲ್ ನ ಕೇಬಲ್ ಕಳ್ಳತನ ಮಾಡಿದರೆ ರೈತರು ಮತ್ತಷ್ಟು ಸಂಕಷ್ಟಕ್ಕೆ ಸಿಲುಕುತ್ತಾರೆ ಇಂತಹ ಪ್ರಕರಣಗಳು ಮರುಕಳಿಸಿದಂತೆ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಬಸವರಾಜಪ್ಪ ಅಭಿಮತ

ಡಿ.ವಿ.ಗುಂಡಪ್ಪ ಪತ್ರಿಕೋದ್ಯಮದ ಭೀಷ್ಮ

ತಿಪಟೂರು: ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಮಂಗಳವಾರ ಕಾಲೇಜು ಪತ್ರಿಕೋದ್ಯಮ ವಿಭಾಗ ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ತಾಲೂಕು ಘಟಕ ತಿಪಟೂರು ಸಹಯೋಗದೊಂದಿಗೆ ಪತ್ರಕರ್ತರ ಸಂಘದ ಸಂಸ್ಥಾಪಕರಾದ ಡಿ.ವಿ.ಗುಂಡಪ್ಪನವರ ಜನ್ಮದಿನವನ್ನು ಆಚರಣೆ ಮಾಡಲಾಯಿತು.

ಕಾರ್ಯಕ್ರಮವನ್ನು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಬಸವರಾಜಪ್ಪ ಉದ್ಘಾಟಿಸಿ ಮಾತನಾಡಿ ಮೆಟ್ರಿಕ್ ಫೇಲ್ ಆಗಿದ್ದ ಡಿ.ವಿ.ಗುಂಡಪ್ಪ ಮುಂದೆ ಕನ್ನಡ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿ ಆಧುನಿಕ ಸರ್ವಜ್ಞ ಎನಿಸಿಕೊಂಡರೆ, ಪತ್ರಿಕೋದ್ಯಮದಲ್ಲಿನ ಅವರ ಸಾಧನೆಗೆ ಕನ್ನಡ ಪತ್ರಿಕೋದ್ಯಮದ ಭೀಷ್ಮ ಎಂದು ಕರೆಸಿಕೊಳ್ಳುವಂತೆ ಬೆಳೆದದ್ದು ನಿಜಕ್ಕೂ ಆದರ್ಶನೀಯ.

ಅವರು ಡಿವಿಜಿ ಅವರ ಬದುಕು ಬರಹದ ಕುರಿತು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡುತ್ತ, ಗುಂಡಪ್ಪನವರು ಬಡತನ ಕುಟುಂಬದಿಂದ ಬಂದು, ಮೆಟ್ರಿಕ್ ಫೇಲ್ ಆಗಿಯೂ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸುವ ಮಟ್ಟಿಗೆ ಬೆಳೆದದ್ದು ವಿದ್ಯಾರ್ಥಿಗಳಿಗೆ ಮಾದರಿ. ಅವರ ಆದರ್ಶಗಳ ಮೇಲೆಯೇ ಇಂದು ತಿಪಟೂರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಕಾರ್ಯ ನಿರ್ವಹಿಸುತ್ತಿದೆ ಎಂದರು.



ಪತ್ರಕರ್ತರ ಸಂಘದ ಅಧ್ಯಕ್ಷ ದಯಾನಂದ್ ಟಿ.ಎಸ್ ಮಾತನಾಡಿ, ಪತ್ರಿಕೋದ್ಯಮ ಡಿವಿಜಿ ಅವರಿಗೆ ಕೇವಲ ವೃತ್ತಿಯಾಗಿರಲಿಲ್ಲ, ಅದು ಜನತೆಯಲ್ಲಿ ಜಾಗೃತಿ ಮೂಡಿಸುವ ಮಾರ್ಗವಾಗಿತ್ತು. ಆದರೆ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪತ್ರಿಕೆಗಳು ನೈಜತೆಯ ಅರಿವಿರದೇ ಸುದ್ದಿ ಬಿತ್ತರಿಸಿ, ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿವೆ ಎಂದು ವಿ?ಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಶಶಿಕುಮಾರ್.ಎಚ್.ಸಿ ವಿದ್ಯಾರ್ಥಿಗಳು ದಿನನಿತ್ಯ ಪತ್ರಿಕೆಗಳನ್ನು ಓದುವ ಅಭ್ಯಾಸ ರೂಢಿಸಿಕೊಳ್ಳಬೇಕು. ಇದರಿಂದ ನಿಮ್ಮ ಜ್ಞಾನವನ್ನು ವೃದ್ಧಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಹೆಚ್ಚು ಸಹಾಯವಾಗುತ್ತದೆ. ನಾನು ಕೂಡ ನಿತ್ಯ ಕೈಸಿಗುವ ಪತ್ರಿಕೆಗಳಲ್ಲಿನ ಸುದ್ದಿ ಮತ್ತು ಸಂಪಾದಕೀಯ ವಿಭಾಗ ಓದುತ್ತಿರುತ್ತೇನೆ ಎಂದರು.

ಸಾಹಿತ್ಯ ಕ್ಷೇತ್ರದಲ್ಲಿ ಅವರು ಕನ್ನಡ, ಇಂಗ್ಲಿ? ಹಾಗೂ ಸಂಸ್ಕೃತ ಭಾ?ಗಳಲ್ಲಿ 60ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದು, ಅವರ ಅನೇಕ ಕೃತಿಗಳು ಇಂದಿಗೂ ಪಠ್ಯಪುಸ್ತಕಗಳಲ್ಲಿ ಸ್ಥಾನ ಪಡೆದಿವೆ. ವಿಶೇ?ವಾಗಿ ಅವರು ಜನಮನಗಳಲ್ಲಿ ಶಾಶ್ವತ ಸ್ಥಾನ ಪಡೆದಿದ್ದು, ಕಗ್ಗಗಳ ಮೂಲಕ ಬದುಕಿನ ತತ್ವಗಳು, ಮಾನವೀಯ ಮೌಲ್ಯಗಳು, ಧರ್ಮ ಮತ್ತು ಮನು?ಯ ಮನು?ರ ನಡುವಿನ ಸಂಬಂಧಗಳ ಮಹತ್ವವನ್ನು ಸರಳವಾಗಿ ವಿವರಿಸಿದ್ದಾರೆ.

ಕಾರ್ಯಕ್ರಮದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಸಿದ್ದೇಶ್ವರ ಸಿಎನ್ , ಉಪಾಧ್ಯಕ್ಷ ಪ್ರಶಾಂತ್ ಕರೀಕೆರೆ , ಖಜಾಂಚಿ ಕುಮಾರಸ್ವಾಮಿ, ನಿರ್ದೇಶಕರಾದ ಟಿಸಿಎಸ್ ಮೂರ್ತಿ, ಮನೋಹರ್ ರಂಗಾಪುರ, ಕಿರಣ್, ಸದಸ್ಯರಾದ ಲೋಕೇಶ್, ಮಿಥುನ್ ಟಿ.ವೈ, ಪ್ರಕಾಶ್, ರೋಹನ್, ರವಿಕುಮಾರ್, ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ.ಶಿವಕುಮಾರ.ಸಿ.ಜಿ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಹಣಮಂತ ಕಾಂಬಳೆ, ಕನ್ನಡ ವಿಭಾಗದ ಮುಖ್ಯಸ್ಥೆ ಸ್ಮಿತಾ, ಸಮಾಜ ಕಾರ್ಯ ವಿಭಾಗದ ಗಂಗಾಧರ್, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಗಡಿ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸೋಮಶೇಖರ್ ಸಲಹೆ

ಗಂಭೀರವಾಗಿ ತರಬೇತಿ ಪಡೆಯಿರಿ

ಚಿಕ್ಕನಾಯಕನಹಳ್ಳಿ: ರಾಜ್ಯದಲ್ಲೇ ಯಾರೂ ಮಾಡದಂತಹ ಶಿಕ್ಷಣಕ್ಷೇತ್ರದಲ್ಲಿ ಉತ್ತಮ ಸೇವೆ ಮಾಡುತ್ತಿರುವ ಶಾಸಕ ಸಿ.ಬಿ.ಸುರೇಶ್‌ಬಾಬು ಇವರ ಎಸ್.ಬಿ. ಚಾರಿಟಬಲ್ ಟ್ರಸ್ಟ್ ವತಿಯಿಂದ ನಡೆಯುತ್ತಿರುವಂತಹ ಉಚಿತ ಸಿಇಟಿ ನೀಟ್ ಜೆಇಇ ತರಬೇತಿಯನ್ನು ಉಚಿತ ಎಂದು ಉದಾಸೀನ ಮಾಡದೇ ಗಂಭೀರವಾಗಿ ಪರಿಗಣಿಸಿ ತರಬೇತಿ ಪಡೆದು ಭವಿಷ್ಯವನ್ನು ರೂಪಿಸಿಕೊಳ್ಳಿ ಎಂದು ಗಡಿ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಸಿ.ಸೋಮಶೇಖರ್ ತಿಳಿಸಿದರು.

ಪಟ್ಟಣದ ತೀನಂಶ್ರೀ ಭವನದಲ್ಲಿ ಎಸ್.ಬಿ.ಚಾರಿಟಬಲ್ ಟ್ರಸ್ಟ್ ವತಿಯಿಂದ ಜ್ಞಾನಕಲ್ಪ ಉಚಿತ ಸಿ.ಇ.ಟಿ ನೀಟ್ , ಜೆಇಇ ತರಬೇತಿ ಶಿಬಿರದ ಉದ್ಘಾಟನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ತರಬೇತಿಯು ಒಂದು ರೀತಿಯ ಜ್ಞಾನದ ಪ್ರಯೋಗಶಾಲೆಯಂತಿದ್ದು ಇದರಲ್ಲಿ ತರಬೇತಿ ಪಡೆದು ಉತ್ತಮ ಜ್ಞಾನವಂತರಾಗಿ ನಿಮ್ಮ ಭವಿಷ್ಯವನ್ನು ಕಟ್ಟಿಕೊಳ್ಳುವ ಮೂಲಕ ನಿಮ್ಮ ಪೋಷಕರ ಕಷ್ಟಗಳ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಶಾಸಕ ಸಿ.ಬಿ.ಸುರೇಶ್‌ಬಾಬು ಗ್ರಾಮೀಣ ಭಾಗದ ನಮ್ಮ ಮಕ್ಕಳಿಗಾಗಿ ಅವರ ಭವಿಷ್ಯಕ್ಕಾಗಿ ಸಮಾನರು ಸೇರಿಕೊಂಡು ಸಮಾಜಸೇವೆ ಮಾಡಬೇಕೆಂದು ಈ ಉಚಿತ ಸಿಇಟಿ ತರಬೇತಿಯನ್ನು ಆಯೋಜಿಸಿದ್ದು ಕಳೆದ 13ವರ್ಷಗಳಿಂದ ಉಚಿತವಾಗಿ ನೀಡಲಾಗುತ್ತಿದೆ ಈ ಬಾರಿ ವರ್ಷದ ಆರಂಭದಿಂದಲೂ 27 ಭಾನುವಾರಗಳಂದು ಪ್ರಥಮ ಹಾಗೂ ದ್ವಿತಿಯ ಪಿಯುಸಿ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ ಎಂದರು.



ಕಾರ್ಯಕ್ರಮದಲ್ಲಿ ಸಿಇಟಿ ತರಬೇತಿ ಶಿಬಿರದ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷ ಸಾ.ಚಿ.ನಾಗೇಶ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪಿಎಲ್‌ಡಿ ಬ್ಯಾಂಕ್‌ನ ನಿರ್ದೇಶಕ ರಾಮಚಂದ್ರಯ್ಯ , ಸಂಪನ್ಮೂಲ ವ್ಯಕ್ತಿ ಉಪನ್ಯಾಸಕ ಕೃಷ್ಣಚೈತನ್ಯ, ಸಮಿತಿಯ ಸದಸ್ಯ ಕುಮಾರ್, ನಾಗರಾಜು, ಪ್ರಾಂಶುಪಾಲ ಕೃಷ್ಣಮೂರ್ತಿ ಮಾತನಾಡಿದರು. ಈ ಸಂದರ್ಭದಲ್ಲಿ ತರಬೇತಿಯ ವಿದ್ಯಾರ್ಥಿಗಳಿಗೆ ಅಗತ್ಯ ಸಲಕರಣೆಗಳನ್ನು ವಿತರಿಸಲಾಯಿತು. ಸಮಾರಂಭದಲ್ಲಿ ನಿವೃತ್ತ ತಹಸೀಲ್ದಾರ್ ಲಕ್ಷ್ಮಣಪ್ಪ, ಪ್ರಾಂಶುಪಾಲರುಗಳಾದ ಎಂ.ಚನ್ನಬಸವಯ್ಯ, ಸಿ.ಬಿ.ಪರಮೇಶ್ವರ್, ಕಾರ್ಯದರ್ಶಿ ಸಿ.ಟಿ.ಸುರೇಶ್‌ಕುಮಾರ್ ಸೇರಿದಂತೆ ಸಮಿತಿಯ ಸದಸ್ಯರುಗಳು ಹಾಜರಿದ್ದರು.

ಕಿರುಸುದ್ದಿ

2.5 ಲಕ್ಷ ಮೌಲ್ಯದ ಅಕ್ರಮ ಗಾಂಜಾ ವಶ

ಬಂಗಾರಪೇಟೆ: 2 ಲಕ್ಷ ಬೆಲೆ ಬಾಳುವ ಗಾಂಜಾ ಅಕ್ರಮವಾಗಿ ಮಾರಾಟ ಮಾಡಲು ಇಟ್ಟುಕೊಂಡು ವ್ಯಕ್ತಿಯೊಬ್ಬರಿಗೆ ಕಾಯುತ್ತಿದ್ದ ವೇಳೆ ಬಂಗಾರಪೇಟೆ ಅರಕ್ಷಕ ನಿರೀಕ್ಷಕ ಸಿ.ರವಿಕುಮಾರ್ ಹಾಗೂ ಅರಕ್ಷಕ ಉಪನಿರೀಕ್ಷಕ ಪ್ರಕಾಶ್ ನರಸಿಂಗ್ ನೇತೃತ್ವದಲ್ಲಿ ಮಾಲು ಸಮೇತ ಆರೋಪಿಯನ್ನು ಬಂಧಿಸಿರುವ ಘಟನೆ ಪಟ್ಟಣದ ದೇಶಿಹಳ್ಳಿ ರೈಲ್ವೆ ಗೇಟ್ ಬಳಿ ನಡೆದಿದೆ. ಇಂದು ಸಂಜೆ 4 ಗಂಟೆ ಸಮಯದಲ್ಲಿ ಪಟ್ಟಣದ ದೇಶಿಹಳ್ಳಿಯ ಬಂಗಾರಪೇಟೆ-ಮಾರಿಕುಪ್ಪಂ ರೈಲ್ವೆ ಗೇಟ್ ಕ್ರಾಸಿಂಗ್ ಬಳಿ ಇರುವ ಶ್ರೀ ಆಂಜನೇಯಸ್ವಾಮಿ ದೇವಾಲಯದ ಬಳಿ ಬಿಹಾರ ರಾಜ್ಯದ ಮಧುಬನಿ ಜಿಲ್ಲೆಯ ವಾಸಿ ಮುಕೇಶ್ ಕುಮಾರ್ ಸಿಂಗ್ ಅಮನ್ ಬಿನ್ ವಿಜಯಕುಮಾರ್ ಸಿಂಗ್ (24) ಎಂಬುವವನನ್ನು ವಶಕ್ಕೆ ಪಡೆದು ಆತನ ಬಳಿ ಇದ್ದ 4.160 ಕೆಜಿ ತೂಕದ ಸುಮಾರು 2.5 ಲಕ್ಷ ಬೆಲೆ ಬಾಳುವ ಗಾಂಜಾ ಮಾದಕ ವಸ್ತುವನ್ನು ವಶಪಡಿಸಿಕೊಳ್ಳಲಾಗಿದೆ. ಕೆಜಿಎಫ್ ಜಿಲ್ಲಾ ಪೊಲೀಸ್ ಡಿವೈಎಸ್‌ಪಿ ವಿ.ಲಕ್ಷ್ಮಯ್ಯ ಮಾರ್ಗದರ್ಶನದಲ್ಲಿ ಬಂದ ಖಚಿತ ಮಾಹಿತಿ ಮೇರೆಗೆ ತಹಸೀಲ್ದಾರ್ ಕೆ.ಎನ್.ಸುಜಾತ, ಕಂದಾಯ ನಿರೀಕ್ಷಕ ಅಜಯ್, ಗ್ರಾಮ ಆಡಳಿತಾಧಿಕಾರಿ ಅಮರೇಶ್, ಪೊಲೀಸ್ ಅರಕ್ಷಕ ಉಪನಿರೀಕ್ಷಕ ಪ್ರಕಾಶ್ ನರಸಿಂಗ್, ಸಿಬ್ಬಂದಿಯವರಾದ ಶ್ರೀನಿವಾಸ್, ಸಂತೋಷ್ ಸಿದ್ದಾಪುರ, ಮುನೇಂದ್ರ, ಜಿ.ಆರ್.ಮಧುಕುಮಾರ್, ಪುರುಷೋತ್ತಮ್ ಜಂಟಿಯಾಗಿ ಪಟ್ಟಣದ ಕಾಮಸಮುದ್ರ ರಸ್ತೆಯ ದೇಶಿಹಳ್ಳಿ ರೈಲ್ವೇ ಗೇಟ್ ಬಳಿ ಇರುವ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಮಾದಕ ವಸ್ತು ಗಾಂಜಾ ಮಾರಾಟ ಕ್ಕಾಗಿ ಇಟ್ಟುಕೊಂಡಿದ್ದ ವ್ಯಕ್ತಿ ಹಾಗೂ ವಸ್ತುಗಳೊಂದಿಗೆ ಬಂಧಿಸಲಾಗಿದೆ, ಬಂಗಾರಪೇಟೆ ಪೊಲೀಸ್ ಇಲಾಖೆ ಹಾಗೂ ಕಂದಾಯ ಇಲಾಖೆ ಜಂಟಿಯಾಗಿ ಕಾರ್ಯಾಚರಣೆ ನಡೆಸಿದ ಸಿಬ್ಬಂದಿಯ ಕಾರ್ಯದಕ್ಷತೆಯನ್ನು ಕೆಜಿಎಫ್ ಎಸ್ಪಿ ಶಿವಾಂಶು ರಜಪೂತ್ ಪ್ರಶಂಸಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಿದ್ಧತೆ

ಮಾಲೂರು: ಮಾರ್ಚ್ 18 ರಿಂದ 10ನೇ ತರಗತಿ ಪರೀಕ್ಷೆ ನಡೆಯುತ್ತಿದ್ದು ಇದಕ್ಕೆ ಟೇಕಲ್ ಪರೀಕ್ಷಾ ಕೇಂದ್ರವು ಸಕಲ ಸಿದ್ಧತೆ ನಡೆಸಿದೆ. ಈ ಬಗ್ಗೆ ಪರೀಕ್ಷಾ ಕೇಂದ್ರ ಮುಖ್ಯ ಅಧೀಕ್ಷಕರಾದ ರವಿಶಂಕರ್‌ರವರು ಮಾತನಾಡಿ ಒಟ್ಟು 21 ರೂಮ್‌ಗಳನ್ನು ಮಾಡಿದ್ದು 506 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಮೂಲಸೌಲಭ್ಯಗಳೊಂದಿಗೆ ಪೂರ್ವ ಸಿದ್ಧತಾ ಕ್ರಮ ಕೈಗೊಳ್ಳಲಾಗಿದೆ. ಟೇಕಲ್ ವ್ಯಾಪ್ತಿಯ ಖಾಸಗಿ ಶಾಲೆಗಳಾದ ಅಕ್ಷರಧಾಮ ಇಂಟರ್‌ನ್ಯಾಷನಲ್ ಶಾಲೆ, ವಿವೇಕಾನಂದ ವಿದ್ಯಾಮಂದಿರ(ವಿವಿಎಂ), ಸರ್.ಎಂ.ವಿಶ್ವೇಶ್ವರಯ್ಯ ಶಾಲೆ, ಜ್ಞಾನಜ್ಯೋತಿ ಶಾಲೆ, ಬಾಬಾ ವಿದ್ಯಾಲಯ, ಹುಳದೇನಹಳ್ಳಿ ರಮಾಮಾಧವ ಪ್ರೌಢಶಾಲೆ, ಆನೇಪುರ, ಟೇಕಲ್, ದೊಡ್ಡನಾಯಕನಹಳ್ಳಿ ಸರ್ಕಾರಿ ಪ್ರೌಢಶಾಲೆ, ವಿಸ್ಡಮ್ ಶಾಲೆ ಹಾಗೂ ತೊರಲಕ್ಕಿ ಪ್ರೌಢಶಾಲೆ ಸೇರಿ 11 ಶಾಲೆಗಳಿಂದ ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದು 17 ರೂಮ್ ಟೇಕಲ್ ಸರ್ಕಾರಿ ಪ್ರೌಢಶಾಲೆಯಲ್ಲಿ ಉಳಿದ 4 ರೂಮ್‌ಗಳು ಟೇಕಲ್ ಸ.ಪ.ಪೂರ್ವ ಶಾಲೆಯಲ್ಲಿ ನೀಡಲಾಗಿದೆ.

ಯುಗಾದಿ ಹಬ್ಬಕ್ಕೆ ಆಹಾರ ಕಿಟ್ ವಿತರಣೆ



ಮಾಲೂರು: ಹಿಂದು ಸಂಸ್ಕೃತಿಯಲ್ಲಿ ಪ್ರತಿ ಸಂವತ್ಸರದಲ್ಲಿ ವಿಶೇಷವಾಗಿ ಬರುವ ಹಬ್ಬವೆಂದರೆ ಸೌರಮಾನ ಯುಗಾದಿ ಬಹಳ ಸಂಭ್ರಮ ಸಡಗರದಿಂದ ಆಚರಣೆ ಮಾಡಲಾಗುತ್ತದೆ. ಇದಕ್ಕೆ ಕೆ.ಜಿ.ಹಳ್ಳಿ ಗ್ರಾಮಸ್ಥರಿಗೆ ನನ್ನ ಕೈಲಾದ ಮಟ್ಟಿಗೆ ಸಮಾಜ ಸೇವೆ ಮಾಡುತ್ತಿದ್ದು ಯುಗಾದಿ ಹಬ್ಬಕ್ಕೆ ಬೇಕಾಗುವ ಆಹಾರ ಪದಾರ್ಥಗಳನ್ನು ಪ್ರತಿ ಮನೆ ಮನೆ ನೀಡುತ್ತಿದ್ದು ಇದು ನನ್ನ ಪುಟ್ಟದಾದ ಅಳಿಲು ಸೇವೆ ಎಂದು ಟೇಕಲ್‌ನ ಕೆ.ಜಿ.ಹಳ್ಳಿ ಗ್ರಾಮದ ಯುವ ಬಿಜೆಪಿ ಮುಖಂಡ ಡಿ.ಕೆ.ಕೃಷ್ಣಮೂರ್ತಿ ತಿಳಿಸಿದರು. ಅವರು ಯುಗಾದಿ ಹಬ್ಬದ ಅಂಗವಾಗಿ ಕೆ.ಜಿ.ಹಳ್ಳಿ ಗ್ರಾಮದಲ್ಲಿ ಆಹಾರ ಪದಾರ್ಥಗಳ ಕಿಟ್‌ಗಳನ್ನು ವಿತರಿಸಿ ಮಾತನಾಡಿದರು. ಗ್ರಾಮದಲ್ಲಿ ಒಂದಿಲ್ಲೊಂದು ರೀತಿಯಲ್ಲಿ ನನ್ನ ಸಮಾಜ ಸೇವೆ ಮಾಡುತ್ತಾ ಬರುತ್ತಿದ್ದು ಮುಸ್ಲಿಂ ಬಾಂಧವರ ರಂಜಾನ್ ಹಬ್ಬಕ್ಕೆ ಆಹಾರ ಕಿಟ್ ವಿತರಣೆ ಉಚಿತ ಹೆಲ್ಮೆಟ್, ಓಂಶಕ್ತಿ ಮಾಲಾಧಾರಿಗಳಿಗೆ ಆರ್ಥಿಕ ಸಹಕಾರ ನೀಡಿದ್ದು ಇನ್ನೂ ಹಲವಾರು ರೀತಿಯ ಸೇವೆ ಮಾಡುತ್ತಿದ್ದು ಗ್ರಾಮದ ಪ್ರತಿಯೊಂದು ಕಾರ್ಯಗಳಿಗೆ ಧಾರ್ಮಿಕ ಶೈಕ್ಷಣಿಕ, ಇನ್ನಿತರೆ ಕಾರ್ಯಕ್ರಮಗಳಿಗೆ ಧನಸಹಾಯ ನೀಡುತ್ತಾ ಬರುತ್ತಿರುವುದಾಗಿ ತಿಳಿಸಿದರು. ಗ್ರಾಮದ ಅಭಿವೃದ್ಧಿಯೇ ನನ್ನ ಧ್ಯೇಯವಾಗಿದೆ ಎಂದರು. ಈ ಸಂದರ್ಭದಲ್ಲಿ ಹಂಸವೇಣಿ ಜಿ.ಕೃಷ್ಣಮೂರ್ತಿ, ವಕೀಲರಾದ ಎನ್.ಸುಬ್ರಮಣಿ ಉಪಸ್ಥಿತರಿದ್ದರು.



ಪಿಚ್ಚಹಳ್ಳಿ ಗ್ರಾಮದಲ್ಲಿ ಇದೇ ತಿಂಗಳ 20ರಿಂದ ಆರಂಭವಾಗುವ ಜಾತ್ರಾ ಮಹೋತ್ಸವದ ಹಿನ್ನೆಲೆ ಗ್ರಾಮದಲ್ಲಿ ಶಾಂತಿ ಸಭೆ ಹಾಗೂ ಕಾನೂನು ಅರಿವು ಕಾರ್ಯಕ್ರಮ ನಡೆಸುತ್ತಿರುವ ಬೆಮೆಲ್ ಎಎಸ್‌ಐ ರವಿಚಂದ್ರನ್ ಮತ್ತು ಸಿಬ್ಬಂದಿ.

ಪಿಚ್ಚಹಳ್ಳಿ ಜಾತ್ರಾ ಮಹೋತ್ಸವ: ಶಾಂತಿ ಕಾಪಾಡಲು ಮನವಿ

ಕೆಜಿಎಫ್: ನಗರದ ಸರಹದ್ದಿನಲ್ಲಿರುವ ಪಿಚ್ಚಹಳ್ಳಿ ಗ್ರಾಮದಲ್ಲಿ ಪ್ರತಿವರ್ಷ ವಿಜೃಂಭಣೆಯಿಂದ ನಡೆಯುವ ಚಾಮುಂಡೇಶ್ವರಿ ದೇವಾಲಯದ ಜಾತ್ರಾ ಮಹೋತ್ಸವದ ಹಿನ್ನೆಲೆ ಗ್ರಾಮದಲ್ಲಿ ಶಾಂತಿ ಸಭೆ ಹಾಗೂ ಕಾನೂನು ಅರಿವು ಕಾರ್ಯಕ್ರಮವನ್ನು ನಡೆಸಲಾಯಿತು.

ಸಭೆಯಲ್ಲಿ ಮಾತನಾಡಿದ ಬೆಮೆಲ್ ಪೊಲೀಸ್ ಠಾಣೆಯ ಎಎಸ್‌ಐ ರವಿಚಂದ್ರನ್, ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಯಾವುದೇ ರೀತಿಯ ಶಾಂತಿಭಂಗ ಉಂಟಾಗದಂತೆ ಗ್ರಾಮಸ್ಥರು ಸಹಕರಿಸಬೇಕು ಎಂದು ಮನವಿ ಮಾಡಿದರು. ಜಾತ್ರೆಯ ಅವಧಿಯಲ್ಲಿ ಶಾಂತಿ ಹಾಗೂ ಸುವ್ಯವಸ್ಥೆ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಸಾರ್ವಜನಿಕರ ರಕ್ಷಣೆಗಾಗಿ ಪೊಲೀಸ್ ಇಲಾಖೆ ಸಂಪೂರ್ಣ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಲಿದೆ ಎಂದು ತಿಳಿಸಿದರು. ಪಿಚ್ಚಹಳ್ಳಿ ಚಾಮುಂಡೇಶ್ವರಿ ದೇವಾಲಯದ ಜಾತ್ರೆ ಮೈಸೂರು ಮಹಾರಾಜರ ಸಹಕಾರದಿಂದ ನಿರ್ಮಾಣವಾದ ಪುರಾತನ ಪರಂಪರೆಯಾಗಿದೆ. ಅನಾದಿಕಾಲದಿಂದ ನಡೆದುಬರುತ್ತಿರುವ ಈ ಜಾತ್ರೆಯನ್ನು ಗ್ರಾಮಸ್ಥರು ಏಕತೆಯಿಂದ ಮತ್ತು ಅನ್ಯೋನ್ಯತೆಯಿಂದ ಆಚರಿಸಬೇಕು ಎಂದು ಅವರು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಘಟ್ಟ ಕಾಮಧೇನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸವಿತಾ ಪ್ರಸನ್ನ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



ಕೋಲಾರಮ್ಮ ದೇವಾಲಯದ ಪ್ರಧಾನ ಅರ್ಚಕ ಡಾ. ಸಿ.ಸೋಮಶೇಖರ ದೀಕ್ಷಿತ್‌ಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಹಂಸ ಜ್ಯೋತಿ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಂಸ ಸಮ್ಮಾನ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕೋಲಾರ ಹಾಲು ಒಕ್ಕೂಟದಿಂದ ಯುಗಾದಿ ಹಬ್ಬದ ಕೊಡುಗೆ: ಶಾಸಕ ಕೆ.ವೈ.ನಂಜೇಗೌಡ

ಹಾಲು ಉತ್ಪಾದಕರಿಗೆ ಲೀಟರ್‌ಗೆ ₹2 ಹೆಚ್ಚಳ

ಕೋಲಾರ: ಜಿಲ್ಲೆಯ ಹಾಲು ಉತ್ಪಾದಕರಿಗೆ ಕೋಲಾರ ಹಾಲು ಒಕ್ಕೂಟ ಪ್ರತಿ ಲೀಟರ್ ಹಾಲಿಗೆ 2ರೂ. ದರ ಹೆಚ್ಚಿಸಿ ಮಾ.18ರಿಂದಲೇ ಜಾರಿಯಾಗುವಂತೆ ಯುಗಾದಿ ಹಬ್ಬದ ಕೊಡುಗೆ ನೀಡಿದೆ ಎಂದು ಒಕ್ಕೂಟದ ಅಧ್ಯಕ್ಷ, ಮಾಲೂರು ಶಾಸಕ ಕೆ.ವೈ.ನಂಜೇಗೌಡ ತಿಳಿಸಿದರು.

ಒಕ್ಕೂಟ ಕಚೇರಿಯಲ್ಲಿ ತುರ್ತು ಆಡಳಿತ ಮಂಡಳಿ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿ,

ಹಾಲಿನ ಶೇಖರಣೆಯನ್ನು ಹೆಚ್ಚಿಸಲು ಮತ್ತು ಹಾಲು ಉತ್ಪಾದಕರನ್ನು ಬೇಸಿಗೆ ಕಾಲದಲ್ಲಿ ಪ್ರೋತ್ಸಾಹಿಸುವ ಉದ್ದೇಶದಿಂದ ಯುಗಾದಿ ಹಬ್ಬದ ಪ್ರಯುಕ್ತ ಮಾ.18ರ ಬೆಳಗಿನ ಸರತಿಯಿಂದ ಜಾರಿಗೆ ಬರುವಂತೆ ಒಕ್ಕೂಟದಿಂದ ಸಂಘಕ್ಕೆ 4% ಫ್ಯಾಟ್, 8.5% ಎಸ್.ಎನ್.ಎಫ್. ಅಂಶವುಳ್ಳ ಪ್ರತಿ ಕೆ.ಜಿ. ಹಾಲಿಗೆ 37.85ರೂಗಳಿಂದ 2ರೂ ಹೆಚ್ಚಿಸಿ 39.85 ರೂಗಳಂತೆ.

ಹಾಲು ಉತ್ಪಾದಕರಿಗೆ 4% ಫ್ಯಾಟ್ 8.5% ಎಸ್.ಎನ್.ಎಫ್ ಅಂಶವುಳ್ಳ ಪ್ರತಿ ಲೀಟರ್ ಹಾಲಿಗೆ 35.40 ರೂಗಳಿಂದ 2 ರೂಗಳನ್ನು ಹೆಚ್ಚಿಸಿ, ಪರಿಷ್ಕರಿಸಿ 37.40ರೂಗಳಂತೆ ಪಾವತಿಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ ಎಂದರು.

ವರ್ಷಕ್ಕೆ ಎರಡು ಬಾರಿ ಮಾಡುತ್ತಿದ್ದ ರಾಸು ವಿಮೆ ಪ್ರಕ್ರಿಯೆಯನ್ನು ಪ್ರಸಕ್ತ ಸಾಲಿನಿಂದ ಉತ್ಪಾದಕರಿಗೆ ಅನುಕೂಲವಾಗುವಂತೆ ವರ್ಷಕ್ಕೆ 3 ಸರತಿಗಳಲ್ಲಿ ವಿಮೆ ಮಾಡಿಸಲು ಹಾಗೂ 2026-27 ನೇ ಸಾಲಿನಿಂದ ಪ್ರತಿ ರಾಸುವಿನ ವಿಮೆ ಮೊತ್ತವನ್ನು 70,000 ರೂಗಳಿಂದ 80,000ಕ್ಕೆ ಹೆಚ್ಚಿಸಲು ತೀರ್ಮಾನಿಸಲಾಗಿದೆ ಎಂದರು.

ಬೇಸಿಗೆ ಅವಧಿಯಲ್ಲಿ ಹೈನುಗಾರಿಕೆಗೆ ಪೂರಕವಾದ ಬಹುಮುಖ್ಯ ಹಸಿರು ಮೇವಿನ ಕೊರತೆಯನ್ನು ನಿವಾರಿಸಲು ಹಸಿರು ಮೇವು ಅಭಿವೃದ್ಧಿಗಾಗಿ ಮೇವಿನ ಬೀಜಗಳಾದ ಎ.ಟಿ ಹಾಗೂ ಎಸ್.ಎಸ್.ಜಿ ಮೇವಿನ ಜೋಳವನ್ನು ರೈತರು, ಉತ್ಪಾದಕರಿಗೆ ಶೇ.50ರ ರಿಯಾಯಿತಿ ದರದಲ್ಲಿ 2025-26 ನೇ ವಾರ್ಷಿಕ ಸಾಲಿನಲ್ಲಿ ಸುಮಾರು 1000 ಎಕರೆಗಳಿಗೆ ಅನ್ವಯವಾಗುವಂತೆ ವಿತರಿಸಿ, ಒಕ್ಕೂಟ, ಸಂಘ ಮತ್ತು ಉತ್ಪಾದಕರ ತ್ರಿಪಕ್ಷೀಯ ಕರಾರು ಮಾಡಿಕೊಂಡು ಪ್ರತಿ ಎಕರೆಗೆ 3000 ರೂಗಳಂತೆ ಪ್ರೋತ್ಸಾಹಧನ ನೀಡಲು ತೀರ್ಮಾನಿಸಲಾಗಿದೆ ಎಂದರು.

ಒಕ್ಕೂಟದ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ 202 ಮಂದಿ ಖಾಯಂ ಸಿಬ್ಬಂದಿಗೆ 2025-26 ನೇ ಸಾಲಿಗೆ 75,000 ರೂ. ಗಳ ಎಕ್ಸ್‌ಗ್ರೇಷಿಯಾ ಪಾವತಿಸಲು ಹಾಗೂ ಅದೇ ರೀತಿ ಒಕ್ಕೂಟದ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ 1105 ಮಂದಿ ಗುತ್ತಿಗೆ ಕಾರ್ಮಿಕರಿಗೆ ಕನಿಷ್ಟ ವೇತನ ಕಾಯಿದೆಯಡಿ ಅವರ ಮೂಲವೇತನ ಮತ್ತು ತುಟ್ಟಿಭತ್ಯೆ ಮೇಲಿನ ಶೇ.8.33 ರಷ್ಟು ಬೋನಸ್ ಆಗಿ ಒಟ್ಟಾರೆ ರೂ. 3.5 ಕೋಟಿಗಳನ್ನು ಪಾವತಿಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ ಎಂದು ಮಾಹಿತಿ ನೀಡಿದರು. ಒಕ್ಕೂಟವು ಪ್ರಸ್ತುತ ದಿನಂಪ್ರತಿ ಸರಾಸರಿ 7.15 ಲಕ್ಷ ಲೀಟರ್ ಹಾಲು ಶೇಖರಣೆ ಮಾಡುವ ಸುಮಾರು ಶೇ.7 ರಷ್ಟು, ಸ್ಯಾಚೆ ಹಾಲು ಮಾರಾಟ ಸರಾಸರಿ 3.3 ಲಕ್ಷ ಲೀಟರ್ ಮಾಡುವ ಮೂಲಕ ಶೇ.12 ರಷ್ಟು ಮತ್ತು ಮೊಸರು ಮಾರಾಟ ಸರಾಸರಿ 84,000 ಕೆ.ಜಿ. ಮೂಲಕ ಶೇ.20 ರಷ್ಟು ಮತ್ತು ಗುಡ್ ಲೈಫ್ ಹಾಲು ಮಾರಾಟ ಸರಾಸರಿ 1,64,571 ಲೀಟರ್ ಮಾಡುವ ಮೂಲಕ ಶೇ.30 ರಷ್ಟು ಪ್ರಗತಿ ಸಾಧಿಸಿದೆ ಎಂದು ಕೆ.ವೈ.ನಂಜೇಗೌಡ ಹರ್ಷ ವ್ಯಕ್ತಪಡಿಸಿದರು.

250 ಕೋಟಿ ರೂ. ವೆಚ್ಚದ 7.5 ರಿಂದ 10 ಲಕ್ಷ ಲೀಟರ್ ವಿಸ್ತರಿಸಬಹುದಾದ ನೂತನ ಎಂವಿಕೆ ಗೋಲ್ಡನ್ ಡೇರಿ ಕಾಮಗಾರಿ 2-3 ತಿಂಗಳಲ್ಲಿ ಪೂರ್ಣಗೊಳ್ಳಲಿದ್ದು, ಡೇರಿ ಹಾಗೂ ಸೋಲಾರ್ ಘಟಕವನ್ನು ಸಿಎಂ ಸಿದ್ದರಾಮಯ್ಯರಿಂದ ಉದ್ಘಾಟಿಸಲಾಗುವುದು ಎಂದು ಹೇಳಿದರು. ಎಂಪಿಸಿಎಸ್‌ಗಳಲ್ಲಿ 10 ವರ್ಷಗಳ ಕಳಂಕ ರಹಿತ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದುವ ಸಂದರ್ಭದಲ್ಲಿ ಒಕ್ಕೂಟದ ಟ್ರಸ್ಟ್ ವತಿಯಿಂದ ಕಾರ್ಯದರ್ಶಿಗೆ 5 ಲಕ್ಷರೂ, ಪರೀಕ್ಷಕರಿಗೆ 3 ಲಕ್ಷರೂ ಮತ್ತು ಸಹಾಯಕರಿಗೆ 2 ಲಕ್ಷರೂಗಳನ್ನು ಗೌರವಧನವನ್ನಾಗಿ ಹಾಗೂ ಒಂದು ವೇಳೆ ಸೇವಾವಧಿಯಲ್ಲಿ ಅಕಾಲಿಕ ಮರಣ ಹೊಂದಿದ್ದಲ್ಲಿ ವಯೋನಿವೃತ್ತಿ ಗೌರವಧನ ನೀಡಲು ತೀರ್ಮಾನಿಸಲಾಗಿದೆ.

ಆ ಮೂಲಕ ಸರಕಾರ ಮಾನದಂಡಂತೆ ಗುಣಮಟ್ಟ 4.1% ಬರುವಂತಹ ಸಂಘಗಳ ಹಾಲಿನ ಶೇಖರಣೆಯ ಪ್ರತಿ ಲೀಟರ್‌ಗೆ ಪ್ರಸ್ತುತ ನೀಡುತ್ತಿರುವ ಪ್ರೋತ್ಸಾಹಧನದೊಂದಿಗೆ ಪ್ರತ್ಯೇಕವಾಗಿ ಕಾರ್ಯದರ್ಶಿಗಳಿಗೆ 0.05 ಪೈಸೆ, ಪರೀಕ್ಷಕರಿಗೆ 0.03 ಪೈಸೆ, ಸಹಾಯಕರಿಗೆ 0.02 ಪೈಸೆ ಪ್ರೋತ್ಸಾಹಧನ ನೀಡಲು ತೀರ್ಮಾನಿಸಲಾಗಿರುತ್ತದೆ ಎಂದು ಹೇಳಿದರು.



ಲಾಭದಲ್ಲಿ ಒಕ್ಕೂಟ

ರಾಜ್ಯದಲ್ಲಿ ಮಂಗಳೂರು ಹೊರತುಪಡಿಸಿ ಹಾಲು ಉತ್ಪಾದಕರಿಗೆ ಹೆಚ್ಚಿನ ದರ ನೀಡುತ್ತಿರುವುದರಲ್ಲಿ ಪ್ರಥಮ ಸ್ಥಾನದಲ್ಲಿದ್ದೇವೆ. ಒಕ್ಕೂಟವನ್ನು ಲಾಭದಾಯಕದಲ್ಲೇ ನಡೆಸಿಕೊಂಡು ಹೋಗುತ್ತಿದ್ದು, ಈ ಸಾಲಿನಲ್ಲಿ 9 ಕೋಟಿ 16 ಲಕ್ಷ ರೂ. ಲಾಭದಲ್ಲಿದೆ ಎಂದು ಶಾಸಕ ಕೆ.ವೈ.ನಂಜೇಗೌಡ ತಿಳಿಸಿದರು.

> **ಒಕ್ಕೂಟದಲ್ಲಿ ಆಡಳಿತ ಮಂಡಳಿ ರಚನೆ ಬಳಿಕ 68 ಕೋಟಿರೂ ವೆಚ್ಚದ 12 ಮೆಗಾವ್ಯಾಟ್ ಸಾಮರ್ಥ್ಯದ ಸೋಲಾರ್ ಘಟಕ ಕಾರ್ಯನಿರ್ವಹಿಸುತ್ತಿದ್ದು, ಮಾಹೆಯಾನ 14 ಲಕ್ಷ ಯೂನಿಟ್ ಉತ್ಪಾದನೆಯಾಗುತ್ತಿದೆ. 8.5 ಲಕ್ಷ ಯೂನಿಟ್ ಮುಖ್ಯ ಡೇರಿಗೆ ವಿನಿಯೋಗಿಸುವುದರಿಂದ ತಿಂಗಳಿಗೆ ಸುಮಾರು 80 ಲಕ್ಷರೂ ಉಳಿತಾಯವಾಗುತ್ತಿದೆ. ಹೆಚ್ಚುವರಿ 5.5 ಲಕ್ಷ ಯೂನಿಟ್‌ಗಳನ್ನು 243 ಬಿಎಂಸಿಗಳಿಗೆ ನೀಡುವ ಬಗ್ಗೆ ಕೆಪಿಟಿಸಿಎಲ್ ನೊಂದಿಗೆ ವ್ಯವಹರಿಸಲಾಗಿದೆ. ಒಟ್ಟಾರೆ ಸೋಲಾರ್‌ನಿಂದ 1.20 ಕೋಟಿ ಉಳಿತಾಯ ಆಗಲಿದೆ.**
> ■ **ಕೆ.ವೈ.ನಂಜೇಗೌಡ, ಶಾಸಕ**

4955 ವಿದ್ಯಾರ್ಥಿಗಳು ನೋಂದಣಿ

ಕೋಲಾರ: ತಾಲ್ಲೂಕಿನಲ್ಲಿ 18 ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಲ್ಲಿ ಹೊಸ ಅಭ್ಯರ್ಥಿಗಳು 4518 ಮತ್ತು ಪುನರಾವರ್ತಿತ ಅಭ್ಯರ್ಥಿಗಳು 448 ಸೇರಿದಂತೆ ಒಟ್ಟು 4955 ಮಕ್ಕಳು ಪರೀಕ್ಷೆ ಬರೆಯುತ್ತಿದ್ದು, ಮೂಲಸೌಲಭ್ಯಗಳ ಕೊರತೆ ಎದುರಾಗದಂತೆ ಅಗತ್ಯ ಕ್ರಮವಹಿಸಲಾಗಿದ್ದು ಶಾಲಾ ಶಿಕ್ಷಣ ಇಲಾಖೆ ಸಕಲ ಸಿದ್ದತೆ ನಡೆಸಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಧುಮಾಲತಿ ಪಡುವಣೆ ತಿಳಿಸಿದರು.

ಮಂಗಳವಾರ ನಗರದ ಮಹಿಳಾ ಸಮಾಜ ಶಾಲೆ ಸೇರಿದಂತೆ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಮಂಗಳವಾರ ಭೇಟಿ ನೀಡಿದ್ದ ಅವರು, ಕೊಠಡಿಗಳಿಗೆ ಭೇಟಿ ನೀಡಿ, ಸಿಸಿ ಕ್ಯಾಮರಾ ಸೌಲಭ್ಯ, ಡೆಸ್ಕ್ ಅಳವಡಿಕೆ, ಗಾಳಿ,ಬೆಳಕಿನ ವ್ಯವಸ್ಥೆ ಕುರಿತು ಪರಿಶೀಲನೆ ನಡೆಸಿ ಮಾತನಾಡುತ್ತಿದ್ದರು.

ತಾಲ್ಲೂಕಿನಲ್ಲಿ ಹೊಸ ಅಭ್ಯರ್ಥಿಗಳು 2092 ಬಾಲಕರು, 2426 ಮಂದಿ ಬಾಲಕಿಯರು ಪರೀಕ್ಷೆ ಬರೆಯುತ್ತಿದ್ದಾರೆ ಎಂದು ತಿಳಿಸಿದ ಅವರು ಗೊಂದಲಕ್ಕಡೆಯಿಲ್ಲದಂತೆ ಪರೀಕ್ಷೆ ನಡೆಸಲು ಸೂಚಿಸಲಾಗಿದೆ ಎಂದರು. 18 ಕೇಂದ್ರಗಳಿಗೆ 18 ಮಂದಿ ಮುಖ್ಯ ಅಧೀಕ್ಷಕರು, 3 ಉಪ ಮುಖ್ಯ ಅಧೀಕ್ಷಕರು, 18 ಮಂದಿ ಪ್ರಶ್ನೆಪತ್ರಿಕೆ ಪಾಲಕರು, 18 ಸ್ಥಾನಿಕ ಜಾಗೃತದಳ ಸಿಬ್ಬಂದಿ, 360 ಮಂದಿ ಕೊಠಡಿ ಮೇಲ್ವಿಚಾರಕರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಪರೀಕ್ಷಾ ಕೇಂದ್ರಗಳಲ್ಲಿ ಮೂಲಸೌಲಭ್ಯಗಳಿಗೆ ಕೊರತೆಯಾಗದಂತೆ ಮುಖ್ಯ ಅಧೀಕ್ಷಕರು ಕ್ರಮವಹಿಸಿ, ಒಟ್ಟಾರೆ ವಿದ್ಯಾರ್ಥಿ ಸ್ನೇಹಿಯಾಗಿ ಪರೀಕ್ಷೆ ನಡೆಸಿ ಎಂದು ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು, ಉಪಮುಖ್ಯ ಅಧೀಕ್ಷಕರು ಹಾಗೂ ಪ್ರಶ್ನೆಪತ್ರಿಕಾ ಪಾಲಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಮಧುಮಾಲತಿ ಪಡುವಣೆ ಸೂಚನೆ ನೀಡಿದರು.

ಪ್ರವೇಶದ್ವಾರ, ಕೇಂದ್ರದ ಕಾರಿಡಾರ್, ಬಂಡಲ್ ಕಟ್ಟುವ ಕಚೇರಿಯಲ್ಲಿ ಸಿಸಿ ಕ್ಯಾಮರಾ ಅಳವಡಿಸಿರುವ ಕುರಿತು ಖಾತ್ರಿಪಡಿಸಿಕೊಳ್ಳಿ ಎಂದು ಸೂಚಿಸಿದರು ಮಕ್ಕಳಿಗೆ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಯಾವುದೇ ಅಡ್ಡಿ ಎದುರಾಗಬಾರದು ಎಂದ ಅವರು ಪರೀಕ್ಷೆ ಹಬ್ಬದಂತಿರಲಿ, ಯಾವುದೇ ಅವ್ಯವಹಾರಗಳಿಗೆ ಅವಕಾಶ ನೀಡಬೇಡಿ, ಮಕ್ಕಳನ್ನು ಕೇಂದ್ರಕ್ಕೆ ಸಂತಸದಿಂದ ಸ್ವಾಗತಿಸಿ ಆತ್ಮಸ್ಥೈರ್ಯ ತುಂಬಿ ಪರೀಕ್ಷಾ ಭಯ ಹೋಗಲಾಡಿಸಿ ಎಂದು ಸಲಹೆ ನೀಡಿದರು.



ಜಿಲ್ಲಾಧಿಕಾರಿ ಡಿ.ಕೆ.ರವಿ ಪುಣ್ಯತಿಥಿ ಆಚರಣೆ

ಬಂಗಾರಪೇಟೆ: ಅವರವರು ಮಾಡಿದ ಪಾಪ ಪುಣ್ಯಗಳನ್ನು ಅವರೇ ಅನುಭವಿಸಬೇಕು, ಡಿ.ಕೆ.ರವಿ ಸಾವಿಗೆ ಕಾರಣರಾದ ಉದ್ಯಮಿ ಒಬ್ಬರು ಏನಾಗಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ ಎಂದು ಸುಹೇಲ್ ದೇವ್ ಭಾರತೀಯ ಸಮಾಜ ಪಕ್ಷದ ರಾಜ್ಯಾಧ್ಯಕ್ಷ ಅಭಿಮನ್ಯು ಪಿ.ಮಣಿ ಹೇಳಿದರು.



ಪಟ್ಟಣದ ಹೊರವಲಯದಲ್ಲಿರುವ ಗಂಗಮ್ಮನ ಪಾಳ್ಯದ ತೋಟದ ಮನೆಯಲ್ಲಿ ಜಿಲ್ಲೆಯ ಮಾಜಿ ಜಿಲ್ಲಾಧಿಕಾರಿ ದಿವಂಗತ ಡಿ.ಕೆ.ರವಿ ರವರ 11ನೇ ವರ್ಷದ ಪುಣ್ಯತಿಥಿ ಆಚರಣೆ ಮಾಡಿ ಮಾತನಾಡಿದರು 2008ರಲ್ಲಿ ಐಎಎಸ್ ಮಾಡಿ ಮೊಟ್ಟಮೊದಲನೆಯ ಬಾರಿಗೆ ಕೋಲಾರಕ್ಕೆ ಜಿಲ್ಲಾಧಿಕಾರಿಯಾಗಿ ಆಗಮಿಸಿ ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಧ್ವನಿ ಎತ್ತಿದ ಅಧಿಕಾರಿ ಇಂದು ನಮ್ಮೆಲ್ಲರನ್ನು ಅಗಲಿದ್ದಾರೆ ಅವರಂತೆ ಅನೇಕ ಅಧಿಕಾರಿಗಳು ಅವರಂತೆ ಬಲಿಯಾಗಿದ್ದಾರೆ ಎಂದರು.

ಡಿ.ಕೆ.ರವಿ ರವರು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಕ್ಕೆ, ರಾಜಕಾರಣಿಗಳ ಅಕ್ರಮಗಳನ್ನು ಬಯಲಿಗೆಳೆದಿದ್ದಕ್ಕೆ ಅವರನ್ನು ಇಲ್ಲಿಂದ ವರ್ಗಾವಣೆ ಮಾಡಲಾಗಿತ್ತು, ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಆಗಿನ ಕಾಂಗ್ರೆಸ್ ಸರ್ಕಾರ ಬಿಂಬಿಸಿತ್ತು ಆದರೆ ಮರಣೋತ್ತರ ವರದಿಯನ್ನು ಸಹ ಸರಿಯಾಗಿ ಮಾಡಲಿಲ್ಲ ಆ ವರದಿ ಈಗಲೂ ನನ್ನ ಬಳಿ ಇದೆ ಎಂದರು. ಅಂತಹ ಮಹಾನ್ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಆಗಿನ ಕಾಂಗ್ರೆಸ್ ಬಿಂಬಿಸಿತ್ತು ಆದರೆ ಅದು ಆತ್ಮಹತ್ಯೆ ಅಲ್ಲ ಎಂದರು. ದಲಿತ ಮುಖಂಡ ಮಗೊಂದಿ ನಾರಾಯಣಸ್ವಾಮಿ, ಕೋಲಾರಪ್ಪ, ಮೂರ್ತಿ, ವಿಜ್ಞೇಶ್, ಕೃಷ್ಣ, ಉದಯ್ ಇದ್ದರು.

ಭೋವಿ ಸಮಾಜ ಇಬ್ಭಾಗಕ್ಕೆ ಯತ್ನ: ರಾಮಚಂದ್ರಪ್ಪ

ಬಂಗಾರಪೇಟೆ: ನಮ್ಮ ತಾಲೂಕಿನಲ್ಲಿ 40,000 ಬೋವಿ ಸಮುದಾಯ ಜನಸಂಖ್ಯೆ ಇದ್ದು ಕೆಲವರು ಸಮುದಾಯವನ್ನು ಹೊಡೆದು ಕೇವಲ 26 ಮಂದಿಗೆ ಸೀಮಿತವಾಗುವ ರೀತಿ ಸಂಘವನ್ನು ಕಟ್ಟಿದ್ದಾರೆ ಇದು ಸರಿಯಲ್ಲ, ಆ ಸಂಘ ಕನಿಷ್ಠ ನೊಂದಣಿ ಸಹ ಆಗಲಿಲ್ಲ ಎಂದು ರಾಜ್ಯ ಬೋವಿ ವಡ್ಡರ ಸಂಘದ ಜಂಟಿ ಕಾರ್ಯದರ್ಶಿ ಎಂ.ರಾಮಚಂದ್ರಪ್ಪ ಬೇಸರ ವ್ಯಕ್ತಪಡಿಸಿದರು.

ತಾಲೂಕಿನ ಕಾರಹಳ್ಳಿ ಬಳಿ ಇರುವ ಅವರ ತೋಟದ ಮನೆಯಲ್ಲಿ ಕರೆದಿದ್ದ ರಾಜ್ಯಭೋವಿ ವಡ್ಡರ ಸಂಘ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ ಜಿಲ್ಲೆಯಲ್ಲಿ ಈಗಾಗಲೇ ಬೋವಿ ಸಮುದಾಯವು ಬಲಿಷ್ಠವಾಗದೇ ಸಂಘಟನೆ ಇಲ್ಲದೇ ಕೇವಲ 26 ಮುಖಂಡರು ಸೇರಿಕೊಂಡು ಬಂಗಾರಪೇಟೆ ಪಟ್ಟಣದ ಡಾ.ಅಂಬೇಡ್ಕರ್ ಪ್ರತಿಮೆ ಎದುರು ಸಭೆ ನಡೆಸಿ ಸ್ವಯಂಘೋಷಿತ ಪದಾಧಿಕಾರಿಗಳನ್ನು ನೇಮಕ ಮಾಡಿಕೊಂಡಿರುವುದು ಇಡೀ ಬೋವಿ ಸಮುದಾಯಕ್ಕೆ ಧಕ್ಕೆ ತರುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ, ಜಿಲ್ಲಾ ಕ್ಷೇಮಾಭಿವೃದ್ಧಿಸಂಘದಹೆಸರಿನಲ್ಲಿ ಬೋವಿ ಸಮುದಾಯವನ್ನು ಇಬ್ಭಾಗ ಮಾಡುವುದಕ್ಕೆ ಹೋಗುತ್ತಿರುವುದಕ್ಕೆ ಬ್ರೇಕ್ ಹಾಕಬೇಕಾಗಿದೆ ಅವರ ಸಂಘ ನೋಂದಣಿ ಆಗಿಲ್ಲ ಎಂದು ಗುಡುಗಿದರು.

ರಾಜ್ಯದಲ್ಲಿ ಬೋವಿ ಸಮುದಾಯವು ಪ್ರತಿಷ್ಠಿತ ಸಮಾಜವಾಗಿದ್ದು, ಇಡೀ ರಾಜ್ಯದಲ್ಲಿಯೇ ಏಕೈಕ ಸಂಸದರಾಗಿರುವ ಎಂ.ಮಲ್ಲೇಶಬಾಬು ಅವರನ್ನು ಕಡೆಗಣಿಸಿ ಅವರ ವಿರುದ್ಧವೇ ಸಮುದಾಯವನ್ನು ಒಡೆದು ಆಳುವ ನೀತಿಯನ್ನು ಅನುಸರಿಸಿ ಮತ್ತೊಂದು ಗುಂಪಾಗಿ ಹೊರಹೊಮ್ಮಿರುವುದು ಇಡೀ ಸಮುದಾಯಕ್ಕೆ ಮಾಡಿರುವ ದ್ರೋಹವಾಗಿದೆ ಎಂದ ಅವರು ಸಂಸದ ಎಂ.ಮಲ್ಲೇಶಬಾಬು ಅವರ ತಾಯಿ ಜಿ.ಪಂ ಮಾಜಿ ಅಧ್ಯಕ್ಷೆ ಮಂಗಮ್ಮ ರವರು ಹಾಲಿ ಅಧ್ಯಕ್ಷರಾಗಿದ್ದಾರೆ. ಇವರನ್ನು ರಾಜಕೀಯ ತೇಜೋವಧೆ ಮಾಡುವ ದುರುದ್ದೇಶದಿಂದ ಬೋವಿ ಸಮುದಾಯವರೇ ಆಗಿರುವ ಕೆಲವು ಜಿಲ್ಲೆಯಲ್ಲಿ ಬೋವಿ ಸಮುದಾಯವನ್ನು ಗುಂಪುಗಾರಿಕೆ ಸೃಷ್ಟಿ ಮಾಡಿ ಸಮುದಾಯಕ್ಕೆ ಧಕ್ಕೆ ತರುವ ರೀತಿಯಲ್ಲಿ ನಡೆದುಕೊಳ್ಳುತ್ತಿರುವುದು, ನಿಜಕ್ಕೂ ಶೋಚನೀಯವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಉಪನ್ಯಾಸಕ ಡಾ. ಶ್ರೀನಿವಾಸಪ್ರಸಾದ್ ಅಭಿಮತ

ಡಿವಿಜಿ ಕನ್ನಡಿಗರ ಹೃದಯದಲ್ಲಿ ಅಮರ

ಬಂಗಾರಪೇಟೆ: ಆಧುನಿಕ ಸರ್ವಜ್ಞ ಪದ್ಮಭೂಷಣ ಪುರಸ್ಕೃತರು, ಕವಿಯಾಗಿ, ಪತ್ರಿಕೋದ್ಯಮಿ, ಸ್ವಾತಂತ್ರ ಹೋರಾಟಗಾರರು, ಸಾಹಿತಿಯಾಗಿ ಕನ್ನಡಿಗರ ಹೃದಯ ಸಾಮ್ರಾಜ್ಯದಲ್ಲಿ ಅಮರರಾಗಿರುವ ಡಿವಿಜಿಯವರು ಕೋಲಾರ ಜಿಲ್ಲೆಯವರು ನಮ್ಮ ಹೆಮ್ಮೆ ಎಂದು ಕೆಜಿಎಫ್ ಕಾಲೇಜಿನ ಉಪನ್ಯಾಸಕ ಡಾ. ಶ್ರೀನಿವಾಸಪ್ರಸಾದ್ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಬಂಗಾರಪೇಟೆ ತಾಲೂಕು ಅನಿಕೇತನ ಕನ್ನಡ ಬಳಗದ ಸಂಯುಕ್ತ ಆಶ್ರಯದಲ್ಲಿ ಡಿವಿಜಿಯವರ 139ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಡಿವಿಜಿಯವರ ಸರಳ ವ್ಯಕ್ತಿತ್ವ ಸ್ವಾಭಿಮಾನ ದಾನ ಗುಣದ ಬಗ್ಗೆ ಸೋದಾಹರಣ ಉಪನ್ಯಾಸ ನೀಡಿ, ಗುಡಿಬಂಡೆ ರಾಮಚಂದ್ರ ರಾಯರು ಕೀರ್ತನಾಕಾರರು ವಾಗ್ಗೇಯಕಾರರು ಅವರು ರಚಿಸಿದ ರಾಮಚಂದ್ರ ಚರಿತ್ರ ಕೃತಿಗೆ ಡಿವಿಜಿಯವರು ಮುನ್ನುಡಿ ಬರೆದಿದ್ದಾರೆ, ಆ ಪ್ರತಿಯನ್ನು ಈಗಲೂ ನನ್ನ ಬಳಿ ಇರಿಸಿಕೊಂಡಿದ್ದೇನೆ ಎಂದರು.



ತಮಗೆ ಬಂದ ಒಂದು ಲಕ್ಷ ಹಣವನ್ನು ಗೋಖಲೆ ಸಾರ್ವಜನಿಕ ಸಂಸ್ಥೆಗೆ ನೀಡಿ ಶ್ರೇಷ್ಠರನಿಸಿಕೊಂಡ ವ್ಯಕ್ತಿಯವರು ಅವರು ಯಾವಾಗಲೂ ಹೇಳುತ್ತಿದ್ದದ್ದು ನಾನು ಸಾಹಿತಿಯಲ್ಲ ಪತ್ರಕರ್ತನೆಂದು ಹೇಳಿದ್ದಾರೆ, ವಿಶ್ವೇಶ್ವರಯ್ಯನವರು ತಮ್ಮ ಮನೆಗೆ ಬರುತ್ತೇನೆ ಎಂದು ತಿಳಿಸಿದಾಗ ನೀವು ಬಂದರೆ ನಿಮ್ಮನ್ನು ಗೌರವಿಸುವ ಶಕ್ತಿ ನನ್ನಲ್ಲಿ ಇಲ್ಲ ಎಂದು ಹೇಳಿದ ಶ್ರೇಷ್ಠ ವ್ಯಕ್ತಿ ಎಂದು ತಿಳಿಸಿದರು ಕೆ.ಎಸ್.ನರಸಿಂಹಸ್ವಾಮಿ ಅವರು ಡಿವಿಜಿಯವರು ಬರೆದ ಮುನ್ನುಡಿಯಲ್ಲಿದ್ದ ಇರುವಂತಿಕೆ ಪದವನ್ನೇ ತಮ್ಮ ಕವನ ಸಂಕಲನಕ್ಕೆ ಹೆಸರಿಸಿದ್ದನ್ನು ಸ್ಮರಿಸಿದರು.

ವೇದಿಕೆಯಲ್ಲಿ ಮೈ.ಸತೀಶ್ ಕುಮಾರ್, ಮಂಜುನಾಥ್, ಪ್ರಾಧ್ಯಾಪಕ ಗಂಗರಾಜು, ಗುರುದತ್, ರಮೇಶ್ ಬಾಬು, ಲಾಯರ್ ಜಯಪ್ರಕಾಶ್, ಕೇಶವಮೂರ್ತಿ, ಪ್ರಹ್ಲಾದ ರಾವ್, ಪ್ರಾಧ್ಯಾಪಕ ವೇಣುಗೋಪಾಲ್, ನಾಗರಾಜ್ ಶಂಕರ್ ಮಠ, ವಿಜಯಮ್ಮ ಮಹಾದೇವಿ ಮತ್ತಿತರರು ಇದ್ದರು.

ಕೆಸಿ ವ್ಯಾಲಿ, ಎಚ್‌ಎನ್ ವ್ಯಾಲಿ, ನೀರು ಉಪಯೋಗಿಸಲು ಯೋಗ್ಯವೇ?

ಸಂವಾದದಲ್ಲಿ ಸಾಬೀತುಪಡಿಸಲಿ: ರೆಡ್ಡಿ

ಕೋಲಾರ: ಕೆಸಿ ವ್ಯಾಲಿ, ಎಚ್‌ಎನ್ ವ್ಯಾಲಿ ಹಾಗೂ ವೃಷಭಾವತಿ ವ್ಯಾಲಿ ಯೋಜನೆಯ ನೀರು ಉಪಯೋಗಿಸಲು ಯೋಗ್ಯವಾಗಿದೆ ಎಂದು ಹೇಳುವ ಜನಪ್ರನಿಧಿಗಳು, ಇದು ಹೇಗೆ ಸಾಧ್ಯ ಎಂಬುದರ ಬಗ್ಗೆ ಸಂವಾದಲ್ಲಿ ಪಾಲ್ಗೊಂಡು ಸಾಬೀತುಪಡಿಸಲಿ ಎಂದು ಶಾಶ್ವತ ನೀರಾವರಿ ಹೋರಾಟ ವೇದಿಕೆಯ ಅಧ್ಯಕ್ಷ ಆಂಜನೇಯ ರೆಡ್ಡಿ ಸವಾಲು ಹಾಕಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬೆಂಗಳೂರಿನಿಂದ ಹರಿಯುತ್ತಿರುವ ಕೊಳಚೆ ನೀರನ್ನು ಮೂರನೇ ಹಂತದಲ್ಲಿ ಶುದ್ಧೀಕರಣ ಮಾಡಬೇಕು ಎಂಬುದು ನಮ್ಮ ಬೇಡಿಕೆ. ಈ ಬಗ್ಗೆ ಧ್ವನಿ ಎತ್ತುವಲ್ಲಿ ಎರಡೂ ಜಿಲ್ಲೆಯ ಜನಪ್ರತಿನಿಧಿಗಳು ವಿಫಲರಾಗಿದ್ದಾರೆ ಎಂದು ಖಂಡಿಸಿದರು.

ಕಳೆದ 1986ರಲ್ಲಿ ಜಿಲ್ಲಾ ಮಂತ್ರಿಯಾಗಿದ್ದಾಗ ಬೈರೇಗೌಡ ಹಾಗೂ ಆಗಿನ ಡಿಸಿ ಸಂಜಯ್‌ದಾಸ್ ಗುಪ್ತ ಅವರು ದೂರ ದೃಷ್ಟಿ ಆಲೋಚನೆ ಮಾಡಿ ಕಾಲುವೆ, ಕೆರೆಗಳ ಪುನಶ್ಚೇತನ ಮಾಡಿಸಿ ನೀರಿನ ಸೌಕರ್ಯ ಕೆಲಸ ಮಾಡಿದರು. ಆದರೆ ಬೈರೇಗೌಡರ ರಾಜಕೀಯ ಹಾದಿಯಲ್ಲಿರುವ ಕೃಷ್ಣಬೈರೇಗೌಡರು ಆತ್ಮವಂಚನೆ ರೀತಿ ಹೇಳಿಕೆ ನೀಡಿರುವುದು ವಿಷಾದಕರ ಸಂಗತಿ ಎಂದರು.

ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜನರನ್ನು ನೀರಾವರಿ ವಿಚಾರದಲ್ಲಿ ನತದೃಷ್ಟರನ್ನಾಗಿ ಮಾಡಿವೆ. ನೀರಿಗಾಗಿ ಕೂಗು 30 ವರ್ಷಗಳಿಂದ ಇದೆ. ಎತ್ತಿನಹೊಳೆ ಯೋಜನೆಯು ರಾಜಕಾರಣಿಗಳ ಪಾಲಿಗೆ ಎಟಿಎಂ ಆಗಿದೆ. ಇದರಿಂದ ನೀರು ಲಭ್ಯವಾಗುವುದಿಲ್ಲ ಎಂದು ಭಾರತೀಯ ವಿಜ್ಞಾನ ಸಂಸ್ಥೆ ಸೇರಿದಂತೆ ಹಲವು ಸಂಸ್ಥೆಗಳ ಸಂಶೋಧನೆಗಳು ಹೇಳಿವೆ. ಆದರೆ ಸರ್ಕಾರ ಮೇಯಿಸಿಕೊಂಡಿರುವ ಕೆಲ ವಿಜ್ಞಾನಿಗಳು ದಿಕ್ಕು ತಪ್ಪಿಸುತ್ತಿದ್ದಾರೆ. ಯೋಜನೆಯಿಂದ ಮೋಸ ಆಗಿದೆ ಅಂತ ಸಿಎಜಿ ವರದಿ ಮಂಡಿಸಿತು, ಇದಕ್ಕೆಲ್ಲ ಸರ್ಕಾರದಿಂದ ಉತ್ತರ ಸಿಗಲಿಲ್ಲ ಎಂದು ಕಿಡಿಕಾರಿದರು.

ಬಯಲು ಸೀಮೆ ಜಿಲ್ಲೆಗಳಲ್ಲಿ ಬೆಳೆಯುತ್ತಿರುವ ತರಕಾರಿ, ಮಣ್ಣಿನ ಪರೀಕ್ಷೆ ಮಾಡಿರುವ ಕರ್ನಾಟಕ ಮಾಲೀನ್ಯ ನಿಯಂತ್ರಣ ಮಂಡಳಿ, ರಾಷ್ಟ್ರೀಯ ಮಾಲೀನ್ಯ ನಿಯಂತ್ರಣ ಮಂಡಳಿಯೂ ರಾಸಾಯನಿಕ, ಸೀಸ, ಲೋಹದ ಅಂಶಗಳು ಇರುವುದನ್ನು ದೃಢಪಡಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಪದ್ಮಾವತಿ, ಪ್ರಭಾಕರ್, ವಿ.ಕೆ.ರಾಜೇಶ್ ಮತ್ತಿತರರು ಉಪಸ್ಥಿತರಿದ್ದರು.



ಕಿರುಸುದ್ದಿ

ಸುಗಮವಾಗಿ ಮುಗಿದ ದ್ವಿತೀಯ ಪಿಯು ಪರೀಕ್ಷೆ-1

ಚಿಂತಾಮಣಿ: ನಗರದ 5 ಪರೀಕ್ಷಾ ಕೇಂದ್ರಗಳಲ್ಲಿ ಫೆಬ್ರವರಿ 28 ರಿಂದ ಮಾರ್ಚ್ 16ರ ವರೆಗೆ ನಡೆದ ಪಿಯು ದ್ವಿತೀಯ ವರ್ಷದ ಪರೀಕ್ಷೆಗಳು ಇಂದು ಸುಗಮವಾಗಿ ಮುಕ್ತಾಯಗೊಂಡವು. ಕೊನೆಯ ಪೇಪರ್ ಪರೀಕ್ಷೆ ಬರೆದ ವಿದ್ಯಾರ್ಥಿಗಳು ಸಂಭ್ರಮದಲ್ಲಿ ಪರೀಕ್ಷಾ ಕೇಂದ್ರದಿಂದ ಹೊರಗೆ ಬರುವಾಗ ವಿಜಯದ ಸಂಕೇತವನ್ನು ತೋರಿಸುತ್ತಾ ಖುಷಿಯಿಂದ ಮುಗುಳು ನಗೆ ಬೀರಿದರು. ಫೆ. 28 ರಿಂದ ಪ್ರಾರಂಭವಾದ ದ್ವಿತೀಯ ಪಿ ಯು ಪರೀಕ್ಷೆಗಳು ಸೋಮವಾರ ಮಾ 16 ರಂದು ಮುಕ್ತಾಯವಾದವು. ಪ್ರಸಕ್ತ ವರ್ಷ ಯಾವುದೇ ವಿಷಯದ ಪ್ರಶ್ನೆ ಪತ್ರಿಕೆ ಸೋರಿಕೆಯಾಗದೆ ಇರುವುದರಿಂದ ಪಾಲಕರು ಮತ್ತು ವಿದ್ಯಾರ್ಥಿಗಳು ನಿಟ್ಟಿಸಲು ಬಿಟ್ಟರು. ಯಾವುದೇ ಅಹಿತಕರ ಘಟನೆ ನಡೆಯದೆ ಕಲೆ, ವಿಜ್ಞಾನ, ವಾಣಿಜ್ಯ ವಿಭಾಗದ ಎಲ್ಲಾ ವಿಷಯಗಳ ಪರೀಕ್ಷೆಗಳು ತಾಲೂಕಿನ 5 ಪರೀಕ್ಷೆ ಕೇಂದ್ರಗಲ್ಲಿ ಸುಸೂತ್ರವಾಗಿ ಮುಕ್ತಾಯಗೊಂಡವು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಉಪನ್ಯಾಸಕರು ಮತ್ತು ಶಿಕ್ಷಕರು ನಿರಾಳರಾದರು. ಒಂದು ವರ್ಷದಿಂದ ವಿದ್ಯಾರ್ಥಿಗಳು ಇಷ್ಟ ಪಟ್ಟು, ಕೆಲವೊಬ್ಬರೂ ಕಷ್ಟಪಟ್ಟು, ಇನ್ನು ಕೆಲಯೊಬ್ಬರು ಇನ್ನೊಬ್ಬರ ಒತ್ತಾಯಕ್ಕಾಗಿ ಓದಿ ಅಂತು ಇಂತೂ ಪರೀಕ್ಷೆ ಬರೆದು ಮುಗಿಸಿದರು. ಶಾಲಾ ಶಿಕ್ಷಣ ಇಲಾಖೆ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಪರೀಕ್ಷೆಯನ್ನು ಯಶಸ್ವಿಗೊಳಿಸಿದ್ದಕ್ಕಾಗಿ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿದರು.

ಪತ್ರಕರ್ತರ ಸಂಘಕ್ಕೆ ಶತಮಾನದ ಸಂಭ್ರಮ

ಬಾಗೇಪಲ್ಲಿ: (ಭಾಗ್ಯನಗರ) ರಾಜ್ಯದಲ್ಲಿ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಇಬ್ಬರು ಮಹನೀಯರು. ಅದರಲ್ಲಿ ಸರ್. ಎಂ.ವಿಶ್ವೇಶ್ವರಯ್ಯ ನವರು ಸ್ಥಾಪಿಸಿದ ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವ ಪೂರೈಸಿದೆ. ಅದೇ ರೀತಿ ಪತ್ರಿಕಾ ಪಿತಾಮಹ ಡಾ. ಡಿ.ವಿ.ಗುಂಡಪ್ಪ ಸ್ಥಾಪಿಸಿದ ಪತ್ರಕರ್ತರ ಸಂಘ ಶತಮಾನದ ಹಂಚಿನಲ್ಲಿದೆ ಎಂದು ತಾಲೂಕು ಸಂಘದ ಅಧ್ಯಕ್ಷ ಡಿ.ಎನ್.ಕೃಷ್ಣಾರೆಡ್ಡಿ ನುಡಿದರು. ಪಟ್ಟಣದ ಪತ್ರಕರ್ತರ ಭವನದಲ್ಲಿ ಆಯೋಜಿಸಲಾಗಿದ್ದ ಪತ್ರಕರ್ತರ ಸಂಘದ ಸಂಸ್ಥಾಪಕರು ಹಾಗೂ ಸಾಹಿತಿಗಳಾದ ಡಾ. ಡಿ.ವಿ.ಗುಂಡಪ್ಪ ನವರ ಜನ್ಮದಿನದ ಪ್ರಯುಕ್ತ ಡಿ.ವಿ.ಜಿ. ರವರ ಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅವರು ಸ್ಥಾಪಿಸಿದ ಕಾರ್ಯನಿರತ ಪತ್ರಕರ್ತರ ಸಂಘ ಶತಮಾನದ ಅಂಚಿಗೆ ಸೇರಿದೆ. ಇಂದು ಅನೇಕರು ಮಹನೀಯರು ಪತ್ರಿಕಾ ರಂಗದಲ್ಲಿ ಬಂದು ಹೋಗಿದ್ದಾರೆ. ಆದರೆ ಕೆಲವರು ನೆನಪಾಗಿ ಉಳಿದಿದ್ದಾರೆ, ಅಂತಹವರಲ್ಲಿ ಡಿವಿಜಿ ಗುಂಡಪ್ಪನವರು ಪ್ರಥಮ. ಪತ್ರಕರ್ತರು ತಮ್ಮದೇ ಆದ ಘನತೆ ಗೌರವವನ್ನು ಉಳಿಸಿಕೊಳ್ಳುವ ಕಾರ್ಯನಿರತ ಪತ್ರಕರ್ತನಾಗಿ ಕೆಲಸ ಮಾಡಿದಾಗಲೇ ಇಂತಹ ಮಹನೀಯರು ಸ್ಥಾಪನೆ ಮಾಡಿದ ಸಂಘಕ್ಕೆ ಒಂದು ಗೌರವ ಕೀರ್ತಿ ಎಂದರು.ಸಂದರ್ಭದಲ್ಲಿ ತಾಲೂಕು ಸಂಘದ ಪ್ರಧಾನ ಕಾರ್ಯದರ್ಶಿ ಸೈಯದ್ ಸಿದ್ದಿಕ್, ಕಾರ್ಯದರ್ಶಿ ಎಸ್.ಎಸ್.ಶ್ರೀನಿವಾಸ್, ಜಿಲ್ಲಾ ಕಾರ್ಯಕಾರಿಣಿ ಸಮಿತಿ ಸದಸ್ಯರಾದ ಬಿ.ಎಸ್.ಸುರೇಶ್, ವಿ.ಅಶ್ವಥ್ ನಾರಾಯಣ (ಮಣಿಕಂಠ), ಹಿರಿಯ ಪತ್ರಕರ್ತರಾದ ಕರೀಂ ಸಾಬ್, ರಾಜೇಶ್, ಗೋಪಾಲ್ ರೆಡ್ಡಿ, ನಾರಾಯಣಸ್ವಾಮಿ, ರಂಗನಾಥ್, ನಾಗರಾಜ್, ಬಾಬು ಇನ್ನು ಮುಂತಾದವರು ಉಪಸ್ಥಿತರಿದ್ದರು.

ಲೋಕ ಅದಾಲತ್‌ನಲ್ಲಿ 1,421 ಪ್ರಕರಣಗಳ ರಾಜೀ

ಚಿಂತಾಮಣಿ: ಸಾರ್ವಜನಿಕರು ಹಾಗೂ ಕಕ್ಷಿದಾರರು ತಮ್ಮ ದೀರ್ಘಕಾಲದ 1421 ಪ್ರಕರಣಗಳನ್ನು ರಾಜೀ 2000 ಪ್ರಕರಣಗಳನ್ನು ಪರಸ್ಪರ ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳುವ ಮೂಲಕ ಉತ್ತಮ ಸ್ಪಂದನೆ ನೀಡಿದ್ದಾರೆಂದು ಹಿರಿಯ ಸಿವಿಲ್ ನ್ಯಾಯಾಧೀಶೆಯಾದ ಜಿ.ಗೀತಾಂಜಲಿ ನುಡಿದರು.ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಆದೇಶದನ್ವಯ ನಗರದ ನ್ಯಾಯಾಲಯ ಸಂಕೀರ್ಣದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಲೋಕ ಅದಾಲತ್ ಅತ್ಯಂತ ಯಶಸ್ವಿಯಾಗಿ ನಡೆದಿದ್ದು, ಈ ವಿಶೇಷ ಅಭಿಯಾನದ ಈ ಬಾರಿಯ ಲೋಕ ಅದಾಲತ್ ನಲ್ಲಿ ಒಟ್ಟು 1421 ಪ್ರಕರಣಗಳು ರಾಜಿಯಾಗಿವೆ. ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದ್ದ 900 ಟ್ರಾಫಿಕ್ ಲಘು ಪ್ರಕರಣಗಳು ಹಾಗೂ 350 ಜನನ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಅತಿ ವೇಗವಾಗಿ ಇತ್ಯರ್ಥಗೊಳಿಸಲಾಗಿದೆ. ಇನ್ನು ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ 84 ಚೆಕ್ ಬೌನ್ಸ್ ಪ್ರಕರಣಗಳು, 18 ವಿಭಾಗ ದಾವೆಗಳು, 10 ಅಗ್ರಿಮೆಂಟ್ ಪ್ರಕರಣಗಳು ಮತ್ತು ವಿದ್ಯುತ್ ಇಲಾಖೆಗೆ ಸಂಬಂಧಿಸಿದ 35 ಪ್ರಕರಣಗಳನ್ನು ಸಂಧಾನದ ಮೂಲಕ ಬಗೆಹರಿಸಲಾಗಿದೆಯೆಂದರು.

ಇದಲ್ಲದೆ ಮೋಟಾರ್ ವಾಹನ ಅಪಘಾತದ 2 ಪ್ರಕರಣಗಳು ಹಾಗೂ 24 ಇತರೆ ಸಿವಿಲ್ ದಾವೆಗಳು ಸಹ ಈ ಅದಾಲತ್‌ನಲ್ಲಿ ಇತ್ಯರ್ಥಗೊಂಡಿವೆ. ನ್ಯಾಯಾಲಯದಲ್ಲಿ ವರ್ಷಗಟ್ಟಲೆ ಅಲೆದಾಡುವುದನ್ನು ತಪ್ಪಿಸಿ, ಕಕ್ಷಿದಾರರು ಪರಸ್ಪರ ಗೌರವಯುತವಾಗಿ ರಾಜಿ ಮಾಡಿಕೊಳ್ಳಲು ರಾಷ್ಟ್ರೀಯ ಲೋಕ ಎಂದ ಅದಾಲತ್ ಪರಿಣಮಿಸಿದೆ .



ಗೌರಿಬಿದನೂರು ನಗರದ ವಾರ್ಡ್ ನಂಬರ್ 21 ಅರವಿಂದ ನಗರದ ಬಡಾವಣೆಯ ಓಬಳಪ್ಪ ರಸ್ತೆಯಲ್ಲಿ ಪೈಪ್‌ಲೈನ್ ಚರಂಡಿ ಕಾಮಗಾರಿಗೆ ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡರು ಭೂಮಿ ಪೂಜೆಯನ್ನು ನೆರವೇರಿಸಿದರು. ಈ ವೇಳೆ ಶಾಸಕರನ್ನು ಪಕ್ಷದ ಮುಖಂಡರು, ಸ್ಥಳೀಯರು ಅಭಿನಂದಿಸಿದರು.

ವಿವಿಧ ಕಾಮಗಾರಿಗೆ ಭೂಮಿಪೂಜೆ

ಗೌರಿಬಿದನೂರು: ನಗರದ ವಾರ್ಡ್ ನಂಬರ್ 21 ಅರವಿಂದ ನಗರದ ಬಡಾವಣೆಯ ಓಬಳಪ್ಪ ರಸ್ತೆಯಲ್ಲಿ ಸುಮಾರು 6 ಲಕ್ಷ ರೂಪಾಯಿಗಳ ವೆಚ್ಚದ ಪೈಪ್‌ಲೈನ್ ಚರಂಡಿ ಕಾಮಗಾರಿಗೆ ಶಾಸಕರಾದ ಕೆ.ಎಚ್.ಪುಟ್ಟಸ್ವಾಮಿಗೌಡರು ಭೂಮಿ ಪೂಜೆಯನ್ನು ನೆರವೇರಿಸಿದರು. ಅಗಲ ಕಡಿಮೆ ಇರುವ ರಸ್ತೆಗಳಲ್ಲಿ ಮತ್ತು ಹಳೆ ಊರುಗಳಲ್ಲಿ ಇಂತಹ ಪೈಪ್ ಲೈನ್ ಚಾರಂಡಿ ಕಾಮಗಾರಿ ಉತ್ತಮವಾಗಿದ್ದು, ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು. ನಗರಸಭೆಯ ಮಾಜಿ ಅಧ್ಯಕ್ಷೆ ರೂಪ ಅನಂತರಾಜು ಅವರು ಮಾತನಾಡುತ್ತಾ ವಾರ್ಡಿನಲ್ಲಿ ನಮ್ಮ ಅವಧಿಯಲ್ಲಿ ಅತಿ ಹೆಚ್ಚು ಕಾಮಗಾರಿ ಆಗಿದ್ದು, ಇನ್ನೂ ಕೂಡ ಹಲವಾರು ಕಾಮಗಾರಿಗಳು ಪ್ರಗತಿಯಲ್ಲಿದ್ದು ಶಾಸಕರು ತಮ್ಮ ವಿಶೇಷ ಅನುದಾನದಲ್ಲಿ ನಮ್ಮ ವಾರ್ಡಿನ ಅಭಿವೃದ್ಧಿಗಾಗಿ ಸುಮಾರು 40 ಲಕ್ಷ ರೂಪಾಯಿಗಳ ಅನುದಾನ ಕೊಡುತ್ತಿದ್ದು,ವಾರ್ಡಿನಲ್ಲಿ ಹಂತ ಹಂತವಾಗಿ ರಸ್ತೆಗಳು ಅಭಿವೃದ್ಧಿ ಹೊಂದುತ್ತವೆ ಎಂದು ತಿಳಿಸಿದರು

ಈ ಸಂಧರ್ಭದಲ್ಲಿ ನಗರಸಭೆಯ ಮಾಜಿ ಅಧ್ಯಕ್ಷ ಲಕ್ಷ್ಮೀನಾರಾಯಣಪ್ಪ, ನಗರಸಭೆಯ ಮಾಜಿ ಸದಸ್ಯರಾದ ಅನಂತರಾಜು ರಾಜಕುಮಾರ್ ವಾರ್ಡಿನ ಹಿರಿಯರಾದ ಗುರುರಾಜ್, ಪೌರಾಯಕ್ತ ಕೆ ಜಿ ರಮೇಶ್ ನರಸೇಗೌಡ್ರು ಶ್ರೀಕಂಠಪ್ಪ ಆಟೋ ಗಂಗಾಧರ್ ನರೇಂದ್ರ ಶಿಕ್ಷಕರಾದ ಸಂಜೀವ್ ರೆಡ್ಡಿ ಮೋಹನ್ ಮಂಜು ರಾಮಕೃಷ್ಣ ಶಿವಣ್ಣ ರಂಗನಾಥ್ ಗುತ್ತಿಗೆದಾರದ ರವಿ ಹಾಗೂ ಇನ್ನಿತರರು ಹಾಜರಿದ್ದರು .



ಬಾಗೇಪಲ್ಲಿ ಭಾಗ್ಯನಗರ ಪತ್ರಿಕಾ ಭವನದಲ್ಲಿ ಆಯೋಜಿಸಲಾಗಿದ್ದ ಡಾಕ್ಟರ್ ಡಿ.ವಿ.ಗುಂಡಪ್ಪನವರ ಜನ್ಮದಿನ ಸ್ಮರಣೆಯ ಕಾರ್ಯಕ್ರಮದ ನೋಟ.

ಕೋರ್ಟ್ ಆದೇಶಕ್ಕೂ ಕಿಮ್ಮತ್ತಿಲ್ಲವೆ? | ಹೊಂಡಗಳಲ್ಲಿ ಮೀನುಗಳ ಸಾಕಣೆ

ಎಗ್ಗಿಲ್ಲದ ಕ್ಯಾಟ್ ಫಿಶ್ ದಂಧೆ

ಚಿಂತಾಮಣಿ: ತಾಲ್ಲೂಕಿನ ಚಿನ್ನಸಂದ್ರದಲ್ಲಿ ಎಗ್ಗಿಲ್ಲದೇ ಸಾಗಿದ ನಿಷೇದಿತ ಕ್ಯಾಟ್ ಫಿಶ್ ದಂಧೆ ಸಾಕಾಣೆ, ಮಾರಾಟಕ್ಕಿಲ್ಲ ತಡೆ. (ಮರೆಲ್ ಮೀನುಗಳ ಸಾಕಣೆ ಹಾಗೂ ಮಾರಾಟವನ್ನು ಭಾರತದಲ್ಲೆಡೆ ನಿಷೇಧಿಸಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ.) ತಾಲೂಕಿನ ಚಿನ್ನಸಂದ್ರದಲ್ಲಿ ನೂರಾರು ಹೊಂಡಗಳನ್ನು ನಿರ್ಮಿಸಿಕೊಂಡು ಮೀರಿ ಕ್ಯಾಟ್ ಫಿಶ್‌ಗಳ ಸಾಕಾಣೆ ಹಾಗೂ ಮಾರಾಟ ಎಗ್ಗಿಲ್ಲದೇ ಸಾಗಿದ್ದು, ಕೋರ್ಟ್ ಆದೇಶಕ್ಕೂ ಕಿಮ್ಮತ್ತಿಲ್ಲವೇ? ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಸೃಷ್ಟಿಯಾಗಿದೆ.

ತಾಲೂಕಿನ ಚಿನ್ನಸಂದ್ರದಲ್ಲಿ ನೂರಾರು ಹೊಂಡಗಳಲ್ಲಿ ಅಕ್ರಮವಾಗಿ ಮರೆಲ್ ಮೀನುಗಳ ಸಾಕಾಣಿಕೆ ಮಾರಾಟ ಮಾಡುತ್ತಿರುವುದನ್ನು ಸುಪ್ರೀಂಕೋರ್ಟ್ 2010ರಲ್ಲೇ ನಿಷೇದಿಸಿದ್ದರೂ ಚಿನ್ನಸಂದ್ರದಲ್ಲಿ ಮಾತ್ರ ಮರೆಲ್ ಮೀನುಗಳ ಸೌಕಾಣಿಕೆ ಹಾಗೂ ಮಾರಾಟ ಎಗ್ಗಿಲ್ಲದೇ ಸಾಗಿದೆ. ಆದರೆ, ಇದು ಮೀನುಗಾರಿಕೆ ಇಲಾಖೆ ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೋ? ಅಥವಾ ಗೊತ್ತಿದ್ದರೂ ನಿರ್ಲಕ್ಷಿಸಿದ್ದಾರೆಯೋ ಎಂಬುದು ಸಾರ್ವಜನಿರ ಪ್ರಶ್ನೆ. ಚಿನ್ನಸಂದ್ರ ಜಮೀನುಗಳಲ್ಲಿ ಹೊಂಡ ನಿರ್ಮಿಸಿಕೊಂಡು ನಿಷೇದಿತ ಮರೆಲ್ ಮೀನುಗಳ ಮಾರಾಟ ಮಾಡಲಾಗುತ್ತಿದೆ.

ಮೀನುಗಾರಿಕೆ ಇಲಾಖೆ ಅಧಿಕಾರಿಗಳು ದಿವ್ಯ ಮೌನ: ಈ ತಳಿಯ ಮೀನುಗಳನ್ನು ಸಾಕಾಣಿಕೆ ಮಾಡದಂತೆ ತಾಲ್ಲೂಕಿನ ಕೆಲ ಮೀನು ಕೃಷಿಕರಿಗೆ ಮೀನುಗಾರಿಕೆ ಇಲಾಖೆಯಿಂದ ನೋಟಿಸ್ ನೀಡಿದ್ದರೂ, ಪ್ರಯೋಜನವಾಗಿಲ್ಲ. ನೋಟಿಸ್ ನೀಡಿದ ಒಂದೆರೆಡು ವಾರಗಳ ಕಾಲ ಸುಮ್ಮನಿದ್ದು, ಮೀನು ಸಾಕಾಣೆದಾರರು ಬಳಿಕ ಮತ್ತೆ ತಮ್ಮ ಹಳೇ ಚಾಳಿ ಮುಂದುರಿಸುತ್ತಿದ್ದಾರೆನ್ನುವುದು ಇಲಾಖೆಯ ಅಧಿಕಾರಿಗಳು

ಆರ್ಥಿಕ ಲಾಭ ಅಧಿಕ: ಮರೆಲ್ ತಳಿಯ 3 ಇಂಚಿನ ಮೀನು ಮರಿಗಳು 8 ರೂ.ನಿಂದ 10 ರೂಪಾಯಿಗೆ



ಮಾರಾಟವಾಗುತ್ತದೆ. ಅಲ್ಲದೇ ಇವು ಬೆಳೆದು ದೊಡ್ಡದಾದ ಮೇಲೆ ಸುಮಾರು 300 ರೂ. ನಿಂದ 400 ರೂ. ವರೆಗೆ ಬೆಲೆ ಸಿಗುತ್ತದೆ. ಇದರಿಂದ ವರ್ಷಕ್ಕೆ ಸುಮಾರು 8 ರಿಂದ 10 ಲಕ್ಷ ರೂ. ವರೆಗೆ ಲಾಭಗಳಿಸಬಹುದು. ಅಲ್ಲದೇ ಈ ಮೀನುಗಳ ನಿರ್ವಹಣೆಗೆ ಹೆಚ್ಚು ಕಷ್ಟ ಎನಿಸುವುದಿಲ್ಲ. ಸತ್ತ ದನ, ಕುರಿ, ಮೇಕೆಗಳ ಮಾಂಸ ಹಾಗೂ ಹೋಟೆಲ್ ತ್ಯಾಜ್ಯ, ಸತ್ತ ರೇಷ್ಮೆ ಹುಳುಗಳನ್ನು ಮರೆಲ್ ಮೀನುಗಳಿಗೆ ಆಹಾರವಾಗಿ ನೀಡಲಾಗುತ್ತದೆ. ಆದ್ದರಿಂದ ಕಡಿಮೆ ಅವಧಿಯಲ್ಲಿ ಈ ಮೀನು ಮರಿಗಳು ಬಹುಬೇಗ ಬೆಳೆದು ದೊಡ್ಡದಾಗುವುದರಿಂದ ಮಾರುಕಟ್ಟೆಯನ್ನು ಸುಲಭವಾಗಿ ಮಾಡಬಹುದು.

ಸಮಿತಿ ಇದ್ದರೂ ನಿಷ್ಕ್ರಿಯ: ಕಂದಾಯ ಜಮೀನುಗಳಲ್ಲಿ ಮರೆಲ್ ಮೀನುಗಳ ಸಾಕಾಣಿಕೆ ಹೊಂಡಗಳನ್ನು ನಿರ್ಮಿಸಿ ಸಾಕಾಣೆ ಮಾಡುತ್ತಿದ್ದಾರೆ. ನಿಷೇದಿತ ಮರೆಲ್ ಮೀನುಗಳ ಮಾರಾಟ ಮತ್ತು ಸಾಕಾಣೆ ತಡೆಗೆ ತಾಲ್ಲೂಕು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ಎಲಿ ಮರೆಲ್ ಮೀನುಗಳ ಸಾಕಣೆ, ಮಾರಾಟ ನಡೆಯುತ್ತಿದೆ ಎಂಬುದನ್ನು ಪತ್ತೆ ಮಾಡಿ, ಸರ್ಕಾರದ ಗಮನಕ್ಕೆ ತರುವುದು, ಮೀನು ಕೃಷಿ ಮಾಡುವವರಲಿ ಮರೆಲ್ ಮೀನುಗಳ ಸಾಕಣೆಯಿಂದಾಗುವ ದುಷ್ಪರಿಣಾಮಗಳ ಅರಿವು ಮೂಡಿಸುವುದು ಹಾಗೂ ಮುಂದೆಂದೂ ಮರೆಲ್ ಮೀನುಗಳನ್ನು ಸಾಕಣೆ ಮಾಡದಂತೆ ಮುಚ್ಚಳಿಕೆ ಬರೆಸಿಕೊಳ್ಳುವುದು ಸಮಿತಿಯ ಉದ್ದೇಶ. ಆದರೆ, ಚಿನ್ನಸಂದ್ರ ಮೀನುಗಳ ಮಾರಾಟ ಹಾಗೂ ಸಾಕಾಣೆ ನಿರಂತರವಾಗಿ ನಡೆಯುತ್ತಿದ್ದರೂ, ಸಮಿತಿಯೂ ಯಾವುದೇ ಕ್ರಮಕ್ಕೆ ಮುಂದಾಗಿದಿರುವುದು ಸಮಿತಿ ನಿಷ್ಕ್ರಿಯಗೊಂಡಿರುವುದಕ್ಕೆ ಸಾಕ್ಷಿ.

ಮರೆಲ್ ಮೀನುಗಳ ನಿಷೇಧ ಏಕೆ?

ಆಫ್ರಿಕನ್ ತಳಿಯಾಗಿರುವ ಈ ಮೀನುಗಳ ಕೃಷಿಯಿಂದ ಆರ್ಥಿಕವಾಗಿ ಬಹುಬೇಗ ಲಾಭಗಳಿಸಬಹುದು. ಕಡಿಮೆ ಅವಧಿಯಲ್ಲಿ ದೊಡ್ಡ ಗಾತ್ರದಲ್ಲಿ ಬೆಳೆಯುವ ಈ ಮೀನುಗಳಿಗೆ ಹೆಚ್ಚಿನ ಬೇಡಿಕೆ ಇದೆ. ಈ ತಳಿಗಳ ಮೀನುಗಳ ಸಾಕಾಣಿಕೆಯಿಂದ ಅಧಿಕ ಲಾಭವನ್ನು ಗಳಿಸಬಹುದು. ವರ್ಷ ಪೂರ್ತಿ ಯಾವುದೇ ವಾತಾವರಣಕ್ಕೂ ಹೊಂದಿಕೊಂಡು ಬದುಕುವ ಈ ಮೀನುಗಳು ಇತರೆ ಜಾತಿಯ ದೇಸಿ ತಳಿಗಳ ಮೀನುಗಳನ್ನು ತಿಂದು ದೇಸಿ ತಳಿಗಳ ಸಂತತಿ ಕ್ಷೀಣಿಸಲು ಕಾರಣವಾಗಿದ್ದವು. ಅಲ್ಲದೇ, ಈ ಮೀನಿನ ಮಾಂಸವನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೊಳಪಡಿಸಿದಾಗ ವಿಷಕಾರಿ ಅಂಶ ಪತ್ತೆ ಮತ್ತು ರುಚಿಯೆಂದು ತಿಂದರೆ ಕ್ಯಾನ್ಸರ್ ಕಾರಣವಾಗುತ್ತದೆ, ಮನುಷ್ಯರು ಸೇವಿಸಲು ಯೋಗ್ಯವಲ್ಲವೆಂದು ದೃಢಪಟ್ಟಿದ್ದೆ. ಅಲ್ಲದೇ, ಈ ಮೇನುಗಳ ಸಾಕಾಣಿಕೆಯಿಂದ ಆಗುವ ದುಷ್ಪರಿಣಾಮಗಳ ಕುರಿತು ನ್ಯಾಷನಲ್ ಗ್ರೀನ್ ಟ್ರಿಬಿನಲ್ ಎಂಬ ಎನ್‌ಜಿಒ ಸುಪ್ರೀಂಕೋರ್ಟ್ ಮೊರೆ ಹೋಗಿತ್ತು.

ಹೈಟೆಕ್ ಮಾರುಕಟ್ಟೆ ನಿರ್ಮಾಣ: ಶಿಲ್ಪಾ ನಾಗ್

ಶಿಡ್ಲಘಟ್ಟ: ಶಿಡ್ಲಘಟ್ಟ ಮತ್ತು ರಾಮನಗರ ಜಿಲ್ಲೆಯ ಚನ್ನಪಟ್ಟಣದಲ್ಲಿ ತಲಾ 200 ಕೋಟಿ ವೆಚ್ಚದಲ್ಲಿ ಹೈಟೆಕ್ ರೇಷ್ಮೆ ಮಾರ್ಕೆಟ್ ನಿರ್ಮಾಣವಾಗುತ್ತಿದೆ ಹಾವೇರಿ, ಗುಲ್ಬರ್ಗ ಮತ್ತು ಮೈಸೂರಿನ 15, 20 ಕೋಟಿ ವೆಚ್ಚದಲ್ಲಿ ಸಣ್ಣ ಮಾರುಕಟ್ಟೆ ನಿರ್ಮಾಣವಾಗುತ್ತಿದೆ ಎಂದು ರೇಷ್ಮೆ ಇಲಾಖೆ ಆಯುಕ್ತ ಹಾಗೂ ರೇಷ್ಮೆ ನಿರ್ದೇಶಕಿ ಶಿಲ್ಪಾ ನಾಗ್ ತಿಳಿಸಿದರು.

ತಾಲೂಕಿನ ಹನುಮಂತಪುರ ಗೇಟ್ ಬಳಿ ನಿರ್ಮಾಣವಾಗುತ್ತಿರುವಹೈಟೆಕ್‌ರೇಷ್ಮೆಮಾರುಕಟ್ಟೆಸ್ಥಳಕ್ಕೆಈದಿವಸ ಭೇಟಿ ನೀಡಿ ನಿರ್ಮಾಣ ಕಾಮಗಾರಿ ವೀಕ್ಷಿಸಿ ಸಂಬಂಧಿಸಿದವರಿಂದ ಮಾಹಿತಿ ಪಡೆದು ನಂತರ ಪತ್ರಕರ್ತರೊಂದಿಗೆ ಮಾತನಾಡಿದರು. ಹೈಟೆಕ್ ರೇಷ್ಮೆಗೂಡು ಮಾರ್ಕೆಟ್ ನಿರ್ಮಾಣವಾಗುವುದರಿಂದ ರೇಷ್ಮೆಗೂಡು ಬೆಳೆಯುವ ರೈತರು ಮತ್ತು ರೇಷ್ಮೆಗೂಡು ಕರಿದಿಸಿ ರೇಷ್ಮೆ ರೀಲರುಗಳು ಅನೇಕ ರೀತಿ ಅನುಕೂಲವಾಗಲಿದೆ ಎಂದು ತಿಳಿಸಿದರು. ಇದೀಗ ಹಳೆಯ ರೇಷ್ಮೆ ಮಾರುಕಟ್ಟೆ ಮಾರುಕಟ್ಟೆಯ ಅಂಕವಾಗುತ್ತಿರುವ ರೇಷ್ಮೆಗೂಡು ಹರಾಜು ಕೂಗಲು ಬರುವ ರೈಲರುಗಳ ಸಂಖ್ಯೆಯನ್ನು ಗಮನಿಸಿಕೊಂಡು ಮುಂದಿನ 40 ಬಾ ವರ್ಷಗಳ ದೂರ ದೃಷ್ಟಿಯಿಂದ ಕಟ್ಟಡ ನಿರ್ಮಾಣದಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಲಾಗುವುದು ಎಂದು ತಿಳಿಸಿದರು.

ದೇಶದ ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕದಲ್ಲಿ ಶೇಕಡ 43ರಷ್ಟು ಪ್ರಮಾಣದಲ್ಲಿ ರೇಷ್ಮೆ ಉತ್ಪಾದನೆ ಆಗುತ್ತಿದೆ ಮೊದಲು ಸ್ಥಾನದಲ್ಲಿ ಇದೆ. ಇದೆಲ್ಲವನ್ನು ಗಮನಿಸಿ ಇಲ್ಲಿ 120 ಟನ್ ರೇಷ್ಮೆ ಗೂಡು ಸಾಮರ್ಥ್ಯದ ಎರಡು ಗೋದುಮುಗಳನ್ನು ನಿರ್ಮಿಸಲಾಗುವುದು ಎಂದು ತಿಳಿಸಿದರು. ಹೈಟೆಕ್ ರೇಷ್ಮೆ ಗೂಡು ಮಾರ್ಕೆಟ್ ಕಾಮಗಾರಿಕೆಯನ್ನು 24 ರಿಂದ 26 ತಿಂಗಳು ಒಳಗೆ ಪೂರ್ಣಗೊಳಿಸುವ ಪ್ರಯುಕ್ತ ನಡೆಯುತ್ತಿದೆ ಎಂದು ತಿಳಿಸಿದರು. ಜಿಲ್ಲಾ ಪಂಚಾಯಿತಿ ಸಿಇಒ ಡಾ.ನವೀನ್ ಬಟ್, ತಹಸೀಲ್ದಾರ್ ಗಹನ್ ಸಿಂಧು, ರೇಷ್ಮೆ ಜಂಟಿ ನಿರ್ದೇಶಕ ವೈ.ಟಿ.ತಿಮ್ಮಯ್ಯ, ಜಂಟಿ ನಿರ್ದೇಶಕ ಕೆ.ಎನ್.ರವಿ, ರೇಷ್ಮೆ ಉಪನಿರ್ದೇಶಕ ಮಾರಪ್ಪ ವಿರಲದಿನ್ನಿ, ಉಮೇಶ್, ಪಶು ವೈದ್ಯಕೀಯ ಇಲಾಖೆಯ ಉಪನಿರ್ದೇಶಕ ಡಾ. ರಂಗಪ್ಪ, ರೇಷ್ಮೆ ಸಹಾಯಕ ನಿರ್ದೇಶಕ ಜಯಶಂಕರ್ ಪಶು ವೈದ್ಯ ಇಲಾಖೆಯ ಸಹಾಯಕ ನಿರ್ದೇಶಕ ಶ್ರೀನಾಥ್ ರೆಡ್ಡಿ ಮುಂತಾದ ಅಧಿಕಾರಿಗಳು ಭಾಗವಹಿಸಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ವಿದ್ಯಾರ್ಥಿ ಜೀವನಕ್ಕೆ ಒಂದು ತಿರುವು: ರವಿ ಬಿ.

ಶಿಡ್ಲಘಟ್ಟ: ವಿದ್ಯಾರ್ಥಿಗಳಿಗೆ ಎಸ್‌ಎಸ್ ಎಲ್‌ಸಿ ಪರೀಕ್ಷೆ ಎಂಬುದು ಮೊದಲ ಟರ್ನಿಂಗ್ ಪಾಯಿಂಟ್ ಆಗಿದ್ದು, ಯಾವ ವಿದ್ಯಾರ್ಥಿ ಈ ಪರೀಕ್ಷೆಯಲ್ಲಿ ಉಲ್ಲಾಸದಿಂದ ಬರೆದು ಉತ್ತೀರ್ಣನಾಗುತ್ತಾನೋ ಆ ವಿದ್ಯಾರ್ಥಿಯ ಮುಂದಿನ ಜೀವನ ಉಲ್ಲಾಸದಿಂದ ಉತ್ತಮ ರೀತಿಯಲ್ಲಿ ಕೂಡಿರುತ್ತದೆ ಎಂದು ಸಮಾಜಸೇವಕ ಮಳಮಾಚನಹಳ್ಳಿ ರವಿ ಬಿ. ಗೌಡ ತಿಳಿಸಿದರು

ಇದೇ ತಿಂಗಳ 18ನೇ ತಾರೀಖಿನಿಂದ ಎಸ್ ಎಸ್‌ಎಲ್‌ಸಿ ಪರೀಕ್ಷೆಗಳು ಪ್ರಾರಂಭವಾಗುತ್ತಿರುವುದರಿಂದ ಮಳಮಾಚನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಎಸ್‌ಎಸ್‌ಎಲ್‌ಸಿ ಮಕ್ಕಳನ್ನು ಹುರಿದುಂಬಿಸಲು ಶಾಲೆಗೆ ಭೇಟಿ ನೀಡಿದ ಸಮಾಜ ಸೇವಕ ರವಿ ಬಿ ಗೌಡರವರು ಮಕ್ಕಳೊಂದಿಗೆ ಬೆರೆತು ಪರೀಕ್ಷೆಯನ್ನು ಯಾವುದೇ ಭಯವಿಲ್ಲದೆ ಉತ್ತಮವಾಗಿ ಬರೆಯಲು ಅನೇಕ ಸಲಹೆ ಸೂಚನೆಗಳನ್ನು ನೀಡಿದರು.

ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅನುಕೂಲವಾಗಲಿ ಎಂದು ಬಾಲ್ ಪೆನ್ ನೀಡಿ ಪರೀಕ್ಷೆಯಲ್ಲಿ ಬಾಲ್ ಪೆನ್ ಬಳಸಿ ಜೆಲ್ ಪೆನ್ ಬಳಸಬೇಡಿ ಎಂದು ಸಲಹೆ ನೀಡಿ ಚಾಕೊಲೇಟ್ ವಿತರಿಸಿದರು. ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಇಲಾಖೆಯಿಂದ ನೀಡಿರುವ ಪ್ರವೇಶ ಪತ್ರವನ್ನು ಮಕ್ಕಳಿಗೆ ವಿತರಿಸಿ ಈ ಬಾರಿ ಶಾಲೆಯ ಎಲ್ಲಾ ಮಕ್ಕಳು ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಬೇಕೆಂದು ತಿಳಿಸಿದರು.

ನಂತರ ಚಿಕ್ಕದಾಸರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಮಳಮಾಚನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಬೇಟಿ ನೀಡಿ ಶಾಲಾ ಮಕ್ಕಳು ಹಾಗೂ ಅವರ ಸ್ನೇಹಿತರು ಮಳಮಾಚನಹಳ್ಳಿ ಗ್ರಾಮದ ಪ್ರೌಢ ಶಾಲೆಗೆ ದಾಖಲಾಗುವಂತೆ ಶಿಕ್ಷಕರಿಗೆ ಹಾಗು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟರು.

ಮಳಮಾಚನಹಳ್ಳಿಯ ಸುತ್ತ ಮುತ್ತಲಿನ ಗ್ರಾಮಗಳ ಮಕ್ಕಳು ಮಳಮಾಚನಹಳ್ಳಿ ಸರ್ಕಾರಿ ಪ್ರೌಢ ಶಾಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾದರೆ ಮಕ್ಕಳು ತಮ್ಮ ಗ್ರಾಮಗಳಿಗೆ ಹೋಗಿ ಬರಲು ಶಾಲೆಗೆ ಉಚಿತವಾಗಿ ವಾಹನದ ವ್ಯವಸ್ಥೆ ಅಥವಾ ಮಕ್ಕಳಿಗೆ ಸೈಕಲ್ ವಿತರಿಸುವ ಭರವಸೆ ನೀಡಿದರು.



ನಗರಸಭೆ ಮಾಜಿ ಸದಸ್ಯ ಮಾರ್ಕೆಟ್ ಮೋಹನ್ ಅಧಿಕಾರಿಗಳ ವಿರುದ್ಧ ಆಕ್ರೋಶ

ವೈಕುಂಠ ರಥ ವಿಚಾರ ಚರ್ಚೆಗೆ ಸೀಮಿತ

ಗೌರಿಬಿದನೂರು: ಶವಸಂಸ್ಕಾರಕ್ಕೆ ನಗರದ ಸಾರ್ವಜನಿಕರ ಅನುಕೂಲಕ್ಕೆ ವೈಕುಂಠ ರಥ ವಾಹನ ಖರೀದಿ ವಿಚಾರ, ಕಳೆದ ನಾಲ್ಕು ವರ್ಷಗಳಿಂದ ನಗರಸಭೆಯ ಪ್ರತಿ ಬಜೆಟ್ ಸಭೆಯಲ್ಲೂ ಕೇವಲ ಚರ್ಚೆಗೆ ಮಾತ್ರ ಸೀಮಿತವಾಗಿದೆಆದರೆಇದುವರೆಗೂಕಾರ್ಯಗತವಾಗಿಲ್ಲ ಎಂದು ನಗರಸಭೆ ಮಾಜಿ ಸದಸ್ಯ ಮಾರ್ಕೆಟ್ ಮೋಹನ್ ನಗರಸಭೆ ಅಧಿಕಾರಿಗಳ ವಿರುದ್ಧ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.



ಅವರು ನಗರದ ನಗರಸಭೆ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ 2026-27ನೇ ಸಾಲಿನ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶವಸಾಗಿಸುವ ವಾಹನ ಈವರೆಗೂ ಖರೀದಿ ಮಾಡದಿರಲು ಕಾರಣವೇನು ಎಂದು ಮಾರ್ಕೆಟ್ ಮೋಹನ್ ಪ್ರಶ್ನಿಸಿದರೆ,ಸಾರ್ವಜನಿಕರ ಸ್ಮಶಾನದಲ್ಲಿ ಮೂಲಸೌಲಭ್ಯಗಳೇ ಇಲ್ಲ, ಕತ್ತಲಾದರೆ ವಿದ್ಯುತ್ ದೀಪಗಳು, ನೀರಿನ ಸೌಲಭ್ಯ, ಕಾಂಪೌಂಡು ಇಲ್ಲದೆ ಇಡೀ ಸ್ಮಶಾನ ಹಂದಿ,ನಾಯಿಗಳ ತಾಣವಾಗಿದೆ ಎಂದು ಡಿ.ಜೆ.ಚಂದ್ರಮೋಹನ್ ಸಭೆಯಲ್ಲಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ನಿವೇಶನ ರಹಿತರಿಗೆ ಹಕ್ಕುಪತ್ರ ನೀಡುವಲ್ಲಿ ವಿಳಂಭ ಧೋರಣೆ ಬಗ್ಗೆ ಸದಸ್ಯ ಮಾರ್ಕೆಟ್ ಮೋಹನ್ ಮತ್ತು ವಿ.ರಮೇಶ್ ತಕರಾರು ತೆಗೆದರೆ, 6 ತಿಂಗಳಲ್ಲಿ ನಗರದ ನಿರ್ವಸತಿಗರಿಗೆ ವಸತಿ ಕೊಡದಿದ್ದರೆ ಬೀದಿಗಿಳಿಯುವ ಬೆದರಿಕೆ ಒಡ್ಡಿದ ಕೆಂಪರಾಜು ಗಡುವು ಮೀರಿದರೆ ಜನರೊಂದಿಗೆ ಬಂದು ತಕ್ಕ ಶಾಸ್ತಿ ಮಾಡಬೇಕಾದೀತು ಎಂದು ನಗರಸಭೆ ಕಂದಾಯ ಅಧಿಕಾರಿಗಳಿಗೆ ಎಚ್ಚರಿಸಿದರು.

ನಗರದ ವಸತಿರಹಿತರ ಗುರುತಿನ ಕಾರ್ಯ ಮುಗಿದಿದ್ದು ತರಾತುರಿಯಲ್ಲಿ ಭೂಮಿ ಖರೀದಿ ಪ್ರಕ್ರಿಯೆ ನಡೆದಿದೆ ಎಂದು ಮಾಜಿ ಅಧ್ಯಕ್ಷ ಖಲೀಂಉಲ್ಲಾ ಹೇಳಿದರು ಮಾಜಿ ಸದಸ್ಯರಾದ ಗೋಪಿನಾಥ ಮತ್ತು ರಫೀಕ್ ಶ್ರೀಕಾಂತ್ ಪದ್ಮಾವತಮ್ಮ ಗೋವಿಂದಪ್ಪ ಅಬುಬೇಕರ್ ಸಾರ್ವಜನಿಕರು ಭಾಗವಹಿಸಿದ್ದರು .

ರಸದೌತಣ ಉಣಬಡಿಸಿದ ವಿಶಿಷ್ಟಚೇತನ ಸಾಹಿತಿಗಳು

ಶಿಡ್ಲಘಟ್ಟ: ನಗರದಲ್ಲಿ ಮಂಗಳವಾರ ನಡೆದ ಕವಿ ಸಮ್ಮೇಳನ ಅತ್ಯಂತ ವಿಶೇಷ ವಾಗಿತ್ತು. ನಗರದ ಆಶಾಕಿರಣ ಅಂದ ಮಕ್ಕಳ ಶಾಲೆಯಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆದ ಕವಿ ಸಮ್ಮೇಳನದಲ್ಲಿ ಭಾವನಾತ್ಮಕವಾಗಿ ಮೂಡಿಬಂತು, ಸಮ್ಮೇಳನದಲ್ಲಿ ಭಾಗವಹಿಸಿದ್ದ ಬಹುತೇಕರು ದೇವರ ಪಕ್ಷಪಾತದ ಕಾರಣವಾಗಿ ಜನ್ಮತಃ ಅಂದರಾಗಿ ಹುಟ್ಟಿದರು ಅದನ್ನು ಶಾಪವೆಂದು ಕಾಣದೆ ತಮ್ಮಲ್ಲಿನ ಸಾಹಿತ್ಯದ ಸಂಪತ್ತನ್ನು ಹಂಚಿಕೊಂಡರು. ರಾಜ್ಯದ ವಿವಿಧ ತಾಲೂಕುಗಳಿಂದ ಆಗಮಿಸಿದ ವಿಶಿಷ್ಟಚೇತನ ಸಾಹಿತಿಗಳು ಸಮ್ಮೇಳನದಲ್ಲಿ ಮೂಡಿ ಬಂದ ಕಾವ್ಯ, ಸಾಹಿತ್ಯದ ರಸದೌತಣ ಉಣ ಬಡಿಸಿದರು. ಎಲ್ಲಾ ಅಂಗಗಳು ಸರಿಯಿದ್ದು ನೋವು-ನಲಿವುಗಳನ್ನು ಸ್ವತಃ ತಾವೇ ಅನುಭವಿಸಿದ ಮನ ದಾಳದ ಮಾತುಗಳಿಗೆ ಅಕ್ಷರಗಳನ್ನು ಲೇಪಿಸಿ ಕಾವ್ಯ ರಚನೆ ಮಾಡಿ ಸಾಹಿತ್ಯ ಪ್ರೇಮಿಗಳಿಗೆ ಅರ್ಪಣೆ ಮಾಡುವ ಕೆಲಸವನ್ನು ಮಾಡುವುದು ಸಾಮಾನ್ಯ, ಆದರೆ ಕೇವಲ ಕೇಳಿ, ತಿಳಿದು ಅದಕ್ಕೆ ತಕ್ಕಂತೆ ಅಕ್ಷರ ಗಳನ್ನು ಜೋಡಿಸಿ ಭಾವನಾತ್ಮಕ ಕವಿತೆಗಳನ್ನು ವಾಚನ ಮಾಡಲು ಅದಕ್ಕಾಗಿ ಸಾಹಿತ್ಯವನ್ನು ಅರಿತಿದ್ದ ಯುವ ಕವಿಗಳು, ಸಾಹಿತಿಗಳು ತಮ್ಮಲ್ಲಿನ ಕವಿತಾ ಶಕ್ತಿಯ ಪ್ರದರ್ಶನವನ್ನು ಮಾಡಿ ಸಾಹಿತ್ಯ ಪ್ರೇಮಿಗಳ ಮನಗೆದ್ದರು.

ಬೆಂಗಳೂರು ನಗರದಲ್ಲಿ ನ ಕರ್ನಾಟಕ ಅಂದರ ಸಾಹಿತ್ಯ ಪರಿಷತ್ತಿನ ನವರು ಏರ್ಪಡಿಸಿ ದ್ದ ಕವಿಗೋಷ್ಠಿಯಲ್ಲಿ ತಮ್ಮದೆ ಆದ ಬ್ರೈಲ್ ಲಿಪಿಯಲ್ಲಿ ಬರೆದ ಕವನಗಳನ್ನು ವಾಚನ ಮಾಡಿದರು. ಮೊದಲಿಗೆ ರಮೇಶ್ ಕೃತಾರ್ಥ ಬರೆದ ನಾನೆಂದ ಬರೆದೇವ ಕನ್ನಡದ ನನ್ನಮ್ಮ ಶೀರ್ಷಿಕೆಯ ಕವನ. ಕನ್ನಡದ ನನ್ನಮ್ಮನಿನ್ನೊಳಗೆ ಅಡಿಗಿರಲು ಜಗವು ಬೆವರ ನೆತ್ತಿರು ಸುರಿಸಿ ಎಂಬ ಕವನ ಕನ್ನಡಮ್ಮನ ಮೇಲಿನ ಕನ್ನಡ ಭಾಷೆಯ ಸೊಗಡನ್ನು ಸೊಗಸಾಗಿ ವಾಚಿಸಿದರು. ಮತ್ತೊಬ್ಬ ಕವಿ ಕೇಶವ ಮೂರ್ತಿ ಯುಗಾದಿ ಹಬ್ಬದ ವರ್ಣನೆಯನ್ನು ಚೈತ್ರದ ಚಾಮರ ಶೀರ್ಷಿಕೆಯ ಕವನ ವಾಚಿಸಿದರು. ಹಂಸವೇಣಿ ರವರು ಏನೆಂದು ವರ್ಣಿಸಲಿ ನಿನ್ನ ಕವನ ಮನ ಮುಟ್ಟುವಂತಿತ್ತು.

ಆಶಾಕಿರಣ ಅಂದ ಮಕ್ಕಳ ವಸತಿ ಶಾಲಾ ಸಿಬ್ಬಂದಿ ಶಾಂತಮ್ಮ, ದೇವಯ್ಯ,ಇನ್ನೂ ಮುಂತಾದವರು ಸಹಕಾರ ನೀಡಿ ಕಾರ್ಯಕ್ರಮ ವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ರೈತರ ಜಮೀನಲ್ಲಿ ಅಕ್ರಮ ರಸ್ತೆ ನಿರ್ಮಾಣ ಅನ್ಯಾಯ: ಲೋಕೇಶ್ ಗೌಡ

ಅನ್ನದಾತರ ಸಮಸ್ಯೆಗೆ ಪರಿಹಾರ ನೀಡಿ

ಗೌರಿಬಿದನೂರು: ರೈತರ ಜಮೀನುಗಳಲ್ಲಿ ಅಕ್ರಮವಾಗಿ ರಸ್ತೆ ನಿರ್ಮಾಣ ಮಾಡುತ್ತಿದ್ದಾರೆ, ಇದರಿಂದಾಗಿ ರೈತರಿಗೆ ತುಂಬಾ ಅನ್ಯಾಯವಾಗುತ್ತಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕು ಅಧ್ಯಕ್ಷ ಲೋಕೇಶ್ ಗೌಡ ಹೇಳಿದರು.

ನಗರದ ತಾಲ್ಲೂಕು ಕಚೇರಿಗೆ ರೈತರೊಂದಿಗೆ ತೆರಳಿ ತಹಶೀಲ್ದಾರ್ ಅರವಿಂದ್ ಅವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದ ಅವರು, ಪಿಡಬ್ಲ್ಯುಡಿ ಇಲಾಖೆಯಿಂದ ರೈತರ ಜಮೀನುಗಳಲ್ಲಿ ಅಕ್ರಮವಾಗಿ ರಸ್ತೆ ನಿರ್ಮಾಣ ಮಾಡುತ್ತಿದ್ದಾರೆ ,ಇದರಿಂದ ರೈತರಿಗೆ ತುಂಬಲಾರದ ನಷ್ಟವಾಗುತ್ತಿದೆ. ಇದನ್ನು ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ರೈತರ ಜಮೀನುಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ರಸ್ತೆ ನಿರ್ಮಾಣ ಮಾಡಿಕೊಡಬೇಕು ಹಾಗೂ ಇಡಗೂರು ಗ್ರಾಮದಿಂದ ಬೀಮನಹಳ್ಳಿ ಗ್ರಾಮಕ್ಕೆ ಕೆರೆಯ ಪಕ್ಕದಲ್ಲಿರುವ ರಸ್ತೆಯನ್ನು ಡಾಂಬರೀಕರಣ ಕಾಮಗಾರಿ ನಡೆಯುತ್ತಿದೆ ಸದರಿ ರಸ್ತೆಯ ಪಕ್ಕದಲ್ಲಿ ರೈತರ ಸರ್ವೆ ನಂಬರ್ ಜಾಮೀನುಗಳಿವೆ, ರೈತರಿಗೆ ಯಾವುದೇ ರೀತಿಯ ನೋಟಿಸ್ ಜಾರಿ ಮಾಡದೇ ಅಧಿಕಾರಿಗಳು ರೈತರ ಜಮೀನುಗಳನ್ನು ಆಕ್ರಮಿಸಿಕೊಂಡು ರಸ್ತೆ ನಿರ್ಮಾಣ ಮಾಡುತ್ತಿದ್ದಾರೆ.



ಈಗಾಗಲೇ ರಸ್ತೆಯ ಉದ್ದ 25 ರಿಂದ 30 ಅಡಿ ಗಳಷ್ಟು ಇದ್ದು ಹೆಚ್ಚುವರಿಯಾಗಿ 10 ರಿಂದ 12 ಅಡಿ ಗಳಷ್ಟು ರಸ್ತೆಯನ್ನು ನಿರ್ಮಾಣ ಮಾಡುತ್ತಿದ್ದಾರೆ. ಕೆರೆಕಟ್ಟೆಯ ಪಕ್ಕದಲ್ಲಿ ಇರುವ ರೈತರಿಗೆ ಕುಂಟೆಗಳಲ್ಲಿ ಜಾಮೀನು ಇದೆ ಯಾವ ರೈತನಿಗೂ ಐದು ಎಕರೆ ಹತ್ತು ಎಕರೆಗಳಷ್ಟು ಜಾಮೀನು ಯಾರಿಗೂ ಇಲ್ಲ, ಆದ್ದರಿಂದ ರೈತರ ಜಮೀನುಗಳನ್ನು ಬಿಟ್ಟು ಈಗಿರುವ ರಸ್ತೆಯ ಅಳತೆಯ ಪ್ರಕಾರ ರಸ್ತೆ ನಿರ್ಮಾಣ ಮಾಡಿಕೊಂಡು ಹೋದರೆ ರೈತರಿಗೆ ಅನುಕೂಲವಾಗುತ್ತದೆ ಎಮದರು.

ಈ ಸಂದರ್ಭದಲ್ಲಿ ರೈತ ಮುಖಂಡ ಸನತ್ ಕುಮಾರ್, ಮಲ್ಲಿಕಾರ್ಜುನ, ಮಂಜುನಾಥ್, ನಂಜಣ್ಣ, ಪ್ರಸನ್ನಕುಮಾರ್, ವೆಂಕಟೇಶ್, ಗೋಪಿ, ನಾರಾಯಣಪ್ಪ, ಶ್ರೀನಿವಾಸ ಹಾಗೂ ಇನ್ನಿತರರು ಹಾಜರಿದ್ದರು.

ಸಮಸ್ಯೆ ಬಗೆಹರಿಸುವ ಭರವಸೆ

ತಹಸೀಲ್ದಾರ್ ಅರವಿಂದ್ ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ಅವರು, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡುವ ಮೂಲಕ ರೈತರ ಸಮಸ್ಯೆಗಳನ್ನು ಬಗೆ ಹರಿಸುವ ಭರವಸೆ ನೀಡಿದರು.

5 ಮಾರ್ಗಗಳಲ್ಲಿ ನಿರಂತರ ಬಸ್ ಸಂಚಾರಕ್ಕೆ ಚಾಲನೆ: ಡಾ.ಎಂ.ಸಿ.ಸುಧಾಕರ್

ಮಾ.20ರಿಂದ ನಗರ ಸಾರಿಗೆ ಸಂಚಾರ

ಚಿಂತಾಮಣಿ: ಚಿಂತಾಮಣಿ ನಗರ ಸಾರಿಗೆ ವ್ಯವಸ್ಥೆಯ ಕನಸನ್ನು ನಗರದಿಂದ ಸಮೀಪದ ಗ್ರಾಮಗಳಿಗೆ ನಿರಂತರವಾಗಿ ಬಸ್ ಸಂಚಾರ ವ್ಯವಸ್ಥೆಯನ್ನು ಮಾಡಬೇಕೆಂಬ ಕನಸನ್ನು ನಾನು 2012-13ರಲ್ಲೇ ಕಂಡಿದ್ದೆ ಕಂಡೆ ಅದು ಅಂದು ಸಾಧ್ಯವಾಗಲಿಲ್ಲ ಆ ಆದರೆ ಸಚಿವನಾಗಿ ಇಂದು ನಿರಂತರಸಮೀಪದಹಳ್ಳಿಗಳಿಗೆಬಸ್‌ವ್ಯವಸ್ಥೆಯನ್ನು ಕಲ್ಪಿಸುವ ಕಾರ್ಯಕ್ಕೆ ಮುಂದಾಗಿದ್ದು ಇದೇ ತಿಂಗಳ 20 ರಂದು ನಗರದಿಂದ 5 ಮಾರ್ಗಗಳಲ್ಲಿ ನಿರಂತರ ಬಸ್ ಸಂಚಾರಕ್ಕೆ ಚಾಲನೆ ನೀಡಲಾಗುವುದೆಂದು ಸಚಿವ ಡಾ.ಎಂ.ಸಿ.ಸುಧಾಕರ್ ನುಡಿದರು.

ನಗರದ ಮಾಳಪ್ಪಲ್ಲಿ ಅಂಜನಿ ನಿವಾಸದಲ್ಲಿ ಮಾತನಾಡಿ ಚಿಂತಾಮಣಿ ನಗರ ಸಂಚಾರಕ್ಕೆ 10 ಮಾರ್ಗಗಳನ್ನು ಗುರುತಿಸಿದ್ದು ಇದರಲ್ಲಿ ಇದೇ 20 ರಂದು ದಿಬ್ಬೂರಹಳ್ಳಿ-ಚಿಂತಾಮಣಿ, ಹೆಚ್.ಕ್ರಾಸ್ -ಚಿಂತಾಮಣಿ, ಶ್ರೀನಿವಾಸಪುರ-ಚಿಂತಾಮಣಿ, ಶಿಡ್ಲಘಟ್ಟ-ಚಿಂತಾಮಣಿ, ಪೆದ್ದೂರು - ಮುರುಗಮಲ್ಲ-ಚಿಂತಾಮಣಿಯ ಮೂಲಕ ನಿರಂತರವಾಗಿ ಬಸ್ ಸಂಚಾರಕ್ಕೆ ಚಾಲನೆ ಸಿಗಲಿದ್ದು ಈ ಭಾಗದಲ್ಲಿ ಓಡಾಡುವ ಪ್ರಯಾಣಿಕರಿಗೆ ಅನುಕೂಲವಾಗಲೆಂಬ ಉದ್ದೇಶದಿಂದ ಈ ನಗರ ಸಾರಿಗೆ ಸಂಚಾರಕ್ಕೆ ಮುಂದಾಗಿರುವುದಾಗಿ ತಿಳಿಸಿದರು.



ನಗರ ಪ್ರದೇಶದಿಂದ ಕೈವಾರ ಒಳಹೋಗಿ ಹೆಚ್. ಕ್ರಾಸ್‌ವರೆಗೆಒಂದುಮಾರ್ಗ, ಚಿಂತಾಮಣಿಯಿಂದ ದಿಬ್ಬೂರಹಳ್ಳಿ, ಶ್ರೀನಿವಾಸಪುರ, ಶಿಡ್ಲಘಟ್ಟ, ಪೆದ್ದೂರು, ಮುರುಗಮಲ್ಲದೆಡೆಗೆ ನಿರಂತರ ಬಸ್ ಸಂಚಾರವಿರುತ್ತದೆ ಇದರಿಂದ ಇನ್ನೂ ಮತ್ತಷ್ಟು ಮಾರ್ಗಗಳಾದ ಗೌನಿಪಲ್ಲಿ, ಕೆಂಚಾರ್ಲಹಳ್ಳಿ, ಮೈಲ್ಲಾಂಡಹಳ್ಳಿ, ನಾರಾಯಣಹಳ್ಳಿ ಮೂಲಕ ಕೈವಾರ ಸೇರಿದಂತೆ ವಿವಿಧ ಮಾರ್ಗಗಳಲ್ಲಿ ನಿರಂತರ ಬಸ್ ಸಂಚಾರವಿರಲಿದ್ದು ಇದರಿಂದ ಸಾಕಷ್ಟು ಅನುಕೂಲವಾಗಲಿದೆಯೆಂದರು.

ವಿದ್ಯಾರ್ಥಿಗಳು, ವ್ಯಾಪಾರಸ್ಥರಿಗೆ ಅನುಕೂಲ: ಬಸ್ ಖರೀದಿ, ನೇಮಕಾತಿ ನಿರ್ವಾಹಕರ, ಚಾಲಕರ ಕೊರತೆ ಇತ್ಯಾದಿ ಸಮಸ್ಯೆಗಳನ್ನು ಸಾರಿಗೆ ಸಂಸ್ಥೆ ಎದುರಿಸುತ್ತಿತ್ತು ಇದೆಲ್ಲವನ್ನು ಬಗೆಹರಿಸಿಕೊಂಡು ಈಗ ನಿರಂತರ ಬಸ್ ಸಂಚಾರಕ್ಕೆ ಚಾಲನೆ ನೀಡುವುದಾಗಿ ತಿಳಿಸಿದರು. ಸಾರಿಗೆ ಇಲಾಖೆಯಿಂದ ಡಬಲ್ ಡೋರ್‌ನ ಐದು ಬಸ್‌ಗಳನ್ನು ನೀಡಿದ್ದು 12 ಮೀಟರ್ ಉದ್ದದ ಬಸ್ 2 ಬಸ್, 8 ಮೀಟರ್ ಉದ್ದದ 3 ಬಸ್‌ಗಳನ್ನು ನೀಡಿದ್ದು 20ರಂದು ಅಧಿಕೃತವಾಗಿ ಲೋಕಾರ್ಪಣೆ ಮಾಡಲಿದ್ದು, ಎಕ್ಸ್‌ಪ್ರೆಸ್ ಬಸ್ ಗಳನ್ನು ನಿಲ್ಲಸಬೇಕೆಂಬ ಕೂಗು ಕಡಿಮೆಯಾಗಿ ನಿರಂತರ ಸಂಚಾರಕ್ಕೆ ಸಹಾಯಕವಾಗಲಿದ್ದು ಇದರಿಂದ ವಿದ್ಯಾರ್ಥಿಗಳಿಗೆ, ವ್ಯಾಪಾರ ವಹಿವಾಟುದಾರರಿಗೆ ಅನುಕೂಲವಾಗುತ್ತದೆ, ಬೆಳಗಿನಿಂದ ಸಂಜೆಯವರೆಗೂ ನಿರಂತರವಾಗಿ ಸಂಚಾರವಿರುತ್ತದೆ.